₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಬುಧವಾರ 18.12.2024 ಸಂಪುಟ: 67 ಸಂಚಿಕೆ: 223 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಬಾಲಂಗೋಚಿಗಳ ಸಾಹಸ: ಫಾಲೋ ಆನ್ ತಪ್ಪಿಸಿಕೊಂಡ ಭಾರತ

ಪುಟ ತೆರೆದಂತೆ...

ಹುಳುಗರುಳು ಛಿದ್ರವಾಗುವುದನ್ನು ತಪ್ಪಿಸಿ!

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ

ಸಂ.ಪುಟ | 6

ರಕ್ಷಣೆಯ ಕಾನೂನೇ ಶೋಷಣೆಯ ಅಸ್ತ್ರ

ಲೋಕಮತ

ಲೋಕೇಶ್ ಕಾಯರ್ಗ

ಸಂ.ಗಮ | 7

ವಿಧೇಯಕಕ್ಕೆ ಲೋಕಸಭೆಯಲ್ಲಿ ಪ್ರತಿಪಕ್ಷಗಳ ವಿರೋಧ, ವಿಸ್ತೃತ ಪರಾಮರ್ಶೆಗಾಗಿ ಜಂಟಿ ಸದನ ಸಮಿತಿಗೆ ಕಳುಹಿಸುವ ನಿರ್ಧಾರ

ಒಎನ್‌ಒಪಿ ಪರ 269 ವಿರೋಧಿಸಿ 198 ಮತ

ದೆಹಲಿ: ತೀವ್ರ ಚರ್ಚೆಯ ಬಳಿಕ 'ಒಂದು ದೇಶ, ಒಂದು ಚುನಾವಣೆ' ವಿಧೇಯಕವನ್ನು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘ ವಾಲ್ ಅವರು ಲೋಕಸಭೆಯಲ್ಲಿ ಮಂಗಳವಾರ ಮಂಡಿಸಿದರು.

ಬಳಿಕ ವಿಧೇಯಕಕ್ಕೆ ಒಪ್ಪಿಗೆ ಪಡೆಯಲು ಮಂತಯಂತ್ರದ ಮೂಲಕ ನಡೆದ ಮತ ಚಲಾವಣೆ ಪ್ರಕ್ರಿಯೆಯಲ್ಲಿ 269 ಸದಸ್ಯರು ವಿಧೇಯಕದ ಪರವಾಗಿ ಹಾಗೂ 198 ಸದಸ್ಯರು ವಿರೋಧವಾಗಿ ಮತ ಹಾಕಿದ್ದಾರೆ.

ಈ ವಿಧೇಯಕಕ್ಕೆ ಕಾಂಗ್ರೆಸ್ ಸೇರಿ ಅನೇಕ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಈ ಬೆನ್ನಲ್ಲೇ ಈ ವಿಧೇಯಕವನ್ನು ವಿಸ್ತೃತ ಪರಾಮರ್ಶೆಗಾಗಿ ಜಂಟಿ ಸದನ ಸಮಿತಿಗೆ ಕಳುಹಿಸುವ ನಿರ್ಧಾರಕ್ಕೆ ಲೋಕಸಭೆ ಬಂದಿದೆ. ಅಲ್ಲಿ ವಿಸ್ತೃತ ಚರ್ಚೆಯಾಗಿ, ಅಗತ್ಯ ಮಾರ್ಪಾಡುಗಳ ಬಳಿಕ ಮತ್ತೊಂದು ಬಾರಿ ಮಸೂದೆ ಎರಡೂ ಸದನಗಳಲ್ಲಿ ಮಂಡನೆಯಾಗಲಿದ್ದು, ಆಗ ಒಂದು ರಾಷ್ಟ್ರ, ಒಂದು ಚುನಾವಣೆ ಮಸೂದೆಯ ಭವಿಷ್ಯ ನಿರ್ಧಾರವಾಗಲಿದೆ.

ವಿಧಾನಸಭೆ ಚುನಾವಣೆ ಪ್ರತ್ಯೇಕವಾಗಿಯೂ ನಡೆಸಲು ಅವಕಾಶ: ಲೋಕಸಭಾ ಚುನಾವಣೆ ಜತೆಗೆ ವಿಧಾನಸಭಾ ಚುನಾವಣೆ ನಡೆಸಲು ಆಗದ ಸಂದರ್ಭ ಎದುರಾದರೆ ಅದಕ್ಕೆ ಅವಕಾಶ ಕಲ್ಪಿಸುವ ನಿಬಂಧನೆಯನ್ನು ಸೇರಿಸಲಾಗಿದೆ. ಸಂವಿಧಾನದ (129) ತಿದ್ದುಪಡಿ ವಿಧೇಯಕದ 2ನೇ ಉಪ ಕಲಂ 5ರ ಪ್ರಕಾರ ಲೋಕಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯ ಜತೆಗೆ ಯಾವುದಾದರೂ ವಿಧಾನಸಭೆಯ ಚುನಾವಣೆ ನಡೆಸಲು ಆಗುವುದಿಲ್ಲ ಎಂದು ಚುನಾವಣಾ ಆಯೋಗ ಅಭಿಪ್ರಾಯಪಟ್ಟರೆ ಆ ಕುರಿತು ರಾಷ್ಟ್ರಪತಿಯವರಿಗೆ ಶಿಫಾರಸು ಮಾಡಬಹುದು. ಅದನ್ನು ಆಧರಿಸಿ ರಾಷ್ಟ್ರಪತಿಯವರು ಆ ವಿಧಾನ ಸಭೆಯ ಚುನಾವಣೆಯನ್ನು ಆ ನಂತರ ನಡೆಸಲು ಆದೇಶ ಹೊರಡಿಸಬಹುದು ಎಂಬ ಅಂಶವನ್ನು ವಿಧೇಯಕದಲ್ಲಿ ಉಲ್ಲೇಖಿಸಲಾಗಿದೆ.

ಹೊಸ ವಿಧಿ ಮೂರು ತಿದ್ದುಪಡಿ: ಸಂವಿಧಾನದಲ್ಲಿ ಒಂದು ಹೊಸ ವಿಧಿ ಸೇರಿಸಲು ಹಾಗೂ ಮೂರು ವಿಧಿಗಳಿಗೆ ತಿದ್ದುಪಡಿ ತರಲು ವಿಧೇಯಕದಲ್ಲಿ ಪ್ರಸ್ತಾಪ ಮಾಡಲಾಗಿದೆ. ಹೊಸದಾಗಿ 82ಎ ವಿಧಿಯನ್ನು ಸೇರಿಸಲು ವಿಧೇಯಕ ಪ್ರಸ್ತಾಪಿಸಿದೆ. ಅದು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಲು ಅನುವು ಮಾಡಿಕೊಡುತ್ತದೆ. ಅಲ್ಲದೆ ವಿಧಿ 83 (ಸಂಸತ್ತಿನ ಕಾಲಾವಧಿ) ವಿಧಿ 172 (ರಾಜ್ಯ ಶಾಸಕಾಂಗಗಳ ಕಾಲಾವಧಿ) ಹಾಗೂ ವಿಧಿ 327 ಅನ್ನು (ರಾಜ್ಯ ಶಾಸಕಾಂಗಗಳ ಚುನಾವಣೆ ಸಂಸತ್ತಿಗೆ ಅಧಿಕಾರ ಕುರಿತು) ತಿದ್ದುಪಡಿ ಮಾಡಬೇಕು ಎಂದು ಹೇಳಿದೆ.

ಅಧಿಕಾರಾವಧಿ: ಸಾರ್ವತ್ರಿಕ ಚುನಾವಣೆ ಬಳಿಕ ಲೋಕಸಭೆಯ ಮೊದಲ ಅಧಿವೇಶನದ ದಿನದಂದು ರಾಷ್ಟ್ರಪತಿಯವರು ಅಧಿಸೂಚನೆ ಹೊರಡಿಸಬೇಕು. ಅದನ್ನು 'ನೇಮಕದ ದಿನ' ಎಂದು ಕರೆಯಲಾಗುತ್ತದೆ. ಆ ದಿನದಿಂದ ಲೋಕಸಭೆಯ ಅಧಿಕಾರಾವಧಿ ಐದು ವರ್ಷಗಳಾಗಿರುತ್ತವೆ. ಇದೇ ರೀತಿ ಚುನಾವಣೆ ಬಳಿಕ ನಿಗದಿತ ದಿನದಿಂದ ರಾಜ್ಯ ಶಾಸಕಾಂಗಗಳ ಅಧಿಕಾರಾವಧಿ ಆರಂಭವಾಗುತ್ತದೆ. ಅದು ಲೋಕಸಭೆಯ ಪೂರ್ಣಾವಧಿ ಜತೆಗೆ ಕೊನೆಯಾಗುತ್ತದೆ. ಹೀಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ನಡೆಯುವ ಸಾರ್ವತ್ರಿಕ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸಬಹುದು ಎಂದು ವಿಧೇಯಕದಲ್ಲಿ ಹೇಳಲಾಗಿದೆ.

ಸರಕಾರ ಪತನ ಆದ್ರೆ, ಏನಾಗುತ್ತೆ?

ಅತಂತ್ರ ವಿಧಾನಸಭೆ ನಿರ್ಮಾಣವಾದರೆ ಅಥವಾ ಅವಿಶ್ವಾಸ ಮತಯಾಚನೆಯಿಂದ ಸರಕಾರ ಪತನವಾದರೆ, ಹೊಸದಾಗಿ ಚುನಾವಣೆ ನಡೆಯುತ್ತದೆ. ಆಗ ಆಯ್ಕೆಯಾಗುವ ಸರ್ಕಾರ ಮುಂದಿನ ಸಾರ್ವತ್ರಿಕ ಚುನಾವಣೆವರೆಗೂ ಮಾತ್ರ ಇರುತ್ತದೆ. ಅಂದ್ರೆ ಸರ್ಕಾರ ರಚನೆಯಾಗಿ ಎರಡು ವರ್ಷವಾದ ಬಳಿಕ ಸರ್ಕಾರ ಪತನವಾದ್ರೆ, ಮತ್ತೆ ಚುನಾವಣೆ ನಡೆದು ಹೊಸದಾಗಿ ಆಯ್ಕೆಯಾಗುವ ಸರ್ಕಾರ ಎರಡೂವರೆ ಅಥವಾ ಮೂರು ವರ್ಷ ಮಾತ್ರ ಆಡಳಿತ ನಡೆಸಲಿದೆ. ಇದು ವಿಧಾನಸಭೆಗೆ ಮಾತ್ರವಲ್ಲದೇ ಲೋಕಸಭೆಗೂ ಅನ್ವಯವಾಗಲಿದೆ. ಸರ್ಕಾರ ಪತನವಾದರೆ ಮುಂದೆ ಬಾಕಿಯಿರುವ ಅವಧಿಗೆ ಮಾತ್ರ ಚುನಾವಣೆ ನಡೆಯಲಿದೆ.

ಹೇಗಿರುತ್ತೆ ಚುನಾವಣೆ ವ್ಯವಸ್ಥೆ?

ಒಂದು ದೇಶ, ಒಂದು ಚುನಾವಣೆ ಅನುಷ್ಠಾನವಾದರೆ, ಮೊದಲ ಬಾರಿ ರಾಷ್ಟ್ರಪತಿಗಳು ಲೋಕಸಭೆಯ ಆಡಳಿತ ಅವಧಿಯನ್ನು ನೋಟಿಫಿಕೇಶನ್ ಮಾಡುತ್ತಾರೆ. ಈ ಅಧಿಸೂಚನೆಯಂತೆ ಇಡೀ ದೇಶದ ಎಲ್ಲ ರಾಜ್ಯಗಳ ವಿಧಾನಸಭೆಗೂ ಕೂಡ ಲೋಕಸಭೆಯ ಅವಧಿ ಅನ್ವಯವಾಗಲಿದೆ. ಆ ಸಮಯದಲ್ಲಿ ಹೊಸದಾಗಿ ರಚನೆಯಾದ ರಾಜ್ಯ ಸರಕಾರಗಳ ಅವಧಿ ಮೊಟಕುಗೊಂಡು, ಮುಂದಿನ ಸಾರ್ವತ್ರಿಕ ಚುನಾವಣೆ ವೇಳೆಯೇ ಅವುಗಳಿಗೂ ಚುನಾವಣೆ ನಡೆಯುತ್ತದೆ. ಅಲ್ಲಿಂದ ಒಂದು ರಾಷ್ಟ್ರ ಒಂದು ಚುನಾವಣೆ ಪದ್ಧತಿ ಜಾರಿಗೆ ಬರುತ್ತದೆ.

ವಿಧೇಯಕದಲ್ಲಿರುವ ಅಂಶಗಳು ಯಾವವು?

- ಸಂವಿಧಾನದ 82ಎ ಹಾಗೂ 324ಎ ವಿಧಿಗಳಿಗೆ ತಿದ್ದುಪಡಿ
- ಎರಡು ಹಂತಗಳಲ್ಲಿ ಏಕಕಾಲದ ಚುನಾವಣೆ
- ಮೊದಲು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ
- 100 ದಿನಗಳ ಒಳಗೆ ಮುನಿಸಿಪಾಲಿಟಿ-ಪಂಚಾಯಿತಿ ಎಲೆಕ್ಷನ್
- ಮೂರು ಮಟ್ಟದ ಚುನಾವಣೆಗೆ ಒಂದೇ ಮತದಾರರ ಪಟ್ಟಿ

ಗದ್ದಲ, ಕೋಲಾಹಲಗಳ ನಡುವೆಯೇ ವಿಧಾನಸಭೆಯಲ್ಲಿ ಅಪರೂಪದ ವಿದ್ಯಮಾನ

ರಾತ್ರಿ 1 ಗಂಟೆವರೆಗೂ ನಡೆದ ಸದನ ಕಲಾಪ

ಸುವರ್ಣಸೌಧ ಬೆಳಗಾವಿ: ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಸೋಮವಾರ ತಡರಾತ್ರಿ 1 ಗಂಟೆಯವರೆಗೆ ನಡೆಸುವ ಮೂಲಕ ವಿಶಿಷ್ಟ ದಾಖಲೆಯೊಂದನ್ನು ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಬರೆದಿದ್ದಾರೆ.

ಸೋಮವಾರ ಬೆಳಗ್ಗೆ ಭಾವಚಿತ್ರ ಅನಾವರಣ, ಸಂತಾಪ, ಉತ್ತರ ಕರ್ನಾಟಕದ ಮೇಲಿನ ಚರ್ಚೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದರಿಂದ ಪ್ರಶ್ನೋತ್ತರ ಹಾಗೂ ಗಮನ ಸೆಳೆಯುವ ಸೂಚನೆಗಳನ್ನು ಎತ್ತಿಕೊಂಡಿರಲಿಲ್ಲ. ಆದರೆ ಅಜೆಂಡಾದಲ್ಲಿ 60 ಗಮನ ಸೆಳೆಯುವ ಸೂಚನೆಗಳ ವಿಷಯದ ಚರ್ಚೆ ಸೇರಿಸಲಾಗಿತ್ತು. ಸಂಜೆ ಆರರ ಬಳಿಕ ಪ್ರಶ್ನೋತ್ತರವನ್ನು ಎತ್ತಿಕೊಂಡ ಯು.ಟಿ.ಖಾದರ್ ಅವರು, ಗಮನ ಸೆಳೆಯುವ ಚರ್ಚೆಯನ್ನು 10 ಗಂಟೆಯ ಹೊತ್ತಿಗೆ ಕೈಗೆತ್ತಿಕೊಂಡರು. ಈ ಎಲ್ಲ ಪ್ರಕ್ರಿಯೆ ಪೂರ್ಣಗೊಳ್ಳುವ ವೇಳೆಗೆ ರಾತ್ರಿ ಒಂದು ಗಂಟೆಯಾಯಿತು. ಇತ್ತೀಚಿನ ವರ್ಷಗಳಲ್ಲಿ ಸುದೀರ್ಘ ಕಾಲ ನಡೆದ ಕಲಾಪ ಎನ್ನುವ ದಾಖಲೆ ಬರೆದಿದೆ. ಮಂಗಳವಾರ ಬೆಳಗ್ಗೆ ಮಾತನಾಡಿದ ಬೈರತಿ ಬಸವರಾಜ್, ರಾತ್ರಿ ಒಂದು ಗಂಟೆಯ ತನಕ ಸದನ ನಡೆಸುವ ಮೂಲಕ ಗಿನ್ನಿಸ್ ದಾಖಲೆ ಬರೆಯಲು ಸ್ಪೀಕರ್ ಮುಂದಾಗಿದ್ದಾರೆ ಎಂದು ಕಿಚಾಯಿಸಿದರು.

ಶಾಸಕರ ಬೇಸರ

ಖಾದರ್ ಅವರು ತಡರಾತ್ರಿವರೆಗೆ ಸದನ ನಡೆಸಿದ್ದನ್ನು ಮೇಲ್ನೋಟಕ್ಕೆ ಹಲವು ಶಾಸಕರು ಸ್ವಾಗತಿಸಿದ್ದಾರೆ. ಆದರೆ ಆಫ್ ದಿ ರೆಕಾರ್ಡ್ ಮಾತನಾಡುವಾಗ, ಅಜೆಂಡಾ ಮುಗಿಸಬೇಕು ಎನ್ನುವ ಕಾರಣಕ್ಕೆ ಈ ರೀತಿ ಮಾಡುವುದು ಸರಿಯಲ್ಲ. ಮಧ್ಯರಾತ್ರಿ ನಡೆದ ಚರ್ಚೆಯಲ್ಲಿ ಬಹುತೇಕ ಸಚಿವರು ಗೈರಾಗಿದ್ದಾರು. ದಾಖಲೆಗಳಿಗಾಗಿ ಕಲಾಪದಲ್ಲಿ ವಿಷಯ ಪ್ರಸ್ತಾಪಿಸಿದಂತಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಈ ರೀತಿ ಮಾಡುವ ಬದಲು, ಬದಲಿ ವ್ಯವಸ್ಥೆಗೆ ಚಿಂತಿಸುವುದು ಸೂಕ್ತ. ಸೋಮವಾರ ರಾತ್ರಿ ನಡೆದ ಕಲಾಪದಲ್ಲಿ ಆಯಾ ಶಾಸಕರು ಅವರ ವಿಷಯ ಬರುವ ತನಕ ಮಾತ್ರ ಕೂತಿದ್ದರು. ಆದ್ದರಿಂದ ಮುಂದೆ ಈ ರೀತಿ ತಡರಾತ್ರಿವರೆಗೆ ನಡೆಸುವುದು ಬೇಡ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

- ಇತ್ತೀಚಿನ ವರ್ಷಗಳಲ್ಲಿ ಸುದೀರ್ಘ ಕಾಲ ನಡೆದ ಕಲಾಪ
- ಸುಮಾರು 50ಕ್ಕೂ ಗಮನ ಸೆಳೆವ ವಿಷಯ ಪ್ರಸ್ತಾಪ

ಸಭಾಧ್ಯಕ್ಷರು ಒಂದು ಗಂಟೆವರೆಗೆ ಸದನ ನಡೆಸಿದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ ಸಚಿವರೇ ಇರುವುದಿಲ್ಲ. ಈ ಸರಕಾರ ಏಕ ಸಚಿವ ಸರಕಾರ ಎನ್ನುವಂತಾಗಿದೆ. ಸೋಮವಾರ ರಾತ್ರಿ ಒಂದು ಗಂಟೆಯ ತನಕ ಕಲಾಪ ನಡೆಸಿದಾಗಲೂ ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತ್ರ ಇದ್ದರು. ಮಂಗಳವಾರ ಬೆಳಗ್ಗೆಯೂ ಕೃಷ್ಣಬೈರೇಗೌಡ ಬಿಟ್ಟು ಇನ್ನಾವ ಸಚಿವರೂ ಸದನಕ್ಕೆ ಬಂದಿಲ್ಲ.

-ಸುನೀಲ್ ಕುಮಾರ್ ಶಾಸಕ

ಮಾತಂದ್ರೆ ಮಾತು

1975ರಲ್ಲಿ ಇಂದಿರಾ ಗಾಂಧಿ ಹೇರಿದ ತುರ್ತು ಪರಿಸ್ಥಿತಿ ಒಂದು ಮಿಸ್ಟೇಕ್. ಆದರೆ, ಅದು ಕೇವಲ 18 ತಿಂಗಳು ಮಾತ್ರ ಇತ್ತು. ಆ ತುರ್ತು ಪರಿಸ್ಥಿತಿ ಅಸ್ಪಷ್ಟವಾಗಿತ್ತು. ಸಂವಿಧಾನದ ಬೆಂಬಲ ಕೂಡ ಇತ್ತು. ಆದರೆ, ಅದು ಅಂತ್ಯವಾಯಿತು. ಆದರೆ, ಈಗ ಇರುವ ಅಘೋಷಿತ ತುರ್ತುಪರಿಸ್ಥಿತಿ ಯಾವಾಗ ಮುಗಿಯುತ್ತದೆ. ಇದನ್ನು ಅಂತ್ಯಗೊಳಿಸಲು ಸಂವಿಧಾನದಲ್ಲಿ ಏನಾದ್ರೂ ಇದೆಯಾ?

ಅಭಿಷೇಕ್ ಮನು ಸಿಂಘ್ವಿ

ಕಾಂಗ್ರೆಸ್ ಹಿರಿಯ ಸಂಸದ

ದಾರಿದೀಪೋಕ್ತಿ

ಸಾಧನೆಯ ಪಥದಲ್ಲಿ ನಡೆಯುವಾಗ ಪ್ರಮಾದ, ಅವಮಾನ, ಸೋಲು, ಹತಾಶೆ, ವಿಷಾದ, ತಿರಸ್ಕಾರಗಳೆಲ್ಲ ಸಹಜ. ಅವರೆಂಥ ಸಾಧಕರೇ ಇರಲಿ, ಇವುಗಳನ್ನು ಎದುರಿಸದೇ ಯಾರೂ ಯಶಸ್ಸಿನ ಶಿಖರ ತಲುಪಿಲ್ಲ. ನಿಮಗೂ ಇಂಥ ಅನುಭವವಾದಾಗ ಕೈಚೆಲ್ಲಬೇಕಿಲ್ಲ.

ವಕ್ರತುಂಡೋಕ್ತಿ

ಯಾರಾದರೂ ಸೋಫಾದ ಮೇಲೆ ಕುಳಿತು ಸುಮ್ಮನೆ ಯೋಚಿಸುತ್ತಿದ್ದರೆ ಸೋಮಾರಿ ಎಂದು ಭಾವಿಸಬೇಕಿಲ್ಲ. ಈ ಜಗತ್ತನ್ನು ಬದಲಿಸುವ ಯೋಚನೆಗೆ ಕಾವು ಕೊಡುತ್ತಿರಬಹುದು.

ಪಾರದರ್ಶಕತೆ, ದಕ್ಷತೆ ಹೆಚ್ಚಿಸಲು ಸರಕಾರ ನಿರ್ಧಾರ

ಮುಡಾ ವಿಧೇಯಕ ಮಂಡನೆ

ಸುವರ್ಣಸೌಧ ಬೆಳಗಾವಿ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಪಾರದರ್ಶಕ ಹಾಗೂ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ವಿಧಾನಸಭೆಯಲ್ಲಿ 'ಮುಡಾ ವಿಧೇಯಕ'ವನ್ನು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಮಂಗಳವಾರ ಮಂಡಿಸಿದರು.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರಕಾರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವನ್ನು ಬಿಡಿಎ ಮಾದರಿಯಲ್ಲಿ ರಚಿಸಲು ತೀರ್ಮಾನಿಸಿತ್ತು. ಇದರ ಮುಂದುವರಿದ ಭಾಗವಾಗಿ ಮಂಗಳವಾರ ವಿಧೇಯಕ ಮಂಡಿಸಲಾಗಿದ್ದು, ಈ ವಿಧೇಯಕದ ಮೂಲಕ ಇಷ್ಟು ದಿನ ನಗರಾಭಿವೃದ್ಧಿ ಇಲಾಖೆಯ ಸುಪರ್ದಿಯಲ್ಲಿದ್ದ ಮುಡಾ ಇನ್ಮುಂದೆ ನಗರಾಭಿವೃದ್ಧಿಯಲ್ಲಿದ್ದರೂ ಬಿಡಿಎಯಂತೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚಿಸಿ ಸ್ವಾತಂತ್ರ್ಯ ತೀರ್ಮಾನ ಕೈಗೊಳ್ಳಲು ಅವಕಾಶ ನೀಡಲಾಗಿದೆ.

→ 8

ಏನೇನು ಅಧಿಕಾರ?

ಪ್ರಾಧಿಕಾರ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬಹುದಾಗಿದೆ. ಜತೆಗೆ ಸರಕಾರದ ಪೂರ್ವಾನುಮತಿ ಮೇರೆಗೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬಹುದಾಗಿದೆ. ಭೂ ಸ್ವಾಧೀನ, ಸುಧಾರಣಾ ತೆರಿಗೆ ವಿಧಿಸುವ ಅಧಿಕಾರ, ಭೂಮಿ ಮತ್ತು ಕಟ್ಟಡಗಳಿಗೆ ತೆರಿಗೆ ವಿಧಿಸುವುದು, ರಸ್ತೆ ನಿರ್ವಹಣೆ, ಬಡಾವಣೆ ನಿರ್ಮಾಣ ಸೇರಿದಂತೆ ಕೆಲ ಹೆಚ್ಚುವರಿ ಅಧಿಕಾರ ನೀಡಲಾಗಿದೆ.

1,394 ಔಷಧಗಳು ಗುಣಮಟ್ಟ ಹೊಂದಿಲ್ಲ

ದೆಹಲಿ: 2023-24ರಲ್ಲಿ 1,394 ಔಷಧಗಳು ಪ್ರಮಾಣಿತ ಗುಣಮಟ್ಟ ಪರೀಕ್ಷೆಯಲ್ಲಿ ವೈಫಲ್ಯ ಕಂಡಿವೆ ಎಂದು ಕೇಂದ್ರ ಸರಕಾರವು ಮಂಗಳವಾರ ರಾಜ್ಯಸಭೆಗೆ ತಿಳಿಸಿದೆ.

2019-20ರಲ್ಲಿ 950 ಹಾಗೂ 2022-23ರಲ್ಲಿ 1,171 ಔಷಧಗಳು ಪ್ರಮಾಣಿತ ಗುಣಮಟ್ಟ ಹೊಂದಿರಲಿಲ್ಲವೆಂದು ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಘಟನೆ ವರದಿ ನೀಡಿದೆ ಎಂದು ಕೇಂದ್ರ ಆರೋಗ್ಯ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಅವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಕಳಪೆ ಗುಣಮಟ್ಟ ಹೊಂದಿರುವ ತಯಾರಿಸಿದ ಕಂಪನಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗಿದೆ ಎಂದು ರಾಜ್ಯಸಭೆಗೆ ತಿಳಿಸಿದ್ದಾರೆ.

ಉನ್ನತಮಟ್ಟದ ತನಿಖೆಗೆ ಸರಕಾರ ಸಿದ್ಧ: ಗುಂಡೂರಾವ್

ಬಾಣಂತಿಯರ ಸಾವು: ಚರ್ಚೆ

ಸುವರ್ಣಸೌಧ: ಬಳ್ಳಾರಿಯಲ್ಲಿ ಸರಣಿ ಬಾಣಂತಿಯರ ಸಾವಿನ ಪ್ರಕರಣವನ್ನು ಎಸ್ಐಟಿ ಅಥವಾ ನ್ಯಾಯಾಂಗದ ಮೂಲಕ ತನಿಖೆ ನಡೆಸಲು ಸರಕಾರ ಸಿದ್ಧವಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಬಾಣಂತಿಯರ ಸಾವಿನ ಬಗ್ಗೆ ವಿಶೇಷ ಚರ್ಚೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಹೆಚ್ಚುತ್ತಿರುವ ಬಾಣಂತಿಯರ ಸಾವಿಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಎಸ್ಐಟಿ ಹಾಗೂ ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡುತ್ತಿದ್ದು, ಸರಕಾರ ಈ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಸಿದ್ಧವಿದೆ. ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಕಲಬುರಗಿಯಲ್ಲಿ ಮತ್ತೊಂದು ಮರಣ

ಕಲಬುರಗಿ: ಜಿಲ್ಲಾ ಆಸ್ಪತ್ರೆಯಲ್ಲಿ ಅಫಜಲಪುರ ತಾಲೂಕಿನ ಬಾಣಂತಿಯೊಬ್ಬರು ಮಂಗಳವಾರ ಮೃತಪಟ್ಟಿದ್ದಾರೆ. ಅಫಜಲಪುರ ತಾಲೂಕಿನ ಹವಳಗಾ ಗ್ರಾಮದ ಭಾಗ್ಯಶ್ರೀ ಶಿವಾಜಿ (22) ಮೃತ ಬಾಣಂತಿ. ವೈದ್ಯರ ನಿರ್ಲಕ್ಷವೇ ಬಾಣಂತಿ ಸಾವಿಗೆ ಕಾರಣವೆಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಮಧ್ಯಂತರ ವಾರ್ಷಿಕ ವರದಿ ಮಂಡನೆ

ಸುವರ್ಣಸೌಧ ಬೆಳಗಾವಿ: ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಸರಕಾರ ಮಂಡಿಸಿದೆ. ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದರೂ, 27534 ಕೋಟಿ ರು. ರಾಜಸ್ವದ ಕೊರತೆಯಿದೆ ಎನ್ನುವುದು ಮಧ್ಯ ವಾರ್ಷಿಕ ಪರಿಶೀಲನಾ ವರದಿಯಲ್ಲಿ ಬಹಿರಂಗವಾಗಿದೆ.

ಈ ವರದಿಯಲ್ಲಿ ರಾಜಸ್ವದ ಕೊರತೆಯ ಹೊರತಾಗಿಯೂ, ರಾಜ್ಯದ ಪಾಲಿನ ಜಿಎಸ್‌ಟಿ (ಎಸ್‌ಜಿಎಸ್‌ಟಿ) ಸಂಗ್ರಹದಲ್ಲಿ ಕರ್ನಾಟಕವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ವಿತ್ತೀಯ (2024-25) ವರ್ಷದಲ್ಲಿ ಜಿಎಸ್‌ಟಿ ಸಂಗ್ರಹದಲ್ಲಿ ಶೇ.11ರಷ್ಟು ಬೆಳವಣಿಗೆಯಾಗಿದೆ. ಇದು ವರ್ಷದ ಮೊದಲಾರ್ಧದ ಸಂಗ್ರಹವಾಗಿದೆ ಎಂದು ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ವರದಿ ತಿಳಿಸಿದೆ.

- 27,534 ಕೋಟಿ ರು. ರಾಜಸ್ವ ಕೊರತೆ
- ಜಿಎಸ್‌ಟಿ ಸಂಗ್ರಹದಲ್ಲಿ 2ನೇ ಸ್ಥಾನ

ಡಿ ಗ್ಯಾಂಗ್ ವಿರುದ್ಧ ಮೇಲ್ಮನವಿಗೆ ಸಿದ್ಧತೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿ 7 ಆರೋಪಿಗಳಿಗೆ ಹೈಕೋರ್ಟ್ ಜಾಮೀನು ಮಂಜೂರು ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್ ಮೊರೆ ಹೋಗಲು ಪೊಲೀಸರು ನಿರ್ಧರಿಸಿದ್ದಾರೆ. ಈ ಕುರಿತು ಗೃಹ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಪೂರ್ವಾನುಮತಿ ದೊರೆತ ಬಳಿಕ ಸುಪ್ರೀಂನಲ್ಲಿ ಪ್ರಶ್ನಿಸುವುದಾಗಿ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ತಿಳಿಸಿದ್ದಾರೆ.

ಫೆಬ್ರವರಿಗೆ ಬಿಜೆಪಿ ಅಧ್ಯಕ್ಷರ ಬದಲು?

ದೆಹಲಿ: ಬಿಜೆಪಿಗೆ ಹೊಸ ರಾಷ್ಟ್ರೀಯ ಅಧ್ಯಕ್ಷರನ್ನು ಫೆಬ್ರವರಿ ಮಾಸಾಂತ್ಯದಲ್ಲಿ ಆಯ್ಕೆ ಮಾಡುವ ಸಾಧ್ಯತೆಯಿದೆ. ಬಿಜೆಪಿಯ ರಾಜ್ಯ ಘಟಕಗಳಲ್ಲಿ ಶೇ.60ರಷ್ಟರಲ್ಲಿ ಅಧ್ಯಕ್ಷರ ಅಧಿಕಾರಾವಧಿ ಪೂರ್ಣಗೊಂಡಿದೆ. ಈ ರಾಜ್ಯ ಘಟಕಗಳಿಗೆ ಹೊಸ ಅಧ್ಯಕ್ಷರನ್ನು ಜನವರಿಯಲ್ಲಿ ನೇಮಕ ಮಾಡುವ ಸಾಧ್ಯತೆಯಿದೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಮಾಧ್ಯಮಗಳಿಗೆ ತಿಳಿಸಿದ್ದಾರೆ.



ಬಿಲ್ಡರ್ಸ್‌ಗಳಿಗೆ ಐಟಿ ಶಾಕ್; 5 ಕಡೆ ದಾಳಿ

ಬೆಂಗಳೂರು: ತೆರಿಗೆ ವಂಚನೆ ಆರೋಪದ ಮೇಲೆ ಬೆಂಗಳೂರಿನಲ್ಲಿನ ಬಿಲ್ಡರ್ಸ್‌ಗಳಿಗೆ ಸಂಬಂಧಿಸಿದ ಐದು ಕಡೆ ಐಟಿ ಅಧಿಕಾರಿಗಳು ಏಕಕಾಲಕ್ಕೆ ದಾಳಿ ಮಾಡಿದ್ದಾರೆ. ಒಂದೇ ತಿಂಗಳ ಅಂತರದಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ಮೂರನೇ ದಾಳಿ ಇದಾಗಿದೆ. ಕಳೆದ ತಿಂಗಳು ನ.27 ರಂದು ಬೆಂಗಳೂರಿನ 25ಕ್ಕೂ ಹೆಚ್ಚು ಕಡೆ ಉದ್ಯಮಿಗಳು, ಬಿಲ್ಡರ್‌ಗಳ ಮನೆ ಮತ್ತು ಕಚೇರಿ ಮೇಲೆ ಏಕಕಾಲಕ್ಕೆ ದಾಳಿ ಮಾಡಿದ್ದರು.

ಪಾಕ್‌ನಲ್ಲಿ ಪ್ರಿಯಾಂಕಾ ಗಾಂಧಿ ಗುಣಗಾನ

ದೆಹಲಿ: ಪ್ರಿಯಾಂಕಾ ಗಾಂಧಿ ಅವರು ಅಧಿವೇಶನಕ್ಕೆ 'ಪ್ಯಾಲೆಸ್ತೀನ್' ಎಂದು ಬರೆದಿರುವ ಬ್ಯಾಗ್ ಹಿಡಿದು ಹೋಗಿರುವುದಕ್ಕೆ ಪಾಕಿಸ್ತಾನದ ಮಾಜಿ ಸಚಿವ ಚೌಧರಿ ಫವಾದ್ ಹುಸೇನ್ ಶ್ಲಾಘಿಸಿದ್ದಾರೆ. ನೆಹರು ಅವರಂತಹ ಮಹಾನ್ ಸ್ವಾತಂತ್ರ್ಯ ಹೋರಾಟಗಾರರ ಮೊಮ್ಮಗಳಿಂದ ಇನ್ನೇನು ನಿರೀಕ್ಷಿಸಬಹುದು? ಕುಬ್ಜರ ನಡುವೆ ಪ್ರಿಯಾಂಕಾ ಗಾಂಧಿ ಎತ್ತರವಾಗಿ ನಿಲ್ಲುತ್ತಾರೆ ಎಂದು ಟ್ವೀಟ್ ಮಾಡಿದ್ದಾರೆ.

ಸಂಧ್ಯಾ ಚಿತ್ರಮಂದಿರ ಆಡಳಿತಕ್ಕೆ ನೋಟಿಸ್

ಹೈದರಾಬಾದ್: 'ಪುಷ್ಪ-2' ಚಿತ್ರಪ್ರದರ್ಶನದ ವೇಳೆ ನೂಕುನುಗ್ಗಲು ಸಂಭವಿಸಿದ್ದ ಪ್ರಕರಣದ ಸಂಬಂಧ 'ಸಂಧ್ಯಾ 70 ಎಂಎಂ' ಚಿತ್ರಮಂದಿರದ ಆಡಳಿತವರ್ಗಕ್ಕೆ ಪೊಲೀಸರು ಎರಡು ಪುಟಗಳ ನೋಟಿಸ್ ನೀಡಿದ್ದಾರೆ. ನೋಟಿಸ್‌ನಲ್ಲಿ ಪೊಲೀಸರು ಒಟ್ಟು 11 ತಪ್ಪುಗಳನ್ನು ಪಟ್ಟಿ ಮಾಡಿದ್ದಾರೆ. ಸುರಕ್ಷತಾಕ್ರಮ ಕೈಗೊಳ್ಳದಿರುವ ಕಾರಣಕ್ಕೆ ಏಕೆ ಲೈಸೆನ್ಸ್ ರದ್ದುಪಡಿಸಬಾರದು? ಎಂದು ಪ್ರಶ್ನಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

'ನನಗಿಂತ ಬೆಕ್ಕನ್ನೇ ಜಾಸ್ತಿ ಪ್ರೀತಿಸ್ತಾನೆ' ಎಂದು ಗಂಡನ ಮೇಲೆ ಕೇಸ್ ದಾಖಲಿಸಿದ ಮಹಿಳೆ

ಸುದ್ದಿ



ಬೀದರ್‌ನಲ್ಲಿ ಕನಿಷ್ಠ ಉಷ್ಣಾಂಶ 7.5 ಡಿ.ಸೆ., ವಿಜಯಪುರದಲ್ಲಿ 8.5 ಡಿ.ಸೆ. ದಾಖಲು

ಮೈ ಕೊರೆಯುತ್ತಿರುವ ಚಳಿಗೆ ಕಲ್ಯಾಣ ಕರ್ನಾಟಕ ಗಢ ಗಢ

ಕಲಬುರಗಿ: ಕಳೆದ ಮೂರು ದಿನಗಳಿಂದ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಚಳಿ ಹೆಚ್ಚುತ್ತಿದ್ದು, ಜನರನ್ನು ನಡುಗಿಸುತ್ತಿದೆ. ಬೀದರ್ ಜಿಲ್ಲೆಯಲ್ಲಿ ಸೋಮವಾರ ಮತ್ತು ಮಂಗಳವಾರ ರಾಜ್ಯದಲ್ಲೇ ಅತಿ ಕಡಿಮೆ ತಾಪಮಾನ ದಾಖಲಾಗಿದೆ.

ಭಾರತೀಯ ಹವಾಮಾನ ಇಲಾಖೆಯ ವರದಿ ಪ್ರಕಾರ, ಬೀದರ್‌ನಲ್ಲಿ ಕನಿಷ್ಠ ಉಷ್ಣಾಂಶ 7.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ 8.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಜನವರಿಯಲ್ಲಿ ಚಳಿ ಇನ್ನಷ್ಟು ಹೆಚ್ಚಲಿದ್ದು, ದಾಖಲೆಯ ಅತಿ ಕಡಿಮೆ ತಾಪಮಾನ ದಾಖಲಾಗಲಿದೆ ಎಂದು ತಿಳಿಸಿದೆ.

ಬೀದರ್ ಜಿಲ್ಲೆಯಲ್ಲಿ 2023ರ ಜನವರಿ 9ರಂದು ತಾಪಮಾನ 5.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಈ ವರ್ಷ ಆ ದಾಖಲೆಯನ್ನು ದಾಟಿ 5 ಡಿಗ್ರಿ ಸೆಲ್ಸಿಯಸ್‌ಗೆ ಉಷ್ಣಾಂಶ ಇಳಿಯುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ. ರಾಯಚೂರಿನಲ್ಲಿ 13 ಡಿಗ್ರಿ ಸೆಲ್ಸಿಯಸ್ ಹಾಗೂ ಕಲಬುರಗಿಯಲ್ಲಿ 13 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಥಂಡಾ ಹೊಡೆದ ಬೆಂಗಳೂರಿಗರು; ಬೆಂಗಳೂರು ನಗರದಲ್ಲಿ ಈ ಬಾರಿ ಭಾರೀ ಚಳಿ ಶುರುವಾಗಿದ್ದು, ಮಂಗಳವಾರದ ಬಳಿಕ ಡಿಸೆಂಬರ್ ತಿಂಗಳಲ್ಲೇ ಅತಿ ಹೆಚ್ಚು ಚಳಿ ದಾಖಲಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಈ ವರ್ಷ ಸುರಿದ ಭಾರಿ ಮಳೆಯಿಂದಾಗಿ ಚಳಿಯ ಪ್ರಮಾಣ ಹೆಚ್ಚಾಗಿದ್ದು, ಈ ಮೂಲಕ 14 ವರ್ಷಗಳ ದಾಖಲೆ ಮುರಿಯಲಿದೆ. 2011 ಡಿ.24ರಂದು ಬೆಂಗಳೂರಿನಲ್ಲಿ 12.8 ಡಿ.ಸೆ.ಗೆ ಕುಸಿದಿದ್ದು ಈವರೆಗಿನ ದಾಖಲೆಯಾಗಿತ್ತು. 1884 ಜನವರಿ 13ರಂದು ಬೆಂಗಳೂರಿನಲ್ಲಿ ತಾಪಮಾನ 7.8 ಡಿ.ಸೆ.ಗೆ ಕುಸಿದಿದ್ದು ಈವರೆಗಿನ ದಾಖಲೆಯಾಗಿದೆ. ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರು ತಾಪಮಾನ ಸರಾಸರಿ ಕನಿಷ್ಠ 15.7 ಡಿ.ಸೆ. ಇರುತ್ತದೆ. ಭಾನುವಾರ ರಾತ್ರಿ 15.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಎಚ್‌ಎಎಲ್ ವಿಮಾನ ನಿಲ್ದಾಣದ ಪ್ರದೇಶದಲ್ಲಿ 14.7 ಡಿ.ಸೆ. ಮತ್ತು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 14.5 ಡಿಗ್ರಿ ಸೆಲ್ಸಿಯಸ್‌ಗೆ ಕುಸಿತವಾಗಿತ್ತು.

- ಜನವರಿಯಲ್ಲಿ ಕಲ್ಯಾಣ ಕರ್ನಾಟಕದಲ್ಲಿ ಚಳಿ ಇನ್ನಷ್ಟು ಹೆಚ್ಚಳ, ಅತಿ ಕಡಿಮೆ ತಾಪಮಾನ ದಾಖಲು
- ಬಿಸಿಲಿನ ಹೊಡೆತಕ್ಕೆ ಮಣಿಯದ ಜನರು ಕೊರೆಯುವ ಚಳಿಗೆ ತತ್ತರಿಸಿ ಹೋಗಿದ್ದಾರೆ
- ಬೆಂಗಳೂರಿನಲ್ಲಿ ತಾಪಮಾನ 7.8 ಡಿಗ್ರಿ ಸೆಲ್ಸಿಯಸ್‌ಗೆ ಕುಸಿತ, 14 ವರ್ಷಗಳ ದಾಖಲೆ ಬ್ರೇಕ್

ಡಿ.26ರಂದು ಎಐಸಿಸಿ ಕಾರ್ಯಕಾರಿ ಸಭೆ ಆಯೋಜನೆ: ಕೆ.ಸಿ.ವೇಣುಗೋಪಾಲ್

ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

1924ರಲ್ಲಿ ಬೆಳಗಾವಿ ನೆಲದಲ್ಲಿ ಮಹಾತ್ಮಾ ಗಾಂಧಿ ಅಧ್ಯಕ್ಷತೆ ವಹಿಸಿದ್ದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವವನ್ನು ಅರ್ಥಪೂರ್ಣ ಆಚರಿಸಲು ಕಾಂಗ್ರೆಸ್ ಸಿದ್ಧತೆ ನಡೆಸಿದ್ದು, ಡಿ.26ರಂದು ಎಐಸಿಸಿ ಕಾರ್ಯಕಾರಿ ಸಭೆ ಆಯೋಜನೆ ಮಾಡಲಾಗುವುದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿದರು.

ಬೆಳಗಾವಿಯ ಸಿ.ಪಿ.ಎಡ್ ಮೈದಾನದಲ್ಲಿ ಡಿಸೆಂಬರ್ 26 ಹಾಗೂ 27 ರಂದು ನಡೆಯಲಿರುವ 'ಗಾಂಧಿ ಭಾರತ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ' ಕಾರ್ಯಕ್ರಮದ ಅಂಗವಾಗಿ ಸಿದ್ಧತಾ ಸಭೆ ಉದ್ದೇಶಿಸಿ ಮಂಗಳವಾರ ನಗರದ ಕಾಂಗ್ರೆಸ್ ಭವನದಲ್ಲಿ ಮಾತನಾಡಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮಾ ಗಾಂಧೀಜಿ ಶಾಂತಿಯುತ, ಅಹಿಂಸಾತ್ಮಕ ಹೋರಾಟಕ್ಕೆ ಕರೆ ನೀಡಿದ್ದರು.

→ 8



ಬೆಳಗಾವಿಯ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿದರು. ಸಿಎಂ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್ ಸಿಂಗ್ ಸುರ್ಜೇವಾಲಾ, ಕೆ.ಸಿ.ವೇಣುಗೋಪಾಲ್ ಮತ್ತಿತರರು ಇದ್ದರು.

ಬೆಳಗಾವಿ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಕಾರ್ಯಕ್ರಮ ಹಿನ್ನೆಲೆಯಲ್ಲಿ ಬೆಳಗಾವಿ ಸುವರ್ಣಸೌಧದ ಮುಂದೆ ಮಹಾತ್ಮಾ ಗಾಂಧಿಯವರ ಪುತ್ಥಳಿ ಅನಾವರಣ ನಡೆಯಲಿದ್ದು, ಎಲ್ಲ ಪಕ್ಷಗಳ ಮುಖಂಡರಿಗೂ ಆಹ್ವಾನ ನೀಡಲಿದ್ದೇವೆ. ರಾಜ್ಯಾದ್ಯಂತ ಪಕ್ಷಭೇದ ಮರೆತು ಜನರು ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಬೆಳಗಾವಿ ಮುಖಂಡರ ಸಭೆ ನಡೆಸಲಾಗಿದ್ದು, ಕಾರ್ಯಕ್ರಮದ ತಯಾರಿ ನಡೆಯುತ್ತಿವೆ.

ಡಿ.ಕೆ.ಶಿವಕುಮಾರ್ ಡಿಸಿಎಂ

ಸಮಾಚಾರ ಸಣ್ಣದಲ್ಲ

ದಿಗ್ಗಿ ಅಗಸಿ ದುರಸ್ತಿ ಕಾಮಗಾರಿ ಪ್ರಾರಂಭ

ಶಹಾಪುರ: ಪುರಾತನ ಇತಿಹಾಸ ಸಾರುವ, ಸಗರನಾಡಿನ ಹಿರಿಮೆ, ನಗರದ ಕಿರೀಟವಾಗಿರುವ ದಿಗ್ಗಿ ಅಗಸಿ ದುರಸ್ಥಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪಗೌಡ ದರ್ಶನಾಪುರ ಅವರು ಶ್ರಮ ವಹಿಸಿ ಸರಕಾರದಿಂದ ಸುಮಾರು 98 ಲಕ್ಷ ರು. ಅನುದಾನ ಒದಗಿಸಿದ್ದು ಕಾರಣಾಂತರಗಳಿಂದ ನೆನಗುದಿಗೆ ಬಿದ್ದಿದ್ದ ಕಾಮಗಾರಿ ಇದೀಗ ಪ್ರಾರಂಭಗೊಂಡಿದ್ದು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಸರಿಯಾದ ರೀತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಕರವೇ ಪ್ರವೀಣಕುಮಾರ್ ಶೆಟ್ಟಿ ಬಣದ ತಾಲೂಕ ಅಧ್ಯಕ್ಷ ವೆಂಕಟೇಶ ಬೊನೇರ ತಿಳಿಸಿದ್ದಾರೆ. ದಿಗ್ಗಿ ಅಗಸಿಯ ಕುರಿತು ಅತಿ ಹೆಚ್ಚು ಕಾಳಜಿ ಹೊಂದಿದ್ದ ಹಿರಿಯರಾದ ಬಾಸ್ಕರ್‌ರಾವ್ ಮೂಡಬೂಳ ಅವರು ಸಧ್ಯ ನಮ್ಮ ಮಧ್ಯೆ ಇಲ್ಲಾ. ಆದರೆ ಈ ಬಗ್ಗೆ ಸಾಕಷ್ಟು ಚಿಂತನೆ ,ಕಾಳಜಿ ಹೊಂದಿದ್ದರು. ಅವರ ಇಚ್ಛೆಯಂತೆ ದುರಸ್ಥಿ ಮಾಡಿದರೆ ಮುಂದೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎನ್ನುವುದು ಜನರ ಅನಿಸಿಕೆ ಆದ್ದರಿಂದ ಹೆಚ್ಚು ಕಾಳಜಿ ವಹಿಸಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಜಾತ್ರಾ ಮಹೋತ್ಸವ ಖಾಶೆಂಪೂರ ಭಾಗಿ

ಬೀದರ್: ದಕ್ಷಿಣ ಕ್ಷೇತ್ರದ ಖಾಶೆಂಪೂರ ಪಿ. ಗ್ರಾಮದಲ್ಲಿ ಇರುವ ದತ್ತ ಮಹಾರಾಜರ ಅವತಾರ ಪುರುಷ ಶ್ರೀ ಸದ್ಗುರು ಸಚ್ಚಿದಾನಂದ ಸ್ವಾಮೀಜಿ ಅವರ 8 ನೇ ಜಾತ್ರಾ ಮಹೋತ್ಸವ ಜರುಗಿತು. ಮಾಜಿ ಸಚಿವ ಬಂಡೆಪ್ಪ ಖಾಶೆಂಪೂರ ಅವರು ಮಹೋತ್ಸವದಲ್ಲಿ ಭಾಗವಹಿಸಿದರು. ಬೆಳಗ್ಗೆ ಮಹಾರುದ್ರಾಭಿಷೇಕ. ಪಲ್ಲಕ್ಕಿ ಉತ್ಸವ ಸೇರಿದಂತೆ ವಿಶೇಷ ಪೂಜೆ ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಇಟಗಾ ಮಠದ ಶರಣಯ್ಯ ಸ್ವಾಮಿ ಅರ್ಚಕರು, ಅರ್ಜುನಗಿರಿ ಬಾಬಾ, ಶ್ರೀ ಸದ್ಗುರು ಸಚ್ಚಿದಾನಂದ ಸ್ವಾಮೀಜಿ ದೇವಸ್ಥಾನದ ಅರ್ಚಕರಾದ ಶಿವಾನಂದ ಸ್ವಾಮಿ ಸೇರಿದಂತೆ ರಾಜಕುಮಾರ್ ಪಾಟೀಲ್, ಶೇಕಪ್ಪ ಪಾಟೀಲ್, ನರಸಣ್ಣ ಬಸಗೊಂಡ, ವಿಶ್ವನಾಥ ಬಾಲೇಬಾಯಿ, ಮಂಜುನಾಥ ಬಾಲೇಬಾಯಿ, ಅಮರೇಶ ಗುಮಾಸ್ತಿ, ಶರಣಪ್ಪ ಖಾಶೆಂಪುರ್, ಭಜರಂಗ ತಮಗೊಂಡ, ಕೃಷ್ಣಚಾರಿ, ಶಿವರಾಜ್ ಹಾಲಹಳ್ಳಿ, ಲಕ್ಷ್ಮಣ ಹೊಸಳ್ಳಿ, ವಿಜಯಕುಮಾರ್ ಕುಲಕರ್ಣಿ ಹಾಗೂ ಗ್ರಾಮಸ್ಥರು ಗಣ್ಯರು ಉಪಸ್ಥಿತರಿದ್ದರು.

ಅದಾಲತ್ 73628 ಪ್ರಕರಣ ಇತ್ಯರ್ಥ

ಬೀದರ್: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೀದರ್ ಜಿಲ್ಲೆಯ ಎಲ್ಲಾ ನ್ಯಾಯಲಯಗಳಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ

73,628 ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಒಟ್ಟು 23,43,28,647 ರೂ.ಗಳ ಪರಿಹಾರವನ್ನು ಕಕ್ಷಿದಾರರಿಗೆ ಒದಗಿಸಲಾಗಿದೆ ಎಂದು ಬೀದರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗ ಪ್ರಕಾಶ ಬನಸೋಡೆ ತಿಳಿಸಿದರು. ಅವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಂಗಣದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು ಸದರಿ ಲೋಕ ಅದಾಲತ್‌ನಲ್ಲಿ 10,191 (ಪೆಂಡಿಂಗನಲ್ಲಿನ) ಪ್ರಕರಣಗಳನ್ನು ಇತ್ಯರ್ಥಗೊಳಿಸಿ 13,16,69,342 ರೂ. ವಸೂಲಾತಿ ಮತ್ತು ಪರಿಹಾರ ಒದಗಿಸಲಾಗಿದೆ ಹಾಗೂ ಜಿಲ್ಲೆಯಾದ್ಯಾಂತ ಒಟ್ಟು 63,437 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು 10,26,59,305 ರೂ. ವಸೂಲಾತಿ ಮತ್ತು ಪರಿಹಾರ ಒದಗಿಸಲಾಗಿದೆ. ಅದೇ ರೀತಿ ವೈವಾಹಿಕ ವ್ಯಾಜ್ಯವನ್ನು ಇತ್ಯರ್ಥಪಡಿಸಿ ಸಂದಾನದ ಮೂಲಕ 03 ಜೋಡಿ ದಂಪತಿಯನ್ನು ರಾಜಿ ಸಂಧಾನದ ಮೂಲಕ ಒಂದಾಗಿರುತ್ತಾರೆ ಎಂದರು.

ಕೌಶಲಾಭಿವೃದ್ಧಿ ತರಬೇತಿಗೆ ಅರ್ಜಿ

ಬೀದರ್: ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ/ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಅರ್ಜಿ ಅಹ್ವಾನಿಸಲಾಗಿದೆ ಎಂದು ಬೀದರ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 2024-25ನೇ ಸಾಲಿನಲ್ಲಿ ಪ್ರವಾಸೋದ್ಯಮ/ಆತಿಥ್ಯ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಪರಿಶಿಷ್ಟ ಜಾತಿಗೆ ಸೇರಿದ 292 ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 162 ಅಭ್ಯರ್ಥಿಗಳಿಗೆ ರಾಜ್ಯ ಹಾಗೂ ಕೇಂದ್ರ ಸರಕಾರದ ಆತಿಥ್ಯ ಕ್ಷೇತ್ರದ ಸಂಸ್ಥೆಗಳಿಂದ ವಸತಿಸಹಿತ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿರುತ್ತದೆ. ಡಿ.20 ರಿಂದ 24 ರವರೆಗೆ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಸ್ವಯಂ ದೃಢಿಕೃತದೊಂದಿಗೆ ಡಿ.28 ರೊಳಗೆ ಅರ್ಜಿ ಸಲ್ಲಿಸಬಹುದು.

{ಆರ್. ಅಶೋಕ್} ಪ್ರತಿಪಕ್ಷ ನಾಯಕರ

ಈ ಹಿಂದೆ ನಮ್ಮ ಸರಕಾರವಿದ್ದಾಗ ಅಂದಿನ ರಾಜ್ಯಪಾಲರು ಕಾಂಗ್ರೆಸಿನವರಾಗಿದ್ದರು. ಆ ಕಾರಣಕ್ಕೆ ನಾವು ಯಾವುದೇ ಅಧಿಕಾರವನ್ನು ಕಿತ್ತುಕೊಂಡಿರಲಿಲ್ಲ. ಆದರೀಗ ಕುಲಾಧಿಪತಿಗಳನ್ನಾಗಿ ರಾಜ್ಯಪಾಲರ ಬದಲಿಗೆ ಮುಖ್ಯಮಂತ್ರಿಗಳನ್ನು ಮಾಡಲು ಹೊರಟಿರುವುದು ರಾಜಕೀಯ ದ್ವೇಷ ಎನಿಸುತ್ತದೆ.

ಹೆಚ್ಚಿದ ಹತ್ತಿ ಕಳ್ಳತನ | ಇಲಾಖೆ ಅಧಿಕಾರಿಗಳು ಮೌನ | ರೈತರ ಸಂಕಷ್ಟ

ಹತ್ತಿ ತೂಕ, ಬೆಲೆಯಲ್ಲಿ ವಂಚನೆ: ರೈತರು ಕಂಗಾಲು

ಶಹಾಪುರ: ರೈತರು ಬೆಳೆದ ಬೆಳೆಗೆ ಉತ್ತಮ ಧಾರಣೆ ಹಾಗೂ ಬೆಲೆ ಕುಸಿತ ತಡೆಯುವ ಉದ್ದೇಶದಿಂದ ಸರಕಾರ ಬೆಂಬಲ ಬೆಲೆ ಅಡಿಯಲ್ಲಿ



ಭಾರತೀಯ ಹತ್ತಿ ನಿಗಮದ ಅಡಿಯಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಿದೆ. ಆದರೆ ಅನುಕೂಲಕ್ಕಿಂತ ಅನಾನುಕೂಲ ಅಧಿಕವಾಗಿದೆ ಎಂಬ ದೂರು ಅನ್ನದಾತರಿಂದ ಕೇಳಿ ಬರುತ್ತಿದೆ. ಹತ್ತಿಯ ತೂಕ ಮತ್ತು ಬೆಲೆ ಎರಡು ಕಡಿಮೆ ಮಾಡುತ್ತಿದ್ದಾರೆ.

ಮಧ್ಯಮ ಎಳೆ ನೂಲು ಕ್ವಿಂಟಲ್‌ಗೆ 7,121 ,ಉದ್ದನೆಯ ನೂಲ 7,521 ಬೆಂಬಲ ಬೆಲೆ ಇದೆ. ಸಂಕಷ್ಟದ ನಡುವೆ ರೈತರು ಹತ್ತಿ ಖರೀದಿ ಕೇಂದ್ರಕ್ಕೆ ಹತ್ತಿ ತಂದರೆ ಪಹಣಿ ಪತ್ರಿಕೆಯಲ್ಲಿ ಹತ್ತಿ ಬೆಳೆ ನಮೂದು ಆಗಿಲ್ಲ. ದಲ್ಲಾಳಿಗಳ ಹಾವಳಿಗೆ ರೋಸಿ ಹೋಗಿದ್ದು ಹಣ ರೈತರ ಕೈ ಸೇರುತ್ತಿಲ್ಲ.

ತೇವಾಂಶ ಹೆಚ್ಚಿರುವ ಹತ್ತಿಯನ್ನು ಖರೀದಿ ಮಾಡುತ್ತಿಲ್ಲ ಎಂದು ರೈತರ ಆರೋಪ ಸಮಾನ್ಯವಾಗಿದೆ. ಅನಿವಾರ್ಯವಾಗಿ ರೈತರು ಕಡಿಮೆ ದರಕ್ಕೆ ಮಾರಾಟ ಮಾಡುತ್ತಿದ್ದಾರೆ. ಅದನ್ನೇ ಮಿಲ್‌ನವರು ಮತ್ತೆ ಹತ್ತಿ ಖರೀದಿ ಕೇಂದ್ರಕ್ಕೆ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಅನ್ನದಾತರಿಗೆ ಅನ್ಯಾಯವಾಗುತ್ತಿದೆ.

ವರ್ಷವಿಡೀ ಬೆವರು ಸುರಿಸಿ ಬೆಳೆದ ಬೆಳೆ ಮಾರಾಟ ಮಾಡುವಾಗ ತೂಕದಲ್ಲಿ ಮೋಸ ಆಗುತ್ತಿರುವುದು ಬಯಲಾಗಿರುವ ಪರಿಣಾಮ ಹತ್ತಿ ಬೆಳೆದ ಅನ್ನದಾತರಿಗೆ ದಿಗಿಲು ಬಡಿದಂತಾಗಿದೆ. ಇದಕ್ಕೆಲ್ಲ ಲಗಾಮು ಹಾಕಬೇಕಾದ ಇಲಾಖೆ ಮೌನಕ್ಕೆ ಶರಣಾಗಿದೆ. ಇದು ಹಲವಾರು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಹಾಡ ಹಗಲೇ ಹತ್ತಿ ಕಳ್ಳತನ:

ರೈತರು ಟ್ರ್ಯಾಕ್ಟರ್, ಟಾಟಾಏಸ್ ಹಾಗೂ ಕ್ರೂಸರ್‌ಗಳಲ್ಲಿ ಹತ್ತಿ ತರುತ್ತಿರುವಾಗಲೇ ಕಳ್ಳರು ವಾಹನಗಳ ಹಿಂಬದಿಯಲ್ಲಿ ಮುಚ್ಚಿದ ಹೊದಿಕೆ ಹರಿದು ಹಾಕಿ ಹತ್ತಿ ಕಳ್ಳತನ ಮಾಡುತ್ತಿದ್ದಾರೆ. ಮತ್ತು ಹಲವು ಗ್ರಾಮಗಳಲ್ಲಿ ಕೂಡಿಹಿಟ್ಟು ಹತ್ತಿಯನ್ನು ಕಳ್ಳರು ರಾತ್ರಿ ಹೊತ್ತು ಕಳ್ಳತನ ಮಾಡುತ್ತಿದ್ದಾರೆ. ಕೆಲವರು ಮಕ್ಕಳನ್ನು ಬಳಸಿ ಅವರಿಂದ ಹತ್ತಿ ಕಳ್ಳತನ ಮಾಡಿಸುತ್ತಿದ್ದಾರೆ.

ಹತ್ತಿ ಬಿಡಿಸಲು ಕೂಲಿಕಾರರು ಸಿಗದೆ ರೈತರು ಕಂಗಾಲಾಗಿದ್ದು, ದಿನ ಬೆಳಗಾದರೆ ಕೂಲಿ ಕಾರ್ಮಿಕರರನ್ನು ಹುಡುಕುವ ಸಮಸ್ಯೆ ಎದುರಾಗಿದೆ. ಇದರಿಂದ ಅನ್ನದಾತರು ಹೆಣಗಾಡುವಂತಾಗಿದೆ. ಕೃಷಿ ಕಾರ್ಮಿಕರು ಸಿಗದೇ ರೈತರು ಬೇರೆ ಊರುಗಳಿಂದ ಕೂಲಿ ಕಾರ್ಮಿಕರನ್ನು ಕರೆಸಿಕೊಂಡು ಬರುತ್ತಿದ್ದಾರೆ. ಇನ್ನೂ ಬಹುತೇಕ ರೈತರು ಹತ್ತಿ ಬಿಡಿಸಿಯೇ ಇಲ್ಲ.

ಹೆಚ್ಚಿನ ಡಿಮಾಂಡ್: ರೈತರಿಗ ಆಳು ಸಿಗದೇ ಇದ್ದುದರಿಂದ ಕೃಷಿ ಕೂಲಿಕಾರ್ಮಿಕರಿಗೆ ಹೆಚ್ಚಿನ ಡಿಮಾಂಡ್ ಬಂದಿದ್ದು, ಕೆ.ಜಿ ಹತ್ತಿ ಬಿಡಿಸಲು 11 ರೂ.ಯಿಂದ 15 ರೂ ವರೆಗೆ ಬೇಡಿಕೆ ಇದ್ದು. ಬಾಡಿಗೆ ಆಟೋ ಅಥವಾ ಟಾಟಾಎಸ್ ವಾಹನದ ಮೂಲಕ ಕರೆತಂದು ಮತ್ತೆ ವಾಪಸ್ ಅವರ ಹಳ್ಳಿಗೆ ಬರಲಾಗುತ್ತಿದೆ. ಈ ಬಾಗದಲ್ಲಿ ಕಾರ್ಮಿಕರು ಸಿಗುತ್ತಿಲ್ಲಾ. ಆದ್ದರಿಂದ ದೂರದ ಆಂಧ್ರ ಕೃಷಿ ಕಾರ್ಮಿಕರು ಬರುತ್ತಿದ್ದು. ವಾಹನ ಮಾಡದಿದ್ದರೆ ಕೃಷಿ ಕಾರ್ಮಿಕರು ಹತ್ತಿ ಬಿಡಿಸಲು ಬರಲು ನಿರಾಕರಿಸುತ್ತಿದ್ದಾರೆ.

ತಾಲೂಕಿನಲ್ಲಿ 10 ಹತ್ತಿ ಖರೀದಿ ಕೇಂದ್ರ ತೆರೆಯಲಾಗಿದ್ದು. ಶೇ.8 ರಿಂದ ಶೇ.12 ತೇವಾಂಶ ಇರುವ ಹತ್ತಿಯನ್ನು ಖರೀದಿ ಮಾಡಲಾಗುತ್ತಿದೆ. ಸರಕಾರದ ನಿಯಮದ ಪ್ರಕಾರ ಖರೀದಿಸುತ್ತಿದ್ದು. ರೈತರಿಗೆ ಯಾವುದೇ ವಂಚನೆ ಯಾಗದಂತೆ ಖರೀದಿ ಮಾಡಲಾಗುತ್ತಿದೆ.

ಕಿರಣ ಪುರೋಹಿತ್, ಹತ್ತಿ ಖರೀದಿ ಅಧಿಕಾರಿ

ಅನ್ನದಾತರಿಗೆ ವಂಚನೆ

ಒಂದು ಕಡೆ ಅನ್ನದಾತರಿಗೆ ವಂಚನೆ ನಡೆಯುತ್ತಿದ್ದು, ಮತ್ತೊಂದೆಡೆ ಹತ್ತಿ ಕಳ್ಳತನ ಮಾಡುತ್ತಿದ್ದಾರೆ. ಪೊಲೀಸರು ಸೂಕ್ತ ಭದ್ರತೆ ನೀಡಬೇಕು. ಅನಧೀಕೃತ ಖರೀದಿ ಕೇಂದ್ರಗಳ ಸಂಖ್ಯೆ ಹೆಚ್ಚಿದ್ದು. ಕೂಡಲೇ ಇಲಾಖೆಯವರು ಎಚ್ಚೆತ್ತುಕೊಳ್ಳಬೇಕು. ಈ ಬಗ್ಗೆ ಸದನದಲ್ಲಿ ಗಂಭೀರ ಚರ್ಚೆಯಾಗಬೇಕು. ಸಾಲಸೂಲ ಮಾಡಿ ಬೆಳೆದ ಬೆಳೆಗೆ ಸೂಕ್ತ ಬೆಲೆ ಇಲ್ಲಾ. ರೈತರು ಬಾರಿ ನಷ್ಟ ಅನುಭವಿಸಬೇಕಾಗಿದೆ. ಈ ಭಾಗದ ಶಾಸಕರು, ಸಚಿವರು ಸದನದಲ್ಲಿ ಕಾಲಹರಣೆ ಮಾಡದೇ ಈ ಬಗ್ಗೆ ಸರಕಾರದ ಗಮನಕ್ಕೆ ತಂದು ರೈತರಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕು ಎಂದು ಹಿರಿಯ ರೈತರಾದ ಸಿದ್ದಲಿಂಗಪ್ಪಗೌಡ ಹಬ್ಬಳ್ಳಿ ಮಾತನಾಡಿದರು.

ಮಠದಲ್ಲಿ ಅಯ್ಯಪ್ಪ ಸ್ವಾಮಿ ಪೂಜೆ

ಭಾಲ್ಕಿ: ಇಲ್ಲಿಯ ಶಾಂತಲಿಂಗೇಶ್ವರ ಮಠದಲ್ಲಿ ಅಯ್ಯಪ್ಪ ಸ್ವಾಮಿ ಪೂಜೆ ಜರುಗಿತು. ಬೆಳಗ್ಗೆ ಸ್ವಾಮಿ ಅಯ್ಯಪ್ಪ ಮೂರ್ತಿಗೆ ಅಭಿಷೇಕ ನೆರವೇರಿಸಲಾಯಿತು. ಬಳಿಕ ಪೂಜೆ, ಭಜನೆ, ನಂತರ ಪ್ರಸಾದ ವಿತರಿಸಲಾಯಿತು.

ಪ್ರತಿ ವರ್ಷದಂತೆ ಈ ವರ್ಷವೂ ಕಾರ್ತಿಕ ಮಾಸದಲ್ಲಿ 48 ದಿನಗಳವರೆಗೆ ವಿಶೇಷ ಪೂಜೆ ಸಲ್ಲಿಸಿ ಕಠಿಣ ವ್ರತಾಚರಣೆಯ ಮೂಲಕ ಏಕಚಿತ್ತದಿಂದ ಅಯ್ಯಪ್ಪನನ್ನು ಧ್ಯಾನಿಸಿ ಸಂಕ್ರಾಂತಿ ಹಬ್ಬದ ದಿನದಂದು ಶಬರಿ ಮಲೆಗೆ ತೆರಳುವ ಮಾಲಾಧಾರಿ ಭಕ್ತರು ಜ್ಯೋತಿಯ ದರ್ಶನ ಪಡೆದು ಪುನೀತರಾಗುತ್ತಾರೆ. ಕಪ್ಪು ಬಟ್ಟೆ ಧರಿಸುವ ಮಾಲಾಧಾರಿಗಳು ದಿನನಿತ್ಯ ತಮ್ಮ ಶಿಬಿರದಲ್ಲೇ ಉಳಿದುಕೊಂಡು ಅಯ್ಯಪ್ಪನ ಪೂಜೆ ಅರ್ಚನೆಯಲ್ಲಿ ಕಾಲ ಕಳೆಯುತ್ತಾ ನಾಮಸ್ಮರಣೆಯೊಂದಿಗೆ ಆನಂದ ಪಡೆಯಲಾಗುತ್ತದೆ ಎಂದು ಮಾಲಾಧಾರಿಗಳು ತಿಳಿಸಿದರು. ಪ್ರಮುಖರಾದ ಶೈಲೇಶ ಅಷ್ಟೂರೆ, ಚಂದ್ರಶೇಖರ ಹೊಚರೆಡ್ಡಿ, ಸೋಮಶೇಖರ ಕೋರಿ, ಲೊಕೇಶ್, ಲೋಕೇಶ ಪವಾರ, ಶಿವಕುಮಾರ ಸ್ವಾಮಿ, ರಾಜು ಅಷ್ಟೂರೆ, ಸಂಜು ರಾಮರೆಡ್ಡಿ, ಸಂತೋಷ ಹಳ್ಳಿಖೇಡೆ, ಚಿಂಟು, ಭದ್ರೇಶ ಸ್ವಾಮಿ, ಮೃತ್ಯುಂಜಯ, ರಾಹುಲ್, ಜಗನ್ನಾಥ, ಕಾಶಿ, ಅಯ್ಯಪ್ಪ ಮಾಲಾಧಾರಿಗಳಾಗಿದ್ದಾರೆ. ಶನಿವಾರ ವಿಶೇಷ ಪೂಜೆ ಹಾಗೂ ಮಹಾಪ್ರಸಾದ ಸೇವೆ ನೆರವೇರಿತು. ಉದ್ಯಮಿ ನರಸಿಂಗ್ ಸಗರ್ ಪ್ರಸಾದ ವ್ಯವಸ್ಥೆ ಮಾಡಿದರು.

ಶಾಂತಲಿಂಗೇಶ್ವರ ಮಠದಲ್ಲಿ ಅಯ್ಯಪ್ಪ ಸ್ವಾಮಿ ಪೂಜೆ ಜರುಗಿತು

ಬದುಕು ಸದ್ವಿಚಾರ ತುಂಬಿರಲಿ

ದಕ್ಷಿಣ ಕ್ಷೇತ್ರದ ಪ್ರಮುಖ ಧಾರ್ಮಿಕ ಕ್ಷೇತ್ರಗಳಲ್ಲಿ ಶಬರಿ ಮಲೆ ಕೂಡಾ ಒಂದು. ಕೋಟ್ಯಾನುಕೋಟಿ ಭಕ್ತರು ಅಯ್ಯಪ್ಪ ಶಬರಿ ಮಲೆಯ ದರ್ಶನದಿಂದ ಅದೆಷ್ಟೋ ಭಕ್ತರು ಮನಸ್ಸಿಗೆ ನೆಮ್ಮದಿ ಕಾಣುತ್ತಾರೆ. ಕಣ್ಣು ಯಾವತ್ತೂ ಒಳ್ಳೆಯದನ್ನೇ ನೋಡಬೇಕು. ಉತ್ತಮವಾದುದನ್ನು ಕೇಳಬೇಕು. ಒಳ್ಳೆಯ ಮಾತುಗಳಾಡಬೇಕು. ದೇವರ ಧ್ಯಾನದಲ್ಲಿ ತೊಡಗಿಸಿಕೊಳ್ಳುವ ಮೂಲಕ ಎಲ್ಲರ ಬದುಕು ಕೂಡ ಸದ್ವಿಚಾರದಲ್ಲಿ ತುಂಬಿರಬೇಕು ಎನ್ನುವ ನಿಟ್ಟನಲ್ಲಿ ಈ ಪೂಜೆ ಕೈಗೊಳ್ಳಲಾಗುತ್ತದೆ ಎಂದು ಭಕ್ತ ಭದ್ರೇಶ ಸ್ವಾಮಿ ತಿಳಿಸಿದರು.

ಕಲ್ಯಾಣದ ಶೈಕ್ಷಣಿಕ ಪ್ರಗತಿಗೆ ಮನವಿ

ಸುರಪುರ: ಕಲ್ಯಾಣ ಕರ್ನಾಟಕ ಭಾಗವು ಶೈಕ್ಷಣಿಕವಾಗಿ ಹಿಂದುಳಿದಿದ್ದು., ವಿದ್ಯಾರ್ಥಿಗಳ ಜೀವನ ರೂಪಿಸುವ ಹಿತದೃಷ್ಟಿಯಿಂದ ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣ

ವಾಗಿ ಶಿಕಕರನ್ನು ನೇಮಕಗೊಳಿಸುವಂತೆ ನೂತನ ಶಾಸಕ ರಾಜಾ ವೇಣುಗೋಪಾಲ್ ನಾಯಕ್ ಸದನದಲ್ಲಿ ಧ್ವನಿ ಎತ್ತಿದ್ದಾರೆ.

ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದ ಉತ್ತರ ಕರ್ನಾಟಕ ಸಮಸ್ಯೆ ಮೇಲೆ ಬೆಳಕು ಚೆಲ್ಲಿದ ಶಾಸಕರು, ಇಂದಿನ ಮಕ್ಕಳಿಗೆ ಶಿಕ್ಷಣ ದೊರಕಿದರೆ ಮುಂದೆ ಉತ್ತಮ ನಾಗರೀಕರಾಗಿ ರೂಪಗೊಳ್ಳುತ್ತಾರೆ. ಆದ್ದರಿಂದ ಕೂಡಲೇ ಕಾಯಂ ಶಿಕ್ಷಕರನ್ನು ನೇಮ ಕಾಗೋಳಿಸಬೇಕು. ಸದ್ಯ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರ ವೇತನ ಹೆಚ್ಚಿಸುವಂತೆ ಒತ್ತಾಯಿಸಿದರು.

ಯಾದಗಿರಿ-ರಾಯಚೂರು ಜಿಲೆಗಳಲ್ಲಿ ಅರಣ್ಯ ಸಂಪತ್ತು ವೃದ್ಧಿಸಬೇಕಿರುವ ಅಧಿಕಾರಿಗಳು, ವಿವಿಧ ಯೋಜನೆ ಯಡಿಯಲ್ಲಿ ಸಸಿ ನೆಡುತ್ತಾರೆ ಆದರೆ ಅವುಗಳ ಪೋಷಣೆ ಮಾಡುವಲ್ಲಿ ವಿಫಲರಾಗಿದ್ದರೆ, ಯಾದಗಿರಿ ಜಿಲ್ಲೆಯಿಂದ ಪ್ರತಿ ವರ್ಷ 20 ರಿಂದ 30 ಸಾವಿರ ಬಡ ಕೂಲಿ ಕಾರ್ಮಿಕರು ಗುಳೆ ಹೋಗುತ್ತಿದ್ದಾರೆ. ಗುಳೆ ಹೋಗುವು ದನ್ನು ತಪ್ಪಿಸಲು ಸ್ಥಳೀಯವಾಗಿ ಕಾರ್ಖಾನೆಗಳನ್ನು ಸ್ಥಾಪಿಸುವಂತೆ ಮನವಿ ಮಾಡಿದರು.

ಜಲಜೀವನ್ 256 ಕಾಮಗಾರಿ ಅಪೂರ್ಣ

ಕ್ಷೇತ್ರದಾದ್ಯಂತ ಜಲ ಜೀವನ ಮಷೀನ್ ಯೋಜನೆ ಅಡಿ ಗ್ರಾಮೀಣ ಭಾಗದ ಮನೆಮನೆಗೂ ನೀರು ಕಲ್ಪಿಸುವ ಉದ್ದೇಶದಿಂದ ಸುಮಾರು 256 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ವರದಿ ಸಲ್ಲಿಸಲಾಗಿದೆ. ಆದರೆ, ಕಾಮಗಾರಿಗಳು ಅಪೂರ್ಣವಾಗಿದ್ದು, ಈ ಯೋಜನೆಯ ಮೂಲಕ ಜನಸಾಮಾನ್ಯರ ಮನೆಗಳಿಗೆ ನೀರು ತಲುಪುತ್ತಿಲ್ಲ ಕೂಡಲೇ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿದರು.

ತೊಗರಿ ಬೆಳೆ ಹಾನಿ ಪರಿಹಾರಕ್ಕೆ ಒತ್ತಾಯ

ಬೀದರ್: ಜಿಲ್ಲೆಯ ಕಮಲನಗರ ಹಾಗೂ ಔರಾದ ತಾಲೂಕಿನಲ್ಲಿ ಹವಾಮಾನ ಬದಲಾವಣೆಯಿಂದ ತೊಗರಿ ಬೆಳೆಹಾನಿಯಾಗಿದ್ದು. ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿ ರೈತರು ಸಂಕಷ್ಟಕ್ಕೆ

ಸಿಲುಕಿದ್ದಾರೆ ಸರಕಾರದಿಂದ ಪರಿಹಾರ ಧನ ಒದಗಿಸಬೇಕು ಎಂದು ಕಾಂಗ್ರೆಸ್ ಮುಖಂಡ ಭೀಮ ಸೇನ ರಾವ್ ಶಿಂಧೆ ಒತ್ತಾಯಿಸಿದ್ದಾರೆ.

ಈ ಕುರಿತು ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಅವರಿಗೆ ಬರೆದ ಮನವಿ ಪತ್ರ ಸಲ್ಲಿಸಿದ್ದಾರೆ. ತಾಲೂಕುಗಳಲ್ಲಿ ರೈತರು ತೊಗರಿ ಬೆಳೆಯನ್ನು ಸಮೃದ್ಧವಾಗಿ ಬೆಳೆ ಬೆಳೆದಿದ್ದರು. ಹೂ ಬಿಟ್ಟು ಕಾಯಿ ಕಟ್ಟುವ ಸಮಯದಲ್ಲಿ ವಿಪರೀತ ಹವಾಮಾನ ಬದಲಾವಣೆಯಿಂದ ಅತಿಯಾದ ಮಂಜು ಕಾಣಿಸಿಕೊಂಡು ಹೂ ಹಾಗೂ ಕಾಯಿಗಳು ನೆಲಕ್ಕೆ ಉರುಳಿವೆ. ಕಾಯಿ ಕಟ್ಟುವ ಸಮಯದಲ್ಲಿ ನೆಲಕ್ಕುರುಳಿದ ಹೂ ಕಾಯಿಗಳಿಂದ ರೈತರು ಸಂಕಷ್ಟಕ್ಕೆ ಸಿಲುಕಿ ದಿಕ್ಕು ತೋಚದಂತಾಗಿದೆ. ಸರಕಾರ ಗಮನ ಹರಿಸುವ ಮೂಲಕ ರೈತರ ನೆರವಿಗೆ ಬರಬೇಕು. ತೊಗರಿ ಬೆಳೆ ನಾಶವಾದ ಕಮಲನಗರ ಹಾಗೂ ಔರಾದ ಎರಡು ತಾಲೂಕುಗಳ ರೈತರಿಗೆ ಸರಕಾರದಿಂದ ಪರಿಹಾರ ಧನ ಮಂಜೂರು ಮಾಡಬೇಕು ಎಂದು ಕೃಷಿ ಸಚಿವರಿಗೆ ಬರೆದ ಮನವಿ ಪತ್ರದ ಮುಖಾಂತರ ಶಿಂಧೆ ಅವರು ಒತ್ತಾಯಿಸಿದ್ದಾರೆ.

ಸಮೀಕ್ಷೆ ಕೈಗೊಳ್ಳಲಿ

ತೊಗರಿ ಬೆಳೆ ಹಾನಿಯಾಗಿರುವ ಕುರಿತು ಅಧಿಕಾರಿಗಳು ಸಮೀಕ್ಷೆ ನಡೆಸಬೇಕು. ಕೃಷಿ ಅಧಿಕಾರಿಗಳು ರೈತರ ಹೊಲಗಳಿಗೆ ತೆರಳುವ ಮೂಲಕ ಮಾಹಿತಿ ಸಂಗ್ರಹಿಸಿ ಸರಕಾರಕ್ಕೆ ವರದಿ ಸಲ್ಲಿಸಬೇಕು. ಇದರಿಂದ ರೈತರ ಸಮಸ್ಯೆಗೆ ತಕ್ಷಣ ಸ್ಪಂದನೆ ನೀಡಿದಂತಾಗುತ್ತದೆ ಎಂದು ಶಿಂಧೆ ತಿಳಿಸಿದ್ದಾರೆ.

ಶೀಘ್ರದಲ್ಲೇ ಪರಿಹಾರ ಒದಗಿಸಿ

ವಿಪರೀತ ಹವಾಮಾನ ಬದಲಾವಣೆಯಿಂದ ಶೇ.30 ರಿಂದ ಶೇ.50 ಕ್ಕೂ ಹೆಚ್ಚು ರೈತರ ಹೊಲದಲ್ಲಿ ಬೆಳೆದ ತೊಗರಿ ಬೆಳೆ ನಾಶವಾಗಿದೆ. ಇದು ದೊಡ್ಡ ಪ್ರಮಾಣದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದು ವರೆಗೆ ಜಿಲ್ಲಾಡಳಿತ ಹಾಗೂ ಸ್ಥಳೀಯ ಅಧಿಕಾರಿಗಳಿಂದ ಯಾವುದೇ ಪರಿಹಾರ ಒದಗಿಸಿಲ್ಲ. ಆದ್ದರಿಂದ ಸಂಕಷ್ಟಕ್ಕೆ ಸಿಲುಕಿದ ರೈತರಿಗೆ ಶೀಘ್ರದಲ್ಲೇ ಪರಿಹಾರ ಧನ ಒದಗಿಸಬೇಕು ಎಂದು ಶಿಂಧೆ ಮನವಿ ಮಾಡಿದ್ದಾರೆ.

ನ್ಯಾಯ ವಂಚಿತ ತಾಲೂಕು, ಹೋರಾಟಕ್ಕೆ ಸಜ್ಜು

ಗುರುಮಠಕಲ್: ಪಟ್ಟಣವು ತಾಲೂಕ ಕೇಂದ್ರವಾಗಿ ದಶಕಗಳೇ ಕಳೆದರೂ ಇನ್ನು ಸಂಬಂಧ ಪಟ್ಟ ಇಲಾಖೆಗಳು ಹಾಗೂ ನ್ಯಾಯಾಲಯ ಬರದೇ ಇರುವದಕ್ಕೆ ಜಿಲ್ಲಾ ವಕೀಲ ಸಂಘದ ಜಿಲ್ಲಾ ಅಧ್ಯಕ್ಷ ಸಿ. ಎಸ್. ಮಾಲಿಪಾಟೀಲ್ ವಿಷಾದ ವ್ಯಕ್ತ ಪಡಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕಳೆದ 2012 ರಿಂದ ನ್ಯಾಯಾಲಯದ ಬೇಡಿಕೆಯಿಟ್ಟಿದ್ದೇವೆ, ಮಾನದಂಡದ ಪ್ರಕಾರ ತಾಲೂಕಿನಿಂದ 1200 ಪ್ರಕರಣಗಳು ದಾಖಲಾಗುತ್ತಿದ್ದರು ಕುಂಠ ನೆಪ ಹೇಳಿ ಮುಂದೂಡುತ್ತಿರುವುದು ಸಹಿಸಲಾಗದು, ಪ್ರಯುಕ್ತ ಮುಂದಿನ ದಿನಗಳಲ್ಲಿ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟ ಮಾಡುತ್ತೇವೆ ಎಂದರು.

ಇದೇ ಸಂದರ್ಭದಲ್ಲಿ ವಕೀಲ ಆನಂದ ರಾವ್ ನೀರೇಟಿ ಮಾತನಾಡಿ, ಸುತ್ತಮುತ್ತಲಿನ ಗ್ರಾಮಗಳಿಂದ ನಯವಾಧಿಗಳು ಸೇರಿದಂತೆ ಅರ್ಜಿದಾರರು ದೂರದ ಯಾದಗಿರಿಗೆ ಅಲೆಡದಾಡಬೇಕಾಗಿದೆ, ಸಮಯ ಸೇರಿದಂತೆ ಆರ್ಥಿಕ ಹೊರೆಯಾಗುತ್ತಿದ್ದು, ಪುರಸಭೆ ಕಾರ್ಯಾಲಯವು ಬೇಡಿಕೆಗೆ ಸ್ಪಂಧಿಸಿ ಟೌನ್ ಹಾಲ್ ಅನ್ನು ಬಳಕೆಗೆ ನೀಡಿದ್ದು ರಾಜಕೀಯ ಹಿತಾಶಕ್ತಿಯಿಲ್ಲದೆ ತಾಲೂಕು ಕೇಂದ್ರದಲ್ಲಿ ನ್ಯಾಯಾಲಯ ಪ್ರಾರಂಭಿಸಲು ಸಾಧ್ಯವಾಗುತ್ತಿಲ್ಲ. ಈ ಕೂಡಲೇ ಸಂಬಂಧ ಪಟ್ಟವರು ಮುತುವರ್ಜಿ ವಹಿಸದಿದ್ದರೆ ಅತೀ ಶೀಘ್ರದಲ್ಲಿ ಹೋರಾಟ ಮಾಡುತ್ತೇವೆ ಎಂದರು.

ಈ ಸಂಧರ್ಭದಲ್ಲಿ ಖಜಾಂಚಿ ಸಾಬಣ್ಣ, ಕೃಷ್ಣ ಮೇಧಾ, ರಾಜ ರಮೇಶ್ ಗೌಡ, ಗುರುನಾಥ ರೆಡ್ಡಿ ಅನಪುರ, ದೇವಪ್ಪ ಎಮ್, ವಿಶ್ವನಾಥ ರೆಡ್ಡಿ, ಸಂಜೀವ ಕುಮಾರ ಚಂದಾಪುರ, ಮೋಹನ ಕುಮಾರ್ ಗಜಾರೆ, ನರಸಪ್ಪ ಧನವಾಡ, ಕೃಷ್ಣ ಪಂಚಾಲ, ಮೊಗುಲಪ್ಪ ಯಾದ್ಲಾಪುರ, ಮೌನೇಶ್ ಕೊಂಕಲ್, ವಿಜಯಕುಮಾರ್ ಉಪಸ್ಥಿತರಿದ್ದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ವಕೀಲ ಸಂಘದ ವತಿಯಿಂದ ಪೂರ್ವ ಭಾವಿ ಸಭೆಯನ್ನುದ್ದೇಶಿಸಿ ಜಿಲ್ಲಾಧ್ಯಕ್ಷ ಸಿ. ಎಸ್. ಮಾಲಿ ಪಾಟೀಲ್ ಮಾತನಾಡಿದರು.

ಶ್ರೀ ಭಾಗ್ಯವಂತಿ ದೇವಿ ಜಾತ್ರೆ ನಾಳೆಯಿಂದ

ಬೀದರ್: ತಾಲೂಕಿನ ನಾಗೂರ ಬಡಾವಣೆ ಹಾಗೂ ಬೀದರ ಮನ್ನಳ್ಳಿ ರಸ್ತೆಯಲ್ಲಿರುವ ಶ್ರೀ ಭಾಗ್ಯವಂತಿದೇವಿ ಮತ್ತು ಭವಾನಿ ಮಾತಾ ಮಂದಿರದ 15 ಮೇ ಜಾತ್ರಾ ಮಹೋತ್ಸವವು ಡಿ. 19 ಮತ್ತು 20 ರಂದು ಎರಡು ದಿನಗಳ ಕಾಲ ನಡೆಯಲಿದೆ ಎಂದು ದೇವಸ್ಥಾನದ ಪ್ರಧಾನ ಅರ್ಚಕರಾದ ಸಂತ ಮೀರಾಬಾಯಿ ನಾಗೂರಾ ಅವರು ತಿಳಿಸಿದ್ದಾರೆ.

ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಸುರೇಶ್ ಶಿಂಧೆ ಅವರು ಈ ಮಂದಿರ ನಿರ್ಮಾಣಕ್ಕೆ ಕೈಜೋಡಿಸಿದರು. ಅವರ ನೇತ್ರತ್ವದಲ್ಲಿಯೇ ಮೊದಲನೇಯ ದಿನ ಬೆಳಗ್ಗೆ 9 ಗಂಟೆಗೆ ಹವನ ಪೂಜೆ ಕಾರ್ಯಕ್ರಮ ಎರಡನೇ ದಿನಕ್ಕೆ ಬೆಳಗ್ಗೆ 8 ಗಂಟೆಗೆ ಅರ್ಚನೆ ಅಭಿಷೇಕ ಸೇರಿದಂತೆ ಗ್ರಾಮದ ಪೋಚೆಮ್ಮ ಮಂದಿರದ ವರೆಗೆ ಪಲ್ಲಕ್ಕಿ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು. ನೆರೆಯ ರಾಜ್ಯದ ತೆಲಂಗಾಣ ಹಾಗೂ ಮಹಾರಾಷ್ಟ್ರ ಸೇರಿದಂತೆ ಸಾವಿರಾರು ಭಕ್ತರು ಹಾಗೂ ಭಜನೆ ಮಂಡಳಿಯವರು ಪಾಲ್ಗೊಳ್ಳಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಭಕ್ತರು ಶಾಂತ ರೀತಿಯಲ್ಲಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಯಾಗಿ ಸಹಕರಿಸಬೇಕು. ಪ್ರಸಾದ ವ್ಯವಸ್ಥೆ ಕೈಗೊಳ್ಳಲಾಗಿದೆ ಎಂದು ಭಕ್ತರಲ್ಲಿ ಮನವಿ ಮಾಡಿದ್ದಾರೆ. ಜಾತ್ರಾ ಮಹೋತ್ಯವ ಪೂಜಾರಿ ಬಾಬುರಾವ್ ಮುಖಂಡರಾದ ರಾಜರೆಡ್ಡಿ .ವೆಂಕಟರೆಡ್ಡಿ. ಗೋಪಾಲರೆಡ್ಡಿ. ಪ್ರಸಾದ ವ್ಯವಸ್ಥೆ ಕೈಗೊಳ್ಳಲಾಗಿದೆ ಎಂದರು.



ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಸುರೇಶ್ ಶಿಂಧೆ ಅವರು ಈ ಮಂದಿರ ನಿರ್ಮಾಣಕ್ಕೆ ಕೈಜೋಡಿಸಿದರು.

ಬೆಳೆಗಳಿಗೆ ನಿರಂತರ ನೀರು ಹರಿಸಲು ಆಗ್ರಹ

ಶಹಾಪುರ: ನಾರಾಯಣಪೂರ ಬಸವಸಾಗರ ಜಲಾಶಯದಿಂದ ಬೇಸಿಗೆ ಬೆಳೆಗೆ ನಿರಂತರವಾಗಿ ನೀರು ಹರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ -ಹಸಿರು ಸೇನೆ ಜಿಲ್ಲಾ ಸಮಿತಿ ವತಿಯಿಂದ ಭೀಮರಾಯನಗುಡಿ ಕೆಬಿಜೆಎನ್‌ಎಲ್ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಪತ್ರ ಸಲ್ಲಿಸಿದರು.

ಜಿಲ್ಲಾ ಉಪಾಧ್ಯಕ್ಷ ಹಣಮಂತ್ರಾಯ ಚಂದಲಾಪುರ ಮಾತನಾಡಿ, ಆಣೆಕಟ್ಟಿನ ಎಡದಂಡೆ ಕಾಲುವೆಯ ವ್ಯಾಪ್ತಿಗೆ ಬರುವ ರೈತಾಪಿ ವರ್ಗಕ್ಕೆ ಸಾಕಷ್ಟು ಮಳೆ ಬಂದು ಡ್ಯಾಂನಲ್ಲಿ ನೀರು ಸಂಗ್ರಹಗೊಂಡು ರೈತರು ಹಿಂಗಾರು ಬೆಳೆಯನ್ನು ಬೆಳೆಯುವಷ್ಟು ನೀರು ಇದ್ದು. ಇದರಿಂದ ಅನ್ನದಾತರು ತಮ್ಮ ಜಮೀನುಗಳನ್ನು ಸ್ವಚ್ಚ ಮಾಡಿ ಕೊನೆಯ ಭಾಗದ ರೈತರು ಬಿತ್ತನೆ ಮಾಡುವುದಕ್ಕೆ ಸಿದ್ದತೆಯಲ್ಲಿದ್ದಾರೆ. ಟೆಲೆಂಡಿನ್ ಕೊನೆಯ ಭಾಗದ ರೈತರ ಜಮೀನಿಗೆ ನೀರು ಮುಟ್ಟದೆ ಬೆಳೆ ಬೆಳೆಯುವುದಕ್ಕೆ ಹರಸಾಹಸ ಪಡುತ್ತಿದ್ದಾರೆ. ಏಕಾಏಕಿ ನೀರಾವರಿ ಸಲಹಾ ಸಮಿತಿ ರಚನೆ ಮಾಡಿ ಮನಸ್ಸಿಗೆ ಬಂದಂತೆ ವಾರಬಂದಿ ಮಾಡಲು ನಿರ್ಧರಿಸಿದ್ದು ಇದು ಅವೈಜ್ಞಾನಿಕ ತೀರ್ಪು ಎಂದು ಖಂಡಿಸಿದರು.

ನ.20 ರಂದು ಬಂದ್ ಮಾಡಿ ಡಿ.10 ರಂದು ಕಾಲುವೆಗೆ ನೀರು ಹರಿಸಲಾಗುವುದು ಎಂದು ಏಕಾಏಕಿಯಾಗಿ ಗೇಟ್ ಹಾಕಿ ನೀರು ಬಂದ್ ಮಾಡಲಾಗಿದೆ. ಅನ್ನದಾತರು ಶೇಂಗಾ ಬಿತ್ತನೆ ಮಾಡಲು ಕಾಳು ಖರೀದಿಸಿದ್ದಾರೆ. ಮತ್ತು ಮೆಣಸಿನಕಾಯಿ ಮತ್ತು ಇನ್ನಿತರು ಬೆಳೆಗಳು ಕೂಡ ನೀರಿಲ್ಲದೆ ಒಣಗಿ ಹೋಗಿವೆ. ಕಳೆದ 2 ವರ್ಷದಿಂದ ಮಳೆಗಾಲ ಸರಿ ಇಲ್ಲದೆ ರೈತರು ಕಂಗಾಲಾಗಿದ್ದರು.

ಜಿಲ್ಲಾ ಅಧ್ಯಕ್ಷ ಅಯ್ಯಣ್ಣ ಹಾಲಭಾವಿ, ಮಲ್ಲಣ್ಣ ಹಾಲಭಾವಿ, ಸಾಹೇಬಗೌಡ ಮದಲಿಂಗನಾಳ, ಭೀಮಣ್ಣ ತಿಪ್ಪನಟಗಿ, ದೇವಿಂದ್ರಪ್ಪ ತಿಪ್ಪನಟಗಿ, ವೆಂಕಟೇಶಗೌಡ ಕುಪಗಲ್, ತಿಪ್ಪಣ್ಣ ಜಂಪಾ, ಭೀಮನಗೌಡ ಕರ್ನಾಳ, ನಾಗಪ್ಪ ಕುಪಗಲ್, ಇಮಾಮಸಾಬ ತಿಪ್ಪನಟಗಿ, ಶಿವನಗೌಡ ರುಕ್ಮಾಪುರ, ಮಾನಪ್ಪ ಕೊಂಬಿನ್ ಸೇರಿದಂತೆ ಅನೇಕ ರೈತರು ಇದ್ದರು.

ವಸತಿಯುತ ಶಾಲೆಗೆ ತಹಸೀಲ್ದಾರ ಭೇಟಿ

ಔರಾದ್: ತಾಲೂಕಿನ ಸಂತಪೂರ ಗ್ರಾಮದ ಹೊರವಲಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ತಹಸೀಲ್ದಾರ ಮಲ್ಲಶೆಟ್ಟಿ ಚಿದ್ರೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಸತಿ ನಿಲಯದ ಸ್ಟೋರ್ ರೂಂ, ಶೌಚಾಲಯ, ಅಡುಗೆ ಮನೆ ಪರಿಶೀಲಸಿ, ಬಿಸಿ ನೀರಿನ ವ್ಯವಸ್ಥೆ, ವಿದ್ಯುತ್ ದೀಪಗಳ ಕುರಿತು ಮಾಹಿತಿ ಪಡೆದುಕೊಂಡರು. ವಿದ್ಯಾರ್ಥಿಗಳು ಶೌಚಾಲಯ ಸ್ವಚ್ಛತೆ, ಬಿಸಿ ನೀರಿನ ವ್ಯವಸ್ಥೆ, ವಿದ್ಯುತ್ ಸೇರಿದಂತೆ ಮತ್ತೆ ಕೆಲ ಸಮಸ್ಯೆಗಳನ್ನು ತಹಸೀಲ್ದಾರ ಮುಂದಿಟ್ಟರು. ಶಾಲೆಯ ವಿದ್ಯಾರ್ಥಿಗಳಿಗೆ ಪ್ರತಿ ನಿತ್ಯದ ಊಟ ಹೊರತುಪಡಿಸಿ ಬೇರೆ ಹಲವು ರೀತಿಯ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ತಹಸೀಲ್ದಾರ ಅವರು, ಸಮಸ್ಯೆಗಳ ಬಗ್ಗೆ ಸಂಬಂಧಿಸಿದ ನಿರ್ಲಕ್ಷ್ಯ ತೋರಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸರಕಾರ ಸಾಕಷ್ಟು ಪ್ರಮಾಣದಲ್ಲಿ ಅನುದಾನ ನೀಡಿದರೂ ಅದನ್ನು ಸದ್ಬಳಕೆ ಮಾಡುವಲ್ಲಿ ಕೆಲ ವಸತಿ ನಿಲಯದ ಪ್ರಾಂಶುಪಾಲ, ವಾರ್ಡನ್ ಅವರ ನಿರ್ಲಕ್ಷ್ಯ ತೋರುತ್ತಿದ್ದಾರೆ. ಇದು ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತದೆ. ನಿರ್ಲಕ್ಷ್ಯ ತೋರುವ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಮೇಲೆ ಕಠಿಣ ಕ್ರಮ ಜರುಗಿಸುವುದಾಗಿ ಎಚ್ಚರಿಸಿದರು. ಮಕ್ಕಳಿಗೆ ಶಿಕ್ಷಕರು ಹಲ್ಲೆ ಮಾಡುವಂತಿಲ್ಲ. ಅವರಿಗೆ ಮಾತಿನಿಂದ ಹೇಳುವ ಮೂಲಕ ಪರಿವರ್ತನೆ ಮಾಡಬೇಕು ಎಂದು ಸೂಚಿಸಿದರು.

ಶ್ರೀ ಚನ್ನಬಸವ ಮ್ಯಾರಥಾನ್ ಡಿ.20ರಂದು

ಭಾಲ್ಕಿ: ಪಟ್ಟಣದಲ್ಲಿ ಡಿ.20 ರಂದು ನಡೆಯಲಿರುವ ಚನ್ನಬಸವ ಮ್ಯಾರಥಾನ್ ಓಟದಲ್ಲಿ ಯುವಕರು, ಹಿರಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹೇಳಿದರು.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಡಾ.ಚನ್ನಬಸವ ಪಟ್ಟದ್ದೇವರ 135ನೇಯ ಜಯಂತ್ಯುತ್ಸವ ನಿಮಿತ್ತ ಮಂಗಳವಾರ ಚನ್ನಬಸವ ಮ್ಯಾರಥಾನ್ ಕರಪತ್ರ ಬಿಡುಗಡೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪಟ್ಟದ್ದೇವರ ಜಯಂತ್ಯುತ್ಸವ ಅಂಗವಾಗಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಮಾರ್ಗದರ್ಶನದಲ್ಲಿ ಕಳೆದೊಂದು ವಾರದಿಂದ ವಿವಿಧ ಕಾರ್ಯಕ್ರಮ, ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ. ಅದರಲ್ಲಿ ಚನ್ನಬಸವ ಮ್ಯಾರಥಾನ್ ಕೂಡ ಒಂದಾಗಿದೆ.

ಅಂದು ಬೆಳಿಗ್ಗೆ 5.30ಕ್ಕೆ ಚನ್ನಬಸವಾಶ್ರಮ ದಿಂದ ಚನ್ನಬಸವ ಮ್ಯಾರಥಾನ್ ಹೊರಟು ಬಸವೇಶ್ವರ ವೃತ್ತ, ಮಹಾತ್ಮ ಗಾಂಧಿ ವೃತ್ತ, ಅಷ್ಟೂರೆ ಕಲ್ಯಾಣ ಮಂಟಪದ ಮಾರ್ಗದ ರಸ್ತೆ ಮೂಲಕ ಚನ್ನಬಸವೇಶ್ವರ ಡಿಗ್ರಿ ಕಾಲೇಜು ಸಮೀಪದ ಮುಖ್ಯ ರಸ್ತೆಯಿಂದ ಬೊಮಗೊಂಡೇಶ್ವರ ವೃತ್ತ, ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತದ ಮೂಲಕ ಚನ್ನಬಸವಾಶ್ರಮ ತಲುಪಲಿದೆ ಎಂದು ತಿಳಿಸಿದರು.

ನಿವೃತ್ತ ಎಂಜಿನಿಯರ್ ಸಿದ್ದಯ್ಯ ಕಾವಡಿಮಠ ಕರಪತ್ರ ಬಿಡುಗಡೆಗೊಳಿಸಿದರು. ಬಸವಕಲ್ಯಾಣ ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ ನೇತೃತ್ವ ವಹಿಸಿದರು. ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರರ್ ಕೋಸಂಬೆ, ಚನ್ನಬಸವ ಮ್ಯಾರಥಾನ್ ಸೇವಾ ಸಮಿತಿ ಅಧ್ಯಕ್ಷ ರವೀಂದ್ರ, ಚಿಡಗುಪ್ಪೆ, ಪ್ರಥಮ ದರ್ಜೆ ಗುತ್ತಿಗೆದಾರ ಸಂಗಮೇಶ ಹುಣಜೆ ಮದಕಟ್ಟಿ, ಬೋರವೆಲ್ಸ್ ಸಂಘದ ಅಧ್ಯಕ್ಷ ಸತೀಶ ಧರ್ಮಣ್ಣ, ಸಾಹಿತಿ ರಾಜು ಜುಬರೆ, ಶಾಂತಯ್ಯ ಸ್ವಾಮಿ ಸೇರಿದಂತೆ ಹಲವರು ಇದ್ದರು.

ನಿವೃತ್ತ ಎಂಜಿನಿಯರ್ ಸಿದ್ದಯ್ಯ ಕಾವಡಿಮಠ ಕರಪತ್ರ ಬಿಡುಗಡೆಗೊಳಿಸಿದರು.

ಯುವಶಕ್ತಿಯನ್ನು ಅಧ್ಯಾತ್ಮ, ಬಸವತತ್ವದತ್ತ ಸೆಳೆಯುವ ಉದ್ದೇಶದಿಂದ ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ 135ನೆಯ ಜಯಂತ್ಯುತ್ಸವ ಅಂಗವಾಗಿ ಪಟ್ಟಣದಲ್ಲಿ 5.40 ಕಿ.ಮೀ.ಚನ್ನಬಸವ ಮ್ಯಾರಥಾನ್ ಆಯೋಜಿಸಲಾಗಿದೆ.

ಗುರುಬಸವ ಪಟ್ಟದೇವರು,
ಹಿರೇಮಠ ಸಂಸ್ಥಾನ ಭಾಲ್ಕಿ

ಒಂದು ಚುನಾವಣೆ ಮಸೂದೆ: ಖೂಬಾ

ಬೀದರ್: ಒಂದು ರಾಷ್ಟ್ರ ಒಂದು ಚುನಾವಣೆ ಮಸೂದೆಯೂ ಲೋಕಸಭೆಯಲ್ಲಿ ಅಂಗಿಕಾರಗೊಂಡಿದ್ದು, ಈ ಮಸೂದೆಗೆ ಸಹಕರಿಸಿದ ಎಲ್ಲಾ ಸಂಸದರಿಗೂ ಹಾಗೂ ಮಸೂದೆ ಅಂಗಿಕಾರ ಮಾಡಿಕೊಳ್ಳುವಲ್ಲಿ ಯಶಸ್ವಿಯಾದ ದೇಶದ ಪ್ರಧಾನಿ ನರೇಂದ್ರ ಮೋದಿಜಿಯವರಿಗೂ ಮತ್ತು ಸರಕಾರಕ್ಕೆ ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಅಭಿನಂದನೆಗಳು ಮತ್ತು ಧನ್ಯವಾದಗಳು ತಿಳಿಸಿದ್ದಾರೆ. 'ಒಂದು ರಾಷ್ಟ್ರ, ಒಂದು ಚುನಾವಣೆ' ಅನುಷ್ಠಾನದೊಂದಿಗೆ ಸರಕಾರವು ಚುನಾವಣಾ ಮೋಡ್‌ನಲ್ಲಿರುವುದಕ್ಕಿಂತ ಹೆಚ್ಚಾಗಿ ಆಡಳಿತದ ಮೇಲೆ ಹೆಚ್ಚು ಗಮನಹರಿಸಬಹುದು ಇದು ಈ ಮಸೂದೆಯ ಪ್ರಾಥಮಿಕ ಪ್ರಯೋಜನವಾಗಿದೆ ಮತ್ತು ಏಕಕಾಲಿಕ ಚುನಾವಣೆಗಳು ಮತದಾನದ ಪ್ರಮಾಣವನ್ನು ಹೆಚ್ಚಿಸುತ್ತವೆ. ಚುನಾವಣೆ ವೆಚ್ಚಗಳು ನಿಯಂತ್ರಿಸುವುದು, ಸಮಯದ ಉಳಿತಾಯ ಜೊತೆಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವುದರಿಂದ ಆಡಳಿತಾತ್ಮಕ ಮತ್ತು ಭದ್ರತಾ ಪಡೆಗಳ ಮೇಲಿನ ಹೊರೆಯನ್ನು ಕಡಿಮೆ ಮಾಡುತ್ತದೆ, ಇಲ್ಲದಿದ್ದರೆ ಭದ್ರತಾ ಪಡೆಗಳು ಚುನಾವಣಾ ಕರ್ತವ್ಯಗಳಲ್ಲಿ ಹಲವಾರು ಬಾರಿ ತೊಡಗಿಸಿಕೊಳ್ಳುವ ಪ್ರಸಂಗ ತಪ್ಪಿಸಲಿದೆ. ಇಂತಹ ಮಸೂದೆಗೆ ಪಕ್ಷಾತೀತವಾಗಿ ಎಲ್ಲರೂ ಸಹಕರಿಸಬೇಕು, ಇದರಲ್ಲಿ ದೇಶದ ಹಿತ ಅಡಗಿದೆ. ದೇಶದಲ್ಲಿ ಒಂದು ರಾಷ್ಟ್ರ ಒಂದು ಚುನಾವಣೆ ನಡೆಸುವಲ್ಲಿ ಯಶಸ್ವಿಯಾಗಲಿದೆ ಎಂದು ಭಗವಂತ ಖೂಬಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಕಲಬುರಗಿ: ಕಲಬುರಗಿ ಜೆಸ್ಕಾಂ ಕಾರ್ಯ ಮತು ಪಾಲನೆ ನಗರ ಕೆಳಕಂಡ ವಿಭಾಗದಲ್ಲಿ ಬರುವ ಫೀಡರ್‌ಗಳ ವ್ಯಾಪ್ತಿಯಲ್ಲಿನ ನಿರ್ವಹಣಾ ಕಾರ್ಯಕೈಗೊಳ್ಳುವ ಪ್ರಯುಕ್ತ ಡಿಸೆಂಬರ್ 18 ರಂದು ಬೆಳಿಗ್ಗೆ 10 ರಿಂದ ಸಾಯಂಕಾಲ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲ್ಲಿದ್ದು ಸಾರ್ವಜನಿಕರು ಜೆಸ್ಕಾಂನೊಂದಿಗೆ ಸಹಕರಿಸುವಂತೆ ಕಲಬುರಗಿ ವಿಭಾಗದ ಕಾರ್ಯನಿರ್ವಾಹಕ ಇಂಜೀನಿಯರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 11 ಕೆವಿ ದೇವಿ ನಗರ ಫೀಡರಿನ್ : ದೇವಿ ನಗರ, ಸಂತೋಷ ಕಾಲೋನಿ, ಖಾದ್ರಿ ಚೌಕ್, ನಭಿ ಕಾಲೋನಿ, ಚಿಂಚೋಳಿ ಲೇಔಟ್, ಜಾಫರಾಬಾದ್, ಪ್ರಭುದೇವ ನಗರ, ಮಾಳೇವಾಡಿ, ಜೆ. ಆರ್. ನಗರ, ಶೇಖ್ ನಗರ, ವಿಶ್ವರಾಧ್ಯ ಕಾಲೋನಿ, ಮಲ್ಲಿಕಾರ್ಜುನ ದೇವಸ್ಥಾನ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು.ಆಳಂದ ಕಾಲೋನಿ ಫೀಡರಿನ್ : ಚಿಂಚೋಳಿ ಲೇಔಟ್, ಚೊರ ಬಜಾರ, ಫೀಲ್ಟರ್ ಬೆಡ್ ಚೆಕ್ ಪೋಸ್ಟ್, ಶಿವಾದಾಲ್ ಮಿಲ್ , ರಾಮತೀರ್ಥ, ರಾಣೇಶಪೀರ್ ದರ್ಗಾ, ವಿಶ್ವರಾಧ್ಯ ಮಂದಿರ, ಸಿದ್ದರಾಮೇಶ್ವರ ನಗರ, ಆಯ್ಯೋಧ್ಯ ನಗರ, ಲಕ್ಷ್ಮೀ ನಗರ, ಅಹ್ಮೆದ ನಗರ ಫಿಎಫ್ ಕಚೇರಿ, ಆಳಂದ ಕಾಲೋನಿ, ನಬಿ ಕಾಲೋನಿ, ಶೇಖ ರೋಜಾ, ಖಾದ್ರಿ ಚೌಕ್, ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು. ಎಮ್.ಎಸ್.ಕೆ.ಮಿಲ್ ಫೀಡರಿನ್, ಮಾಣಿಕೇಶ್ವರ ಕಾಲೋನಿ ಫೀಡರಿನ್, ಹಿರಾಪುರ ಫೀಡರಿನ್‌ಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ

ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆ

ಕಲಬುರಗಿ: ಜಿಲ್ಲಾ ಪಂಚಾಯತ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಾರ್ಯಲಯ ಕಲಬುರಗಿ ಜಿಲ್ಲೆಯವತಿಯಿಂದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವಿಶೇಷಚೇತನ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಕ್ರೀಡಕೂಟ 2024-25 ನೇ ಸಾಲಿನ 14 ಮತ್ತು 17 ನೇ ವಯೊಮಾನದ ವಿಶೇಷಚೇತನ ವಿದ್ಯಾರ್ಥಿಗಳಿಗೆ ಜಿಲ್ಲಾಮಟ್ಟದ ಕ್ರೀಡಾಕೂಡದಲ್ಲಿ ಪ್ರಥಮ ಸ್ಥಾನ, ದ್ವಿತೀಯ ಸ್ಥಾನ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಡಿಸೆಂಬರ್ 16 ರಂದು ನಡೆದ ಚಂದ್ರಶೇಖರ ಪಾಟಿಲ್ ಕ್ರೀಡಾಂಗಣದಲ್ಲಿ ಅಂಧ ಬಾಲಕರ ಸರಕಾರಿ ಪ್ರೌಢ ಶಾಲೆ ಹಾಗೂ ಕಿವುಡ ಮಕ್ಕಳ ಸರಕಾರಿ ಶಾಲೆ ಕಲಬುರಗಿಯ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ ಎಂದು ಕಲಬುರಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಸಾಧಿಕ ಹುಸೇನ ಖಾನ ಅವರು ತಿಳಿಸಿದರು.

ಪೊಲೀಸ್ ವಾಹನಗಳ ಟೆಂಡರ್ ಹರಾಜು

ಕಲಬುರಗಿ: ನಗರದ ಪೊಲೀಸ್ ಇಲಾಖೆಯ ಡಿ.ಎ. ಆರ್. ಕೇಂದ್ರ ಸ್ಥಾನದಲ್ಲಿರುವ ಹಳೆಯ 4 2 ಚಕ್ರ ಹೊಂದಿರುವ ಟಾ.ಟಾ ಸುಮೊ, ಬೊಲೆರೊ,ಜಿಪ್ಸ್, ಟ್ರಾಕ್ಸ್, ಸುಮೋ ವಿಕ್ಟಾ, ಕ್ರೇನ್, ಪಲ್ಸರ್, ಟ್ರಕ್, ಇತ್ಯಾದಿ ವಾಹನಗಳ ಟೆಂಡರ್-ಕಂ ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು 2024 ರ ಡಿಸೆಂಬರ್ 26 ರಂದು ಬೆಳಿಗ್ಗೆ 11 ಗಂಟೆಗೆ ಕಲಬುರಗಿಯ ಡಿ.ಎ.ಆರ್. ಆವರಣದಲ್ಲಿ ಅಲ್ಪಾವಧಿ ಟೆಂಡರ್-ಕಂ-ಬಹಿರಂಗ ಹರಾಜು ಮೂಲಕ ಹರಾಜು ಪ್ರಕ್ರಿಯೆ ನಡೆಸಲಾಗುತ್ತದೆ ಎಂದು ಕಲಬುರಗಿ ಜಿಲ್ಲಾ ಪೊಲೀಸ್ ಅಧೀಕ್ಷಕರು ತಿಳಿಸಿದ್ದಾರೆ. ಆಸಕ್ತಿಯುಳ್ಳವರು ಈ ಹರಾಜಿನಲ್ಲಿ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಭಾಗವಹಿಸಬಹುದಾಗಿದೆ. ಬಿಡ್‌ದಾರರು ಕಡ್ಡಾಯವಾಗಿ ಜಿಎಸ್‌ಟಿ ನೋಂದಣಿ ಹೊಂದಿರಬೇಕು. ಪ್ರತಿಯೊಬ್ಬರು ಹಾರಾಜಿಗೆ ಬಂದು ಒಂದು ಗಂಟೆ ಮುಂಚಿತವಾಗಿ ಅಂದರೆ ಬೆಳಿಗ್ಗೆ 9 ರಿಂದ 10 ಗಂಟೆಯೊಳಗಾಗಿ 25,000ರು. ಗಳ ಮುಂಗಡ ಠೇವಣಿ ಪಾವತಿಸಬೇಕು. ಹರಾಜಿನ ಷರತ್ತು, ನಿಬಂಧನೆ ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಜಿಲ್ಲಾ ಪೊಲೀಸ್ ಕಚೇರಿಯ ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಲು ಕೋರಲಾಗಿದೆ ಎಂದು ಅವರು ತಿಳಿಸಿದ್ದಾರೆ.

ದರ್ಶನ್ ಮ್ಯಾನೇಜರ್‌ಗೆ ಜಾಮೀನು: ಬಿಡುಗಡೆ

ಕಲಬುರಗಿ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಮ್ಯಾನೇಜರ್ ನಾಗರಾಜ್ ನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಎ-11 ಆರೋಪಿಯಾಗಿರುವ ದರ್ಶನ ಮ್ಯಾನೇಜರ್ ನಾಗರಾಜ್ ಕಳೆದ ಎರಡು ತಿಂಗಳ ಹಿಂದೆ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಕಲಬುರಗಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರ ಮಾಡಲಾಗಿತ್ತು. ಕಳೆದ ಶುಕ್ರವಾರ ಜಾಮೀನು ದೊರಕಿದ ಹಿನ್ನೆಲೆ ಯಲ್ಲಿ, ಇಂದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಇನ್ನೂ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದ್ದು,ಅದೇ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ, ನಟ ದರ್ಶನ್ ಮ್ಯಾನೇಜರ್ ನಾಗರಾಜ್,ನನ್ನು ಸಹ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದ್ದು, ನಾಗರಾಜ್,ನ ಸಂಬಂಧಿಕರು ಮತ್ತು ಸ್ನೇಹಿತರು ಕಲಬುರಗಿ ಕಾರಾಗೃಹದಿಂದ ಕರೆದುಕೊಂಡು ಹೋಗಿದ್ದಾರೆ.

{ ಕೆ.ಎಸ್.ಈಶ್ವರಪ್ಪ } ಮಾಜಿ ಡಿಸಿಎಂ

ವಕ್ಫ್ ಆಸ್ತಿಯನ್ನು ರಾಜಕಾರಣಿಗಳು ತಮ್ಮ ಸ್ವಂತಕ್ಕೆ ಬಳಸಿಕೊಂಡಿದ್ದಾರೆ. ಕೋಟ್ಯಂತರ ಬೆಲೆ ಬಾಳುವ ಭೂಮಿ ನುಂಗಿ ನೀರು ಕುಡಿದಿದ್ದಾರೆ. ನಾನು ವಿಧಾನಸಭೆಯಲ್ಲಿ ಈ ಬಗ್ಗೆ ಚರ್ಚೆಗೆ ಆಗ್ರಹಿಸಿದ್ದೆ. ಈಗ ಮುಖ್ಯಮಂತ್ರಿ ಕೂಡ ಸಿಬಿಐ ತನಿಖೆಯಾಗಲಿ ಎನ್ನುತ್ತಿದ್ದಾರೆ. ಸಿಬಿಐಗೆ ಸರಕಾರ ಕೂಡಲೇ ಒಪ್ಪಿಸಲಿ.

ಸದನದಲ್ಲಿ ಪ್ರತಿಧ್ವನಿಸಿದ ತೊಗರಿಬೆಳೆ ನಷ್ಟದ ವಿಚಾರ | ಪರಿಹಾರಕ್ಕಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಆಗ್ರಹ

ತೊಗರಿಬೆಳೆ ಹಾನಿ, ಶೀಘ್ರ ರೈತರಿಗೆ ಪರಿಹಾರ ನೀಡಿ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲ ಅಧಿವೇಶನದಲ್ಲಿ ಮಂಗಳವಾರ ಉತ್ತರ ಕರ್ನಾಟಕ ವಿಶೇಷ ಚರ್ಚೆಯ ಸಂದರ್ಭದಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಲಕ್ಷಾಂತರ ಹೇಕ್ಟರ್ ಪ್ರದೇಶದಲ್ಲಿ ಹಾಳಾದ ತೊಗರಿಬೆಳೆಯ ಕುರಿತು ಚರ್ಚೆ ನಡೆಯಿತು. ಜಿಲ್ಲೆಯ ಶಾಸಕರಾದ ಬಿ.ಆರ್ ಪಾಟೀಲ್, ಬಸವರಾಜ್ ಮತ್ತಿಮಡು, ಅವಿನಾಶ್ ಜಾಧವ ಜತೆಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ತೊಗರಿಬೆಳೆ ನಷ್ಟವಾಗಿರುವ ಬಗ್ಗೆ ಕಲಾಪದಲ್ಲಿ ಬೆಳಕು ಚೆಲ್ಲಿ ಪರಿಹಾರಕ್ಕಾಗಿ ಅಗ್ರಹಿಸಿದರು.

ಬಿ.ವೈ ವಿಜಯೇಂದ್ರ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ ಜಿಲ್ಲೆಯ ಪ್ರಮುಖ ಬೆಳೆಯಾಗಿರುವ ತೊಗರಿ ಬೆಳೆ ಸಂಪೂರ್ಣವಾಗಿ ಹಾಳಾಗಿದೆ. ಕಳೆದ ಎರಡು ವರ್ಷಗಳಿಂದ ರೈತರ ಕೈಗೆ ಬೆಳೆದ ಬೆಳೆ ಸಿಗುತ್ತಿಲ್ಲ. ರೈತರು ತೀವ್ರ ಸಂಕಷ್ಟದಲ್ಲಿ ಸಿಲುಕಿ ಬಿದಿಗೆ ಬರುವ ಪರಿಸ್ಥಿತಿ ನಿರ್ಮಾಣವಾಗಿದೆ ಕೂಡಲೇ, ಸರಕಾರ ಮುತುವರ್ಜಿ ವಹಿಸಿ ಸರ್ವೆ ಕಾರ್ಯ ಪೂರ್ಣಗೊಳಿಸಿ ಪರಿಹಾರ ನೀಡುವ ಕೆಲಸಕ್ಕೆ ಮುಂದಾಗಬೇಕು ಎಂದು ತಾಕಿತು ಮಾಡಿದರು.

ಕೇವಲ ಕಲಬುರಗಿ ಜಿಲ್ಲೆಯಲ್ಲೇ 5-6 ಲಕ್ಷ ಹೇಕ್ಟರ್ ಪ್ರದೇಶದಲ್ಲಿ ತೊಗರಿಬೆಳೆ ಬೆಳೆಯಲಾಗಿದೆ. ಅದರಲ್ಲಿ ಮೂರು ಲಕ್ಷ ಹೇಕ್ಟರ್ ಪ್ರದೇಶದಲ್ಲಿ ತೊಗರಿ ಹಾಳಾಗಿ ಹೋಗಿದೆ. ಪರಿಹಾರ ನೀಡಬೇಕಾಗುತ್ತೆ ಎನ್ನುವ ಉದ್ದೇಶದಿಂದ ಅಧಿಕಾರಿಗಳು ಸರ್ವೆ ಕಾರ್ಯ ಸಹ ಮಾಡುತ್ತಿಲ್ಲ. ಅಥಣಿಯಲ್ಲೂ ಸಹ ಕಳಪೆ ಬೀಜ ವಿತರಣೆಯಿಂದ 15-15 ಸಾವಿರ ಹೇಕ್ಟರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಹೀಗಾಗಿ, ಆ ಭಾಗದ ರೈತರ ನೆರವಿಗೆ ಸರಕಾರ ಧಾವಿಸಬೇಕು. ಕೂಡಲೇ, ಸರ್ವೆ ಕಾರ್ಯ ಆರಂಭಿಸಿ ರೈತರ ಸಮಸ್ಯೆಗೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಇದಲ್ಲದೇ, ಕಳೆದ ಸೆಪ್ಟೆಂಬರ್ 17ರಂದು ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಣಯಗಳಾದ 11,770 ಕೋಟಿ ರು. ಗಳ ಕ್ರಿಯಾಯೋಜನೆ ಹಾಗೂ ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ಘೋಷಣೆ ಮಾಡಿತ್ತು. ಎರಡು ತಿಂಗಳು ಕಳೆದರು ಇವರೆಗೂ ಒಂದು ಅನುಷ್ಠಾನಗೊಂಡಿಲ್ಲ. ಕೂಡಲೇ ಎಲ್ಲಾ ಭರವಸೆ ಈಡೇರಿಸಿ ಎಂದು ಸರಕಾರಕ್ಕೆ ಮನವಿ ಮಾಡಿದರು.

ಶಾಸಕ ಬಿ. ಆರ್ ಪಾಟೀಲ್ ಮಾತನಾಡಿ, ಉತ್ತರ ಕರ್ನಾಟಕ ಭಾಗದಲ್ಲಿ ಶಾಲೆಗಳ ಪರಿಸ್ಥಿತಿ, ಶೈಕ್ಷಣಿಕ ಪ್ರಗತಿ ಬಹಳ ದೊಡ್ಡ ಬರೆ ಬಿದ್ದಿದೆ. ಎಸ್ ಎಸ್ ಎಲ್ ಸಿ ಫಲಿತಾಂಶದಲ್ಲಿ ಹಿಂದೇ, ಶಾಲಾ ದಾಖಲಾತಿಯಲ್ಲಿ ಹಿಂದೇ, ಗುಲಬರ್ಗಾ ವಿಶ್ವವಿದ್ಯಾಲಯ ಶೇ.83% ಖಾಲಿ. ಸರಕಾರಿ ಶಾಲೆಗಳಲ್ಲಿ 17 ಸಾವಿರ ಹುದ್ದೆ ಖಾಲಿ, ಹೀಗಿದ್ದಾಗ ಅಭಿವೃದ್ಧಿ ಹೇಗೆ ಸಾಧ್ಯ. ಗುಣಮಟ್ಟದ ಶಿಕ್ಷಣ ನೀಡದೇ ಅಭಿವೃದ್ಧಿ ಸಾಧ್ಯವಿಲ್ಲ. ಸರಕಾರ ಶೈಕ್ಷಣಿಕ ಪ್ರಗತಿಗೆ ಹೆಚ್ಚಿನ ಒಲವು ತೋರಬೇಕಿದೆ ಎಂದು ಸರಕಾರದ ಗಮನ ಸೆಳೆದರು.

ಶಾಸಕ ಬಸವರಾಜ್ ಮತ್ತಿಮಡು ಮಾತನಾಡಿ, ಕಲಬುರಗಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ತಾಲೂಕು ಸರಕಾರಿ ಕಚೇರಿಗಳಿಗೆ ಕಟ್ಟಡ, ಆರೋಗ್ಯ ಸಮಸ್ಯೆ, ತೊಗರಿ ರೈತರ ನೋವು, ಶಹಾಬಾದ್ ಸಿಮೆಂಟ್ ಕಾರ್ಖಾನೆ ಬಂದ್ ಆಗಿರುವುದು, ಸನ್ನತಿ ಅಭಿವೃದ್ಧಿ ಪ್ರಾಧಿಕಾರ ರಚಿಸಿ, ಅಭಿವೃದ್ಧಿ ಮಾಡಬೇಕು ಎಂಬುದು ಸೇರಿ ವಿವಿಧ ವಿಷಯಗಳ ಕುರಿತು ಸರಕಾರದ ಗಮನಕ್ಕೆ ತಂದು, ಅಭಿವೃದ್ಧಿ ಕೈಗೊಳ್ಳಲು ಆಗ್ರಹಿಸಿದರು.

ಶಾಸಕ ಡಾ. ಅವಿನಾಶ್ ಜಾಧವ ಮಾತನಾಡಿ, ಕಲಬುರಗಿ, ಯಾದಗಿರಿ ಹಾಗೂ ಬೀದರ ಜಿಲ್ಲೆಗಳಲ್ಲಿ ಲೋವರ್ ಮುಲ್ಲಾಮಾರಿ, ಚಂದ್ರಂಪಳ್ಳಿ, ಡಂದೋಡರಾ ನಾಲಾ, ಅಮರ್ಜಾ, ಬೆಣ್ಣೆತೋರಾ, ಭೀಮಾ ಲಿಫ್ಟ್ ಏರಿಗೇಶನ ಡ್ಯಾಂ ಗಳು ಸೇರಿ 11ಕ್ಕೂ ಹೆಚ್ಚು ಜಲಾಶಯಗಳಿವೆ. ಅವುಗಳು ಶೇ. 90 ರಷ್ಟು ಭರ್ತಿಯಾದರು, ಈ ಭಾಗದ ರೈತರಿಗೆ ಸಮರ್ಪಕವಾಗಿ ನೀರು ಸಿಗದೇ ಇರುವುದಕ್ಕೆ ಕಾರಣವೇನು.? ಈ ಭಾಗದ 1.67 ಲಕ್ಷ ರೈತರಿಗೆ ನೀರಾವರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇದಕ್ಕೆ ಕಾರಣ ಏನು.? ಏಕೆ ನೀರಾವರಿ ಸವಲತ್ತು ರೈತರಿಗೆ ಸಿಗುತ್ತಿಲ್ಲ ಎನ್ನುವದರ ಬಗ್ಗೆ ಅಧ್ಯಯನ ನಡೆಸಲು ಸರಕಾರ ಸಮಿತಿ ರಚಿಸಬೇಕು. ಶೀಘ್ರವೇ ಉತ್ತರ ಕರ್ನಾಟಕ ಭಾಗದ ರೈತರಿಗೆ ನೀರಾವರಿ ಸೌಲಭ್ಯ ಸಿಗುವಂತೆ ಸರಕಾರ ಕ್ರಮವಹಿಸಬೇಕು. ಜತೆಗೆ ಶೈಕ್ಷಣಿಕವಾಗಿ ಹಿಂದುಳಿದ ಚಿಂಚೋಳಿ ತಾಲೂಕಿಗೆ ಶಿಕ್ಷಕರ ನೇಮಕ ಮಾಡಬೇಕು ಎಂದು ಒತ್ತಾಯಿಸಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಅನೇಕ ಖಾಲಿ ಹುದ್ದೆಗಳು ಬಾಕಿ ಉಳಿದಿವೆ. ಕಲ್ಯಾಣ ಕರ್ನಾಟಕ ಭಾಗದ ಖಾಲಿ ಹುದ್ದೆಗಳ ಭರ್ತಿ ಕಾರ್ಯ ಆರಂಭವಾಗಬೇಕು. 371(ಜೆ) ಕಲಂ ಸಮರ್ಪಕ ಅನುಷ್ಠಾನ ಆಗಬೇಕು. ನಿಗಮ ಮಂಡಳಿಗಳಿಗೆ ಹೆಚ್ಚಿನ ಅನುದಾನ ನೀಡಬೇಕು. ಶಹಾಬಾದ್‌ನಲ್ಲಿ ಸೀಮೆಂಟ್ ಕಾರ್ಖಾನೆ ಬಂದಾಗಿ ನಿಂತಿದೆ ಅದನ್ನು ಕೂಡಲೇ, ಪುನರ್ ಆರಂಭಿಸಬೇಕು. ಹೊಸ ತಾಲೂಕುಗಳಿಗೆ ಸರಕಾರಿ ಕಚೇರಿಗಳನ್ನು ಮಂಜೂರು ಮಾಡಬೇಕು.

– ಬಸವರಾಜ್ ಮತ್ತಿಮಡು ಶಾಸಕ

ಚಿಂಚೋಳಿ ಪಟ್ಟಣದ ನ್ಯಾಯಾಲಯ ನಿಜಾಮ್ ಕಾಲದಲ್ಲಿ ನಿರ್ಮಾಣಗೊಂಡಿದ್ದು, ನ್ಯಾಯಾಲಯದ ಮೇಲ್ಛಾವಣಿ ಕುಸಿಯುವ ಭಯ ಉಂಟಾಗಿದೆ. ಇದ್ದರಿಂದ ನ್ಯಾಯಾವಾದಿಗಳು ಭಯದಲ್ಲಿಯೇ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ನೂತನ ಕಟ್ಟಡ ನಿರ್ಮಾಣಕ್ಕೆ ಕಳೆದ ಕಲಬುರಗಿ ಸಚಿವ ಸಂಪುಟದಲ್ಲಿಯೂ ಮನವಿ ಮಾಡಿದೆ. ಆದರೆ, ಅದಕ್ಕೆ ಯಾವುದೇ ಭರವಸೆ ಸಿಕ್ಕಿಲ್ಲ. ಹೀಗಾಗಿ,ಶೀಘ್ರವೇ ನೂತನ ಕಟ್ಟಡ ನಿರ್ಮಾಣ ಮಾಡಬೇಕು.

– ಡಾ. ಅವಿನಾಶ್ ಜಾಧವ ಶಾಸಕ

ಶಿಕ್ಷಣ ಜ್ಞಾನ ಪ್ರಸಾರದ ಸಾಧನ

ತಾಲೂಕಿನ ನರಿಬೋಳ ಗ್ರಾಮದ ಸರಕಾರಿ ಪ್ರಾಥಮಿಕ ಉರ್ದು ಶಾಲೆಯ ಮಕ್ಕಳಿಗೆ ಉಚಿತ ಶಾಲಾ ಬ್ಯಾಗ್ ವಿತರಣೆ ಕಾರ್ಯಕ್ರಮ ನಡೆಯಿತು.

ಜೇವರ್ಗಿ: ಶಿಕ್ಷಣ ಜ್ಞಾನ ಪ್ರಸಾರದ ಸಾಧನವಾಗಿದ್ದು, ಸರಿಯಾದ ಮೌಲ್ಯಗಳು ಉತ್ತಮ ಶಿಕ್ಷಣದೊಂದಿಗೆ ಬರುತ್ತವೆ ಎಂದು ತಾಪಂ ಜೇವರ್ಗಿ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ ಮೀನಾಕ್ಷಿ ಆರ್ಯ ಹೇಳಿದರು.

ತಾಲೂಕಿನ ನರಿಬೋಳ ಗ್ರಾಮದ ಸರಕಾರಿ ಪ್ರಾಥಮಿಕ ಉರ್ದು ಮೀಡಿಯಂ ಶಾಲೆಯಲ್ಲಿ ಆಯೋಜಿಸಿದ ಮಕ್ಕಳಿಗೆ ಉಚಿತ ಶಾಲಾ ಬ್ಯಾಗ್ ವಿತರಣೆ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಬ್ಯಾಗ್ ವಿತರಿಸಿ ಅವರು ಮಾತನಾಡಿ, ಉಜ್ವಲ ಭವಿಷ್ಯಕ್ಕಾಗಿ ಶಿಕ್ಷಣ ಒಂದು ಪ್ರಮುಖ ಸಾಧನವಾಗಿದ್ದು, ವಿದ್ಯಾರ್ಥಿಗಳು ಓದಿನ ಕಡೆಗೆ ಹೆಚ್ಚು ಗಮನ ಕೊಡಬೇಕು ಎಂದು ಹೇಳಿದರು.

ಇದಕ್ಕೂ ಮೊದಲು ಡಿಜಿಟಲ್ ಗ್ರಂಥಾಲಯ ಹಾಗೂ ಕೂಸಿನ ಮನೆ ವೀಕ್ಷಣೆ ಮಾಡಿದರು. ನಂತರ ಗ್ರಾಮ ಪಂಚಾಯತಿಗೆ ಭೇಟಿ ಕೊಟ್ಟು ಮಹಾತ್ಮಾ ಗಾಂಧಿ ನರೇಗಾ ಯೋಜನೆ ಕಾಮಗಾರಿ ಕಡತ, 7 ರಿಜಿಸ್ಟರ್ ಪರಿಶೀಲಿಸಿ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕ ರೇವಣಸಿದ್ದಪ್ಪ ಕೆ. ಗೌಡರ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಬಸವರಾಜ್ ಪಾಟೀಲ್, ಗ್ರಾ.ಪಂ ಅಭಿವೃದ್ಧಿ ಅಧಿಕಾರಿ, ಗ್ರಾ.ಪಂ ಮಾಜಿ ಅಧ್ಯಕ್ಷರಾದ ಶಿವಕುಮಾರ್ ಪಾಟೀಲ್, ಶರಣಪ್ಪಗೌಡ ಹರನೂರ, ದೇವಿಂದ್ರ ವಟ್ಟೆ, ಮಹೇಶಗೌಡ ಅಲ್ಲನೂರ್, ಸಿದ್ದಯ್ಯ ಸ್ವಾಮಿ, ನರೇಗಾ ತಾಲೂಕು ಐಇಸಿ ಸಂಯೋಜಕ ಚಿದಂಬರ ಪಾಟೀಲ್, , ಡಿಇಓ ರಾಮಚಂದ್ರ, ಗ್ರಾಮ ಕಾಯಕ ಮಿತ್ರ ಶಾಂತಮ್ಮ, ನಾಗಪ್ಪ, ಕೂಸಿನ ಮನೆ ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ಕೊಲೆ ಆರೋಪಿ ಮಿರ್ಜಾ ಕಾಲಿಗೆ ಪೊಲೀಸ್ ಗುಂಡು

ಕಲಬುರಗಿ: ಕೊಲೆ ಆರೋಪಿ ಬಂಧನಕ್ಕೆ ತೆರಳಿದ್ದ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ ಕಾರಣ ಆರೋಪಿ ಕಾಲಿಗೆ ಪೊಲೀಸರು ಗುಂಡು ಹಾರಿಸಿದ ಘಟನೆ ಸೋಮವಾರ ಸಂಜೆ ನಗರದ ಹೊರವಲಯದ ಆಜಾದಪುರ ಬಳಿ ನಡೆದಿದೆ. ನಗರದಲ್ಲಿ ಮತ್ತೊಮ್ಮೆ ಗುಂಡಿನ ಮೊರೆತ ಕೇಳಿಸಿದೆ.

ನಗರದ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಡಿ.11ರಂದು ನಡೆದ ರೌಡಿಶೀಟರ್ ಖಲೀಲ್ ಕೊಲೆಯ ಆರೋಪಿ ಮಿರ್ಜಾ ಕೌಸರ್ ಬೇಗ್(40) ಬಲಗಾಲಿಗೆ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸುಶೀಲಕುಮಾರ ಆತ್ಮ ರಕ್ಷಣೆಗಾಗಿ ಗುಂಡು ಹಾರಿಸಿದ್ದಾರೆ. ಮುಖ್ಯ ಪೇದೆಗಳಾದ ಸಂಜುಕುಮಾರ, ಈರಣ್ಣಫಿಹಾಗೂ ಪೇದೆ ಯಾಸಿನ್ ಅವರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದರಿಂದ, ಅನಿವಾರ್ಯವಾಗಿ ಆರೋಪಿ ಕಾಲಿಗೆ ಗುಂಡು ಹಾರಿಸಲಾಗಿದೆ.

ಆರೋಪಿ ಕೌಸರ್ ಮಿರ್ಜಾ ಹಾಗೂ ಗಾಯಗೊಂಡ ಪೊಲೀಸ್ ಸಿಬ್ಬಂದಿ ಚಿಕಿತ್ಸೆಗಾಗಿ ನಗರದ ಟ್ರಾಮಾ ಕೇರ್‌ಗೆ ಸೇರಿಕೆ ಮಾಡಲಾಗಿದೆ. ನಗರ ಪೊಲೀಸ್ ಕಮಿಷನರ್ ಡಾ.ಶರಣಪ್ಪ ಎಸ್.ಡಿ., ಡಿಸಿಪಿಗಳಾದ ಕನ್ನಿಕಾ ಸಿಕ್ರಿವಾಲಾ, ಪ್ರವೀಣ್ ನಾಯಕ್ ಹಾಗೂ ಇತರ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ ಪೇದೆಗಳ ಆರೋಗ್ಯ ವಿಚಾರಣೆ ಮಾಡಿ ಆತ್ಮಸ್ಥೈರ್ಯ ತುಂಬಿದ್ದಾರೆ.

ಠಾಣೆಯಿಂದಲೇ ಎಸ್ಕೇಪ್:

ಕೊಲೆ ಪ್ರಕರಣದ ಮೇಲೆ ಆರೋಪಿ ಕೌಸರ್ ಹಾಗೂ ಇನ್ನುಳಿದ ಮೂರು ಆರೋಪಿಗಳಾದ ನಜಿಮೊದ್ದೀನ್, ಚಪ್ಪಲ್ ಸತ್ತಾರ್, ರಿಜ್ವಾನ್ ಜಬ್ಬಾರ್‌ನನ್ನು ಎಸಿಪಿ ರಾಜಣ್ಣ ನೇತೃತ್ವದಲ್ಲಿ, ವಿವಿ ಇನ್ಸ್‌ಪೆಕ್ಟರ್ ಸುಶೀಲ್ ಕುಮಾರ, ಸಬ್ ಅರ್ಬನ್ ಪಿಐ ಸಂತೋಷ ತಟ್ಟೇಪಲ್ಲಿ ನೇತೃತ್ವದ ತಂಡ ಬಂಧನ ಮಾಡಿ, ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ. ಇನ್ನೊಬ್ಬ ಆರೋಪಿ ಮಿರ್ಜಾ ಕೌಸರ್ ಬೇಗ್ ಕೊಲೆಯಾದ ದಿನದಿಂದ ಮುಂಬಯಿ ಸೇರಿ ಬೇರೆಡೆ ಓಡಾಡಿಕೊಂಡಿದ್ದ.

ಆರೋಪಿ ಮಿರ್ಜಾ ಕೌಸರ್ ಬೇಗ್

ಈತನನ್ನು ಸೋಮವಾರ ವಶಕ್ಕೆ ಪಡೆದು ವಿವಿ ಪೊಲೀಸ್ ಠಾಣೆಗೆ ಕರೆತರಲಾಗಿತ್ತು. ವಿಚಾರಣೆ ವೇಳೆ ಮೂತ್ರಕ್ಕೆ ಹೋಗುತ್ತಿದ್ದೇನೆ ಎಂದು ಹೇಳಿ ಹೊರ ಹೋಗಿದ್ದ. ಜೊತೆಗೆ ಹೋಗಿದ್ದ ಪೇದೆ ಯಾಸಿನ್‌ನನ್ನು ತಳ್ಳಿ ಪರಾರಿಯಾಗಿದ್ದ.

ಹಲ್ಲೆ, ವಾರ್ನಿಂಗ್:

ಸಂಜೆ ವೇಳೆಗೆ ಆಜಾದಪುರ ಬಳಿಯಿರುವ ಖಚಿತ ಮಾಹಿತಿ ಮೇರೆಗೆ ವಿಶ್ವವಿದ್ಯಾಲಯ ಹಾಗೂ ಸಬ್ ಅರ್ಬನ್ ಪೊಲೀಸ್ ತಂಡ ಆರೋಪಿ ಬಂಧನಕ್ಕೆ ತೆರಳಿದ್ದು, ಆರೋಪಿಗೆ ಶರಣಾಗುವಂತೆ ಹೇಳಿತ್ತು. ಆದರೆ, ಆರೋಪಿ ಏಕಾಏಕಿ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಪೇದೆಗಳ ಮೇಲೆ ಮಾರಕಾಸಗಳಿಂದ ಹಲ್ಲೆ ನಡೆಸಿದ್ದಾನೆ. ಒಂದು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ನಂತರ ಆರೋಪಿ ಕಾಲಿಗೆ ಗುಂಡು ಹಾರಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆತ್ಮ ರಕ್ಷಣೆಗಾಗಿ ವಿವಿ ಪೊಲೀಸ್ ಇನ್ಸ್‌ಪೆಕ್ಟರ್ ಆರೋಪಿ ಕಾಲಿಗೆ ಗುಂಡು ಹಾರಿಸಿದ್ದಾರೆ. ಇನ್ನು ನಿವೇಶನ ಸಂಬಂಧ ರೌಡಿಶೀಟರ್ ಕೊಲೆ ಮಾಡಿದ್ದಾರೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ನ್ಯಾಯಾಂಗ ಬಂಧನದಲ್ಲಿರುವ ಮೂವರು ಆರೋಪಿ ಮತ್ತೆ ವಿಚಾರಣೆಗೆ ಪಡೆಯಲಾಗುವುದು. ಪ್ರಕರಣದಲ್ಲಿ ಯಾರ್ಯಾರ ಪಾತ್ರ, ಏನಿದೆ ಎಂಬ ಬಗ್ಗೆ ತನಿಖೆ ಮಾಡಲಾಗುವುದು.

– ಡಾ.ಶರಣಪ್ಪ ಎಸ್.ಡಿ.
ನಗರ ಪೊಲೀಸ್ ಕಮಿಷನರ್

ಮಿರ್ಜಾ ಮೇಲಿವೆ 10 ಕೇಸ್!

ಕಾಲಿಗೆ ಗುಂಡು ಹೊಡೆಸಿಕೊಂಡ ರೌಡಿಶೀಟರ್ ಖಲೀಲ್ ಕೊಲೆಯ ಆರೋಪಿ ಮಿರ್ಜಾ ಕೌಸರ್ ಬೇಗ್ ಮೇಲೆ ಬೆಟ್ಟಿಂಗ್, ಜೂಜಾಟ, ಕೊಲೆಗೆ ಯತ್ನ 10 ಕೇಸ್‌ಗಳಿದ್ದು, ನಾಲ್ಕು ಪ್ರಕರಣಗಳಲ್ಲಿ ಶಿಕ್ಷೆ ಅನುಭವಿಸಿದ್ದಾನೆ. ಇದೀಗ ಕೊಲೆ, ಪೊಲೀಸರ ಮೇಲೆ ಹಲ್ಲೆಫಿ, ಕರ್ತವ್ಯಕ್ಕೆ ಅಡಚಣೆ ಕೇಸ್ ದಾಖಲಾಗಿದೆ. ಮಿರ್ಜಾ ಹಾಗೂ ಇತರರು ಗುಂಪು ಕಟ್ಟಿಕೊಂಡು ಖಾಲಿ ನಿವೇಶನಗಳ ವ್ಯಾಜ್ಯಗಳ ನಿರ್ವಹಣೆ ಮಾಡುತ್ತಿದ್ದರು. ಇಂತಹುದೆ ಒಂದು ನಿವೇಶನದ ತಕರಾರಿನ ಹಿನ್ನೆಲೆ ರೌಡಿಶೀಟರ್ ಖಲೀಲ್ ಅಹ್ಮದ್‌ನನ್ನು ಡಿ.11ರಂದು ಮಾತುಕತೆಗೆ ಕರೆದಿದ್ದರು. ಈ ವೇಳೆ ಬರ್ಬರವಾಗಿ ಕೊಲೆ ಮಾಡಿದ್ದರು. ಕೊಲೆ ನಂತರ ಮುಖ್ಯ ಆರೋಪಿ ಮಿರ್ಜಾ ಕೌಸರ್ ಬೇಗ್ ಬೇರೆಡೆ ತಲೆ ಮರಿಸಿಕೊಂಡಿದ್ದ ಎಂದು ನಗರ ಕಮಿಷನರ್ ತಿಳಿಸಿದ್ದಾರೆ.

ಕೊಂಚೂರು ಜಾತ್ರೆಯಲ್ಲಿ ಅಕ್ರಮ ಮಾಂಸ, ಮದ್ಯ ಮಾರಾಟ

ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯವೇ ಕಾರಣ !

ಅನಂತನಾಗ ದೇಶಪಾಂಡೆ ಚಿತ್ತಾಪುರ

ಕೊಂಚೂರು ಹನುಮಾನ ದೇವಸ್ಥಾನದ ಜಾತ್ರೆಯಲ್ಲಿ ಅಕ್ರಮ ಮಧ್ಯ ಮಾರಾಟ ಮತ್ತು ಮಾಂಸ ಮಾರಾಟದ ಚಟುವಟಿಕೆಗಳು ಎಗ್ಗಿಲ್ಲದೆ ಸಾಗಿದರು ಸಹಿತ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಅಧಿಕಾರಿಗಳ ಕಾರ್ಯ ವೈಫಲ್ಯ ಎದ್ದು ಕಾಣುತ್ತಿದೆ.

ತಾಲೂಕಿನ ಕೊಂಚೂರು ಗ್ರಾಮದಲ್ಲಿ ಹನುಮಾನ ದೇವಸ್ಥಾನ ಪ್ರಸಿದ್ಧಿ ಪಡೆದಿದೆ ಆದರೆ ಈ ಗ್ರಾಮದಲ್ಲಿನ ದಿನಸಿ ಅಂಗಡಿ ಮತ್ತು ಹೋಟೆಲ್‌ಗಳಲ್ಲಿ ಹಾಗೂ ಚಿಕ್ಕ ಪುಟ್ಟ ಅಂಗಡಿಗಳಲ್ಲಿ ಪ್ರತಿದಿನವೂ ಅಕ್ರಮ ಮಧ್ಯ ಮಾರಾಟವು ಎಗ್ಗಿಲ್ಲದೆ ಸಾಗುತ್ತಿರುವುದು ಅಕ್ರಮ ಮಧ್ಯ ಮಾರಾಟಗಾರರಿಗೆ ಅಧಿಕಾರಿಗಳ ಭಯವೇ ಇಲ್ಲದಂತಾಗಿದೆ.

ಜಾತ್ರೆಯ ಸಂದರ್ಭದಲ್ಲಿ ಗ್ರಾಮದಲ್ಲಿ ಅಕ್ರಮ ಮಾಧ್ಯ ಮಾರಾಟ ಮತ್ತು ಮಾಂಸ ಮಾರಾಟ ತಡೆಯಬೇಕು ಎಂದು ಹಿಂದೂ ಸಂಘಟನೆಗಳು ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು ಸಹಿತ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಇರುವುದರಿಂದ ಜಾತ್ರೆಯಲ್ಲಿ ಅಕ್ರಮ ಮಧ್ಯ ಮತ್ತು ಮಾಂಸ ಮಾರಾಟ ಮಾಡಿರುವುದು ಜಾತ್ರೆಗೆ ಬಂದ ಭಕ್ತರಿಗೆ ಮುಜುಗರ ಉಂಟು ಮಾಡಿದೆ.

ಬ್ರಹ್ಮಚಾರಿ ಆಗಿರುವ ಹನುಮಾನ ದೇವಸ್ಥಾನದ ಸುತ್ತಮುತ್ತಲು ಮಾಂಸ ಮಾರಾಟ ಮಾಡುತ್ತಿರುವುದನ್ನು ಪ್ರಶ್ನಿಸಲು ಹೋದವರಿಗೆ ಮಾಂಸ ಮಾರಾಟಗಾರರು ದರ್ಪ ತೋರುತ್ತಿದ್ದಾರೆ ಇಂಥವರ ವಿರುದ್ದ ಮೇಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬುದು ಭಕ್ತರ ಮಾತಾಗಿದೆ.

ಜಾತ್ರೆ ಸಂದರ್ಭದಲ್ಲಿ ಮದ್ಯ ಮತ್ತು ಮಾಂಸ ಮಾರಾಟ ನಿಲ್ಲಿಸುವಂತೆ ಹಿಂದು ಜಾಗರಣಾ ವೇದಿಕೆ ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು ಸಹಿತ ಅಧಿಕಾರಿಗಳು ಮದ್ಯ ಮತ್ತು ಮಾಂಸ ಮಾರಾಟ ತಡೆಗಟ್ಟುವಲ್ಲಿ ವಿಫಲರಾಗಿದ್ದು ಜಾತ್ರೆಗೆ ಬರುವ ಭಕ್ತರಿಗೆ ಮುಜುಗುರ ಉಂಟಾಗಿದೆ.

– ಸಚ್ಚಿದಾನಂದ ಸ್ವಾಮಿ ಕೊಂಚೂರು

ಗ್ರಾಮದಲ್ಲಿ ಪ್ರತಿದಿನವೂ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಆದರೆ ಹನುಮಾನ ದೇವರ ಜಾತ್ರೆಯ ಸಂದರ್ಭದಲ್ಲಿ ರಾಜ್ಯ ಸೇರಿದಂತೆ ಪರ ರಾಜ್ಯಗಳಿಂದಲೂ ಅಸಂಖ್ಯಾತ ಭಕ್ತರು ಬಂದು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ ಅಂಥಯ ಸಂದರ್ಭದಲ್ಲಿ ಮದ್ಯ ಮತ್ತು ಮಾಂಸ ಮಾರಾಟ ನಿಲ್ಲಿಸಲು ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸಿದರು ಸಹಿತ ಯಾವುದೇ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸ.

– ಶರಣು ಆರ್.ಎಸ್.ಎಸ್ ಪ್ರಮುಖ

ಯುವಕನ ಹತ್ಯೆ ಪ್ರಕರಣ: ಸೆರೆ

ಕಲಬುರಗಿ: ಸಿಗರೇಟ್ ಬಂಡಲ್ ಕಳ್ಳತನ ಮಾಡಿದ್ದಾನೆಂದು ಯುವಕನೊಬ್ಬನನ್ನು ರೂಂನಲ್ಲಿ ಕೂಡಿಹಾಕಿ ಹೊಡೆದು ಸಾವಿಗೆ ಕಾರಣವಾಗಿದ್ದ ಆರೋಪಿಗಳನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ನಗರದ ಪ್ರಗತಿ ಕಾಲೊನಿ ನಿವಾಸಿ ಶಶಿಕಾಂತ ಮಲ್ಲಿಕಾರ್ಜುನ ನಾಟೀಕಾರನನ್ನು ಹೊಡೆದು ಕೊಲೆಗೆ ಕಾರಣವಾದ ಆರೋಪದಲ್ಲಿ ಕಲಬುರಗಿ ಬ್ಲಡ್ ಬ್ಯಾಂಕ್ ಮಾಲೀಕ ಚಂದ್ರಶೇಖರ ಪಾಟೀಲ್, ರಾಹುಲ್ ಪಾಟೀಲ್, ಆದಿತ್ಯ ಅಲಿಯಾಸ್ ಆದೇಶ ಶಿವಾಜಿರಾವ, ಓಂಪ್ರಕಾಶ ಗೋರವಾಡಿ, ಅಷ್ಪಾಕ್ ಅಹ್ಮದ್ ಅವರನ್ನು ಬಂಧಿಸಿ, ವಿಚಾರಣೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪ್ರಕರಣದ ತನಿಖೆಗೆ ಎಸಿಪಿ ಚಂದ್ರಶೇಖರ ಜಿ., ಅವರ ನೇತೃತ್ವದಲ್ಲಿ ಎಂಬಿ ನಗರ ಪೊಲೀಸ್ ಠಾಣೆ ಪಿಐ ಶಿವಾನಂದ ವಾಲೀಕಾರ, ಎಎಸ್‌ಐಗಳಾದ ನಜಮೀದ್ದೀನ್, ಚಂದ್ರಕಾಂತ ಹಾಗೂ ಸಿಬ್ಬಂದಿಗಳಾದ ಗುರುರಾಜ, ನಾಗರಾಜ, ದಸ್ತಯ್ಯ, ಮಹೇಶ, ಸಂತೋಷ, ಚೌಕ್ ಪೊಲೀಸ್ ಠಾಣೆ ಸಿಬ್ಬಂದಿಗಳಾದ ರಾಜಕುಮಾರ ಚೌಧರಿ, ತೌಸ್? ಅಹಮದ್ ಅವರನ್ನು ಒಳಗೊಂಡ ಎರಡು ತಂಡಗಳು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪ್ರಕರಣದ ಹಿನ್ನೆಲೆ

ಶಶಿಕಾಂತ ನಾಟೀಕಾರನನ್ನು ಬ್ಲಡ್ ಬ್ಯಾಂಕ್ ಮಾಲೀಕ ಮತ್ತು ಇತರರು ಕೂಡಿಕೊಂಡು ಸಿಗರೇಟ್ ಕಳ್ಳತನ ಮಾಡಿದ್ದಾರೆಂದು ಕಟ್ಟಿಗೆ, ಬೆಲ್ಟ್‌ಫಿ, ಕೈ ಹಾಗೂ ಕಾಲಿನಿಂದ ಹೊಡೆಯುವುದು, ಒದೆಯುವುದು ಮಾಡಿದ್ದಾರೆ. ಅಲ್ಲದೆ ಜಾತಿ ನಿಂದನೆ ಮಾಡಿದ್ದಾರೆ. ನಂತರ ಮನೆಗೆ ಹೋಗುವಾಗ ಮೃತಪಟ್ಟಿದ್ದು, ಆರೋಪಿಗಳು ಹೊಡೆದಿರುವುದೇ ಸಾವಿಗೆ ಕಾರಣ ಎಂದು ಕೊಲೆ ಪ್ರಕರಣವನ್ನು ಮೃತನ ತಂದೆ ದಾಖಲಿಸಿದ್ದರು.

ಕೌಶಲ ತರಬೇತಿ ಕಾರ್ಯಾಗಾರ

ಕಲಬುರಗಿ: ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಪೂಜ್ಯ ದೊಡ್ಡಪ್ಪ ಅಪ್ಪ ಎಂಜಿನಯರಿಂಗ ಕಾಲೇಜಿನಲ್ಲಿ ಬಿಲ್ಡಿಂಗ್ ಮಾಡರ್ನ್ ವೆಬ್ ಅಪ್ಲಿಕೇಶನ್ ಉಯಿಥ್ ಮರ್ನ ಸ್ಟಾಕ್ ಎಂಬ ವಿಷಯದ ವಿದ್ಯಾರ್ಥಿ ಕೌಶಲ ತರಬೇತಿ ಕಾರ್ಯಾಗಾರ ಎಡ್ಯುನೆಟ್ ಫೌಂಡೇಶನ್ ಸಹಯೋಗದೊಂದಿಗೆ 21ಡಿಸೆಂಬರ್ ವರೆಗೆ ಜರುಗುವ ಈ ಕಾರ್ಯಕ್ರಮದ ಉದ್ಘಾಟನೆಯನ್ನು ಎಡ್ಯುನೆಟ್ ಫೌಂಡೇಶನ್ ದ ವಿಫುಲ್ ಕ್ಯಾಟೆ ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಉಪಾಧ್ಯಕ್ಷರಾದ ರಾಜಾ ಭಿ ಭೀಮಳ್ಳಿ, ಕಾರ್ಯದರ್ಶಿಗಳಾದ ಉದಯಕುಮಾರ್ ಚಿಂಚೋಳಿ, ಜಂಟಿ ಕಾರ್ಯದರ್ಶಿಗಳಾದ ಡಾ ಕೈಲಾಸ ಪಾಟೀಲ್ ಆಡಳಿತ ಮಂಡಳಿ ಸದಸ್ಯರಾದ ಡಾ ಶರಣಬಸಪ್ಪ ಹರವಾಳ, ಡಾ ಕಿರಣ್ ದೇಶಮುಖ್, ಅರುಣಕುಮಾರ ಪಾಟೀಲ್, ಡಾ ನಾಗೇಂದ್ರ ಮಂಠಾಳೆ ಪ್ರಾಚಾರ್ಯರಾದ ಡಾ ಎಸ್ ಆರ್ ಪಾಟೀಲ್, ಡಾ ಎಸ್ ಆರ್ ಹೊಟ್ಟಿ, ಡಾ ಭಾರತಿ ಹರಸೂರ, ಡಾ. ಪೂಜಾ ಅಸ್ಪಲ್ಲಿ, ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕೃಷಿ ಕ್ಷೇತ್ರಕ್ಕೆ ಉತ್ತೇಜನ ನೀಡಲು ಆರ್‌ಬಿಐ ಹೊಸ ಘೋಷಣೆ: ತೇಲ್ಕೂರ

ರೈತರಿಗೆ ಸುಲಭವಾಗಿ ಹೆಚ್ಚು ಮೊತ್ತದ ಕೃಷಿ ಸಾಲ

ಕಲಬುರಗಿ: ಕೃಷಿ ಕ್ಷೇತ್ರಕ್ಕೆ ಉತ್ತೇಜನ ನೀಡಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್ ಬಿ ಐ) ಹೊಸ ಘೋಷಣೆಯನ್ನು ಮಾಡಿದೆ. ಕೃಷಿ ಸಾಲದ ಮೇಲಿನ ಮಿತಿಯ ನ್ನು ಏರಿಕೆ ಮಾಡಲಾಗಿದ್ದು, 2025ರ ಜನ ವರಿ 1 ರಿಂದ ರೈತರು ಈ ಹೊಸ ಘೋಷಣೆ ಯ ಸಹಾಯವನ್ನು ಪಡೆಯಬಹುದು. ಆರ್.ಬಿ.ಐ ನ ಈ ಘೋಷಣೆಯಿಂದ ದೇಶ ದ ಸುಮಾರು ಶೇ 86ರಷ್ಟು ಸಣ್ಣ ರೈತರಿಗೆ ಅನುಕೂಲವಾಗಲಿದೆ ಎಂದು ಅಂದಾಜಿಸಲಾ ಗಿದೆ. ಆರ್‌ಬಿಐನ. ಈ ಘೋಷಣೆಗೆ ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೇಲ್ಕೂರ ಅಭಿನಂದನೆ ಸಲ್ಲಿಸಿದರು. ಈ ಕುರಿತು ಪಾತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು ಆರ್ ಬಿ ಐ ನಹೊಸ ಗವರ್ನರ್ ಆಗಿ ಅಧಿಕಾರವಹಿಸಿಕೊಂಡ ಸಂಜಯ್ ಮಲ್ಹೊತ್ರಾ ಅವರು ಮಾಡಿದ ಮೊದಲ ಘೋಷಣೆ ಇದಾಗಿದೆ. ರೈತರಿಗೆ ಸುಲಭವಾಗಿ ಹೆಚ್ಚು ಮೊತ್ತದ ಕೃಷಿ ಸಾಲ ಲಭ್ಯವಾಗುವಂತೆ ಮಾಡುವ ಮೂಲಕ ಕೃಷಿ ಕ್ಷೇತ್ರದ ಉತ್ತೇಜನಕ್ಕೆ ಒತ್ತು ನೀಡಲಾಗುತ್ತದೆ , ಭಾರತೀಯ ರಿಸರ್ವ್ ಬ್ಯಾಂಕ್ ಅಡವು ರಹಿತ ಕೃಷಿ ಸಾಲದ ಮಿತಿಯನ್ನು 1.6 ಲಕ್ಷ ರೂ.ಗಳಿಂದ 2 ಲಕ್ಷ ರೂಪಾಯಿಗಳಿಗೆ ಏರಿಕೆ ಮಾಡಿದೆ. ಈ ಹೊಸ ಘೋಷಣೆ 2025ರ ಜನವರಿ 1 ರಿಂದ ಜಾರಿಗೆ ಬರಲಿದೆ. ಈ ಘೋಷಣೆಯಿಂದಾಗಿ ರೈತರಿಗೆ ಅನುಕೂಲವಾಗಲಿದ್ದು, ಕಡಿಮೆ ಮೊತ್ತದ ಸಾಲಕ್ಕೆ ಮನೆ, ಜಮೀನು ಅಡವಿಡುವ ಪ್ರಶ್ನೆಯೇ ಬರುವುದಿಲ್ಲ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಈ ಘೋಷಣೆಯಿಂದ ಸಹಾಯಕವಾಗಲಿದೆ. ಇದರಿಂದಾಗಿ ಕೃಷಿ ಚಟುವಟಿಕೆಗಳಿಗೂ ಅನುಕೂಲವಾಗಿದೆ ಎಂಡಿದ್ದಾರೆ.

ದೇಶದ ರೈತರಿಗೆ ಅನುಕೂಲ ಮಾಡಿಕೊಡಲು ಕಾಲ ಕಾಲಕ್ಕೆ ಕೃಷಿ ಸಾಲದ ಮೇಲಿನ ಮಾರ್ಗಸೂಚಿಯನ್ನು ಪರಿಷ್ಕರಣೆ ಮಾಡಲಾಗುತ್ತದೆ. ಅಡವು ರಹಿತ ಕೃಷಿ ಸಾಲದ ಮಿತಿ ಏರಿಕೆಯಿಂದಾಗಿ ದೇಶದ ಶೇ 86ರಷ್ಟು ಸಣ್ಣ ರೈತರಿಗೆ ಅನುಕೂಲವಾಗಲಿದೆ ಎಂದು ಆರ್ ಬಿಐ ಹೇಳಿದ್ದು. ಈಗಾಗಲೇ, ಬ್ಯಾಂಕುಗಳಿಗೆ ಆರ್ ಬಿ ಐ ಕೃಷಿ ಸಾಲದ ವಿಚಾರದಲ್ಲಿ ಮಾರ್ಗಸೂಚಿ ಪರಿಷ್ಕರಣೆ ಮಾಡಿರುವ ಕುರಿತು ವ್ಯಾಪಕ ಪ್ರಚಾರ ನೀಡಬೇಕು. ದೇಶದ ಪ್ರತಿ ರೈತರಿಗೆ ಈ ಮಾಹಿತಿ ತಲುಪಬೇಕು. ಹೊಸ ಘೋಷಣೆಯ ಉಪಯೋಗವನ್ನು ಎಲ್ಲರೂ ಪಡೆಯುವಂತಾಗಬೇಕು ಎಂದು ಸೂಚನೆ ನೀಡಿದ್ದು,

ಮುಂದಿನ ದಿನಗಳಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್ ಮೇಲಿನ ಸಾಲದ ಮಿತಿಯನ್ನು ಸಹ ಏರಿಕೆ ಮಾಡುವ ಕುರಿತು ಆರ ಬಿ ಐ ಸುಳಿವು ನೀಡಿದ್ದು. ರೈತರು ಬ್ಯಾಂಕುಗಳಿಗೆ ಕನಿಷ್ಠ ಬಡ್ಡಿದರ ಪಾವತಿಯನ್ನು ಖಚಿತಪಡಿಸಲು ಸರ್ಕಾರವು ಬಡ್ಡಿ ಸಹಾಯಧನ ಯೋಜನೆ ಪರಿಚಯಿ ಸಿತು. ಬಳಿಕ ಅದನ್ನು ಮಾರ್ಪಡಿಸಿದ್ದು, ಬಡ್ಡಿ ಸಬ್ಸಿಡಿ ಯೋಜನೆ (ಎಂಐಎಸ್) ಎಂದು ಮರುನಾಮಕರಣ ಮಾಡಿತು. ಈ ಮೂಲಕ ರೈತರಿಗೆ ಸಬ್ಸಿಡಿ ಸಹಿತ ಬಡ್ಡಿ ದರಗಳಲ್ಲಿ ಅಲ್ಪಾವಧಿ ಸಾಲವನ್ನು ನೀಡಲಾಗುತ್ತಿದೆ ಎಂದು ತೇಲ್ಕೂರ ಹೇಳಿದರು.

ಪಿಡಿಒ ಅಮಾನತಿಗೆ ಜಿಪಂ ಸಿಇಒ ಆದೇಶ

ಕಲಬುರಗಿ: ಗ್ರಾಮ ಪಂಚಾಯತಿಯ ಪಂಪ ಆಪರೇಟರ್ ಗುರುಸಿದ್ದಯ್ಯ ಅವರನ್ನು ಪುನ: ಕೆಲಸಕ್ಕೆ ತೆಗೆದುಕೊಳ್ಳಲು ಮತ್ತು 6 ತಿಂಗಳ ವೇತನ ಮಾಡಲು ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದು ನ್ಯಾಯಾಂಗ ಬಂಧನಕ್ಕೊಳಗಾಗಿರುವ ಕಲಬುರಗಿ ತಾಲೂಕಿನ ಕವಲಗಾ(ಬಿ) ಗ್ರಾಮ ಪಂಚಾಯತಿಯ ಪಿಡಿಒ ಪ್ರೀತಿರಾಜ್ ಅವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957ರ ನಿಯಮ10(1)(ಡಿ) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತುಗೊಳಿಸಿ ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ ಮಂಗಳವಾರ ಆದೇಶ ಹೊರಡಿಸಿದ್ದಾರೆ. ಅಮಾನತ್ತಿನ ಅವಧಿಯಲ್ಲಿ ನೌಕರರು ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಕೇಂದ್ರಸ್ಥಾನವನ್ನು ಬಿಡತಕದಲ್ಲ ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ-1957ರ ನಿಯಮ 98ರ ಅನುಸಾರ ಜೀವನ ನಿರ್ವಹಣೆ ಭತ್ಯೆ ಪಡೆಯಲು ಅರ್ಹರಿರುತ್ತಾರೆ ಎಂದು ಶಿಸ್ತು ಪ್ರಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.



ಸಕ್ಕರೆ ಉತ್ಪಾದನೆಯಲ್ಲಿ ರಾಜ್ಯಕ್ಕೆ 3ನೇ ಸ್ಥಾನ

ವಿಧಾನ ಪರಿಷತ್: ಇಡೀ ದೇಶದಲ್ಲಿ ಹೆಚ್ಚು ಸಕ್ಕರೆ ಉತ್ಪಾದಿಸುವ ರಾಜ್ಯಗಳ ಪೈಕಿ ಕರ್ನಾಟಕ 3ನೇ ಸ್ಥಾನದಲ್ಲಿದ್ದು, ಪ್ರಸಕ್ತ ಸಾಲಿನಲ್ಲಿ 20 ಸಾವಿರ ಕೋಟಿ ರು. ಗಳಷ್ಟು ಕಬ್ಬು ಬೆಳೆಯಲಾಗಿದೆ ಎಂದು ಜವಳಿ, ಕಬ್ಬು ಮತ್ತು ಸಕ್ಕರೆ ಸಚಿವ ಶಿವಾನಂದ ಪಾಟೀಲ ಮಾಹಿತಿ ನೀಡಿದರು.

ಪ್ರಶ್ನೋತ್ತರ ಅವಧಿ ವೇಳೆ ಬಿಜೆಪಿ ಸದಸ್ಯ ಎನ್.ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಸದ್ಯ 80 ಸಕ್ಕರೆ ಕಾರ್ಖಾನೆಗಳಿದ್ದು, 2024 ನೇ ಸಾಲಿನಲ್ಲಿ 20 ಸಾವಿರ ಕೋಟಿ ವರೆಗೆ ಸಕ್ಕರೆ ಉತ್ಪಾದನೆ ಮಾಡಲಾಗುತ್ತಿದೆ. 2018-19ನೇ ಸಾಲಿಗೆ ಮಾತ್ರ 3 ಸಕ್ಕರೆ ಕಾರ್ಖಾನೆ ಮಾತ್ರ 3.94 ಕೋಟಿ ರು. ರೈತರಿಗೆ ಕೊಡುವುದನ್ನು ಬಾಕಿಯಿರಿಸಿಕೊಂಡಿದ್ದು, ಇನ್ನುಳಿದಂತೆ ಯಾವುದೇ ಕಾರ್ಖಾನೆ ಇಲ್ಲಿವರೆಗೂ ಬಾಕಿ ಉಳಿಸಿಕೊಂಡಿಲ್ಲ ಎಂದು ವಿವರಿಸಿದರು. ರಾಜ್ಯದಲ್ಲಿ ಯಾವುದೇ ರೈತರಿಗೆ ಮೋಸ ಮಾಡದಂತೆ ಕಠಿಣ ಕ್ರಮ ಅನುಸರಿಲಾಗುತ್ತಿದೆ ಎಂದರು.

ಬೆಳಗಾವಿ ಚಳಿಗಾಲ ಅಧಿವೇಶನ

ಸದನ ಕದನ

ವಿಶ್ವವಾಣಿ
ಬುಧವಾರ
18.12.2024

ಸದನ ಹೈಲೈಟ್ಸ್

ಬೆಂಗಳೂರಿಗೆ 2ನೇ ವಿಮಾನ ನಿಲ್ದಾಣ ನಿರ್ಮಾಣ ಐಡೆಕ್ ಸಂಸ್ಥೆಗೆ ಹೊಣೆ

ವಿಧಾನ ಪರಿಷತ್: ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ಬೆಂಗಳೂರಿಗೆ 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯ ಕುರಿತು ಅಧ್ಯಯನ ನಡೆಸಿ ವರದಿ ನೀಡುವ ಹೊಣೆಯನ್ನು ಐಡೆಕ್ ಸಂಸ್ಥೆಗೆ ವಹಿಸಲಾಗಿರುತ್ತದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು. ಪ್ರಶ್ನೋತ್ತರ ವೇಳೆ ಸದಸ್ಯ ಟಿ.ಎನ್.ಜವರಾಯಿ ಗೌಡ ಪ್ರಶ್ನೆಗೆ ಉತ್ತರಿಸಿದ ಅವರು,ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳು, ಗುಡ್ಡಗಾಡು ಪ್ರದೇಶ, ಎತ್ತರದ ರಚನೆಗಳು. ಸಂಪರ್ಕ-ರಸ್ತೆ , ರೈಲು ಮತ್ತು ಮೆಟ್ರೋ ಸಂಪರ್ಕ.ಬಳಕೆದಾರರಿಗೆ ಉದ್ದೇಶಿತ ವಿಮಾನ ನಿಲ್ದಾಣ ತಲುಪುವ ದೂರ ಮತ್ತು ಸಮಯ, ವಿಸ್ತಾರವಾದ ಭೂಪ್ರದೇಶ, ಜಮೀನಿನ ಪ್ರಕಾರಗಳು, ಕಡಿಮೆ ಜನಸಾಂದ್ರತೆಯ ಪ್ರದೇಶ ಮತ್ತು ಜಲಸಂಪನ್ಮೂಲದ ಲಭ್ಯತೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಸಂಭಾವ್ಯ ಸ್ಥಳಗಳ ಅಧ್ಯಯನವನ್ನು ನಡೆಸಲಾಗುತ್ತಿದೆ ಎಂದರು. ಅದರಂತೆ, ಯೋಜನೆಗೆ ಸಂಬಂಧಿಸಿದಂತೆ ಯೋಜನಾ ವರದಿ ಪ್ರಸ್ತಾವನೆ ಸಿದ್ಧಪಡಿಸುವ ಕಾರ್ಯ ಪರಿಶೀಲನೆಯಲ್ಲಿ ಮಾಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಬಾಣಂತಿಯರ ಸಾವು ಎಸ್ಐಟಿ/ನ್ಯಾಯಾಂಗ ತನಿಖೆ?

ಉನ್ನತಮಟ್ಟದ ತನಿಖೆಗೆ ಸಿದ್ಧವೆಂದ ಸಚಿವ ದಿನೇಶ್ ಗುಂಡೂರಾವ್ | ಬಾಣಂತಿಯರ ಸಾವಿಗೆ ಸಂಬಂಧಿಸಿದಂತೆ ಪರಿಷತ್‌ನಲ್ಲಿ ಆರೋಗ್ಯ ಸಚಿವರ ಉತ್ತರ

ವಿಶ್ವವಾಣಿ ಸುದ್ದಿಮನೆ ವಿಧಾನಪರಿಷತ್

ಬಳ್ಳಾರಿಯಲ್ಲಿ ಸರಣಿ ಬಾಣಂತಿಯರ ಸಾವಿನ ಪ್ರಕರಣವನ್ನು ಎಸ್ಐಟಿ ಅಥವಾ ನ್ಯಾಯಾಂಗದ ಮೂಲಕ ತನಿಖೆ ನಡೆಸಲು ಸರಕಾರ ಸಿದ್ಧವಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಬಾಣಂತಿಯರ ಸಾವಿನ ಬಗ್ಗೆ ವಿಶೇಷ ಚರ್ಚೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಹೆಚ್ಚುತ್ತಿರುವ ಬಾಣಂತಿಯರ ಸಾವಿಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಎಸ್ಐಟಿ ಹಾಗೂ ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡುತ್ತಿದ್ದು ಸರಕಾರ ಈ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಸಿದ್ಧವಿದೆ. ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ದ್ರಾವಣ ಬಳಕೆಗೆ ನಿರ್ಬಂಧ: ಬಳ್ಳಾರಿ ಜಿಲ್ಲೆಯಲ್ಲಿ ನವೆಂಬರ್ 9,10,11 ರಂದು 3 ದಿನಗಳಲ್ಲಿ ಜಿಲ್ಲಾಸ್ಪತ್ರೆಯಲ್ಲಿ ಒಟ್ಟು 34 ಸಿಸೇರಿಯನ್ ಶಸ್ತ್ರಚಿಕಿತ್ಸೆ ಮಾಡಿದ್ದು, ಅದರಲ್ಲಿ 7 ಜನರು ತೊಂದರೆಗೆ ಈಡಾಗಿದ್ದರು. ಮೂತ್ರಪಿಂಡದ ತೊಂದರೆ ಹಾಗೂ ಬಹು ಅಂಗಾಗಗಳ ವೈಫಲ್ಯದಿಂದ 7 ಪ್ರಕರಣಗಳಲ್ಲಿ 5 ಬಾಣಂತಿಯರು ಸಾವಿಗೀಡಾಗಿದ್ದಾರೆ. ಇಬ್ಬರು ಬಾಣಂತಿಯರು ಆಸ್ಪತ್ರೆಯಿಂದ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಈಗಾಗಲೇ ಈ ಸಂಬಂಧವಾಗಿ ಸಿಎಂ ಸಭೆ ನಡೆಸಿ ಮಾಹಿತಿ ಪಡೆದಿದ್ದಾರೆ. ಮೃತರ ಕುಟುಂಬಸ್ಥರಿಗೆ 5 ಲಕ್ಷ ಪರಿಹಾರ ಕೊಡಲಾಗಿದೆ. ಕೆಎಸ್ಎಂಎಸ್ ಸಿಎಲ್ ಸಂಸ್ಥೆಯಿಂದ ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೆ ಪೂರೈಕೆ ಮಾಡಿರುವ ರಿಂಗರ್ ಲ್ಯಾಕ್ಟೇಟ್ ದ್ರಾವಣದ ಬಳಕೆ ಎಲ್ಲಾ ಬ್ಯಾಚ್‌ಗಳನ್ನು ಈಗಾಗಲೇ ಹಿಂಪಡೆಯಲಾಗಿದೆ ಎಂದು ವಿವರಿಸಿದರು.

ತಾಯಂದಿರ ಸಾವಿನ ಸಂಖ್ಯೆ ಹೆಚ್ಚಳ

ದೇಶದಲ್ಲಿ 15 ವರ್ಷದ ಹಿಂದೆ ಕರ್ನಾಟಕದಲ್ಲಿ ತಾಯಂದಿರ ಸಾವಿನ ಪ್ರಮಾಣ ಹೆಚ್ಚಿಗೆ ಇತ್ತು. ಆದರೀಗ ದೇಶದಲ್ಲಿ ಕೇರಳದಲ್ಲಿ ಶೇ.19 ರಷ್ಟು ತಾಯಂದಿರ ಸಾವಿನ ಪ್ರಮಾಣ ಇದ್ದರೆ, ಆಂಧ್ರಪ್ರದೇಶದಲ್ಲಿ ಶೇಕಡಾ 45 ರಷ್ಟು ಇದೆ. ತಮಿಳುನಾಡಿನಲ್ಲಿ ಶೇಕಡಾ 54 ರಷ್ಟು ಇದೆ. ಗುಜರಾತ್‌ನಲ್ಲಿ ಶೇಕಡಾ 57 ರಷ್ಟು ಇದೆ. ಕರ್ನಾಟಕ ರಾಜ್ಯದಲ್ಲಿ ಶೇಕಡಾ 64 ರಷ್ಟಿದೆ. ರಾಜ್ಯದಲ್ಲಿ ಬೆಳಗಾವಿ ಜಿಲ್ಲೆಯಲ್ಲಿಯೂ ತಾಯಂದಿರ ಸಾವಿನ ಪ್ರಮಾಣ ಹೆಚ್ಚಾಗಿದೆ ಎಂದು ಪ್ರತಿಪಕ್ಷದವರು ಆರೋಪ ಮಾಡುತ್ತಾರೆ. ಆದರೆ ಬೆಳಗಾವಿ ಜಿಲ್ಲೆ ಐಎಂಆರ್ ಸ್ಥಾನದಲ್ಲಿ ಉತ್ತಮವಾಗಿದೆ. ಇಲ್ಲಿ ಉತ್ತಮ ವೈದ್ಯರ ತಂಡವಿದೆ. ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜತೆಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ನ್ಯಾಯಾಂಗ ತನಿಖೆಗೆ ಬಿಜೆಪಿ ಆಗ್ರಹ: ಈ ವೇಳೆ ಮಧ್ಯಪ್ರವೇಶಿಸಿದ ಪರಿಷತ್ ಸದಸ್ಯ ರವಿಕುಮಾರ್ ಮಾತನಾಡಿ, ಬಳ್ಳಾರಿ ಬಾಣಂತಿಯರ ಸಾವಿನ ಬಗ್ಗೆ ಸರಕಾರ ಎಸ್ಐಟಿ ರಚನೆ ಮಾಡಬೇಕು. ಇಲ್ಲವೇ ನ್ಯಾಯಾಂಗ ತನಿಖೆ ಮಾಡಬೇಕು. ಉಪ್ಪು ತಿಂದವರು ನೀರು ಕುಡಿಯಬೇಕು. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ಹೊಸ ಔಷಧ ಪೂರೈಕೆ ಮಾಡಬೇಕು. ವರ್ಷದ ಹಿಂದೆ ಪೂರೈಸಿದ್ದ ಹಳೆಯ ಔಷಧಿಯನ್ನು ನಿಲ್ಲಿಸಬೇಕು. ಇದರಿಂದ ಕ್ವಾಲಿಟಿ ಚೆಕ್ ಹಾಗೂ ಪಾರದರ್ಶಕತೆಗೆ ಅನುಕೂಲವಾಗುತ್ತದೆ ಎಂದರು.

ಸಿಸೇರಿಯನ್: ವೈದ್ಯರ ಲೋಪವಿಲ್ಲ: ಇದಕ್ಕೆ ಉತ್ತರಿಸಿದ ಆರೋಗ್ಯ ಸಚಿವ ದಿನೇಶ ಗುಂಡೂರಾವ್, ಘಟನೆ ನಡೆದ ಕೂಡಲೇ ಆರೋಗ್ಯ ಇಲಾಖೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ನುರಿತ ವೈದ್ಯರ ತಂಡವನ್ನು ರಚಿಸಲಾಗಿತ್ತು. ಈ ವೈದ್ಯರ ತಂಡ ಸರಕಾರಕ್ಕೆ ವರದಿ ಕೊಟ್ಟಿದೆ. ಈ ವರದಿ ಪ್ರಕಾರ ಸಿಸೇರಿಯನ್ ಮಾಡುವಾಗ ಯಾವುದೇ ಕರ್ತವ್ಯಲೋಪ ಹಾಗೂ ನಿರ್ಲಕ್ಷ್ಯತೆ ತೋರಿಲ್ಲ. ಸಿಸೇರಿಯನ್ ಶಸ್ತ್ರಚಿಕಿತ್ಸೆ ತೊಡಕುಗಳ ನಿವಾರಣೆ ಹಾಗೂ ಗುರುತಿಸುವಿಕೆ ನಿರ್ವಹಣೆಗೆ ಅಗತ್ಯವಾದ ಕ್ರಮಗಳನ್ನು ಪಾಲಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾವಿದೆ. ಇದನ್ನು ನಿಯಂತ್ರಿಸುವುದು ಕಷ್ಟಸಾಧ್ಯ. ಏಕೆಂದರೆ ಇದರಲ್ಲಿ ಅಧಿಕಾರಿಗಳೇ ಶಾಮೀಲಾಗಿದ್ದಾರೆ. ಡ್ರಗ್ಸ್ ಮಾಫಿಯಾದಲ್ಲಿರುವವರು ಎಷ್ಟೇ ಪ್ರಭಾವಿಗಳಾಗಿದ್ದರೂ, ಅಂತಹವರನ್ನು ಹುಡುಕಿ, ಬಂಧಿಸಿ ಕ್ರಿಮಿನಲ್ ಕೇಸ್ ಹಾಕಬೇಕು.

- **ಭೋಜೇಗೌಡ** ಪರಿಷತ್‌ನ ಜೆಡಿಎಸ್ ಸದಸ್ಯ

ರಾಜ್ಯದಲ್ಲಿ ಕಲಬೆರಕೆ ಔಷಧಿಗಳು ಬರುತ್ತಿವೆ. ಸಿನಿಮಾಗಳಲ್ಲಿ ನೋಡಿದ ಹಾಗೆ ಸಾಮಾಜಿಕ ದ್ರೋಹಿಗಳು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ವ್ಯವಸ್ಥೆಯ ದೊಡ್ಡಜಾಲ ಕೈಜೋಡಿಸಿದಂತಾಗಿದೆ. ಇದನ್ನು ಮಟ್ಟಹಾಕುವ ಕೆಲಸವಾಗಬೇಕು.

- **ಉಮಾಶ್ರೀ** ಪರಿಷತ್‌ನ ಕಾಂಗ್ರೆಸ್ ಸದಸ್ಯೆ

ಯಾವುದೇ ಒಂದು ಸಾವಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಸತ್ತ ಬಳಿಕ ಎಷ್ಟೇ ಪರಿಹಾರ ನೀಡಿದರೂ ವಾಪಸು ನೀಡಲು ಬರುವುದಿಲ್ಲ. ಮತ್ತೊಮ್ಮೆ ಈ ರೀತಿ ಆಗದಂತೆ ಕ್ರಮ ಕೈಗೊಳ್ಳಿ. ಜಿಲ್ಲಾ ಮಟ್ಟದಲ್ಲಿಯೂ ಕಾರ್ಯಪಡೆ ರಚಿಸಬೇಕು. ಬಾಣಂತಿಯರು, ಶಿಶುಗಳ ಸಾವನ್ನು ತಡೆಯಲು ಸರಕಾರ ಬಿಗಿಕ್ರಮ ಕೈಗೊಳ್ಳಬೇಕು.

- **ಶರವಣ** ಪರಿಷತ್‌ನ ಜೆಡಿಎಸ್ ಸದಸ್ಯ

ಬಳ್ಳಾರಿಯಲ್ಲಿ ಡ್ರಗ್‌ನಿಂದ ಸಾವಾಗಿದೆ. ಅದಾದ ಬಳಿಕ 19 ನೇ ದಿನಕ್ಕೆ ಸಿಎಂ ಭೇಟಿ ಕೊಟ್ಟಿದ್ದಾರೆ. ತಾಯಿ ಶ್ರೀಮಂತ ಹಾಗೂ ಬಡವರು ಅಂತಾ ಇರೋದಿಲ್ಲಾ. ಕೇರಳದಲ್ಲಿ ಆನೆ ದಾಳಿಗೆ ಮೃತಪಟ್ಟರೆ 15 ಲಕ್ಷ ಪರಿಹಾರ ಕೊಡುತ್ತಾರೆ. ಆದರೆ ಬಳ್ಳಾರಿಯಲ್ಲಿ ಬಾಣಂತಿಯರು ಸಾವನ್ನಪ್ಪಿದ್ದರೆ, 5 ಲಕ್ಷ ಪರಿಹಾರ ಕೊಡಲಾಗಿದೆ. ಇದು ಶಿಶುಗಳ ಲಾಲನೆ ಪೋಷಣೆ ಮಾಡಲು ಸಾಕಾಗದು.

- **ಭಾರತಿ ಶೆಟ್ಟಿ** ಬಿಜೆಪಿ ಪರಿಷತ್ ಸದಸ್ಯೆ

ಯೋಗ್ಯವಲ್ಲದ ಔಷಧಿ ಬಂದರೂ, ಸರಕಾರ ಕ್ರಮ ಕೈಗೊಂಡಿಲ್ಲ. ರಾಯಚೂರು, ಬೆಳಗಾವಿ, ಬಳ್ಳಾರಿಯಲ್ಲಿ ಸರಣಿ ಸಾವು ಸಂಭವಿಸಿವೆ. ಬಳ್ಳಾರಿ ದುರಂತಕ್ಕೆ ಕಾರಣವಾದ ಪಶ್ಚಿಮ ಬಂಗಾಳದ ಕಂಪನಿ ಸೇರಿ ಇತರ ಡ್ರಗ್ಸ್ ಕಂಪನಿಗಳ ಮೇಲೆಯೂ ತನಿಖೆ ಮಾಡಿಸಿ, ಸಾವಿಗೆ ಬೆಲೆ 5 ಲಕ್ಷ ರುಪಾಯಿ ಕಟ್ಟೋದು ಸರಿಯಲ್ಲ.

- **ಸಿ.ಟಿ.ರವಿ** ಪರಿಷತ್‌ನ ಬಿಜೆಪಿ ಸದಸ್ಯ

ಜೋರ್ ಮಾತು

ಈ ಹಿಂದೆ ನಮ್ಮ ಸರಕಾರವಿದ್ದಾಗ ಅಂದಿನ ರಾಜ್ಯಪಾಲರು ಕಾಂಗ್ರೆಸಿನವರಾಗಿದ್ದರು. ಆ ಕಾರಣಕ್ಕೆ ನಾವು ಯಾವುದೇ ಅಧಿಕಾರವನ್ನು ಕಿತ್ತುಕೊಂಡಿರಲಿಲ್ಲ. ಆದರೀಗ ಕುಲಾಧಿಪತಿಗಳನ್ನಾಗಿ ರಾಜ್ಯಪಾಲರ ಬದಲಿಗೆ ಮುಖ್ಯಮಂತ್ರಿಗಳನ್ನು ಮಾಡಲು ಹೊರಟಿರುವುದು ರಾಜಕೀಯ ದ್ವೇಷ ಎನಿಸುತ್ತದೆ.

ಆರ್. ಅಶೋಕ ಪ್ರತಿಪಕ್ಷ ನಾಯಕ

ಕರ್ನಾಟಕದಲ್ಲಿ ರಾಜ್ಯಪಾಲರ ಬದಲಿಗೆ ಮುಖ್ಯಮಂತ್ರಿಯನ್ನು ಕುಲಾಧಿಪತಿಯನ್ನಾಗಿ ಮಾಡಲು ಹೊರಟಿರುವುದು ರಾಜಕೀಯ ಎನ್ನುತ್ತಿರುವವರು, ಗುಜರಾತ್ ವ್ಯವಸ್ಥೆಯನ್ನು ನೋಡಬೇಕು. ಇದರೊಂದಿಗೆ ಎಲ್ಲ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರೇ ಕುಲಾಧಿಪತಿಗಳಾಗಿರಬೇಕು ಎನ್ನುವ ಕಾನೂನು ಎಲ್ಲಿದೆ?

ಪ್ರಿಯಾಂಕ್ ಖರ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪೊಲೀಸರಿಗೆ ಊಟ ಬಡಿಸಿದ ಗೃಹ ಸಚಿವರು

ಐಪಿಎಸ್ ಅಧಿಕಾರಿ ಸಂಜೀವ್ ಪಾಟೀಲ್ ಸಾಥ್

ಹಿರಿಯ ಐಪಿಎಸ್ ಅಧಿಕಾರಿ ಸಂಜೀವ್ ಪಾಟೀಲ್ ಅವರು ಗೃಹ ಸಚಿವರ ಡಾ. ಜಿ. ಪರಮೇಶ್ವರ ಜೊತೆಗೂಡಿ ಪೊಲೀಸ್ ಸಿಬ್ಬಂದಿಗೆ ಊಟ ಬಡಿಸಿದರು.

ಬೆಳಗಾವಿ: ಎಸ್ಪಿ ಫೋನ್ ಇನ್ ಕಾರ್ಯಕ್ರಮದ ಮೂಲಕ ಬೆಳಗಾವಿ ಜನರ ಹೃದಯ ಗೆದ್ದ ಹಿರಿಯ ಐಪಿಎಸ್ ಅಧಿಕಾರಿ ಸಂಜೀವ್ ಪಾಟೀಲ್ ಅವರು ಗೃಹ ಸಚಿವರ ಡಾ. ಜಿ. ಪರಮೇಶ್ವರ ಜೊತೆಗೂಡಿ ಪೊಲೀಸ್ ಸಿಬ್ಬಂದಿಗಳಿಗೆ ಊಟ ಬಡಿಸಿದರು.

ಬೆಳಗಾವಿ ಚಳಿಗಾಲದ ಅಧಿವೇಶನದ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಘಟಕಗಳಿಂದ ಬಂದೋಬಸ್ತ್ ಕರ್ತವ್ಯಕ್ಕೆ ಆಗಮಿಸಿರುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕಲ್ಪಿಸಿರುವ ವಸತಿ ಮತ್ತು ಊಟದ ಸ್ಥಳಕ್ಕೆ ಭೇಟಿ ನೀಡಿದ ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ವ್ಯವಸ್ಥೆಯನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಸಂಜೀವ್ ಪಾಟೀಲ್ ಅವರು ಅಧಿಕಾರಿಗಳಿಗೆ ಊಟ ಬಡಿಸಿ ಸರಳತೆ ಮೆರೆದರು.

ಈ ಸಂದರ್ಭದಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕರಾದ ಅಲೋಕ್ ಮೋಹನ್, ಎಡಿಜಿಪಿ ಆರ್.ಹಿತೇಂದ್ರ, ಐಜಿಪಿ ಸಂದೀಪ್ ಪಾಟೀಲ್, ಬೆಳಗಾವಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಸೇರಿದಂತೆ ಮುಂತಾದ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಆರೋಪ

ಹಿಂದಿನ ಬಿಜೆಪಿ ಸರಕಾರದಿಂದ ಬೊಕ್ಕಸಕ್ಕೆ 135 ಕೋಟಿ ನಷ್ಟ

ವಿಧಾನ ಪರಿಷತ್: ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕಿಗೆ ಸಂಬಂಧಪಟ್ಟ ಜಾಗವನ್ನು ಒಂದು ಶಿಕ್ಷಣ ಸಂಸ್ಥೆಗೆ ಜಮೀನು ಕೊಟ್ಟಿದ್ದರಿಂದ ಬೊಕ್ಕಸಕ್ಕೆ 135 ಕೋಟಿ ರು. ನಷ್ಟವಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಆರೋಪಿಸಿದರು.

ಪ್ರಶ್ನೋತ್ತರ ಕಲಾಪದ ವೇಳೆ ಸಿ.ಟಿ.ರವಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಹಿಂದೆಲ್ಲ ಕೈಗಾರಿಕಾ ಸಚಿವರೇ ಈ ನಿವೇಶನಗಳ ಹಂಚಿಕೆ ಸಂಬಂಧ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ಆದರೆ, ನಾನು ಸಚಿವನಾಗಿ ಬಂದ ಮೇಲೆ ಇದಕ್ಕಾಗಿ ಕೆಐಎಡಿಬಿ ಸಿಇಒ ನೇತೃತ್ವದ ಉನ್ನತ ಸಮಿತಿ ರಚಿಸಿದ್ದೇನೆ. ಒಟ್ಟು 95 ಎಕರೆಯಷ್ಟು ಜಾಗದಲ್ಲಿ ಇನ್ನೂ 152 ನಿವೇಶನಗಳಿವೆ ಎಂದು ಮಾಹಿತಿ ನೀಡಿ, ಕೈಗಾರಿಕಾ ಪ್ರದೇಶಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯ ಉದ್ದೇಶಗಳಿಗೆಂದು ಮೀಸಲಿಟ್ಟಿರುವ ಸಿ.ಎ. ನಿವೇಶನಗಳನ್ನು ನಿಯಮಾನುಸಾರ ಹಂಚಿಕೆ ಮಾಡಲಾಗುತ್ತಿದೆ. ಇದರಲ್ಲಿ ಯಾವುದೇ ಅಕ್ರಮ ಸ್ವಜನ ಪಕ್ಷಪಾತ ಮಾಡಿಲ್ಲವೆಂದು ಸ್ಪಷ್ಟಪಡಿಸಿದರು.

ಕೈಗಾರಿಕಾ ಪ್ರದೇಶಗಳಲ್ಲಿ ಶಾಲೆ, ಆಸ್ಪತ್ರೆ, ವಸತಿ ಸಮುಚ್ಚಯಗಳು, ಬ್ಯಾಂಕ್, ಪೆಟ್ರೋಲ್ ಬಂಕ್, ಕ್ಯಾಂಟೀನ್, ಸಮುದಾಯ ಭವನ, ಆರ್‌ಡಿ ಮತ್ತು ನಾವೀನ್ಯತಾ ಕೇಂದ್ರಗಳು ಇತ್ಯಾದಿ ಉದ್ದೇಶಗಳಿಗೆಂದು ಸಿ.ಎ. ನಿವೇಶನಗಳನ್ನು ಇಟ್ಟುಕೊಳ್ಳಲಾಗಿದೆ. ಹೋಟೆಲ್‌ಗಳು ಕೂಡ ಇದರಡಿಯಲ್ಲಿಯೇ ಬರುತ್ತವೆ. ಆದರೆ, ಒಬ್ಬರಿಗೆ ಒಂದೇ ಸಿ.ಎ. ನಿವೇಶನ ಮಾತ್ರ ಕೊಡಬೇಕೆಂಬ ನಿರ್ಬಂಧ ಕೂಡ ಇಲ್ಲ. ಅರ್ಹ ಸಂಸ್ಥೆಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡಲಾಗುತ್ತದೆ ಎಂದು ಹೇಳಿದರು. ಇನ್ನೂ ಇದೇ ವೇಳೆ ಕಾಂಗ್ರೆಸ್, ಬಿಜೆಪಿ ಸದಸ್ಯರ ವಾಕ್ ಪ್ರಹಾರ ನಡೆದು ಕೆಲ ಕಾಲ ಸದನದಲ್ಲಿ ಗದ್ದಲ ಉಂಟಾಯಿತು.

ಮುಖ್ಯ ವಾಹಿನಿಯ ರಾಜ್ಯ ಪತ್ರಿಕೆಗಳ ಜತೆಗೆ ನಾನು ಸಚಿವನಾದ ಮೇಲೆ ಆನ್ ಲೈನ್ ಮೂಲಕವೂ ಜಾಹೀರಾತು ನೀಡುವ ವ್ಯವಸ್ಥೆ ಜಾರಿಗೆ ತಂದಿದ್ದೇನೆ. ಹೀಗೆ ಒಟ್ಟು 93 ಕಡೆಗೆ ಜಾಹೀರಾತು ನೀಡಲಾಗಿತ್ತು. 42 ಸಿ.ಎ. ನಿವೇಶನಗಳಿಗೆ ಒಂದೊಂದೇ ಅರ್ಜಿ ಬಂದಿದ್ದವು. ಇವುಗಳನ್ನು ತಿರಸ್ಕರಿಸಲಾಗಿದೆ. ಎರಡು ಸಿ.ಎ.ನಿವೇಶನಗಳನ್ನು ಉದ್ಯಮಿಗಳು ಸರಕಾರಕ್ಕೆ ಹಿಂದಿರುಗಿಸಿದ್ದಾರೆ. ಇನ್ನೂ 39 ನಿವೇಶನಗಳು ಹಾಗೆಯೇ ಉಳಿದಿವೆ.

- **ಎಂ.ಬಿ.ಪಾಟೀಲ್** ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ



ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸುವರ್ಣ ಸೌಧ ಕಚೇರಿಯಲ್ಲಿ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಭೇಟಿ ಮಾಡಿ ಕ್ಷೇತ್ರದ ಅಭಿವೃದ್ಧಿ ಯೋಜನೆ ಕುರಿತು ಚರ್ಚಿಸಿದರು.

ಸದನ ಸ್ವಾರಸ್ಯ

ಬರ್ತ್‌ಡೇಗೆ ಇಡೀ ದಿನ ಮಜಾವೇ?

ಸೋಮವಾರ ತಡರಾತ್ರಿ ಅಧಿವೇಶನ ನಡೆಸಿದ ಬಳಿಕ ಮಂಗಳವಾರ ಸದನ ಆರಂಭವಾಗುತ್ತಿದ್ದಂತೆ ಸ್ಪೀಕರ್ ಯು.ಟಿ. ಖಾದರ್, ರಾತ್ರಿ ಕಲಾಪಕ್ಕೆ ಚಕ್ಕರ್ ಹಾಕಿದ ಶಾಸಕರನ್ನು ಪ್ರಶ್ನಿಸುತ್ತಿದ್ದರು. ಆರಂಭದಲ್ಲಿ ಮಾಜಿ ಸಚಿವ ಪ್ರಭು ಚವ್ಹಾಣ್ ಅವರನ್ನು ಪ್ರಶ್ನಿಸಿದರು. ಬಳಿಕ ಬಾಣಂತಿಯರ ಸಾವಿನ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಅವಕಾಶ ನೀಡಬೇಕು ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಮನವಿ ಮಾಡಿದರು. ಈ ವೇಳೆ ಮಧ್ಯಪ್ರವೇಶಿಸಿದ ಜಯನಗರ ಶಾಸಕ ಸಿ.ಕೆ. ರಾಮಮೂರ್ತಿ ಅವರು, ನಮ್ಮ ಕ್ಷೇತ್ರದಲ್ಲಿ ಆಗುತ್ತಿರುವ ಆರೋಗ್ಯ ಸಮಸ್ಯೆಗೆ ಸಂಬಂಧಿಸಿದಂತೆ ಮಾತನಾಡಲು ಮುಂದಾದರು. ಇದಕ್ಕೆ ಸ್ಪೀಕರ್ ಖಾದರ್, ಅದೆಲ್ಲ ಸರಿ ನಿನ್ನೆ ಎಲ್ಲಿ ಹೋಗಿದ್ರಿ? ಇಡೀ ದಿನ ಕಾಣಿಸಲೇ ಇಲ್ಲವಲ್ಲ ಎಂದು ಪ್ರಶ್ನಿಸಿದರು. ಈ ವೇಳೆ ರಾಮಮೂರ್ತಿ ಅವರು, ನನ್ನ ಜನ್ಮದಿನವಿತ್ತು. ಆದ್ದರಿಂದ ಎಂದು ರಾಗ ಎಳೆದರು. ರಾಮಮೂರ್ತಿ ಅವರ ಮಾತಿಗೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರ ಅವರ ಹುಟ್ಟುಹಬ್ಬ ಅದಕ್ಕೆ ಬಂದಿಲ್ಲ ಎಂದು ಸಬೂಬು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಖಾದರ್, ಏನ್ರೀ ಬರ್ತ್ ಡೇ ಅಂತಾ ಇಡೀ ದಿನ ಮಜಾ ಮಾಡೋದಾ ಎಂದರು. ಇದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದೇ, ಮೌನವೆನ್ನುವ ಆಭರಣದೊಂದಿಗೆ ನಗುವಿನ ಮೊಗದೊಂದಿಗೆ ರಾಮಮೂರ್ತಿ ಸುಮ್ಮನೆ ಕೂತರು.

ಬಾಣಂತಿಯರ ಸಾವು ತಪ್ಪಿಸಿ ಬದುಕುವ ಗ್ಯಾರಂಟಿ ನೀಡಿ: ಅಶೋಕ

ಮೆಡಿಕಲ್ ಮಾಫಿಯಾ ಕಪಿಮುಷ್ಠಿಯಲ್ಲಿ ಸರಕಾರ

ವಿಧಾನಸಭೆ: ರಾಜ್ಯ ಸರಕಾರ ಮೆಡಿಕಲ್ ಮಾಫಿಯಾದ ಕಪಿ ಮುಷ್ಠಿಯಲ್ಲಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆರೋಪಿಸಿದರು.

ನಿಲುವಳಿ ಸೂಚನೆ ಪೂರ್ವಭಾವಿ ಪ್ರಸ್ತಾಪ ಮಾಡಿದ ಅವರು, ಕಳಪೆ ಗುಣಮಟ್ಟದ ಔಷಧಿಗಳನ್ನು ಸರಕಾರಿ ಆಸ್ಪತ್ರೆಗಳಲ್ಲಿ ಇಡಲಾಗುತ್ತಿದೆ. ಶೌಚಾಲಯವಿಲ್ಲ, ಸಾಕಷ್ಟು ವೈದ್ಯರಿಲ್ಲ. ಡ್ರಗ್ ಮಾಫಿಯಾ ಹಿಡಿತದಲ್ಲಿ ಸರಕಾರವಿದೆ. ಅವಧಿ ಮುಗಿದ ಔಷಧ ಸೇವಿಸುವ ಪರಿಸ್ಥಿತಿ ಇದೆ. ನೂರಾರು ಜನರು ಸಾಯುತ್ತಿದ್ದಾರೆ. ಬಳ್ಳಾರಿ, ಬೆಳಗಾವಿಯಲ್ಲಿ ಬಾಣಂತಿಯರು ಸಾಯುತ್ತಿದ್ದಾರೆ ಎಂದು ಟೀಕಿಸಿದರು.

ಬದುಕುವ ಗ್ಯಾರಂಟಿ ನೀಡಿ: ಬಾಣಂತಿಯರ ಸಾವು ತಪ್ಪಿಸಿ ಬದುಕುವ ಗ್ಯಾರಂಟಿ ನೀಡಿ. ಬಹಳಷ್ಟು ಮಕ್ಕಳು ಕೂಡ ಮೃತಪಟ್ಟಿದ್ದಾರೆ. ಬಾಣಂತಿಯರ ಸಾವಿಗೆ ನ್ಯಾಯ ಬೇಕಲ್ಲವೆ? ರಾಜ್ಯದ ಸರಕಾರಿ ಆಸ್ಪತ್ರೆಗಳಿಗೆ ಸರಬರಾಜಾಗುತ್ತಿರುವ ಔಷಧಿಗಳು ಕಳಪೆ ಗುಣಮಟ್ಟದಿಂದ ಕೂಡಿವೆ. ಗುಣಮಟ್ಟ ಪರೀಕ್ಷಿಸುವ ವೈದ್ಯಕೀಯ ಸರಬರಾಜು ನಿಗಮದಲ್ಲಿನ ಕಾರ್ಯವಿಧಾನದ ಬಗ್ಗೆ ಪ್ರಶ್ನೆ ಮೂಡಿದೆ. ಬಡವರು, ಸಾರ್ವಜನಿಕರು ಉತ್ತಮ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆ ಅವಲಂಬಿಸುವ ಅನಿವಾರ್ಯತೆ ಇದೆ. 6 ತಿಂಗಳ ಹಿಂದೆಯೇ ಬಳಸಲಾಗದ ಔಷಧಿಗಳನ್ನು ಬಳಸಲಾಗುತ್ತಿದೆ ಎಂದರು.

ಜನರಿಗೆ ಆರೋಗ್ಯ ಗ್ಯಾರಂಟಿಯೂ ಬೇಕು

ಬೆಂಗಳೂರಿನ ಜಯನಗರದ ಕ್ಯಾನ್ಸರ್‌ಪೀಡಿತ ರೋಗಿಗಳು ತಾವೇ ಔಷಧಿ ತೆಗೆದುಕೊಳ್ಳುವ, ಚುಚ್ಚುಮದ್ದು ತೆಗೆದುಕೊಳ್ಳುವ ಪರಿಸ್ಥಿತಿ ಉಂಟಾಗಿದೆ. ಈ ಬಗ್ಗೆ ವಿಸ್ತೃತ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಅಶೋಕ್ ಕೋರಿದರು. ಇದಕ್ಕೆ ದನಿಗೂಡಿಸಿದ ಬಿಜೆಪಿ ಶಾಸಕ ಸಿ.ಎನ್.ಅಶ್ವತ್ಥನಾರಾಯಣ, ಆರೋಗ್ಯ ಸೇವೆಯನ್ನು ಸರಕಾರ ಕಡೆಗಣಿಸಿದೆ. ಜನರಿಗೆ ಆರೋಗ್ಯ ಗ್ಯಾರಂಟಿಯೂ ಬೇಕು ಎಂದು ಆಗ್ರಹಿಸಿದರು. ಇತರ ಬಿಜೆಪಿ ಶಾಸಕರು ಈ ಒತ್ತಾಯಕ್ಕೆ ಬೆಂಬಲಿಸಿದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಗದಗ**

ಸಮಸ್ಯೆಯೇನು..?

- ಗದಗ ನಗರದ ರಾಮೇಶ್ವರ ದೇವಾಲಯ ಸಂರಕ್ಷಣೆ ಬಗ್ಗೆ.
- **ಪರಿಹಾರ:** ಗದಗ ನಗರದ ರಾಮೇಶ್ವರ ದೇವಾಲಯ ಒತ್ತುವರಿಯಾಗದಂತೆ ತಂತಿಬೇಲಿ ಅಳವಡಿಸಲಾಗಿದ್ದು, ದೇವಾಲಯ ಮೇಲೆ ಬೆಳೆದಿದ್ದ ಹುಲ್ಲು, ಗಿಡಗಂಟೆಗಳನ್ನು ತೆರವುಗೊಳಿಸಲಾಗಿದೆ. ಈ ದೇವಾಲಯವನ್ನು ಸಂರಕ್ಷಿತ ಸ್ಮಾರಕಗಳ ಪಟ್ಟಿಯಲ್ಲಿ ಸೇರಿಸಲು ಕ್ರಮ ವಹಿಸಲಾಗಿದೆ.

ಸದನ ಕ್ಲಿಕ್

ಬೆಳಗಾವಿ ಸುವರ್ಣಸೌಧದಲ್ಲಿ ನಡೆದಿರುವ ವಿಶೇಷ ಅಧಿವೇಶನವನ್ನು ಕಣ್ಣುಂಬಿಕೊಳ್ಳಲು ಆಗಮಿಸಿದ್ದ ವಿವಿಧ ಶಾಲೆಗಳ ಅಪಾರ ಸಂಖ್ಯೆಯ ಮಕ್ಕಳು ಗ್ಯಾಲರಿಯಲ್ಲಿ ಕುಳಿತು ಕುತೂಹಲದಿಂದ ಕಲಾಪವನ್ನು ವೀಕ್ಷಿಸಿದರು.

ಅತ್ಯುತ್ತಮ ಶಾಸಕನಾಗಿ ಟಿ.ಬಿ.ಜಯಚಂದ್ರ

ವಿಧಾನಸಭೆ: 2024-25ನೇ ಸಾಲಿಗೆ ಅತ್ಯುತ್ತಮ ಶಾಸಕರಾಗಿ ಆಯ್ಕೆಯಾಗಿರುವ ಹಿರಿಯ ಶಾಸಕ ಟಿ.ಬಿ.ಜಯಚಂದ್ರ ಅವರಿಗೆ ಮಂಗಳವಾರ ಅತ್ಯುತ್ತಮ ಶಾಸಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿಧಾನಸೌಧ ಕಲಾಪದಲ್ಲಿ ಸಭಾಧ್ಯಕ್ಷ ಯು.ಟಿ ಖಾದರ್, ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಈ ವೇಳೆ ಪಕ್ಷಾತೀತವಾಗಿ ಸದಸ್ಯರು ಎದ್ದು ನಿಂತು ಜಯಚಂದ್ರ ಅವರಿಗೆ ಚಪ್ಪಾಳೆ ತಟ್ಟಿ ಶುಭಕೋರಿದರು.

ಸದನ ಹೈಲೈಟ್ಸ್

ಕಾಗದ ಕಾರ್ಖಾನೆ ಪುನಾರಂಭವಿಲ್ಲ

ವಿಧಾನ ಪರಿಷತ್: ಸ್ಥಗಿತಗೊಂಡಿರುವ ಭದ್ರಾವತಿ ಮೈಸೂರು ಕಾಗದ ಕಾರ್ಖಾನೆ ತೀವ್ರ ಹಣ ಕಾಸಿನ ಸಮಸ್ಯೆ ಎದುರಿಸುತ್ತಿದ್ದು, ಹೀಗಾಗಿ ಇದನ್ನು ಪುನಾರಂಭಿಸುವ ಕುರಿತು ಪ್ರಸ್ತಾವನೆ ಸರಕಾರದ ಮುಂದಿಲ್ಲವೆಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಸ್ಪಷ್ಟಪಡಿಸಿದ್ದಾರೆ. ಪ್ರಶ್ನೋತ್ತರ ಅವಧಿ ವೇಳೆ ಕಾಂಗ್ರೆಸ್ ಸದಸ್ಯೆ ಬಿಲ್ಕೀಸ್ ಬಾನು ಪ್ರಶ್ನೆಗೆ ಉತ್ತ ರಿಸಿದ ಅವರು, ಆರ್ಥಿಕ ಸಮಸ್ಯೆಯಿಂದಾಗಿ ಈಗಾಗಲೇ 1541.54 ಕೋಟಿ ರು. ಗಳ ನಷ್ಟ ಅನುಭವಿಸಿದೆ. ಆದ್ದರಿಂದ ಸರಕಾರವು ಕಾರ್ಖಾನೆ ಪುನರಾರಂಭಿಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಿ, ಖಾಸಗಿಯವರಿಗೆ ನೀಡಲು ಟೆಂಡರ್ ಕರೆದರೂ ಸಹ ಕಚ್ಚಾ ವಸ್ತುಗಳ ಪೂರೈಕೆಗೆ ಬೇಕಾದ ನೀಲಗಿರಿ ಮರ ಬೆಳೆಯಲು ನಿರ್ಬಂಧ ಹೇರಿರುವುದರಿಂದ ಯಾವುದೇ ಕಂಪನಿಗಳು ಇದುವರೆಗೂ ಮುಂದೆ ಬಂದಿಲ್ಲ ಎಂದರು.

ಶೀಘ್ರ ಇ-ಖಾತಾ ಸಮಸ್ಯೆಗೆ ಪರಿಹಾರ

ವಿಧಾನ ಪರಿಷತ್: ನಗರ ಪ್ರದೇಶಗಳ ಆಸ್ತಿ ನೋಂದಣಿಗೆ ಸರಕಾರ ಇ-ಸ್ವತ್ತು, ಇ-ಖಾತಾ ಕಡ್ಡಾಯಗೊಳಿಸಿದ್ದು, ಇದರಿಂದಾಗಿ ಹಲವು ಸಮಸ್ಯೆಗಳು ಉಂಟಾಗಿವೆ. ಇ-ಖಾತಾ, ಇ-ಸ್ವತ್ತು, ಇ-ಆಸ್ತಿ ಮತ್ತು ಇ-ವಿನ್ಯಾಸ ಸುಗಮವಾಗಿ ವಿತರಿಸಲು ಕ್ರಮವಹಿಸಿದ್ದು, ಶೀಘ್ರವೇ ಬಗೆಹರಿಯಲಿವೆ ಎಂದು ಪೌರಾಡಳಿತ ಸಚಿವ ರಹೀಂ ಖಾನ್ ಭರವಸೆ ನೀಡಿದರು. ಪ್ರಶ್ನೋತ್ತರ ಅವಧಿ ವೇಳೆ ಸದಸ್ಯ ಚಿದಾನಂದಗೌಡ ಪ್ರಶ್ನೆಗೆ ಉತ್ತರಿಸಿದ ಅವರು, 7 ದಿನದ ಒಳಗಾಗಿ ಖಾತಾ ನಕಲು (ಫಾರಂ ನಂ.3) ವಿತರಣೆ ಮಾಡಲು ಈಗಾಗಲೇ ಸೂಚನೆ ನೀಡಲಾಗಿದೆ. ಆದಾಗ್ಯೂ ಕೆಲವರು ಭೂ ಪರಿವರ್ತನೆಯಾಗದ, ಪ್ರಾಧಿಕಾರದ ಅನುಮತಿ ಪಡೆಯದೆ ದಾಖಲೆಗಳನ್ನು ನೀಡಿದ್ದ ಕಾರಣ ವಿಳಂಬವಾಗಿದೆ. ಅದರಂತೆ ಮುಂಬರುವ ರಾಜ್ಯದ ಪುರಸಭೆ ಮತ್ತು ಪಾಲಿಕೆಗಳಲ್ಲಿ ಯಾವುದೇ ಖಾತೆ ಹೊಂದಿರದ ವಸತಿ ಮತ್ತು ವಾಣಿಜ್ಯ ಆಸ್ತಿಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮಾದರಿಯಲ್ಲಿ ಇ-ಖಾತಾ ನೀಡಲು ಕ್ರಮ ವಹಿಸಲಾಗಿದೆ ಎಂದರು.

ಬಿ.ವೈ.ವಿಜಯೇಂದ್ರ

ರಾಜಾ ವೇಣುಗೋಪಾಲ್ ನಾಯಕ್

ಪ್ರಕಾಶ್ ಕೋಳಿವಾಡ

ರಾಜು ಕಾಗೆ

ಬಿ.ಆರ್ ಪಾಟೀಲ್

ಮುಂದುವರಿದ ಉ.ಕರ್ನಾಟಕದ ಮೇಲಿನ ವಿಶೇಷ ಚರ್ಚೆ | 2ನೇ ದಿನವೂ ಉತ್ತರದ ಪ್ರಗತಿಯ ಜಪ | ಸಮಪ್ರಾಂತ್ಯ ನಿರ್ಮಾಣಕ್ಕೆ ಆಗ್ರಹ

ಉತ್ತರದ ಉದ್ಧಾರದಿಂದ ಕರ್ನಾಟಕ ಪ್ರಗತಿ ಸಾಧ್ಯ!

ಒಂದೂವರೆ ವರ್ಷದಲ್ಲಿ ಯಾರಿಗೂ ಅನುದಾನ ನೀಡಿಲ್ಲ

ಶಾಸಕರಿಗೆ ಕ್ಷೇತ್ರಾಭಿವೃದ್ಧಿ ಅನುದಾನಕ್ಕೆ ಸಂಬಂಧಿಸಿದಂತೆ ಮಾತ ನಾಡಿದ ವಿಜಯೇಂದ್ರ, ರಾಜ್ಯದಲ್ಲಿ ಕಳೆದ ಒಂದೂವರೆ ವರ್ಷದಲ್ಲಿ ಯಾವ ಶಾಸಕರಿಗೂ ಅನುದಾನ ನೀಡಿಲ್ಲ. ಮೊದಲ ಬಾರಿ ಶಾಸಕರು ಹತ್ತಾರು ಆಕಾಂಕ್ಷೆಗಳನ್ನು ಇಟ್ಟುಕೊಂಡಿರುತ್ತಾರೆ. ಆದರೆ, ಅವರ ಆಸೆಗಳಿಗೆ ಸರಕಾರ ತಣ್ಣೀರು ಹಾಕಿದೆ. ಹೊಸ ಬರಷ್ಟೇ ಅಲ್ಲದೇ, ಬಹುತೇಕ ಶಾಸಕರಿಗೆ ಅನುದಾನ ಕೊರತೆ ಉಂಟಾಗಿದೆ. ಕೂಡಲೇ ಎಲ್ಲಾ ಶಾಸಕರಿಗೆ ಅನುದಾನ ನೀಡಿ ಕ್ಷೇತ್ರದ ಪ್ರಗತಿಗೆ ಸಹಕರಿಸಬೇಕು. ಪಕ್ಷಾತೀತವಾಗಿ ಎಲ್ಲಾ ಶಾಸಕರು ತಮಗೆ ಅನುದಾನ ದೊರೆಯುತ್ತಿಲ್ಲ ಅಳಲು ಹೇಳಿ ಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿಯವರು ಶಾಸಕರಿಗೆ ಹೆಚ್ಚಿನ ಹಣ ನೀಡಿ ಎಂದು ಬಿ.ವೈ. ವಿಜಯೇಂದ್ರ ಮನವಿ ಮಾಡಿದರು.

ಬೆಂಗಳೂರಲ್ಲೂ ಉತ್ತರದ ಚರ್ಚೆ ಆಗಲಿ

ಶಾಸಕರ ರಾಜು ಕಾಗೆ ಮಾತನಾಡಿ, ವರ್ಷದಲ್ಲಿ ಒಮ್ಮೆ ಮಾತ್ರ ಬೆಳಗಾವಿ ಅಧಿವೇಶನ ನಡೆಯುತ್ತದೆ. ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಕೇವಲ ಬೆಳಗಾವಿಯಲ್ಲಿ ಅಷ್ಟೇ ಮಾತನಾಡಬೇಕು ಎನ್ನುವುದು ಎಂದರು ಕಾನೂನು ಇದೆಯಾ.? ಅಥವಾ ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೀಯಾ.? ಆದರಿಂದ ಕೇವಲ ಬೆಳಗಾವಿ ಅಲ್ಲದೇ, ಬೆಂಗಳೂರಲ್ಲೂ ಸಹ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲು ಸರಕಾರ ಅವಕಾಶ ನೀಡಬೇಕು ಎಂದು ಮನವಿ ಮಾಡಿದರು.

ಬೆಳಗಾವಿಯ ಚಳಿಗಾಲ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಆದರಿಂದ ಕೇವಲ ಎರಡು ವಾರಗಳ ಬದಲು ಮೂರು ವಾರ ಅಧಿವೇಶನ ನಡೆಸಬೇಕು. ಅದರಲ್ಲಿ ಒಂದು ವಾರ ಉತ್ತರ ಕರ್ನಾಟಕದ ಚರ್ಚೆಗೆ ಮೀಸಲು ಇಡಬೇಕು. ಆಗ ಈ ಭಾಗಕ್ಕೆ ನ್ಯಾಯ ಸಿಕ್ಕಂತಾಗುತ್ತದೆ.
- **ಬಿ.ವೈ ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

2018ರಿಂದ ಇಲ್ಲಿಯವರೆಗೆ ನಂಜುಂಡಪ್ಪ ವರದಿ ಅನುಸಾರವಾಗಿ ಕಲ್ಯಾಣ ಕರ್ನಾಟಕ ಶಾಸಕರಿಗೆ ಅನುದಾನ ಬರುತ್ತಿಲ್ಲ. ಕೂಡಲೇ, ಡಾ. ಗೋವಿಂದರಾಜು ವರದಿ ತರಿಸಿ, ಅನುದಾನ ತಾರತಮ್ಯ ಹೋಗಲಾಡಿಸಬೇಕು. ಆಸ್ಪತ್ರೆಗಳ, ವೈದ್ಯರ ಕೊರತೆ ಇದ್ದು, ಭರ್ತಿ ಮಾಡಬೇಕು. ಶಾಲಾ ಕೊಠಡಿ ಶಿಕ್ಷಕರ ಕೊರತೆ ನಿಗಿಸಬೇಕು.
- **ಜಿ.ಟಿ ಪಾಟೀಲ್**, ಶಾಸಕ

ಉ.ಕ.ಭಾಗದಲ್ಲಿ ಶಾಲೆಗಳ ಸ್ಥಿತಿ, ಶೈಕ್ಷಣಿಕ ಪ್ರಗತಿ ಬಹಳ ದೊಡ್ಡ ಬರೆ ಬಿದ್ದಿದೆ. ಎಸ್ ಎಸ್ಎಲ್‌ಸಿ ಫಲಿತಾಂಶ ದಲ್ಲಿ ಹಿಂದೆ, ಶಾಲಾ ದಾಖಲಾತಿಯಲ್ಲಿ ಹಿಂದೇ, ಗುಲಬರ್ಗಾ ವಿಶ್ವವಿದ್ಯಾಲಯ ಶೇ.83% ಖಾಲಿ. ಸರಕಾರಿ ಶಾಲೆಗಳಲ್ಲಿ 17 ಸಾವಿರ ಹುದ್ದೆ ಖಾಲಿ. ಸರಕಾರ ಶೈಕ್ಷಣಿಕ ಪ್ರಗತಿಗೆ ಹೆಚ್ಚಿನ ಒಲವು ತೋರಬೇಕಿದೆ.
-**ಬಿ. ಆರ್. ಪಾಟೀಲ್**, ಶಾಸಕ

ಕಲ್ಯಾಣ ಕರ್ನಾಟಕ ಭಾಗದ ಖಾಲಿ ಹುದ್ದೆಗಳ ಭರ್ತಿ ಕಾರ್ಯ ಆರಂಭವಾಗಬೇಕು. 371(ಜೆ) ಕಲಂ ಸಮರ್ಪಕ ಅನುಷ್ಠಾನ ಆಗಬೇಕು. ನಿಗಮ ಮಂಡಳಿಗಳಿಗೆ ಹೆಚ್ಚಿನ ಅನುದಾನ ನೀಡಬೇಕು. ಶಹಾಬಾದ್‌ನಲ್ಲಿ ಸ್ಥಗಿತಗೊಂಡಿರುವ ಸಿಮೆಂಟ್ ಕಾರ್ಖಾನೆಯನ್ನು ಕೂಡಲೇ ಪುನರಾರಂಭಿಸಬೇಕು.
-**ಬಸವರಾಜ ಮತ್ತಿಮಡು**, ಶಾಸಕ

ಕಲಬುರಗಿ, ಯಾದಗಿರಿ, ಬೀದರ್ ಜಿಲ್ಲೆಗಳಲ್ಲಿ 11 ಜಲಾಶಯಗಳಿದ್ದರೂ, ಈ ಭಾಗದ 1.67 ಲಕ್ಷ ರೈತರಿಗೆ ನೀರಾವರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಏಕೆ ನೀರಾವರಿ ಸವಲತ್ತು ರೈತರಿಗೆ ಸಿಗುತ್ತಿಲ್ಲ ಎನ್ನುವ ಬಗ್ಗೆ ಅಧ್ಯಯನ ನಡೆಸಲು ಸಮಿತಿ ರಚಿಸಬೇಕು. ರೈತರಿಗೆ ನೀರಾವರಿ ಸೌಲಭ್ಯ ಸಿಗುವಂತೆ ಕ್ರಮ ವಹಿಸಿ.
-**ಡಾ.ಅವಿನಾಶ್ ಜಾಧವ**, ಶಾಸಕ

ವಿಧಾನಸಭೆ, ಸುವರ್ಣಸೌಧ: ಚಳಿಗಾಲದ ಅಧಿವೇಶನದಲ್ಲಿ ಮಂಗಳವಾರವೂ ಉತ್ತರ ಕರ್ನಾಟಕ ವಿಶೇಷ ಚರ್ಚೆ ಮುಂದುವರಿದಿದ್ದು, ಉತ್ತರ ಕರ್ನಾಟಕ ಭಾಗದ ಯುವ ಹಾಗೂ ಹಿರಿಯ ಶಾಸಕರು ಮಾತನಾಡಿ ಸಮಪ್ರಾಂತ್ಯ ನಿರ್ಮಾಣಕ್ಕೆ ಸರಕಾರ ಮುಂದಾಗಬೇಕು. ಈ ಭಾಗದ ಉದ್ಧಾರದಿಂದ ಮಾತ್ರ ಅಖಂಡ ಕರ್ನಾಟಕ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಸರಕಾರದ ಗಮನ ಸೆಳೆದರು.

ಹಿರಿಯ ಶಾಸಕರಾದ ಬಿ.ಆರ್ ಪಾಟೀಲ್, ರಾಜು ಕಾಗೆ, ಶಿವಾನಂದ ಪಾಟೀಲ್, ಜಿ.ಟಿ ಪಾಟೀಲ್ ಹಾಗೂ ಮಹೇಶ್ ಟೆಂಗಿನಕಾಯಿ, ಬಸನಗೌಡ ದದ್ದಲ್, ಬಸವರಾಜ್ ಮತ್ತಿಮಡು, ಅವಿನಾಶ್ ಜಾಧವ, ರಾಜಾ ವೇಣುಗೋಪಾಲ್ ನಾಯಕ್, ಪ್ರಕಾಶ್ ಕೋಳಿವಾಡ, ಕೃಷ್ಣ ನಾಯಕ್, ಕರಿಯಮ್ಮ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಕುರಿತು ಸದನದಲ್ಲಿ ಬೆಳಕು ಚೆಲ್ಲಿದರು.

ತೊಗರಿಗೆ ಪರಿಹಾರ ನೀಡಿ: ಬಿ.ವೈ. ವಿಜಯೇಂದ್ರ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ ಜಿಲ್ಲೆಯ ಪ್ರಮುಖ ಬೆಳೆಯಾಗಿರುವ ತೊಗರಿಬೆಳೆ ಸಂಪೂರ್ಣವಾಗಿ ಹಾಳಾಗಿದೆ. ಕಳೆದ ಎರಡು ವರ್ಷಗಳಿಂದ ಬೆಳೆದ ಬೆಳೆ ರೈತರ ಕೈಗೆ ಸಿಗುತ್ತಿಲ್ಲ. ರೈತರು ತೀವ್ರ ಸಂಕಷ್ಟದಲ್ಲಿ ಸಿಲುಕಿ ಬೀದಿಗೆ ಬರುವ ಪರಿಸ್ಥಿತಿ ನಿರ್ಮಾಣ ವಾಗಿದೆ. ಕೂಡಲೇ, ಸರಕಾರ ಮುತುವರ್ಜಿ ವಹಿಸಿ ಸರ್ವೆ ಕಾರ್ಯ ಪೂರ್ಣಗೊಳಿಸಿ ಪರಿಹಾರ ನೀಡುವ ಕೆಲಸಕ್ಕೆ ಮುಂದಾಗ ಬೇಕು ಎಂದು ಆಗ್ರಹಿಸಿದರು.

ಕಲಬುರಗಿ ಜಿಲ್ಲೆಯೊಂದರಲ್ಲೇ 5-6 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆಯಲಾಗಿದೆ. ಅದರಲ್ಲಿ ಮೂರು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಹಾಳಾಗಿದೆ. ಪರಿಹಾರ ನೀಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ಅಧಿಕಾರಿಗಳು ಸರ್ವೆ ಕಾರ್ಯ ಸಹ ಮಾಡುತ್ತಿಲ್ಲ, ಅಥಣಿಯಲ್ಲೂ ಸಹ ಕಳಪೆಬೀಜ ವಿತರಣೆಯಿಂದ 15-15 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಹೀಗಾಗಿ, ಆ ಭಾಗದ ರೈತರ ನೆರವಿಗೆ ಸರಕಾರ ಧಾವಿಸಬೇಕು. ಕೂಡಲೇ, ಸರ್ವೆ ಕಾರ್ಯ ಆರಂಭಿಸಿ ರೈತರ ಸಮಸ್ಯೆಗೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಉ.ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ಎಕಿಲ್ಲ..?: ಇದಲ್ಲದೆ, ಕಳೆದ ಸೆಪ್ಟೆಂಬರ್ 17ರಂದು ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಣಯಗಳಾದ 11,770 ಕೋಟಿ ರು. ಗಳ ಕ್ರಿಯಾಯೋಜನೆ ಹಾಗೂ ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ಘೋಷಣೆ ಮಾಡಿತ್ತು. ಎರಡು ತಿಂಗಳು ಕಳೆದರೂ ಈವರೆಗೂ ಒಂದು ಅನುಷ್ಠಾನಗೊಂಡಿಲ್ಲ. ಪ್ರೊ. ನಂಜುಂಡಪ್ಪ ವರದಿ ಅನುಸಾರ ಉತ್ತರ ಕರ್ನಾಟಕ ಭಾಗದಲ್ಲಿ ಉದ್ಯೋಗ ಸೃಷ್ಟಿ ಸಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ಎರಡು ವರ್ಷದಲ್ಲಿ ಪೂರ್ಣ ಗೊಳಿಸುತ್ತೇವೆ ಎಂದು ಹೇಳಿದ್ದಿರಿ, ಇನ್ನೂ ಅದು ಮುಗಿದಿಲ್ಲ. ಸಂತ್ರಸ್ತ ರೈತರಿಗೆ ಪರಿಹಾರ ಸಿಕ್ಕಿಲ್ಲ.

ಗ್ರಾಮೀಣ ಭಾಗದಲ್ಲಿ ಸರಿಯಾಗಿ ಸಾರಿಗೆ ವ್ಯವಸ್ಥೆ ಇಲ್ಲದೇ ವಿದ್ಯಾರ್ಥಿಗಳು, ಸಾರ್ವ ಜನಿಕರು ಪರದಾಟ ನಡೆಸಿದ್ದಾರೆ. ತುಂಗಭದ್ರಾ ನದಿಯ ಕ್ರಸ್ಟ್ ಗೇಟ್ ಬಗ್ಗೆ ಗಮನಕೊಟ್ಟು ಡ್ಯಾಮ್ ಸರಿಯಾಗಿ ದುರಸ್ತಿ ಮಾಡಬೇಕು. ಜತೆಗೆ ಗುಳೆ ಹೋಗುವುದು. ಶಿಕ್ಷಣ, ಆರೋಗ್ಯ, ಕುಡಿಯುವ ನೀರಿನ ಸಮಸ್ಯೆ ಸೇರಿ ಉತ್ತರ ಕರ್ನಾಟಕ ಭಾಗದ ಹತ್ತು ಹಲವು ಸಮಸ್ಯೆಗಳಿಗೆ ಸರಕಾರ ಕಾಳಜಿ ವಹಿಸಿ ಪ್ರಗತಿಯ ಕಡೆಗೆ ಗಮನ ನೀಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷರು ಒತ್ತಾಯಿಸಿದರು.

ನಮ್ ಕಡೆ ಗಮನ ಕೊಡಿ

ಉತ್ತರ ಕರ್ನಾಟಕ ಭಾಗದ ಉದ್ಧಾರಕ್ಕೆ ಸಮ ಪ್ರಾಂತ್ಯದ ನಿರ್ಮಾಣಕ್ಕೆ ನಂಜುಂಡಪ್ಪ ವರದಿ ಅನುಷ್ಠಾನ ಸಮರ್ಪಕವಾಗಿ ಜಾರಿಗೆ ತರಲು ಸರಕಾರ ಮುಂದಾಗಬೇಕು. ದಕ್ಷಿಣ ಭಾಗದಲ್ಲಿನ ಕೈಗಾರಿಕೆಗಳು ಉತ್ತರ ಭಾಗಕ್ಕೂ ಬರಬೇಕು. ವಿಮಾನ ನಿಲ್ದಾಣ, ಪ್ರವಾಸೋದ್ಯಮ ಸೇರಿ ಎಲ್ಲಾ ಹಂತದಲ್ಲೂ ಉತ್ತರ ಕರ್ನಾಟಕ ಹಿಂದೆ ಉಳಿದಿದೆ. ಉ.ಕರ್ನಾಟಕ ಭಾಗಕ್ಕೆ ದೊಡ್ಡ ಕೈಗಾರಿಕೆ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಕ್ರೀಡಾಂಗಣ ನಿರ್ಮಾಣ ಮಾಡುವ ಕಡೆಗೆ ಸರಕಾರ ಮುತುವರ್ಜಿ ವಹಿಸಬೇಕು ಎಂದು ಶಾಸಕ ಪ್ರಕಾಶ್ ಕೋಳಿವಾಡ ಒತ್ತಾಯಿಸಿದರು.

ಐಟಿಬಿಟಿ ಸ್ಥಾಪಿಸಿ

ಐಟಿಬಿಟಿಗಳನ್ನು ಬೆಂಗಳೂರು ಹೊರತುಪಡಿಸಿ, ಬೇರೆ ಜಿಲ್ಲೆಗಳಲ್ಲಿಯೂ ಸ್ಥಾಪನೆ ಮಾಡಲು ಸರಕಾರ ಮುಂದಾಗಬೇಕು. ಅನೇಕ ಪದವಿ ವಿದ್ಯಾರ್ಥಿಗಳು ಕೆಲಸ ಅರಸಿ, ಬೆಂಗಳೂರು, ಹೈದ್ರಾಬಾದ್ ಕಡೆಗೆ ವಲಸೆ ಹೋಗುತ್ತಿದ್ದಾರೆ. ಅದನ್ನು ತಪ್ಪಿಸಲು ಹುಬ್ಬಳ್ಳಿ ಧಾರವಾಡ ಕಲಬುರಗಿ ಕಡೆಗೂ ಐಟಿಬಿಟಿ ಕಂಪನಿಗಳನ್ನು ಸ್ಥಾಪಿಸಿ, ಯುವಕರಿಗೆ ಉದ್ಯೋಗ ನೀಡಬೇಕು. ಈ ಬಗ್ಗೆ ಸರಕಾರ ಮುತುವರ್ಜಿ ವಹಿಸಬೇಕು. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಹುಬ್ಬಳ್ಳಿಯನ್ನು ಕ್ಲಸ್ಟರ್ ಆಗಿ ಮಾಡಬೇಕು ಎಂದು ಶಾಸಕ ಮಹೇಶ್ ಟೆಂಗಿನಕಾಯಿ ಆಗ್ರಹಿಸಿದರು.

ಕಾರ್ಖಾನೆ ಸ್ಥಾಪಿಸಿ

ಯಾದಗಿರಿ ಜಿಲ್ಲೆಯಿಂದ ಪ್ರತಿವರ್ಷ 20 ರಿಂದ 30 ಸಾವಿರ ಬಡ ಕೂಲಿಕಾರ್ಮಿಕರು ಉದ್ಯೋಗ ಅರಸಿ ನಗರ ಪ್ರದೇಶಗಳಿಗೆ ಗುಳೆ ಹೋಗುತ್ತಿದ್ದಾರೆ. ಅದನ್ನು ತಪ್ಪಿಸಲು ಸ್ಥಳೀಯವಾಗಿ ಕಾರ್ಖಾನೆಗಳನ್ನು ಸ್ಥಾಪಿಸಬೇಕು. ಅರಣ್ಯ ಸಂಪತ್ತು ವೃದ್ದಿಸಬೇಕಿರುವ ಅಧಿಕಾರಿಗಳು, ವಿವಿಧ ಯೋಜನೆಯಡಿಯಲ್ಲಿ ಸಸಿ ನೆಡುತ್ತಾರೆ. ಅವುಗಳ ಪೋಷಣೆ ಮಾಡುವಲ್ಲಿ ವಿಫಲರಾಗಿದ್ದಾರೆ. ಅರಣ್ಯ ಸಂಪತ್ತು ವೃದ್ಧಿಯಾದರೆ ನೀರಿನ ಕೊರತೆ ನಿವಾರಣೆಯಾಗುತ್ತದೆ. ಅರಣ್ಯ ಸಂರಕ್ಷಣೆ ಮಾಡಬೇಕು ಎಂದು ಶಾಸಕ ರಾಜಾ ವೇಣುಗೋಪಾಲ ನಾಯಕ ಒತ್ತಾಯಿಸಿದರು.

ಜೋರ್ ಮಾತು

ಗ್ರಾಮೀಣಾಭಿವೃದ್ಧಿ ಇಲಾಖೆಯ ಕುಲಾಧಿಪತಿ ಗಳನ್ನಾಗಿ ಮುಖ್ಯಮಂತ್ರಿಗಳನ್ನು ನೇಮಿಸುವುದಕ್ಕೆ ವಿರೋಧಿಸುತ್ತಿರುವವರು, ಗುಜರಾತ್ ರಾಜ್ಯದ ಎಲ್ಲ ವಿವಿಗಳಿಗೆ ಮುಖ್ಯಮಂತ್ರಿ ಯನ್ನೇ ಕುಲಾಧಿಪತಿಯನ್ನಾಗಿ ಮಾಡಿರುವುದನ್ನು ಮರೆತಿರಬೇಕು. ವಿಶ್ವವಿದ್ಯಾಲಯದ ಸುಗಮ ಕಾರ್ಯಾಚರಣೆಗೆ ಇದು ಸ್ವಾಗತಾರ್ಹ.
- **ಶರತ್ ಬಚ್ಚೇಗೌಡ**, ಶಾಸಕ

ಗುಜರಾತ್ ಮಾದರಿಯಲ್ಲಿ ಈ ತಿದ್ದುಪಡಿ ತರಲು ಹೊರ ಟಿದ್ದರೆ, ಗುಜರಾತ್‌ನ ಎಲ್ಲ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಿ. ತಮಗೆ ಬೇಕಾದ ವಿಷಯವನ್ನು ಮಾತ್ರ ಗುಜರಾತ್ ಮಾಡೆಲ್ ಎಂದು ಕರೆಯುವುದು ಸರಿಯಲ್ಲ. ಈ ಹಿಂದೆ ಗುಜರಾತ್ ಮಾಡೆಲ್ ವಿರೋಧಿಸುತ್ತಿದ್ದವರು ಇಂದೇಕೆ ಒಪ್ಪಿಕೊಳ್ಳುತ್ತಿದ್ದಾರೆ
-**ಸಿ.ಎನ್. ಅಶ್ವತ್ಥನಾರಾಯಣ**, ಶಾಸಕ

ಪರಸ್ಪರ ಕೈ ಮುಗಿದ ಯತ್ನಾಳ್-ವಿಜಯೇಂದ್ರ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಪರಸ್ಪರ ಕೈಮುಗಿದು ಕುಶಲೋಪರಿ ವಿಚಾರಿಸಿದ ಅಪರೂಪದ ಪ್ರಸಂಗಕ್ಕೆ ಮಂಗಳವಾರ ಸದನ ಸಾಕ್ಷಿಯಾಯಿತು.

ವಿಧಾನಸಭೆ: ಎತ್ತು ಏರಿಗೆ ಎಳೆದರೆ ಕೋಣ ನೀರಿಗೆಳೀತು ಎನ್ನುವ ಮನಸ್ಥಿತಿಯಲ್ಲಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಪರಸ್ಪರ ಕೈಮುಗಿದು ಕುಶಲೋಪರಿ ವಿಚಾರಿಸಿದ ಅಪರೂಪದ ಪ್ರಸಂಗ ಮಂಗಳವಾರ ಸದನದಲ್ಲಿ ನಡೆಯಿತು. ಭಿನ್ನಮತದ ಹಿನ್ನೆಲೆ ಪರಸ್ಪರ ವೈಮನಸ್ಸು ಹೊಂದಿದ್ದವರು ಸೋಮವಾರ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ವಿಜಯೇಂದ್ರ ಪರಸ್ಪರ ನಮಸ್ಕರಿಸಿ, ಮಾತನಾಡಿಸುವ ಮೂಲಕ ಗಮನ ಸೆಳೆದರು. ಸದನದಲ್ಲಿ ತಾವೇ ಖುದ್ದಾಗಿ ಯತ್ನಾಳ್ ಅವರನ್ನು ಮಾತನಾಡಿಸಿದ್ದ ವಿಜಯೇಂದ್ರ, ಶಾಸಕರಿಗಾಗಿ ತಾವು ಆಯೋಜಿಸಿದ್ದ ಔತಣಕೂಟಕ್ಕೆ ಆಹ್ವಾನಿಸಿದ್ದರು. ಯತ್ನಾಳ ಅವರನ್ನು ನೋಡಿ ಕೈಮುಗಿದು ಔತಣಕೂಟಕ್ಕೆ ಬರುವಂತೆ ಕೋರಿದ್ದರು. ಸದನದ ಪ್ರತಿಪಕ್ಷಗಳ ಆಸನದ ಮೊದಲ ಸಾಲಿನಲ್ಲಿ ಕುಳಿತಿದ್ದ ಬಿ. ವೈ.ವಿಜಯೇಂದ್ರ ಅವರು ಯತ್ನಾಳ ಕಡೆ ತಿರುಗಿ ನಮಸ್ಕರಿಸಿ, ಔತಣಕೂಟಕ್ಕೆ ಬರುವಂತೆ ಆಹ್ವಾನಿಸಿದ್ದರು. ಅದಕ್ಕೆ ನಮಸ್ಕರಿಸಿ, ನಗು ಮೊಗದಲ್ಲಿ ಆಗಲಿ ಅಂತ ಹೇಳಿದ್ದ ಯತ್ನಾಳ, ಔತಣ ಕೂಟಕ್ಕೆ ಹೋಗಿಲ್ಲ. ಇದಕ್ಕೂ ಮುನ್ನ ಡಿಸೆಂಬರ್ 13 ರಂದು ಸ್ಪೀಕರ್ ನೇತೃತ್ವದಲ್ಲಿ ನಡೆದ ಸಂಧಾನ ಸಭೆಯಲ್ಲಿ ಕೂಡ ವಿಜಯೇಂದ್ರ ಮತ್ತು ಯತ್ನಾಳ ಮುಖಾಮುಖಿಯಾಗಿದ್ದರು. ಈ ವೇಳೆ ಯತ್ನಾಳಗೆ ವಿಜಯೇಂದ್ರ ಹುಟ್ಟು ಹಬ್ಬದ ಶುಭಾಶಯ ಕೋರಿದ್ದರು.

ಸದನ ಸ್ವಾರಸ್ಯ

ಶಿಫ್ಟ್ ವೈಸ್ ಸದನಕ್ಕೆ ಬರೋದು ಬೆಸ್ಟ್

ವಿಧಾನಸಭಾ ಸ್ಪೀಕರ್ ಆಗಿ ಅಧಿಕಾರ ಸ್ವೀಕರಿಸಿದ ದಿನದಿಂದ ಯು.ಟಿ. ಖಾದರ್ ಅವರು ಸದಾ ಹೊಸದೊಂದು ಪ್ರಯೋಗ ಮಾಡಬೇಕೆಂಬ ತುಡಿತದಲ್ಲಿದ್ದಾರೆ. ಮೊದಲು ಬಂದವರಿಗೆ ಮಗ್ ಪ್ರೈಸ್ ಫಿಕ್ಸ್ ಮಾಡಿದ್ದ ಖಾದರ್ ಅವರು ಬಳಿಕ ಎಲ್ಲ ಶಾಸಕರ ಮನೆಯ ತುಂಬೆಲ್ಲ ಮಗ್ ತುಂಬಿದ್ದರಿಂದ, ಈ

ಬಾರಿ ತಟ್ಟೆ ಕೊಡುವ ಸಂಪ್ರದಾಯವನ್ನು ಶುರು ಮಾಡಿದ್ದಾರೆ. ಈ ಎಲ್ಲದರ ನಡುವೆ ಇದೀಗ ಅಜೆಂಡಾದಲ್ಲಿ ಹಾಕಿಕೊಂಡಿರುವ ಎಲ್ಲ ವಿಷಯಗಳನ್ನು ಮುಗಿಸಬೇಕೆನ್ನುವ ಗುರಿಯನ್ನು ನಿಗದಿಪಡಿಸಿಕೊಂಡಿದ್ದಾರೆ. ಈ ಗುರಿಯ ಭಾಗವಾಗಿಯೇ ಸೋಮವಾರ ರಾತ್ರಿ ಒಂದರವರೆಗೆ ಅಧಿವೇಶನವನ್ನು ನಡೆಸಿದ್ದಾರೆ. ಸ್ಪೀಕರ್ ಅವರ ಈ ನಡೆಗೆ ಶಾಸಕರು ಏನು ಮಾಡಬೇಕೆಂದು ತೋಚದೇ, ಈ ಸಂಪ್ರದಾಯ ಬೆಳಗಾವಿಯೇ ಕೊನೆಯಾದರೆ ಅತ್ಯುತ್ತಮ. ಒಂದು ವೇಳೆ ಬೆಂಗಳೂರಿಗೂ ಮುಂದುವರಿಸಿದರೆ, ಐಟಿ ಕಂಪನಿಗಳ ರೀತಿ ಮೂರು ಶಿಫ್ಟ್‌ನಲ್ಲಿ ಸದನಕ್ಕೆ ಹಾಜರಾಗಬೇಕು ಎನ್ನುವ ಮಾತನ್ನು ಆಡಿದ್ದಾರೆ. ಇಡೀ ದಿನ ಕೂರುವ ಬದಲು ಬೆಳಗ್ಗೆಯಿಂದ ಮಧ್ಯಾಹ್ನಕ್ಕೆ ಒಂದು ಬ್ಯಾಚ್ ಮಧ್ಯಾಹ್ನದಿಂದ ರಾತ್ರಿವರೆಗೆ ಇನ್ನೊಂದು ಬ್ಯಾಚ್ ಹಾಗೂ ಕೊನೆಯಲ್ಲಿ ಊಟ ಮುಗಿಸಿಕೊಂಡು ಬರುವ ಮೂರನೇ ಬ್ಯಾಚ್ ತಡರಾತ್ರಿವರೆಗೆ ಇರಬೇಕು ಎನ್ನುವ ಕಾನೂನನ್ನು ತರಬಹುದು ಎಂದು ಮಾತಾಡಿಕೊಳ್ಳುತ್ತಿದ್ದಾರೆ.

ಸದನ ಸ್ವಾರಸ್ಯ

ಬೈರತಿ, ಶರವಣ ನಡುವೆ ಲವ್ & ವಾರ್ ಅಂತೆ..!

ಜೆಡಿಎಸ್ ಸದಸ್ಯ ಟಿಎ ಶರವಣ ಅವರು ಪ್ರಶ್ನೋತ್ತರ ಕಲಾಪದ ವೇಳೆ ಪ್ರಶ್ನೆ ಒಂದಕ್ಕೆ ಸಚಿವ ಬೈರತಿ

ಸುರೇಶ್ ಸರಿಯಾಗಿ ಉತ್ತರ ನೀಡಿಲ್ಲವೆಂದು ಕೋಪ ಮಾಡಿಕೊಂಡು ಅವರ ಮೇಲೆ ರೇಗಿದಾಗ, ನಗುತ್ತಲೇ ಉತ್ತರ ಕೊಟ್ಟ ಸಚಿವ ಬೈರತಿ ಯಾಕಣ್ಣ, ರೇಗ್ತಿಯಾ ನಾನು ಇಲ್ಲಿ ಕೂಲಾಗಿ ಇಲ್ವಾ ಎನ್ನುತ್ತಾ ಸಭಾಪತಿ ಅವರೇ ನಾನು, ಶರವಣ ಅವರು 2012 ರಲ್ಲಿ ಒಟ್ಟಿಗೆ ಇಲ್ಲಿಗೆ ಬಂದ್ವಿ ಅಲ್ವಾ ಅದಕ್ಕೆ ನಮ್ಮಿಬ್ಬರ ನಡುವೆ ಲವ್ ಅಂಡ್ ವಾರ್ ಎಂದು ಹಾಸ್ಯ ಚಟಾಕಿ ಹಾರಿಸಿದರು. ಇನ್ನು ವಿಧಾನ ಪರಿಷತ್ ಕಲಾಪದ ವೇಳೆ ಪದೆ ಪದೇ ಎದ್ದುನಿಂತು ಮಾತ ನಾಡುತ್ತಿದ್ದ ಬಿಜೆಪಿ ಸದಸ್ಯ ಸಿ.ಟಿ.ರವಿ ಮೇಲೆ ಗರಂಯಾದ ಸಭಾಪತಿ ಬಸವರಾಜ ಹೊರಟ್ಟಿ ಅವರು, ರವಿ ಇದೇನಾ ದಿಲ್ಲಿ ಅಂತ ತಿಳ್ಕೊಂಡಿ ಏನ್? ಬಾಳ ಶಾನ್ಯ ಇದ್ದಿ ಕೂತ್ಕೋ ಸಾಕು ಎಂದು ಗದರಿದ ಪ್ರಸಂಗ ನಡೆಯಿತು. ಇದರಿಂದ ದಂಗಾದ ರವಿ ಕುಳಿತುಕೊಂಡರು.

ರಾಜ್ಯದ ಆರ್ಥಿಕ ಸ್ಥಿತಿ ಸ್ಥಿರ | ಎಸ್‌ಜಿಎಸ್‌ಟಿ ಸಂಗ್ರಹದಲ್ಲಿ ರಾಜ್ಯಕ್ಕೆ 2ನೇ ಸ್ಥಾನ

ಮಧ್ಯಂತರ ವಾರ್ಷಿಕ ವರದಿ ಮಂಡನೆ

ಸುವರ್ಣಸೌಧ ಬೆಳಗಾವಿ: ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ವರದಿಯನ್ನು ವಿಧಾನಸಭೆಯಲ್ಲಿ ಮಂಗಳವಾರ ಸರಕಾರ ಮಂಡಿಸಿದೆ. ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದರೂ, 27534 ಕೋಟಿ ರು. ರಾಜಸ್ವದ ಕೊರತೆಯಿದೆ ಎನ್ನುವುದು ಮಧ್ಯವಾರ್ಷಿಕ ಪರಿಶೀಲನಾ ವರದಿಯಲ್ಲಿ ಬಹಿರಂಗವಾಗಿದೆ.

ಈ ವರದಿಯಲ್ಲಿ ರಾಜಸ್ವದ ಕೊರತೆಯ ಹೊರತಾಗಿಯೂ, ರಾಜ್ಯದ ಪಾಲಿನ ಜಿಎಸ್‌ಟಿ (ಎಸ್‌ಜಿಎಸ್‌ಟಿ) ಸಂಗ್ರಹದಲ್ಲಿ ಕರ್ನಾಟಕವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ವಿತ್ತೀಯ (2024- 25) ವರ್ಷದಲ್ಲಿ ಜಿಎಸ್‌ಟಿ ಸಂಗ್ರಹದಲ್ಲಿ ಶೇಕಡಾ 11ರಷ್ಟು ಬೆಳವಣಿಗೆಯಾಗಿದೆ. ಇದು ವರ್ಷದ ಮೊದಲಾರ್ಧದ ಸಂಗ್ರಹವಾಗಿದೆ ಎಂದು ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ವರದಿ ತಿಳಿಸಿದೆ.

ರಾಜ್ಯದ ತೆರಿಗೆ ಸಂಗ್ರಹಗಳ ವಿಷಯದಲ್ಲಿಯೂ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.13.8ರಷ್ಟು ಹೆಚ್ಚಳವಾಗಿದೆ. ಒಟ್ಟಾರೆ ಆರ್ಥಿಕ ಚಟುವಟಿಕೆಗಳಲ್ಲಿ ಪ್ರಗತಿಯಾಗಿದ್ದು, ರಾಜ್ಯದ ಹಣಕಾಸು ಸ್ಥಿತಿ ಉತ್ತಮವಾಗಿದೆ ಎಂದು ವರದಿ ತಿಳಿಸಿದೆ. ಸದೃಢ ಆರ್ಥಿಕ ಬೆಳವಣಿಗೆ, ಉತ್ತಮ ಆಡಳಿತ ಮತ್ತು ವ್ಯಾಪಾರ ಸ್ನೇಹಿ ವಾತಾವರಣಗಳಿಂದಾಗಿ ಆರ್ಥಿಕ ಆರೋಗ್ಯ ಚೆನ್ನಾಗಿದೆ. ಪ್ರಸಕ್ತ ಸಾಲಿನಲ್ಲಿ ಮಳೆ ಉತ್ತಮ ಪ್ರಮಾಣದಲ್ಲಾಗಿರುವುದರಿಂದ ಕೃಷಿ ಕ್ಷೇತ್ರದಲ್ಲಿ ಇನ್ನಷ್ಟು ಬೆಳವಣಿಗೆಯಾಗುವ ನಿರೀಕ್ಷೆಯಿದೆ. ಆರ್ಥಿಕತೆಯು ಸ್ಥಿರ ಬೆಳವಣಿಗೆ ಕಾದುಕೊಳ್ಳುವ ನಿರೀಕ್ಷೆಯನ್ನು ವರದಿ ವ್ಯಕ್ತಪಡಿಸಿದ್ದು, ರಾಜ್ಯದ ನೀತಿಗಳು ಕೂಡ ಹಣಕಾಸು ಸುಸ್ಥಿತಿಗೆ ಕಾರಣ ಎಂಬುದಾಗಿ ಹೇಳಲಾಗಿದೆ.

ವಿತ್ತೀಯ ಕೊರತೆ ಮಿತಿಯಲ್ಲಿದೆ

ಪ್ರಸಕ್ತ ಸಾಲಿನಲ್ಲಿ ಲಕ್ಷ ಕೋಟಿಯಷ್ಟು ಸಾಲ ಮಾಡುವುದಕ್ಕೆ ಅವಕಾಶ ಇದ್ದು, ಇದು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಕಾನೂನು ಸೂಚಿಸುವ ಮಿತಿಯಲ್ಲಿದೆ. ರಾಜ್ಯದ ಒಟ್ಟು ಆಂತರಿಕ ಬೆಳವಣಿಗೆ ದರದ (ಜಿಎಸ್‌ಡಿಪಿ) ಶೇ 3ರ ಒಳಗೆ ವಿತ್ತೀಯ ಕೊರತೆ ಇದ್ದು ಹಾಗೂ ಜಿಎಸ್ಡಿಪಿಯ ಶೇ 25ರ ಮಿತಿಯೊಳಗೆ ಒಟ್ಟಾರೆ ಸಾಲದ ಪ್ರಮಾಣವಿದೆ ಎಂದು ವರದಿ ತಿಳಿಸಿದೆ. ಜಾಗತಿಕ ಮಟ್ಟದಲ್ಲಿ ಅನೇಕ ದೇಶಗಳ ಹಣದುಬ್ಬರ ಕಡಿಮೆಯಾಗುತ್ತಿದ್ದು, ಜಾಗತಿಕ ಆರ್ಥಿಕತೆಯಲ್ಲಿ ಬೆಳವಣಿಗೆಯನ್ನು ಇದು ಸೂಚಿಸುತ್ತದೆ. ಈ ಸನ್ನಿವೇಶದಿಂದಾಗಿ ಭಾರತದಂತಹ ಉದಯೋನ್ಮುಖ ಮಾರುಕಟ್ಟೆ ಹೊಂದಿರುವ ರಾಷ್ಟ್ರಗಳ ಮೇಲಿನ ಒತ್ತಡ ತಗ್ಗಿದೆ. ಇದು ಸಕಾರಾತ್ಮಕ ಬೆಳವಣಿಗೆಯಾಗಿದೆ ಎಂದು ತಿಳಿಸಲಾಗಿದೆ.

ಕೇಂದ್ರದ ಅನುದಾನದಿಂದ ಸಹಾಯ

ಇನ್ನು ಕೇಂದ್ರ ಸರಕಾರದಿಂದ ನಿರೀಕ್ಷಿತ ಪ್ರಮಾಣದ ಅನುದಾನ ಬರುತ್ತಿಲ್ಲವೆಂದು ಹೇಳುತ್ತಿರುವ ಕಾಂಗ್ರೆಸ್ ನಾಯಕರ ಹೇಳಿಕೆಗೆ ವಿರುದ್ಧ ಎನ್ನುವ ರೀತಿಯಲ್ಲಿ ವರದಿಯಲ್ಲಿ ಮಾಹಿತಿ ನೀಡಲಾಗಿದೆ. 2024ರ ಸೆಪ್ಟೆಂಬರ್‌ನಲ್ಲಿ 1456 ಕೋಟಿ ರು. ಬಂಡವಾಳ ಹೂಡಿಕೆಗೆ ವಿಶೇಷ ನೆರವನ್ನು ನೀಡಿರುತ್ತದೆ. ಬಂಡವಾಳ ಹೂಡಿಕೆಗೆ ವಿಶೇಷ ನೆರವು, ರಾಜ್ಯದ ಬಂಡಾವಳ ವೆಚ್ಚವನ್ನು ಹೆಚ್ಚಿಸಲು ಸಹಕಾರಿಯಾಗಿದೆ ಎಂದು ಹೇಳಿದೆ.

ಪ್ರಸ್ತುತ ರಾಜ್ಯದ ಬಜೆಟ್ ಗಾತ್ರ 3.71 ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಈ ಹಣದಲ್ಲಿ ವರ್ಷದ ಮೊದಲಾರ್ಧದಲ್ಲಿ ಶೇಕಡಾ 37ರಷ್ಟು ಮೊತ್ತವನ್ನು ಬಳಸಲಾಗಿದೆ. ಕಳೆದ ಸಾಲಿನ (2023- 24) ಇದೇ ಅವಧಿಗೆ ಶೇ 34ರಷ್ಟು ಬಜೆಟ್ ಹಣವನ್ನು ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡಲಾಗಿತ್ತು ಎಂದಿದೆ. ಈ ಮೂಲಕ ನಿಕಟ ಪೂರ್ವ ಬಿಜೆಪಿ ಸರಕಾರಕ್ಕಿಂತ ತಮ್ಮ ಸರಕಾರ ಬಜೆಟ್ ಬಳಕೆಯನ್ನು ಸಮರ್ಪಕವಾಗಿ ಮಾಡಿಕೊಳ್ಳುತ್ತಿದೆ ಎನ್ನುವುದನ್ನು ತಿಳಿಸಿದೆ.

3.5 ಶತಕೋಟಿ ಡಾಲರ್: ಪ್ರಸಕ್ತ ಆರ್ಥಿಕ ವರ್ಷದ ಆರು ತಿಂಗಳಲ್ಲಿ ರಾಜ್ಯವು 3.5 ಶತ ಕೋಟಿ ಅಮೆರಿಕನ್ ಡಾಲರ್‌ನಷ್ಟು ವಿದೇಶಿ ಹೂಡಿಕೆಗಳನ್ನು ಆಕರ್ಷಿಸಲಾಗಿದೆ. ವಿದೇಶಿ ಹೂಡಿಕೆಗಳನ್ನು ಆಕರ್ಷಿಸುವಲ್ಲಿ ಕರ್ನಾಟಕ ದೇಶದಲ್ಲಿಯೇ ಮೂರನೇ ಸ್ಥಾನದಲ್ಲಿದೆ. ವಿದೇಶಿ ಬಂಡವಾಳ ಹರಿದು ಬರುತ್ತಿದೆ. ಇದರೊಂದಿಗೆ ಬೆಂಗಳೂರು ಹೊರತಾಗಿ ಹೂಡಿಕೆ ಮಾಡಿ ಆರ್ಥಿಕ ಚಟುವಟಿಕೆ ಉತ್ತೇಜಿಸುವುದಕ್ಕಾಗಿ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ ಮತ್ತು ಕಲಬುರಗಿ ಮೊದಲಾದ ನಗರಗಳಲ್ಲಿ ಹೂಡಿಕೆಗೆ ಪ್ರೋತ್ಸಾಹಿಸಲಾಗುತ್ತಿದೆ ಎನ್ನುವ ವಿಷಯವನ್ನು ತಿಳಿಸಲಾಗಿದೆ.

ಸದನ ಕ್ಲಿಕ್

ಬೆಳಗಾವಿ ಸುವರ್ಣ ವಿಧಾನಸೌಧ ಆವರಣದಲ್ಲಿ ಗಾಂಧಿ ಪ್ರತಿಮೆ ಸ್ಥಾಪನೆ ಸ್ಥಳವನ್ನು ಸಂಸದರೂ ಆಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ ತೋರಿಸಿ, ವಿವರಿಸಿದರು.

ವಿಶ್ವವಾಣಿ

ಸಂಪಾದಕೀಯ

ಮಾತಿಗೆ ತಪ್ಪದಿರಲಿ ದ್ವೀಪರಾಷ್ಟ್ರ

ಶ್ರೀಲಂಕಾದ ನೆಲವನ್ನು ಭಾರತದ ವಿರುದ್ಧ ಬಳಸುವುದಕ್ಕೆ ಬಿಡುವುದಿಲ್ಲ ಎಂಬುದಾಗಿ ಅಲ್ಲಿನ ಅಧ್ಯಕ್ಷ ಅನುರಾ ದಿಸಾನಾಯಕೆ ಅವರು ಭಾರತದ ಪ್ರಧಾನಮಂತ್ರಿ ಮೋದಿಯವರಿಗೆ ಭರವಸೆ ನೀಡಿದ್ದಾರೆ. ಈ ಮಾತಿಗೆ ಅವರು ಅನುಗಾಲವೂ ಬದ್ಧರಾಗಿರಲಿ ಎಂಬುದು ಭಾರತೀಯರ ಸಹಜ ನಿರೀಕ್ಷೆ ಮತ್ತು ಆಶಯ. ಏಕೆಂದರೆ, ದೇಶವೊಂದರ ಆಯಕಟ್ಟಿನ ಸ್ಥಾನವನ್ನು ಅಲಂಕರಿಸಿದವರು ಬದಲಾಗುತ್ತಾ ಹೋದಂತೆ, ನೆರೆಹೊರೆಯ ದೇಶದೆಡೆಗಿನ ಅದರ ಒಲವು-ನಿಲುವುಗಳೂ ಕೆಲವೊಮ್ಮೆ ಬದಲಾಗುವುದಿದೆ. ಅದರಲ್ಲೂ ನಿರ್ದಿಷ್ಟವಾಗಿ ದಶಕಗಳಿಂದಲೂ ನಮ್ಮ ವಿರುದ್ಧ ಕತ್ತಿ ಮಸೆಯುತ್ತಲೇ ಬಂದಿರುವ ಚೀನಾ ಎಂಬ 'ಮಗ್ಗುಲುಮುಳ್ಳು' ರಾಷ್ಟ್ರವು, ಭಾರತವನ್ನು ಸುತ್ತುವರಿದಿರುವ ಸಣ್ಣಪುಟ್ಟ ರಾಷ್ಟ್ರಗಳಲ್ಲಿ ಕೆಲವನ್ನು 'ಸ್ಟ್ರಿಂಗ್ ಆಫ್ ಪರ್ಲ್ಸ್' ಹಣೆಪಟ್ಟಿಯ ತನ್ನ ಭೂರಾಜಕೀಯ ಸಿದ್ಧಾಂತದ ಜಾಲದಲ್ಲಿ ಸಿಲುಕಿಸಿ, ಅಲ್ಲೆಲ್ಲ ತನ್ನ ಮಿಲಿಟರಿ ನೆಲೆಗಳನ್ನು ಸ್ಥಾಪಿಸಲು ಮುಂದಾಗಿದ್ದಿದೆ. ಹೊಂಚುಹಾಕಿ ಭಾರತದ ಮೇಲೆ ಮುರಕೊಂಡು ಬೀಳುವುದೇ ಚೀನಾದ ಈ ಉಪಕ್ರಮದ ಹಿಂದಿನ ಸಂಚು ಎಂಬುದು ಜಗಜ್ಜಾಹೀರಾಗಿರುವ ಸತ್ಯ. ಶ್ರೀಲಂಕಾದ ಹಂಬನ್‌ಟೋಟಾ ಅಂತಾರಾಷ್ಟ್ರೀಯ ಬಂದರನ್ನು 99 ವರ್ಷಗಳ ಗುತ್ತಿಗೆಗೆ ಹಿಡಿದಿದೆ ಚೀನಾ; ಅದರ ಸಾಲದ ಶೂಲದಲ್ಲಿ ಸಿಲುಕಿ ಒದ್ದಾಡುತ್ತಿರುವ ಶ್ರೀಲಂಕಾ, ಸಹಜವಾಗಿಯೇ ಚೀನಾದ ಇಶಾರೆಗೆ ತಕ್ಕಂತೆ ನರ್ತಿಸಬೇಕಾಗಿ ಬರುತ್ತದೆ ಎಂಬುದು ಸಹಜ ಸಮೀಕರಣ. ಹೀಗಿರುವಾಗ, ಭಾರತವು ನಿಶ್ಚಿಂತೆಯಿಂದ ಇರುವುದು ಕೊಂಚ ಕಷ್ಟವೇ. ಚೀನಾದ ಕಪಿಮುಷ್ಟಿಯಿಂದ ಬಿಡಿಸಿಕೊಂಡ ನಂತರವಷ್ಟೇ ಶ್ರೀಲಂಕಾದ ಇಂಥ ಭರವಸೆಯ ಮಾತುಗಳನ್ನು ಭಾರತ ಸಂಪೂರ್ಣವಾಗಿ ನಂಬಲು ಸಾಧ್ಯ. ವಿದೇಶಾಂಗ ನೀತಿಯಲ್ಲಿ ಹಾಗೂ ನೆರೆರಾಷ್ಟ್ರಗಳನ್ನು ನಿಭಾಯಿಸುವ ವಿಷಯದಲ್ಲಿ ಸಾಕಷ್ಟು ಪಳಗಿರುವ ಪ್ರಧಾನಿ ಮೋದಿ ಮತ್ತು ವಿದೇಶಾಂಗ ಖಾತೆಯ ಸಚಿವ ಎಸ್.ಜೈಶಂಕರ್ ಅವರಿಗೆ ಇದು ಗೊತ್ತಿರದ ಸಂಗತಿಯೇನಲ್ಲ. ಬಾಂಗ್ಲಾದೇಶವು ಭಾರತದ ವಿರುದ್ಧ ತೊಡೆತಟ್ಟಿರುವುದು, ಕೆಲ ತಿಂಗಳ ಹಿಂದೆ ಮಾಲ್ಡೀವ್ಸ್ ಕೂಡ ಇಂಥ ಕಿತಾಪತಿಗೆ ಮುಂದಾಗಿ ತರುವಾಯದಲ್ಲಿ ಬಾಲಸುಟ್ಟ ಬೆಕ್ಕಿನಂತಾದದ್ದು ಗೊತ್ತಿರುವ ಸಂಗತಿಯೇ. ಅದೇನೇ ಇರಲಿ, ತಾನಿತ್ತ ಮಾತಿಗೆ ಶ್ರೀಲಂಕಾ ತಪ್ಪದಿರಲಿ ಎಂದಷ್ಟೇ ಸದ್ಯಕ್ಕೆ ಆಶಿಸೋಣ.

ಸೊಂಪಾದಕೀಯ

ಆಪರೇಷನ್ ತೆರಿಗೆ ಮತ್ತು ಹೆರಿಗೆ

ರಾಜ್ಯ ಸರಕಾರವು ಹೆರಿಗೆಗೆ ಸಂಬಂಧಿಸಿದಂತೆ ಕ್ರಮವೊಂದನ್ನು ಕೈಗೊಂಡಿದೆ. ಸಿದ್ದರಾಮಯ್ಯನವರು ಹೇಳಿ ಕೇಳಿ ಆರ್ಥಿಕ ತಜ್ಞರು, ಅವರು ತೆರಿಗೆ ವಿಷಯ ಬಿಟ್ಟು, ಹೆರಿಗೆ ವಿಷಯಕ್ಕೆ ಯಾಕೆ ಕೈ ಹಾಕಿದ್ರು ಅಂತ ನೀವು ಕೇಳಬಹುದು. ಆದರೆ ಸಿದ್ದು ಸರಕಾರ ತೆರಿಗೆ ವಿಷಯದಲ್ಲೂ ಕೈ ಆಡಿಸಿದೆ. ರಾಜ್ಯದಲ್ಲಿ ತೆರಿಗೆ ಪದ್ಧತಿಗೆ ಕೆಲವು ತಿದ್ದುಪಡಿ ತಂದು ವ್ಯಾಪಾರಿ-ಸ್ನೇಹಿ ಎಸ್‌ಜಿಎಸ್‌ಟಿ ಅಳವಡಿಸಿದೆ ಸರಕಾರ. ಸರಕು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದಂತೆ 80 ಸಾವಿರ ವ್ಯಾಜ್ಯ ಪ್ರಕರಣಗಳಲ್ಲಿ ಬಡ್ಡಿ ಮತ್ತು ದಂಡ ವಿನಾಯಿತಿ ಸೇರಿದಂತೆ ಕೆಲವು ತಿದ್ದುಪಡಿ ಒಳಗೊಂಡ ಎಸ್‌ಜಿಎಸ್‌ಟಿ ವಿಧೇಯಕವನ್ನು ವಿಧಾನಸಭೆ ಅನುಮೋದಿಸಿದೆ. ಮೋದಿ ಸರಕಾರದ ಹೈಲೈಟ್‌ಗಳಲ್ಲಿ ಒಂದಾದ ಜಿಎಸ್‌ಟಿ ಪದ್ಧತಿಗೆ ತಿದ್ದುಪಡಿ ತಂದ ಸರಕಾರ ನಂತರ ರಾಜ್ಯದ ಆಸ್ಪತ್ರೆಗಳ ವಿಷಯದಲ್ಲೂ ಕೈ ಆಡಿಸಿದೆ. ರಾಜ್ಯದಲ್ಲಿ ಹೆಚ್ಚುತ್ತಿರುವ ಸಿಸೇರಿಯನ್ ಆಪರೇಷನ್‌ಗೆ ತಡೆ ಹಾಕುವ ಕೆಲಸವನ್ನೂ ಮಾಡಲಾಗಿದೆ. ಅನಗತ್ಯ ಹೆರಿಗೆ ಆಪರೇಷನ್‌ಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತದೆ ಅಂತ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಆದಾಯ ಗಳಿಕೆ ಮತ್ತು ಸುಲಭ ಹೆರಿಗೆಗಾಗಿ ಕೆಲವು ಆಸ್ಪತ್ರೆಗಳಲ್ಲಿ ಶೇಕಡಾ 90ರಷ್ಟು ಸಿಸೇರಿಯನ್ ಆಪರೇಷನ್ ಮಾಡಲಾಗುತ್ತಿದೆ. ಇದರ ತಡೆಗೆ ಜನರಲ್ಲಿ ಜಾಗೃತಿ ಮೂಡಿಸಿ ಆಸ್ಪತ್ರೆ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುತ್ತದಂತೆ. ತೆರಿಗ ವಿಷಯ ಓಕೆ, ಆದರೆ ಹೆರಿಗೆ ವಿಷಯದಲ್ಲಿ ಆಸ್ಪತ್ರೆ ಸಿಬ್ಬಂದಿಗೆ ನೀಡಬೇಕಾಗಿರೋದು ತರಬೇತಿ ಅಲ್ಲ ಎಚ್ಚರಿಕೆ ಅನ್ನೋದು ಹಲವರ ಅನಿಸಿಕೆ. ಯಾಕಂದ್ರೆ ಇದು ಅಜ್ಞಾನದಿಂದ ಆಗ್ತಾ ಇರೋ ಕೆಲಸ ಅಲ್ಲ. ಬದಲಾಗಿ ಬೇಕಂತಲೇ ಹಣ ಗಳಿಕೆಗೆ ಆಸ್ಪತ್ರೆಗಳು ಕಂಡುಕೊಂಡಿರೋ ಮಾರ್ಗ ಇದು. ಇದರ ಜತೆಗೆ ಭ್ರೂಣಹತ್ಯೆ ಕೇಸುಗಳು ಕೂಡಾ ಸರಕಾರಕ್ಕೆ ತಲೆನೋವಾಗಿ ಪರಿಣಮಿಸಿವೆ. ಇದಲ್ಲದೆ ಯಾದಗಿರಿಯಲ್ಲಿ ಇತ್ತೀಚೆಗೆ ಆದ 5 ಬಾಣಂತಿಯರ ಸಾವು ಕೂಡಾ ವಿರೋಧಪಕ್ಷಗಳಿಗೆ ಆಡಳಿತ ಪಕ್ಷದ ವಿರುದ್ಧ ಪ್ರಯೋಗಿಸುವ ಬಾಣವಾಗಿವೆ. ಈ ನಿಟ್ಟಿನಲ್ಲಿ ಖಾಸಗಿ ಆಸ್ಪತ್ರೆಗಳ ಮೇಲೆ ಸರಕಾರ ಒಂದು ಕಣ್ಣಿಡಲಿದೆಯಂತೆ.

ಸಂಪಾದಕರ ಸದ್ಯಶೋಧನೆ

ಜಪಾನಿನ ರಸ್ತೆಗಳಿಗೆ ಹೆಸರಿಲ್ಲ

ಒಂದು ಪ್ರಸಂಗ. ನೀವು ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿ ನಡೆಯುತ್ತಿದ್ದೀರಿ ಎಂದು ಕಲ್ಪಿಸಿಕೊಳ್ಳಿ. ಅಲ್ಲಿಗೆ ಹೊಸತಾಗಿ ಆಗಮಿಸಿದ ಜಪಾನಿನ ಯುವತಿಯೊಬ್ಬಳು ನಿಮ್ಮ ಬಳಿ ಬಂದು, 'ಕಾವೇರಿ ಕರಕುಶಲ ವಸ್ತುಗಳ ಮಳಿಗೆಗೆ ಹೋಗಬೇಕಾಗಿದೆ. ಬಹಳ ಹೊತ್ತಿನಿಂದ ಹುಡುಕುತ್ತಿದ್ದೇನೆ, ಸಿಗುತ್ತಿಲ್ಲ. ಆ ಮಳಿಗೆ ಯಾವ ಬ್ಲಾಕ್‌ನಲ್ಲಿದೆ ಎಂದು ಹೇಳಬಹುದೇ?' ಎಂದು ಕೇಳುತ್ತಾಳೆ. ಆಗ ತುಸು ಗೊಂದಲಕ್ಕೊಳಗಾಗುವ ಸರದಿ ನಿಮ್ಮದು. ಆಗ ನೀವು, 'ನನಗೆ ಕಾವೇರಿ ಮಳಿಗೆಯಿರುವ ಬ್ಲಾಕ್ ಹೆಸರು, ಸಂಖ್ಯೆ ಗೊತ್ತಿಲ್ಲ. ಆದರೆ ಅದು ಎಂ.ಜಿ.ರಸ್ತೆಯಲ್ಲಿದೆ' ಎನ್ನುತ್ತೀರಿ. ಅದಕ್ಕೆ ಆ ಯುವತಿ, 'ಇಲ್ಲ, ನಾನು ಈ ಬೀದಿಯ ಹೆಸರನ್ನು ತಿಳಿಯಲು ಬಯಸುವುದಿಲ್ಲ, ಆ ಮಳಿಗೆ ಇರುವ ಬ್ಲಾಕ್ ಹೆಸರೇನು ಮತ್ತು ಅದರ ಸಂಖ್ಯೆ ಏನು ಎಂಬುದನ್ನು ತಿಳಿಯಬಯಸುವೆ' ಎನ್ನುತ್ತಾಳೆ. ಅದನ್ನು ಕೇಳಿ ಕಳೆದುಹೋಗುವ ಸರದಿ ನಿಮ್ಮದು. 'ನೀವು ಯಾವ ಜಗತ್ತಿನಲ್ಲಿ ವಾಸಿಸುತ್ತಿದ್ದೀರಿ? ಬ್ಲಾಕ್ ಹೆಸರು ಮತ್ತು ಸಂಖ್ಯೆ ಅಂದ್ರೆ ನನಗೆ ಗೊತ್ತಿಲ್ಲ. ಆದರೆ ಅದು ಎಂ.ಜಿ.ರಸ್ತೆ... ಮಹಾತ್ಮ ಗಾಂಧಿ ರಸ್ತೆಯಲ್ಲಿದೆ ಎಂದಷ್ಟೇ ಹೇಳಬಲ್ಲೆ' ಎಂದು ನೀವು ಹೇಳುತ್ತೀರಿ. ಇನ್ನೊಂದು ಪ್ರಸಂಗವನ್ನು ಕಲ್ಪಿಸಿಕೊಳ್ಳಿ. ನೀವು ಟೋಕಿಯೋ ನಗರದಲ್ಲಿ ನಡೆಯುತ್ತಿದ್ದೀರಿ. ಅಲ್ಲಿನ ಅಕಿಹಬರಾ ಪ್ರದೇಶದಲ್ಲಿರುವ ಶಿಂಟೋ ದೇವಾಲಯವನ್ನು ಹುಡುಕುತ್ತಿದ್ದೀರಿ. ನೀವು ಜಪಾನಿ ವ್ಯಕ್ತಿಯ ಬಳಿಗೆ ಹೋಗಿ, 'ಶಿಂಟೋ ದೇವಾಲಯವಿರುವ ರಸ್ತೆಯ ಹೆಸರೇನು?' ಎಂದು ಕೇಳುತ್ತೀರಿ. ಆ ಜಪಾನಿ ವ್ಯಕ್ತಿ ನಿಮ್ಮ ಮಾತು ಕೇಳಿ ಗೊಂದಲಕ್ಕೊಳಗಾಗುತ್ತಾನೆ. ನೀವು ಆ ದೇವಾಲಯವಿರುವ ರಸ್ತೆಯ ಹೆಸರೇನು ಎಂದು ಮತ್ತೊಮ್ಮೆ ಕೇಳುತ್ತೀರಿ. ಆತ ಗಲಿಬಿಲಿಗೊಳಗಾದವನಂತೆ ನಿಮ್ಮನ್ನು ಮತ್ತೊಮ್ಮೆ ದಿಟ್ಟಿಸುತ್ತಾನೆ. 'ಇಲ್ಲಿನ ಬೀದಿಗಳಿಗೆ ಹೆಸರುಗಳಿಲ್ಲ, ನೀವು ಹುಡುಕುವ ದೇವಾಲಯದ ಬ್ಲಾಕ್ ನಂಬರ್ ಹೇಳಿದರೆ ಸುಲಭವಾಗಿ ಹುಡುಕಬಹುದು' ಎನ್ನುತ್ತಾನೆ. ನಿಮಗೆ ತಲೆ ಚಿಟ್ಟುಹಿಡಿಯುವುದೊಂದೇ ಬಾಕಿ. ಆಗ ನಿಮಗೆ ಎಂ.ಜಿ.ರಸ್ತೆಯಲ್ಲಿ ಸಿಕ್ಕ ಜಪಾನಿ ಯುವತಿ ನೆನಪಾಗುತ್ತಾಳೆ. ಅವಳು ಬ್ಲಾಕ್ ಹೆಸರು ಮತ್ತು ಸಂಖ್ಯೆಯನ್ನು ಕೇಳಿದ್ದು ಏಕೆ ಎಂಬುದು ನಿಮ್ಮ ಮನಸ್ಸಿನಲ್ಲಿ ಹಾದುಹೋಗುತ್ತದೆ. ಗೊತ್ತಿರಲಿ, ಜಪಾನಿನ ಬೀದಿಗಳಿಗೆ ಹೆಸರುಗಳೇ ಇಲ್ಲ. ಅಲ್ಲಿ ರಸ್ತೆಗೆ ನಾಮಕರಣ ಮಾಡುವುದಿಲ್ಲ. ಇಡೀ ರಸ್ತೆಯಲ್ಲಿ ಓಡಾಡಿದರೂ, ಅಲ್ಲಿನ ಅಂಗಡಿಗಳ ಬೋರ್ಡಿನಲ್ಲಿ ಅದು ಇರುವ ರಸ್ತೆಯ ಹೆಸರನ್ನು ಬರೆದಿರುವುದಿಲ್ಲ. ಪ್ರತಿ ಕಟ್ಟಡಕ್ಕೂ ಮೂರು ಸಂಖ್ಯೆಗಳ ಒಂದು ನಂಬರ್ ನೀಡಲಾಗುತ್ತದೆ. ಮೊದಲ ಸಂಖ್ಯೆ ಜಿಲ್ಲೆಯದು, ಎರಡನೆಯದು ಬ್ಲಾಕಿನದು ಮತ್ತು ಮೂರನೆಯದು ಬ್ಲಾಕಿನಲ್ಲಿರುವ ಮನೆ ಅಥವಾ ಕಟ್ಟಡದ್ದು. ಇಡೀ ಜಗತ್ತಿನಲ್ಲಿ ಒಂದು ಪದ್ಧತಿಯಿದ್ದರೆ, ಜಪಾನಿನಲ್ಲಿ ಮಾತ್ರ ಪ್ರತ್ಯೇಕ ಪದ್ಧತಿ! ಆದರೆ ಇದು ಅತ್ಯಂತ ವೈಜ್ಞಾನಿಕ ಮತ್ತು ಪರಿಪೂರ್ಣ ಪದ್ಧತಿ ಎಂಬುದು ಅಷ್ಟೇ ನಿಜ. ಒಮ್ಮೆ ಇದನ್ನು ಅರ್ಥಮಾಡಿಕೊಂಡರೆ, ಯಾವ ಕಟ್ಟಡ ಅಥವಾ ಮನೆಯನ್ನಾದರೂ ಸುಲಭವಾಗಿ ಹುಡುಕಬಹುದು. ಇದು ವಿದೇಶಿಗರಿಗೆ ಆರಂಭದಲ್ಲಿ ಕಷ್ಟವೆನಿಸಿದರೂ ಕ್ರಮೇಣ ಸುಲಭವಾಗುತ್ತಾ ಹೋಗುತ್ತದೆ. ಆದರೆ ಕಂಪ್ಯೂಟರುಗಳಿಗೆ ಜಪಾನಿಯರ ಪದ್ಧತಿ ಹೆಚ್ಚು ಆಪ್ತವೆಂಬುದು ಗಮನಾರ್ಹ. ರಸ್ತೆಗಳಿಗೆ ಹೆಸರಿದ್ದರೆ, ವಿಳಾಸ ದೀರ್ಘ ಎಂದು ಅನಿಸಬಹುದು. ಆದರೆ ಜಪಾನಿಯರು ಬರೆಯುವ ವಿಳಾಸ ಸಂಕ್ಷಿಪ್ತವಾಗಿರುತ್ತದೆ. ಉದಾಹರಣೆಗೆ, ಸುಶಿ ಸನ್ಮಾಯಿ, ಟೋಕಿಯೋ, ಯೋಯೋಗಿ 4-3-1. ಈ ವಿಳಾಸವನ್ನು ಇನ್ನೂ ಸಂಕ್ಷಿಪ್ತವಾಗಿ 'ಯೋಯೋಗಿ 4-3-1' ಎಂದು ಬರೆದರೂ ಸುಲಭವಾಗಿ ಹುಡುಕಬಹುದು. ಇಡೀ ರಸ್ತೆಯ ಹೆಸರು ಬರೆಯುವ ಬದಲು ಇಷ್ಟನ್ನೇ ಮೊಬೈಲ್ ಅಥವಾ ಕಾರಿನಲ್ಲಿರುವ ನೇವಿಗೇಷನ್ ಉಪಕರಣದಲ್ಲಿ ಟೈಪ್ ಮಾಡುವುದು ಸುಲಭ. 'ಯೋಯೋಗಿ 4-3-1' ಎಂಬ ವಿಳಾಸದಲ್ಲಿ, ಯೋಯೋಗಿ ಅಂದರೆ ಪ್ರದೇಶದ ಹೆಸರು. ಮೊದಲ ಸಂಖ್ಯೆ ಜಿಲ್ಲೆಯನ್ನೂ, ಎರಡನೆಯದು ಬ್ಲಾಕ್ ಹೆಸರನ್ನೂ ಮತ್ತು ಮೂರನೆಯದು ಬ್ಲಾಕ್‌ನಲ್ಲಿರುವ ಕಟ್ಟಡದ ಸಂಖ್ಯೆಯನ್ನೂ ಸೂಚಿಸುತ್ತದೆ. ಆ ದೇಶದ ಯಾವ ಊರಿಗೆ ಹೋದರೂ ಇದೇ ಪದ್ಧತಿಯ ಆಧಾರದಿಂದ ವಿಳಾಸವನ್ನು ಪತ್ತೆ ಹಚ್ಚಬಹುದು. ಅಪರೂಪ ಎಂಬಂತೆ, ಕೆಲವು ಪ್ರಸಿದ್ಧ ರಸ್ತೆಗಳಿಗೆ ಮಾತ್ರ ಹೆಸರನ್ನಿಡಲಾಗಿದೆ. ಹೀಗಾಗಿ ಜಪಾನಿನಲ್ಲಿ ರಸ್ತೆಗೆ ಹೆಸರಿಡುವ, ಅದು ವಿವಾದಕ್ಕೊಳಗಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಹುಳುಗರುಳು ಛಿದ್ರವಾಗುವುದನ್ನು ತಪ್ಪಿಸಿ!

ಹುಳುಗರುಳು, ಮಣ್ಣಿನ ಹುಳದ ಹಾಗೆ ಕಾಣುವ ಕಾರಣ ಅದಕ್ಕೆ ಆ ಹೆಸರು ಬಂದಿದೆ. ಮನುಷ್ಯರಲ್ಲಿ ಇದು ಸರಾಸರಿ 9 ಸೆಂ.ಮೀ. ಉದ್ದವಿರುತ್ತದೆ. ಇದು ಸಣ್ಣ ಕರುಳು, ದೊಡ್ಡ ಕರುಳನ್ನು ಸೇರುವ ಸಂಧಿಸ್ಥಾನದಲ್ಲಿದೆ. ಇದು ನಮ್ಮ ಉದರದ ಕೆಳ ಬಲ ಮೂಲೆಯಲ್ಲಿರುತ್ತದೆ.

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ

vveditoped@gmail.com

ಜೀವಜಗತ್ತಿನಲ್ಲಿರುವ ಜೀವಿಗಳನ್ನು ವಿಶಾಲವಾಗಿ ಸಸ್ಯಾಹಾರಿಗಳು, ಮಾಂಸಾಹಾರಿಗಳು ಹಾಗೂ ಮಿಶ್ರಾಹಾರಿಗಳೆಂದು ವಿಂಗಡಿಸಬಹುದು. ಹಸು, ಕುರಿ, ಮೇಕೆ, ಕುದುರೆ, ಮೊಲ, ಜಿಂಕೆ ಮುಂತಾದ ಸಸ್ಯಾಹಾರಿ ಜೀವಿಗಳು, ಸಸ್ಯಗಳ ವಿವಿಧ ಭಾಗಗಳನ್ನು ತಿಂದು ಬದುಕುತ್ತವೆ. ಹುಲಿ, ಸಿಂಹ, ಚಿರತೆ, ನರಿ, ತೋಳ ಮುಂತಾದವೆಲ್ಲ ಕೇವಲ ಪ್ರಾಣಿಗಳನ್ನು ತಿಂದು ಬದುಕುತ್ತವೆ. ಮನುಷ್ಯನನ್ನು ಒಳಗೊಂಡಂತೆ ಚಿಂಪಾಂಜ಼ಿ, ಬಬೂನ್, ಕರಡಿ, ಹಂದಿ, ಕೋಳಿ, ಕಾಗೆ, ಆಮೆ, ಜಿರಲೆ, ಇರುವೆ ಮುಂತಾದವು ಸಸ್ಯೋತ್ಪನ್ನಗಳನ್ನು ತಿನ್ನುವುದರ ಜತೆಯಲ್ಲಿ, ಅವಕಾಶ ಸಿಕ್ಕಾಗಲೆಲ್ಲ ಪ್ರಾಣಿಗಳನ್ನು ಕೊಂದು ಅವನ್ನು ತಿನ್ನಬಲ್ಲವು. ಹಾಗಾಗಿ ಅವನ್ನು ಮಿಶ್ರಾಹಾರಿಗಳೆಂದು ಕರೆಯಬಹುದು.

ಸಸ್ಯಗಳಲ್ಲಿರುವ ಪ್ರಧಾನ ಅಂಶ ನಾರು. ನಾರಿನಲ್ಲಿ ಪ್ರಧಾನವಾಗಿ 'ಸೆಲ್ಯುಲೋಸ್' ಇರುತ್ತದೆ. ಇದು ಬಿರುಸಾದ ಸಸ್ಯಭಾಗ. ಇದನ್ನು ಜೀರ್ಣಿಸಿಕೊಳ್ಳುವುದು ಕಷ್ಟ. ಹಾಗಾಗಿ ಸಸ್ಯಾಹಾರಿಗಳಲ್ಲಿ ಸಣ್ಣಕರುಳು ದೊಡ್ಡ ಕರುಳನ್ನು ಸೇರುವ ಸ್ಥಳದಲ್ಲಿ ಒಂದು 'ಮೂಗರುಳು' ಅಥವಾ 'ಸೀಕಮ್' ಎಂಬ ಭಾಗವಿರುತ್ತದೆ. ಈ ಮೂಗರುಳಿನ ಒಂದು ಭಾಗವೇ ಹುಳುಗರುಳು, ಕರುಳಬಾಲ ಅಥವಾ ಅಪೆಂಡಿಕ್ಸ್/ವರ್ಮಿಫಾರಂ ಅಪೆಂಡಿಕ್ಸ್ ಎಂದು ಹೆಸರಾದ ಭಾಗ. ಮೂಗರುಳು ಹಾಗೂ ಹುಳುಗರುಳು ಪ್ರಾಣಿಗಳು ತಿನ್ನುವ ಸಸ್ಯಗಳಲ್ಲಿರುವ ಸೆಲ್ಯುಲೋಸನ್ನು ಜೀರ್ಣಿಸುತ್ತದೆ. ಈ ಎರಡು ಭಾಗಗಳಲ್ಲಿ ರೂಮಿನೋಕಾಕಸ್, ಫೈಬ್ರೋಬ್ಯಾಕ್ಟರ್ ಮುಂತಾದ ಬ್ಯಾಕ್ಟೀರಿಯಗಳು, ಆದಿಜೀವಿಗಳು, ಶಿಲೀಂಧ್ರಗಳು ಹಾಗೂ ಆರ್ಕಿಯ ಮುಂತಾದ ಸೂಕ್ಷ್ಮಜೀವಿಗಳಿರುತ್ತವೆ. ಇವು 'ಸೆಲ್ಯುಲೇಸ್' ಎಂಬ ಕಿಣ್ವವನ್ನು ಉತ್ಪಾದಿಸಿ, ಸೆಲ್ಯುಲೋಸನ್ನು ಹುಳಿಯಿಸುತ್ತವೆ (ಫರ್ಮೆಂಟೇಶನ್). ಸೆಲ್ಯುಲೋಸ್ ಲಯವಾಗಿ ಗ್ಲೂಕೋಸ್ ರೂಪುಗೊಳ್ಳುತ್ತದೆ. ಇದು ಸಸ್ಯಾಹಾರಿ ಜೀವಿಗಳ ಬದುಕಿಗೆ ಅಗತ್ಯವಾದ ಶಕ್ತಿಯನ್ನು ಕೊಡುತ್ತವೆ.

ಹುಳುಗರುಳು, ಇಂದಿಗೆ ಸುಮಾರು 80 ದಶಲಕ್ಷ ವರ್ಷಗಳ ಹಿಂದೆ ಹುಟ್ಟಿದ್ದ ಸಸ್ಯಾಹಾರಿ ಜೀವಿಗಳಲ್ಲಿ ಮೊದಲ ಬಾರಿಗೆ ರೂಪುಗೊಂಡಿತು ಎಂದು ಕಾಣುತ್ತದೆ. ಇಲಿ, ಅಳಿಲು, ಬೀವರ್, ಹ್ಯಾಮ್‌ಸ್ಟರ್, ಪಾರ್ಕ್ಯುಪೈನ್, ಗಿನಿಪಿಗ್ ಮುಂತಾದ ದಂಶಕಗಳಲ್ಲಿ (ರೋಡೆಂಟ್ಸ್) ಹಾಗೂ ಕಾಂಗರು, ಕೋಲ, ವಾಮ್‌ಬ್ಯಾಟ್, ಪೋಸುಮ್, ಒಪೋಸಮ್ ಮುಂತಾದ ಉದರಚೀಲಿಗಳಲ್ಲಿ (ಮಾರ್ಸುಪಿಯಲ್ಸ್) ಆದಿಸ್ವರೂಪದ ಹುಳುಗರುಳನ್ನು ನೋಡಬಹುದು. ಜೀವವಿಕಾಸದೊಡನೆ ಹುಳುಗರುಳು ಸಹ ವಿಕಾಸವಾಯಿತು. ಸಸ್ಯದ ಗಡಸು ಭಾಗಗಳನ್ನು ತಿನ್ನುವ ಸಸ್ಯಾಹಾರಿಗಳಲ್ಲಿ ಹುಳುಗರುಳು ಪ್ರಧಾನವಾಗಿ ಬೆಳೆಯಿತು. ಆದರೆ ಸಸ್ಯಾಹಾರವನ್ನು ಲವಲೇಶವೂ ತಿನ್ನದ ಮಾಂಸಾಹಾರಿಗಳಲ್ಲಿ ಹುಳುಗರುಳು ಎನ್ನುವ ಅಂಗವು ಹುಟ್ಟಲೇ ಇಲ್ಲ! ಹಾಗಾಗಿ ಹುಲಿ, ಸಿಂಹ, ಚಿರತೆ, ನರಿ, ತೋಳಗಳಲ್ಲಿ ಹುಳುಗರುಳು ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಹುಳುಗರುಳು ಎನ್ನುವ ಅಂಗದ 'ಅನುಕೂಲತೆ' ಹಾಗೂ 'ಅನಾನುಕೂಲತೆ'ಗಳನ್ನು ಸಸ್ಯಾಹಾರಿ ಮತ್ತು ಮಿಶ್ರಾಹಾರಿ ಜೀವಿಗಳು ಅನುಭವಿಸಬೇಕಾಗಿರುವುದು ಅನಿವಾರ್ಯವಾಗಿದೆ.

ನಮ್ಮ ಪೂರ್ವಜರು ಪ್ರಧಾನವಾಗಿ ಸಸ್ಯಾಹಾರಿಗಳಾಗಿದ್ದರು. ಉದಾಹರಣೆಗೆ 4 ದಶಲಕ್ಷ ವರ್ಷಗಳ ಹಿಂದೆ ಬದುಕಿದ್ದ 'ಆಸ್ಟ್ರಲೋಪಿಥಿಕಸ್' ಎಂಬ ನಮ್ಮ ಪೂರ್ವಜರಲ್ಲಿ ಮೂಗರುಳು ಹಾಗೂ ಹುಳುಗರುಳು ಪ್ರಧಾನವಾಗಿ ಬೆಳೆದಿದ್ದವು. 2 ದಶಲಕ್ಷ ವರ್ಷಗಳ ಹಿಂದೆ ಬದುಕಿದ್ದ ನಮ್ಮ ಪೂರ್ವಜರು ತಮ್ಮ ಆಹಾರ ಪದ್ಧತಿಯನ್ನು ಪರಿಷ್ಕರಿಸಿಕೊಂಡರು. ನಾರು, ಬೇರು, ತೊಗಟೆ, ಎಲೆ ಮುಂತಾದ ಗಡಸು ಸಸ್ಯಭಾಗಗಳನ್ನು ತಿನ್ನುವುದನ್ನು ನಿಲ್ಲಿಸಿದರು. ಬದಲಿಗೆ ಸಸ್ಯಗಳ ಹೂವು, ಹಣ್ಣು, ಕಾಯಿ, ಗಡ್ಡೆ ಹಾಗೂ ಬೀಜಗಳನ್ನು (ಅಕ್ಕಿ, ಗೋಧಿ, ರಾಗಿ ಇತ್ಯಾದಿ) ಮಾತ್ರ ಹೆಚ್ಚು ಹೆಚ್ಚು ತಿನ್ನಲಾರಂಭಿಸಿದರು. ಸಸ್ಯದ ಈ ಭಾಗಗಳು ಮೃದುವಾಗಿದ್ದು, ರುಚಿಯಾಗಿದ್ದು, ಸುಲಭವಾಗಿ ಜೀರ್ಣವಾಗುತ್ತವೆ. ಹಾಗಾಗಿ ಮೂಗರುಳು ಮತ್ತು ಹುಳುಗರುಳುಗಳಿಗೆ ಸೆಲ್ಯುಲೋಸನ್ನು ಹುಳಿಯಿಸುವ ಪ್ರಸಂಗಗಳು ಕಡಿಮೆಯಾದವು. ಜತೆಯಲ್ಲಿ ನಮ್ಮ ಪೂರ್ವಜರು ಮಾಂಸಾಹಾರವನ್ನೂ ರೂಢಿಸಿಕೊಂಡರು. ಹಾಗಾಗಿ ಮೂಗರುಳು ಮತ್ತು ಹುಳುಗರುಳು ಅಂಗಗಳು ಕೆಲಸವಿಲ್ಲದೇ ಸೋಮಾರಿಗಳಾದವು. ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಅವು ಸೊರಗಲಾರಂಭಿಸಿದವು. ಕೊನೆಗೆ ಹುಳುಗರುಳು ಸಂಪೂರ್ಣವಾಗಿ ನಶಿಸಿ ಹೋಗಬೇಕಾಗಿತ್ತು. ಆದರೆ ಹುಳುಗರುಳು, ತನ್ನ ಕೆಲಸವನ್ನು ಬದಲಿಸಿಕೊಂಡಿತು. ಮಾನವ ದೇಹದ ಮಿಲಿಟರಿ ಪಡೆಯಾದ ರೋಗರಕ್ಷಣಾ ವ್ಯೂಹದ (ಇಮ್ಯೂನ್ ಸಿಸ್ಟಮ್) ಒಂದು ಭಾಗವಾಯಿತು. ಬಿಳಿ ರಕ್ತಕಣಗಳಿಗೆ ತರಬೇತಿಯನ್ನು ನೀಡುವ ಕೇಂದ್ರವಾಯಿತು. ಜತೆಗೆ ಉಪಯುಕ್ತ ಬ್ಯಾಕ್ಟೀರಿಯಗಳ ದಾಸ್ತಾನನ್ನು ಸಂಗ್ರಹಿಸುವ ಉಗ್ರಾಣವಾಯಿತು. ನಾವು ಯದ್ವಾ ತದ್ವಾ ಪ್ರತಿಜೈವಿಕಗಳನ್ನು (ಆಂಟಿಬಯೋಟಿಕ್ಸ್) ತಿಂದು, ರೋಗಜನಕ ಬ್ಯಾಕ್ಟೀರಿಯಗಳನ್ನು ನಾಶಪಡಿಸುವುದರ ಜತೆಯಲ್ಲಿ, ಕರುಳಿನಲ್ಲಿರುವ ಉಪಯುಕ್ತ ಬ್ಯಾಕ್ಟೀರಿಯಗಳನ್ನೆಲ್ಲ ನಾಶಮಾಡುತ್ತೇವೆ. ಆಗ ಹುಳುಗರುಳು ತನ್ನಲ್ಲಿ ದಾಸ್ತಾನಿರುವ ಉಪಯುಕ್ತ ಬ್ಯಾಕ್ಟೀರಿಯಗಳನ್ನು ಪೂರೈಸಿ ದೇಹದ ಆರೋಗ್ಯವನ್ನು ಕಾಪಾಡುತ್ತದೆ.

'ಉಪಯೋಗಿಸು ಇಲ್ಲವೇ ಕಳೆದುಕೊ' ಎಂಬ ಭಾವದ ಚಾರ್ಲ್ಸ್ ಡಾರ್ವಿನ್‌ನ 'ಯೂಸ್ ಆ್ಯಂಡ್ ಡಿಸ್ಯೂಸ್' ಥಿಯರಿಯನ್ನು ನೆನಪಿಸಿಕೊಳ್ಳಬಹುದು. ಕೆಲಸವಿಲ್ಲದ ಅಂಗವು ನಶಿಸುವುದು ಪ್ರಕೃತಿಯ ನಿಯಮ. ಹಾಗಾಗಿ ತಮ್ಮ ಸಹಜ ಕೆಲಸ ಕಾರ್ಯಗಳನ್ನು ಕಳೆದುಕೊಂಡಿರುವ ಕಿವಿ, ಮೂರನೆಯ ದವಡೆ ಹಲ್ಲು, ಬಾಲಮೂಳೆ, ಮೂರನೆಯ ಕಣ್ಣರೆಪ್ಪೆ (ಪ್ಲಿಕಾ ಸೆಮಿಲ್ಯೂನಾರಿಸ್), ದೇಹದಲ್ಲಿರುವ ರೋಮಗಳು, ರೋಮವನ್ನು ನಿಮಿರಿಸುವ ನಿಮಿರುಸ್ನಾಯುಗಳು (ಅರೆಕ್ಟಾರ್ ಪೈಲಿ), ಪುರುಷರ ಸ್ತನಗಳು, ಟಾನ್ಸಿಲ್ ಮುಂತಾದ ಅಂಗಗಳೆಲ್ಲ ಭವಿಷ್ಯತ್ ದಿನಮಾನದಲ್ಲಿ ಇರಲಾರವು ಎನ್ನುತ್ತಾರೆ ವಿಜ್ಞಾನಿಗಳು. ಹಾಗಾಗಿ ಇವುಗಳಿಗೆ 'ನಶಿಸುತ್ತಿರುವ ಅಂಗಗಳು' ಅಥವಾ 'ವೆಸ್ಟಿಜಿಯಲ್ ಆರ್ಗನ್ಸ್' ಎಂದು ಕರೆದಿದ್ದೇವೆ.



ಹುಳುಗರುಳು, ಮಣ್ಣಿನ ಹುಳದ ಹಾಗೆ ಕಾಣುವ ಕಾರಣ, ಅದಕ್ಕೆ ಆ ಹೆಸರು ಬಂದಿದೆ. ಮನುಷ್ಯರಲ್ಲಿ ಇದು ಸರಾಸರಿ 9 ಸೆಂ.ಮೀ. ಉದ್ದವಿರುತ್ತದೆ. ಇದು ಸಣ್ಣ ಕರುಳು, ದೊಡ್ಡ ಕರುಳನ್ನು ಸೇರುವ ಸಂಧಿಸ್ಥಾನದಲ್ಲಿದೆ. ಇದು ನಮ್ಮ ಉದರದ ಕೆಳ ಬಲ ಮೂಲೆಯಲ್ಲಿರುತ್ತದೆ. ಪ್ರಾಚೀನ ಈಜಿಪ್ಷಿಯನ್, ಮೆಸೋಪೊಟೋಮಿಯನ್, ಚೀನಿ ಹಾಗೂ ಭಾರತೀಯ ವೈದ್ಯರಿಗೆ ಹುಳುಗರುಳಿನ ಅಸ್ತಿತ್ವದ ಬಗ್ಗೆ ಯಾವುದೇ ಪರಿಚಯವು ಇರಲಿಲ್ಲ. 1508ರಲ್ಲಿ, ಬಹುಮುಖ ಪ್ರತಿಭೆಯ ಲಿಯೋನಾರ್ಡೋ ಡ ವಿಂಚಿ ಹುಳುಗರುಳಿನ ಮೊದಲ ಚಿತ್ರವನ್ನು ಬರೆದ. 1522ರಲ್ಲಿ ಇಟಲಿಯ ವೈದ್ಯ ಜಾಕೋಪೋ ಬೆರಂಗಾರಿಯೊ ದ ಕಾರ್ಪಿ ತನ್ನ 'ಇಸಾಗೋಗ್ ಬ್ರೇವಿಸ್' ಕೃತಿಯಲ್ಲಿ ಹುಳುಗರುಳಿನ ವಿವರಣೆಯನ್ನು ಮೊದಲ ಬಾರಿಗೆ ನೀಡಿದ. ಅವನ ನಂತರ ಆಧುನಿಕ ಅಂಗರಚನಾ ವಿಜ್ಞಾನದ ಪಿತಾಮಹ ಎಂದು ಹೆಸರಾದ ಆಂಡ್ರಿಯಸ್ ವೆಸಾಲಿಯಸ್ ತನ್ನ ಉದ್ಗ್ರಂಥ 'ಡಿ ಹ್ಯೂಮನಿ ಕಾರ್ಪೊರಿಸ್'ನಲ್ಲಿ (1543) ಹುಳುಗರುಳಿನ ಸಮಗ್ರ ಮಾಹಿತಿಯನ್ನು ನೀಡಿದ. ಹುಳುಗರುಳಿನಲ್ಲಿ ಒಂದು ಸೂಕ್ಷ್ಮ ನಾಳವಿರುವುದನ್ನೂ ದಾಖಲಿಸಿದ.

ಹುಳುಗರುಳಿನ ಒಳಗಿರುವ ನಾಳವು ಯಾವಾಗಲೂ ಮುಕ್ತವಾಗಿರಬೇಕು. ಆದರೆ ಕೆಲವು ಸಲ ಮಲವೇ ಕಲ್ಲಿನಷ್ಟು ಗಟ್ಟಿಯಾಗಿ ಮಲಕಲ್ಲುಗಳಾಗಬಹುದು (ಫೀಕೋಲಿಥ್). ಇಂಥ ಕಲ್ಲುಗಳು ಹುಳುಗರುಳ ನಾಳರಂಧ್ರವನ್ನು ಅಡಚಬಹುದು ಇಲ್ಲವೇ ಹುಳುಗರುಳಿನಲ್ಲಿರುವ ದುಗ್ಧ ಊತಕವು ಅತಿವೃದ್ಧಿಯಾಗಿ (ಹೈಪರ್‌ಟ್ರೋಫಿ) ಅಥವಾ ಯಾವುದಾದರೂ ಗಂತಿಯು (ಟ್ಯೂಮರ್) ನಾಳವನ್ನು ಮುಚ್ಚಬಹುದು. ಇಂಥ ಸಂದರ್ಭಗಳಲ್ಲಿ ಬ್ಯಾಕ್ಟೀರಿಯ ಬೆಳವಣಿಗೆಯು ತೀವ್ರವಾಗುತ್ತದೆ. ಸೋಂಕಾಗುತ್ತದೆ. ಆಗ ಹುಳುಗರುಳಿನಲ್ಲಿ ಉರಿಯೂತದ ಎಲ್ಲ ಲಕ್ಷಣಗಳು ಕಂಡುಬರುತ್ತವೆ. ಹುಳುಗರುಳು ಊದಿಕೊಳ್ಳುತ್ತದೆ. ವಿಪರೀತ ನೋಯುತ್ತದೆ. ಜತೆಗೆ ಜ್ವರವು ಏರುತ್ತದೆ. ಹೊಟ್ಟೆಯು ಬಿಗಿಯಾಗಿ ಕರುಳಿನ ಎಲ್ಲ ಚಲನವಲನವು ಸ್ಥಗಿತವಾಗುತ್ತದೆ. ಕರುಳಿನಲ್ಲಿ ಅನಿಲಸಂಗ್ರಹವು ಅಧಿಕವಾಗಿ ಇಡೀ ಉದರವು ಊದಿಕೊಳ್ಳಬಹುದು. ಈ ಅಪಾಯಕಾರಿ ಸ್ಥಿತಿಯು ಹೀಗೇ ಮುಂದುವರಿದರೆ ಒಂದು ಘಟ್ಟದಲ್ಲಿ ಊದಿಕೊಂಡಿರುವ ಹುಳುಗರುಳು ಛಿದ್ರವಾಗಿ ಸೋಂಕು ಉದರದ ಒಳಗೆಲ್ಲ ವ್ಯಾಪಿಸುತ್ತದೆ. ಆಗ ವ್ಯಕ್ತಿಯು ಸಾಯುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇದುವೇ 'ಹುಳುಗರುಳ ಉರಿಯೂತ' ಅಥವಾ 'ಅಪೆಂಡಿಸೈಟಿಸ್'!

ಮಧ್ಯಯುಗದ ಯುರೋಪಿನ ವೈದ್ಯರಿಗೆ ಹುಳುಗರುಳ ಉರಿಯೂತದ ಸ್ವರೂಪವು ಅರ್ಥವಾಗಲಿಲ್ಲ. ಇದಕ್ಕೆ ಟಿಫ್ಲೈಟಿಸ್, ಪೆರಿಟಿಫ್ಲೈಟಿಸ್, ಐಲಿಯಾಕ್ ಪ್ಯಾಶನ್ ಇತ್ಯಾದಿ ಹೆಸರುಗಳನ್ನು ನೀಡಿದರು. ಕೊನೆಗೆ ಅಮೆರಿಕದ ರೆಜಿನಾಲ್ಡ್ ಹೇಬರ್ ಫಿಟ್ಜ್ ಎಂಬ ರೋಗ ಶಾಸ್ತ್ರಜ್ಞನು 1886ರಲ್ಲಿ 257 ರೋಗಪ್ರಕರಣಗಳನ್ನು ಅಧ್ಯಯನ ಮಾಡಿದ. ನಂತರ ಉದರದ ಬಲ ಕೆಳಮೂಲೆಯಲ್ಲಿ ಕಂಡುಬರುವ ಉರಿಯೂತ, ನೋವಿಗೆ ಹುಳುಗರುಳಿನ ಉರಿಯೂತವೇ ಪ್ರಧಾನ ಕಾರಣ ಎಂದ. 1735ರಲ್ಲಿ, ಜರ್ಮನ್ ಶಸ್ತ್ರವೈದ್ಯ ಲೋರೆಂಜ಼್ ಹೇಸ್ಟರ್, ಹುಳುಗರುಳು ಛಿದ್ರವಾಗಿ ಮರಣ ಹೊಂದಿದ ವ್ಯಕ್ತಿಯ ಶವವಿಚ್ಛೇದನವನ್ನು ಮಾಡಿ, ಹುಳುಗರುಳು ಛಿದ್ರವಾಗಿ, ಸುತ್ತಮುತ್ತಲೂ ಊದಿಕೊಂಡು ಕೀವುಗಟ್ಟಿ ಬಾವು ರೂಪುಗೊಂಡಿರುವುದನ್ನು ಹಾಗೂ ಅದುವೇ ಸಾವಿಗೆ ಕಾರಣವಾಗಿರುವುದನ್ನು ನಿಖರವಾಗಿ ವಿವರಿಸಿದ.

ಹುಳುಗರುಳ ಉರಿಯೂತಕ್ಕೆ ಯುರೋಪಿನ ವೈದ್ಯರು ರಕ್ತಮೋಕ್ಷಣವನ್ನು ಮಾಡುತ್ತಿದ್ದರು. ಜಿಗಣೆಗಳಿಂದ ರಕ್ತವನ್ನು ಹೀರಿಸುತ್ತಿದ್ದರು. ಎನೀಮ ನೀಡಿ ಬೇಧಿಯನ್ನು ಮಾಡಿಸುತ್ತಿದ್ದರು. ಕುದುರೆಯ ಮೇಲೆ ಕೂರಿಸಿ ಊರೆಲ್ಲ ಸುತ್ತಿಸುತ್ತಿದ್ದರು. ಒಂದು ನಾಯಿ ಮರಿಯ ಉದರವನ್ನು ಸೀಳಿ, ಅದನ್ನು ರೋಗಿಯ ಹೊಟ್ಟೆಯ ಮೇಲೆ ಇಡುತ್ತಿದ್ದರು. ಇಂಥ ಚಿಕಿತ್ಸೆಗೆ ಒಳಗಾಗುತ್ತಿದ್ದ ಬಹುಪಾಲು ಜನರು ಸಾಯುವುದು ಅನಿವಾರ್ಯವಾಗಿತ್ತು.

ಸೆಪ್ಟೆಂಬರ್, 1731. ಇಂಗ್ಲೆಂಡಿನ ವಿಲಿಯಂ ಕಾಕೆಸ್ಲೆ ಎಂಬ ಶಸ್ತ್ರವೈದ್ಯನು, ಚಿಮಣಿಯ ಹೊಗೆಯನ್ನು ಹೆರೆದು ತೆಗೆಯುವ ಅಬ್ರಹಾಮ್ ಪೈಕ್ ಎಂಬಾತನ ಸೋಂಕುಗ್ರಸ್ತ ಹುಳುಗರುಳನ್ನು ಛೇದಿಸಿ ತೆಗೆದದ್ದು, ಬಹುಶಃ ಜಗತ್ತಿನ ಮೊದಲ ಯಶಸ್ವಿ 'ಹುಳುಗರುಳ ಛೇದನ' (ಅಮೆರಿಕನ್ನರು ಅಪೆಂಡೆಕ್ಟಮಿ ಎಂದರೆ ಬ್ರಿಟಿಷರು ಅಪೆಂಡಿಸೆಕ್ಟಮಿ ಎನ್ನುತ್ತಾರೆ) ಶಸ್ತ್ರಚಿಕಿತ್ಸೆಯೆನ್ನಬಹುದು. ಎರಡನೆಯ ಶಸ್ತ್ರಚಿಕಿತ್ಸೆಯು ಡಿಸೆಂಬರ್ 6, 1735ರಂದು ನಡೆಯಿತು. ಲಂಡನ್ನಿನ ಸೇಂಟ್ ಜಾರ್ಜ್ ಆಸ್ಪತ್ರೆಯಲ್ಲಿ ಫ್ರೆಂಚ್ ಸರ್ಜನ್ ಕ್ಲಾಡಿಯಸ್ ಅಮ್ಯಾಂಡ್ ಮೊದಲ ಯಶಸ್ವಿ ಹುಳುಗರುಳ ಛೇದನವನ್ನು ಮಾಡಿದ. ಹ್ಯಾನ್ವಿಲ್ ಆಂಡರ್ಸನ್ ಎಂಬ 11 ವರ್ಷದ ಹುಡುಗನಿಗೆ ಇಂಗ್ವೈನಲ್ ಹರ್ನಿಯ ಮತ್ತು ಹುಳುಗರುಳ ಉರಿಯೂತ ಎರಡೂ ಸಮಸ್ಯೆಗಳು ಇದ್ದವು. ಈತ ಹರ್ನಿಯವನ್ನು ದುರಸ್ತಿಗೊಳಿಸುವುದರ ಜತೆಯಲ್ಲಿ ಹುಳುಗರುಳನ್ನು ಛೇದಿಸಿ, ಆ ಹುಡುಗನ ಜೀವವನ್ನು ಉಳಿಸಿದ. ಇದು ಅಧಿಕೃತವಾಗಿ ದಾಖಲಾಗಿದೆ. 1889. ನ್ಯೂಯಾರ್ಕ್ ನಗರ. ಚಾರ್ಲ್ಸ್ ಹೇಬರ್ ಮ್ಯಾಕ್ಬರ್ನಿ ಎಂಬ ಅಮೆರಿಕನ್ ಶಸ್ತ್ರವೈದ್ಯನು ಹುಳುಗರುಳ ಸೋಂಕಿನ ಸಮಗ್ರ ವಿವರಣೆಯನ್ನು ನೀಡಿದ. ಹುಳುಗರುಳ ಉರಿಯೂತ ನಿದಾನದಲ್ಲಿ ನೆರವಾಗುವ 'ಮ್ಯಾಕ್ಬರ್ನಿ ಪಾಯಿಂಟ್' ಎನ್ನುವ ವಿಧಾನವನ್ನು ಸೂಚಿಸಿದ. ಜತೆಗೆ ಉರಿಯೂತಕ್ಕೆ ಒಳಗಾದ ಹುಳುಗರುಳನ್ನು ಛೇದಿಸಿ ತೆಗೆಯುವುದೇ ಅತ್ಯುತ್ತಮ ಚಿಕಿತ್ಸೆ ಎಂದ.

ಇಂದು ಹುಳುಗರುಳ ಉರಿಯೂತವನ್ನು ನಿಗ್ರಹಿಸಲು, ಮೊದಲು ಪ್ರತಿಜೈವಿಕ ಔಷಧಗಳನ್ನು ನೀಡುವ ಪದ್ಧತಿಯಿದೆ. ಇದು ಅನೇಕ ಹುಳುಗರುಳ ಛೇದನವನ್ನು ತಪ್ಪಿಸಿದೆ. ಸಾಧ್ಯವಾದಲ್ಲಿ ಶಸ್ತ್ರಚಿಕಿತ್ಸೆಯನ್ನು ತಪ್ಪಿಸುವುದು ಒಳಿತು. ಹುಳುಗರುಳು ನಮ್ಮ ಆರೋಗ್ಯವನ್ನು ಕಾಪಾಡುವ ಅಂಗ. ಶಸ್ತ್ರಚಿಕಿತ್ಸೆಯು ಅನಿವಾರ್ಯವೆಂದಲ್ಲಿ, ಅದನ್ನು ಮಾಡಿಸಿ. ಅದು ಛಿದ್ರವಾಗಲು ಬಿಡಬೇಡಿ. ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆ ಹಾಗೂ ಉದರದರ್ಶಕ ಶಸ್ತ್ರಚಿಕಿತ್ಸೆಗಳು ಲಭ್ಯವಿವೆ. ನಮ್ಮ ಜೇಬಿನ ತೂಕಕ್ಕೆ ಅನುಗುಣವಾಗಿ ಯಾವುದಾದರೂ ಒಂದು ಶಸ್ತ್ರಚಿಕಿತ್ಸೆಯನ್ನು ಆಯ್ದುಕೊಳ್ಳಬಹುದು.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಪ್ರತಿಮ ಶ್ರೋತೃಮಿತ್ರ!

ಪಂಡಿತ್ ವೆಂಕಟೇಶ್ ಕುಮಾರ್ ಅವರಿಗೆ ಪ್ರಶಸ್ತಿ ನೀಡುವ ಮೂಲಕ 'ಆಳ್ವಾಸ್ ವಿರಾಸತ್' ಆ ಪುರಸ್ಕಾರದ ಮೌಲ್ಯವನ್ನು ದ್ವಿಗುಣಗೊಳಿಸಿದೆ ಎಂದರೆ ಅತಿಶಯೋಕ್ತಿಯಲ್ಲ. ಇದಕ್ಕೆ ಸಂಗೀತ ಪ್ರೇಮಿಗಳೆಲ್ಲರ ಒಕ್ಕೊರಲಿನ ಸಮ್ಮತಿ ಇದ್ದೇ ಇದೆ. ಪಂ. ವೆಂಕಟೇಶ್ ಕುಮಾರ್ ಅಂದರೆ 'ಭಕ್ತಿ-ಸ್ವರ' ಮಾಂತ್ರಿಕ, ಸರಳತೆಯ ಸಾಕಾರಮೂರ್ತಿ, ಸಜ್ಜನಿಕೆಯ ಉತ್ತುಂಗ. ಅವರು ಸಂಗೀತ ಪ್ರೇಮಿಗಳನ್ನು ಎಂದೂ ನಿರಾಶೆಗೊಳಿಸದ ಅಪ್ರತಿಮ ಶ್ರೋತೃಮಿತ್ರ. ಮೊನ್ನೆ ತಮಗೆ ದಕ್ಕಿದ ಈ ಪ್ರಶಸ್ತಿಯನ್ನು ಅವರು ತಮ್ಮ ಗುರು ಪಂಡಿತ್ ಪುಟ್ಟರಾಜ ಗವಾಯಿಗಳಿಗೆ ಸಮರ್ಪಿಸಿದ್ದು ಅವರ ಗುರುಭಕ್ತಿಯ ಸಂಕೇತ. ವೆಂಕಟೇಶ್ ಕುಮಾರ್ ಅವರ ಕಾರ್ಯಕ್ರಮ ಎಲ್ಲೇ ನಡೆಯಲಿ, ತಮ್ಮ ಗುರುಗಳ ಸ್ಮರಣೆಯಿಲ್ಲದೆ ಅದನ್ನು ಅವರು ಆರಂಭಿಸುವುದೇ ಇಲ್ಲ. ಇದಕ್ಕೆ ಮುಖ್ಯ ಕಾರಣ, ಒಂದೊಮ್ಮೆ ಈ ಗುರುಗಳು ಸಿಕ್ಕದೇ ಇದ್ದಿದ್ದರೆ, ಅವರು ಗುರಿಯಿಲ್ಲದ ಸಾಮಾನ್ಯನಂತೆ ಇರಬೇಕಾಗಿ ಬರುತ್ತಿತ್ತಂತೆ. ಕಡುಬಡತನದ ಹಿನ್ನೆಲೆಯವರಾದ ವೆಂಕಟೇಶ್‌ರಿಗೆ ತಮ್ಮ ಗುರುಕುಲದಲ್ಲಿ ಆಶ್ರಯ ನೀಡಿ ಸಂಗೀತಪಾಠ ಹೇಳಿಕೊಟ್ಟವರು ಪುಟ್ಟರಾಜ ಗವಾಯಿಗಳು. ಈ ಮಾತನ್ನು ವೆಂಕಟೇಶ್ ಕುಮಾರ್ ಅವರೇ ಹೇಳಿಕೊಂಡಿದ್ದಾರೆ.

ವೆಂಕಟೇಶ್ ಕುಮಾರ್ ಅವರ ಸಂಗೀತ ಕಛೇರಿಯಲ್ಲಿ ಕುಳಿತಷ್ಟೂ ಹೊತ್ತು ಸಮಯ ಸರಿದದ್ದೇ ಗೊತ್ತಾಗುವುದಿಲ್ಲ. ಆ ವೇಳೆ ಕೇಳುಗರು ತಮ್ಮ ಇರವನ್ನೇ ಮರೆತು ಅದಾವುದೋ ಲೋಕದಲ್ಲಿ ವಿಹರಿಸುತ್ತಿರುತ್ತಾರೆ. ಶಾಸ್ತ್ರೀಯ ಗಾಯನ, ಅಭಂಗ, ಭಕ್ತಿಗೀತೆ, ಭಜನೆ ಯಾವುದೇ ಇರಲಿ, ಅವನ್ನು ವಿಶಿಷ್ಟವಾಗಿ ಸಾದರಪಡಿಸುವ ಶಕ್ತಿ ವೆಂಕಟೇಶ್ ಕುಮಾರ್ ಅವರಲ್ಲಿ ಕೆನೆಗಟ್ಟಿದೆ. ಹೀಗಾಗಿ ಅವರ ಗಾನಸುಧೆ ಸವಿಯಲು ಎಷ್ಟೆಷ್ಟೋ ದೂರದಿಂದ ಸಂಗೀತಪ್ರಿಯರು ಬರುವುದುಂಟು. ಈ ಸ್ವರಮಾಂತ್ರಿಕನಿಗೆ ಭಗವಂತ ಉತ್ತಮ ಆರೋಗ್ಯ ನೀಡಲಿ, ತನ್ಮೂಲಕ ಅವರಿಂದ ಹೆಚ್ಚೆಚ್ಚು ಸಂಗೀತ ಸುಧೆಯನ್ನು ಸವಿಯುವಂತಾಗಲಿ ಎಂಬುದೇ ಸಹೃದಯಿಗಳ ಆಶಯ.

- ಶಂಕರನಾರಾಯಣ ಭಟ್, ಮಾಡಗೇರಿ

ಕೃಷ್ಣರ ಹೆಸರಿಡಿ

ಮೈಸೂರಿನಲ್ಲಿ ವರ್ತುಲ ರಸ್ತೆ ನಿರ್ಮಾಣವಾಗಿ ಸಾರ್ವಜನಿಕರ ಉಪಯೋಗಕ್ಕೆ ದಕ್ಕುವುದಕ್ಕೆ ಕಾರಣೀಭೂತರಾದವರು ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ. ಕೃಷ್ಣ ಅವರು. ಈ ರಸ್ತೆಗೆ ಅವರ ಹೆಸರನ್ನೇ ನಾಮಕರಣ ಮಾಡಲು ಮೈಸೂರಿನ ಮಹಾನಗರ ಪಾಲಿಕೆಯು 2011ರಲ್ಲೇ ನಿರ್ಣಯಿಸಿದ್ದರೂ, ಇದುವರೆಗೂ ಆ ಕ್ರಮದ ಅನುಷ್ಠಾನವಾಗದಿರುವುದು ವಿಪರ್ಯಾಸವೇ ಸರಿ. ದೂರದೃಷ್ಟಿ ಉಳ್ಳವರಾಗಿದ್ದ ಕೃಷ್ಣ ಅವರು ಮೈಸೂರಿನ ಅಭಿವೃದ್ಧಿಯ ಬಗ್ಗೆ ವಿಶೇಷ ಕಾಳಜಿಯನ್ನು ಹೊಂದಿದ್ದರು ಎಂಬುದಕ್ಕೆ, ಈ ವರ್ತುಲ ರಸ್ತೆ ನಿರ್ಮಾಣಕ್ಕೆ 2003ರಲ್ಲೇ ಅವರು ಚಾಲನೆ ನೀಡಿ, ಅಗತ್ಯ ಅನುದಾನದ ಜತೆಗೆ ಎಲ್ಲ ರೀತಿಯ ನೆರವು ನೀಡಿದ್ದೇ ಸಾಕ್ಷಿಯಾಗಿದೆ. ಸದರಿ ರಸ್ತೆಗೆ ಕೃಷ್ಣರ ಹೆಸರು ಇಡುವ ಕುರಿತಂತೆ ಸಂಬಂಧಪಟ್ಟವರು ಈಗಲಾದರೂ ಗಮನಹರಿಸಲಿ.

- ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು

ಚಿಂತನೆಗೆ ಹಚ್ಚಿತು

ಸುರೇಂದ್ರ ಪೈ ಅವರ '70 ಗಂಟೆ ಕೆಲಸ ಯಾರಿಗಾಗಿ...?' ಎಂಬ ಲೇಖನದಲ್ಲಿ (ವಿಶ್ವವಾಣಿ ಡಿ.14) ಉಲ್ಲೇಖಿಸಿರುವ ಎರಡು ಸಂಗತಿಗಳು ಬಹಳ ಗಂಭೀರವಾಗಿ ಆಲೋಚಿಸುವಂತೆ ಮಾಡಿದವು ಎನ್ನಬೇಕು. ಮೊದಲನೆಯದಾಗಿ, ನಾವು ಎಷ್ಟು ಗಂಟೆ ಕೆಲಸ ಮಾಡುತ್ತೇವೆ ಎಂಬುದಕ್ಕಿಂತಲೂ ನಿಗದಿತ ಕಾರ್ಯವನ್ನು ಎಷ್ಟು ಕ್ರಿಯಾಶೀಲತೆಯಿಂದ ಮಾಡುತ್ತೇವೆ ಎನ್ನುವುದು ಮುಖ್ಯ ಎಂಬ ಮಾತು ಚಿಂತನೆಗೆ ಹಚ್ಚಿತು. ಎರಡನೆಯದಾಗಿ, ಸದಾ ಕಾಲ ಬೇರೆ ದೇಶಗಳೊಂದಿಗೆ ಹೋಲಿಕೆ ಮಾಡಿಕೊಳ್ಳುವ ನಮ್ಮ ಮನಸ್ಥಿತಿ ಬದಲಾಗಬೇಕು ಎಂಬ ಲೇಖಕರ ಮಾತು ಇಷ್ಟವಾ ಯಿತು. ನಾವು ದೇಶದ ಪ್ರಸಕ್ತ ಸನ್ನಿವೇಶ ಹಾಗೂ ಸಂಪನ್ಮೂಲ ಗಳಿಗೆ ತಕ್ಕಂತೆ ಕಾರ್ಯನೀತಿಗಳನ್ನು ರೂಪಿಸಿಕೊಳ್ಳುವುದು ಸೂಕ್ತ. ಮನುಷ್ಯನಲ್ಲಿ ಕ್ರಿಯಾಶೀಲತೆ ಮತ್ತು ನಾವೀನ್ಯ ಇದ್ದಿದ್ದರೆ ಬಹುಶಃ ಲಕ್ಷಾಂತರ ಮಂದಿ ನಿರುದ್ಯೋಗಿಗಳಾಗುತ್ತಿರಲಿಲ್ಲ ಎಂಬುದಂತೂ ಸತ್ಯ.

- ಶ್ವೇತಾ, ಬಾಗಲಕೋಟೆ

ಇಷ್ಟವಾದ ಲೇಖನ

ಮಿರ್ಲೆ ಚಂದ್ರಶೇಖರ ಅವರು ಬರೆದ 'ಬಲ್ಲಿರೇನಯ್ಯಾ ಮಂಡ್ಯದ ಮಹತ್ವವ..?' ಎಂಬ ಲೇಖನ ಇಷ್ಟವಾಯಿತು. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸುವುದಕ್ಕೆ ಸಕ್ಕರೆ ನಗರಿಯು ಸಜ್ಜಾಗುತ್ತಿರುವ ಈ ಸಂದರ್ಭದಲ್ಲಿ, ಮಂಡ್ಯಜಿಲ್ಲೆಯ ವಿವಿಧ ಆಯಾಮಗಳನ್ನು ಅವರು ಕಟ್ಟಿಕೊಟ್ಟಿದ್ದು ಸಕಾಲಿಕವಾಗಿತ್ತು ಹಾಗೂ ಅದರಲ್ಲಿ ಅಡಕವಾಗಿದ್ದ ವೈವಿಧ್ಯಮಯ ಮಾಹಿತಿಗಳು ಉಪಯುಕ್ತವೆನಿಸಿವೆ. ಇಂಥ ಲೇಖನಗಳು ಹೆಚ್ಚೆಚ್ಚು ಮೂಡಿಬರಲಿ.

- ರಾಮಚಂದ್ರ, ದೇವಾಡಿಗ, ಬೆಂಗಳೂರು

ಪೆರ್ಲ ಕೃಷ್ಣಭಟ್ಟರ ಜನ್ಮಶತಮಾನೋತ್ಸವ ಸಂಭ್ರಮ

ಯಕ್ಷದಕ್ಷ

ರವೀ ಸಜಂಗದ್ದೆ

vveditoped@gmail.com

ಯಕ್ಷಗಾನದ ಅರ್ಥಗಾರಿಕೆ, ಅಧ್ಯಯನ-ಅಧ್ಯಾಪನ, ನಾಟಕ, ಸಾರ್ವಜನಿಕ ಸೇವೆ, ಬರಹ, ಪ್ರಕಾಶನ ಹೀಗೆ ಕಲೆ-ಸಾಹಿತ್ಯ-ಸಂಸ್ಕೃತಿ ವಿಭಾಗಗಳಲ್ಲಿ ತಮ್ಮದೇ ಆದ ಕೊಡುಗೆ ನೀಡಿದ, ಛಾಪು ಒತ್ತಿದ ಗಡಿನಾಡ ಕನ್ನಡಿಗರ ಪೈಕಿ ಮೊದಲ ಸಾಲಿನಲ್ಲಿ ಕಾಣುವುದು ದಿ. ವಿದ್ವಾನ್ ಕೃಷ್ಣಭಟ್ಟರ ಹೆಸರು. ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದಿಂದ ಅಡ್ಯನಡ್ಕ ಮಾರ್ಗವಾಗಿ ಕೇರಳಕ್ಕೆ ಸಾಗುವಾಗ ಸಿಗುವ ಮೊದಲ ಊರು ಪೆರ್ಲ. ಪುತ್ತೂರಿನಿಂದ ಪಾಣಾಜೆ ಮಾರ್ಗದಲ್ಲಿ 'ಸ್ವರ್ಗ' ದಾಟಿಯೂ ಪೆರ್ಲ ತಲುಪಬಹುದು. ಕೃಷ್ಣಭಟ್ಟರ ಹುಟ್ಟೂರು ಇದೇ ಪೆರ್ಲ ಸಮೀಪದ 'ಪಡ್ರೆ' ಗ್ರಾಮ. ಶ್ರೀಯುತರ ಸವಿನೆನಪಿಗಾಗಿ ಪೆರ್ಲ ಪರಿಸರದಲ್ಲಿ ಡಿಸೆಂಬರ್ 21ರಂದು 'ಪೆರ್ಲ ನೂರರ ನೆನಪು' ಹೆಸರಿನ 'ಪೆರ್ಲ ಕೃಷ್ಣ ಭಟ್ಟರ ಜನ್ಮಶತಮಾನೋತ್ಸವ' ಎಂಬ ಅಪರೂಪದ ಸಮಾರಂಭ ನಡೆಯಲಿದೆ. ಕೃಷ್ಣಭಟ್ಟರ ಜೀವಮಾನದ ಕೊಡುಗೆ ಸ್ಮರಿಸುವ ಅನನ್ಯ ಕಾರ್ಯಕ್ರಮವಿದು. ತನ್ನಿಮಿತ್ತ, ಪೆರ್ಲರ ಸಾಧನೆ- ಕೊಡುಗೆಗಳ ಕುರಿತಾದ ಅಕ್ಷರ ನಮನವಿದು.

ಕೃಷ್ಣಭಟ್ಟರು ಜನಿಸಿದ್ದು 1923ರ ಮೇ 16ರಂದು. ತಂದೆ ಪಡ್ರೆ ಗುರು ಶ್ರೀಪತಿ ಶಾಸ್ತ್ರಿ, ತಾಯಿ ನೇತ್ರಾವತಿ. ಸಂಸ್ಕೃತದಲ್ಲಿ 'ವಿದ್ವಾನ್', ಹಿಂದಿಯಲ್ಲಿ 'ರಾಷ್ಟ್ರಭಾಷಾ ಪ್ರವೀಣ', ಆಂಗ್ಲಭಾಷೆಯಲ್ಲಿ 'ಇಂಟರ್ ಮೀಡಿಯೇಟ್' ಶಿಕ್ಷಣ ಪಡೆದ ಹೆಗ್ಗಳಿಕೆ ಕೃಷ್ಣಭಟ್ಟರದು. ಮಂಗಳೂರು ಕೆನರಾ ಪ್ರೌಢಶಾಲೆಯಲ್ಲಿ ಒಂದು ವರ್ಷ, ನಂತರ ಪೆರ್ಲದ ಶ್ರೀ ಸತ್ಯನಾರಾಯಣ ಪ್ರೌಢಶಾಲೆಯಲ್ಲಿ 31 ವರ್ಷಗಳ ಕಾಲ ಹಿಂದಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಕೃಷ್ಣಭಟ್ಟರು, ಅಧ್ಯಾಪನದ ಜತೆಜತೆಗೆ ಕಾಸರಗೋಡು ಏಕೀಕರಣಕ್ಕಾಗಿನ ಚಳವಳಿಗಳಲ್ಲೂ ಸಕ್ರಿಯವಾಗಿ ಭಾಗಿಯಾದರು. ಏಕೀಕರಣದ ಮಹತ್ವ ಮತ್ತು ಅವಶ್ಯಕತೆಗಳ ಬಗ್ಗೆ ಜನರಿಗೆ ತಿಳಿಸಲು, ಕನ್ನಡದ ಬಗ್ಗೆ ಕಳಕಳಿ ಮೂಡಿಸಲು ಸಾಂಸ್ಕೃತಿಕ ಮತ್ತು ಸಾಹಿತ್ಯಕ ಚಟುವಟಿಕೆಗಳ ಮೊರೆಹೋದ ಭಟ್ಟರು, ಮಹಾಜನ್ ಆಯೋಗದ ವರದಿಯ ಜಾರಿಗಾಗಿ ಸಾಕಷ್ಟು ಯತ್ನಿಸಿದರು, ಹೋರಾಟ ನಡೆಸಿದರು. ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂಬ ಆಗ್ರಹಕ್ಕೆ ನಿರಂತರವಾಗಿ ದನಿಗೂಡಿಸಿದರು.



ಯಕ್ಷಗಾನದಲ್ಲಿದ್ದ ಆಸಕ್ತಿಯಿಂದಾಗಿ, 1960ರ ದಶಕದಿಂದ ಕುಬಣೂರು ಬಾಲಕೃಷ್ಣ ರಾಯರ ತಾಳಮದ್ದಲೆ ತಂಡದಲ್ಲಿ ಅರ್ಥಧಾರಿಯಾಗಿ ಗುರುತಿಸಿಕೊಂಡ ಕೃಷ್ಣಭಟ್ಟರು ತಮ್ಮ ಅಪ್ರತಿಮ ವಾಕ್ಚಾತುರ್ಯದಿಂದ ಕೃಷ್ಣ, ರಾಮ, ಅತಿಕಾಯ, ವಿಭೀಷಣ, ಬೃಹನ್ನಳೆ ಪಾತ್ರಗಳಿಗೆ ಜೀವತುಂಬುತ್ತಿದ್ದರು. ಕೌರವ, ಕರ್ಣ, ವಿದುರ, ಪಂಚವಟಿಯ ರಾಮ, ಪರಶುರಾಮ ಮೊದಲಾದ ಪಾತ್ರಗಳಿಗೆ ಭಟ್ಟರು ನೀಡುತ್ತಿದ್ದ ಅರ್ಥಗಾರಿಕೆಯು ತಾಳಮದ್ದಳೆಯ ರಂಗಕ್ಕೆ ವಿಶಿಷ್ಟ ಮೆರುಗು ನೀಡುತ್ತಿತ್ತು. ಇವರ ಅರ್ಥಗಾರಿಕೆಯನ್ನು ಸವಿಯಲು ಬಹುದೊಡ್ಡ ದಂಡು ಅವರು ಹೋದಲ್ಲೆಲ್ಲ ಸೇರುತ್ತಿತ್ತು.

ಪ್ರಬುದ್ಧ ಲೇಖಕರೂ ಆಗಿದ್ದ ಕೃಷ್ಣಭಟ್ಟರು ಕಿರಾತಾರ್ಜುನೀಯ, ಭಗವಾನ್ ಪರಶುರಾಮ, ಜಾತ್ರೆ ಮತ್ತು ಇತರ ಕಥೆಗಳು (ಅನುವಾದಗಳು), ಪಾದುಕಾ ಪ್ರದಾನ (ನಾಟಕ), ತಾಳಮದ್ದಳೆ (ಪ್ರಹಸನ), ಭಗವಾನ್ ಬುದ್ಧ (ಜೀವನಚರಿತ್ರೆ), ಮಹಾಭಾರತ ಉಪಾಖ್ಯಾನಗಳು (ಕಥಾ ಸಂಕಲನ), ಮಧೂರು ಶ್ರೀ ಸಿದ್ಧಿವಿನಾಯಕ ಸುಪ್ರಭಾತಂ (ಸಂಪಾದಿತ ಸಂಸ್ಕೃತ ಭಜನೆಗಳು), ಶರವು ಮಹಾಗಣಪತಿ ಸುಪ್ರಭಾತ (ಕನ್ನಡ) ಮುಂತಾದ ಕೃತಿಗಳ ರಚನೆ/ಸಂಪಾದನೆಯಿಂದಲೂ ಹೆಸರಾದರು. ಮಾತೃಭಾಷೆಯಾದ 'ಕರ್ಹಾಡ'ದಲ್ಲಿ 'ರುಪಯ್ಯಾಂ ಹರ್ಡಿ' ಎಂಬ ನಾಟಕವನ್ನೂ, ಹಲವು ಸೋಬಾನೆ ಹಾಡುಗಳನ್ನೂ ಭಟ್ಟರು ರಚಿಸಿದ್ದಾರೆ. 'ಬದುಕಿ ಫಲವೇನು?'- ಇದು ಪೆರ್ಲರ ವೈವಿಧ್ಯಮಯ ಬದುಕಿನ ಒಳನೋಟ ತೆರೆದಿಡುವ ಆತ್ಮಕಥೆ. ದಿವಂಗತ ಹಿರಿಯ ಬಲಿಪ ನಾರಾಯಣ ಭಾಗವತರ ಕುರಿತಾದ ಅನುಪಮ ಮಾಹಿತಿಗಳಿರುವ 'ಕಲಾತಪಸ್ವಿ' ಕೃತಿಯು ಅವರು ಸಂಪಾದಿಸಿದ ಗ್ರಂಥಗಳ ಪೈಕಿ ವಿಶಿಷ್ಟವಾದದ್ದು. ಹೀಗೆ ಒಟ್ಟು 50ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುವ ಹೆಗ್ಗಳಿಕೆ ಕೃಷ್ಣಭಟ್ಟರದ್ದು. ಹಿಂದಿ ಅಧ್ಯಾಪನ ವೃತ್ತಿಯಿಂದ 1978ರಲ್ಲಿ ನಿವೃತ್ತರಾದ ಬಳಿಕ ಕೃಷ್ಣಭಟ್ಟರು ಪೆರ್ಲದಲ್ಲಿಯೇ 'ಗುರುಕುಲ ಮುದ್ರಣಾಲಯ'ವನ್ನು ಸ್ಥಾಪಿಸಿದರು.

ಪೆರ್ಲದಂಥ ಗ್ರಾಮೀಣ ಪ್ರದೇಶಕ್ಕೆ ವಿವಿಧ ಕ್ಷೇತ್ರಗಳ ಮೂಲಕ ಕೃಷ್ಣಭಟ್ಟರು ನೀಡಿದ ಕೊಡುಗೆ ಅನನ್ಯವಾದುದು. ಕಾಸರಗೋಡು ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಥಮ ಅಧ್ಯಕ್ಷರಾಗಿದ್ದ ಅವರು ಅನೇಕ ವಿಷಯಗಳ ಕುರಿತು ಆಳವಾದ ಜ್ಞಾನವನ್ನು ಸಂಪಾದಿಸಿದ್ದರು. ಪೆರ್ಲ ಪರಿಸರದ ಸಾಹಿತ್ಯಕ-ಸಾಂಸ್ಕೃತಿಕ ಚಟುವಟಿಕೆಗಳು ಕೃಷ್ಣಭಟ್ಟರ ನಿರ್ದೇಶನದಿಂದಾಗಿ ಸಶಕ್ತವಾಗಿ ರೂಪುಗೊಂಡಿವೆ, ಸಮೃದ್ಧವಾಗಿವೆ. ಇವರ ಸಮರ್ಥ ವ್ಯವಸ್ಥಾಪಕತ್ವದಲ್ಲಿ ಯಕ್ಷಗಾನ ಮತ್ತು ಹಳ್ಳಿ ಭಜನೆ ಕೇಂದ್ರಗಳು, ಮಂದಿರಗಳು, ಶಿಕ್ಷಣ ಮಾಧ್ಯಮಗಳು ರೂಪುಗೊಂಡು ಬೆಳೆದಿವೆ. ಕೃಷ್ಣಭಟ್ಟರಿಂದಾಗಿ ಬ್ರಿಟಿಷರ ಆಡಳಿತದಲ್ಲೂ ಕನ್ನಡವನ್ನು ಉಳಿಸಿಕೊಂಡಿದ್ದ ಪೆರ್ಲ ಪ್ರದೇಶವು ಭಾಷಾ ಸಂಸ್ಕೃತಿಯ ಜತೆಗೆ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಮೌಲ್ಯಗಳನ್ನೂ ಕಾಪಾಡಿಕೊಂಡು ಬಂದಿತು ಎಂಬುದು ಹೆಮ್ಮೆಯ ಸಂಗತಿ.

ಯಕ್ಷಗಾನದಲ್ಲಿ ಖ್ಯಾತನಾಮರಾದ ಪ್ರಭಾಕರ ಜೋಷಿಯವರು, ''ಬಡತನದ ಮಧ್ಯೆ ಹುಟ್ಟಿ ಬೆಳೆದು, ವ್ಯಕ್ತಿ ಮತ್ತು ಗುಂಪಿನ ಬೆಂಬಲವಿಲ್ಲದೆ ಸ್ವಂತ ಯೋಗ್ಯತೆ, ಕೌಟುಂಬಿಕ ಸಂಸ್ಕಾರ, ಛಲ ಮತ್ತು ಶಿಸ್ತಿನ ಬಲದಿಂದ ಬಲು ಎತ್ತರಕ್ಕೆ ಬೆಳೆದವರು ವಿದ್ವಾನ್ ಕೃಷ್ಣಭಟ್ಟರು. ವಾರಾನ್ನದ ಜೀವಿಕೆಯಿಂದ ಓರ್ವ ಶ್ರೇಷ್ಠ ಅಧ್ಯಾಪಕ, ಕಲಾವಿದ, ಸಾಹಿತಿ, ಸಾಂಸ್ಕೃತಿಕ ಕ್ರಿಯಾಶೀಲನಾಗಿ, ಕೊನೆಗೆ ಸ್ವ-ಉದ್ಯೋಗದಲ್ಲೂ ಯಶಸ್ಸು ಗಳಿಸಿದ ಕೃಷ್ಣಭಟ್ಟರ ಸಾಧನೆ ಅಸಾಮಾನ್ಯ, ಪ್ರೇರಕ ಮತ್ತು ಅಧ್ಯಯನಯೋಗ್ಯ ವಸ್ತು'' ಎಂದು ಪ್ರಶಂಸಿಸಿದ್ದಾರೆ.

ಉರುಟುಮುಖ, ಕನ್ನಡಕದೊಳಗೆ ಹೊಳೆಯುವ ಕಣ್ಣುಗಳು, ವಿಶಾಲ ಹಣೆ, ಸ್ವಚ್ಛ-ಶುಭ್ರ ಬಿಳಿಪಂಚೆ, ಇಸ್ತ್ರಿಹಾಕಿದ ಅಂಗಿ/ಜುಬ್ಬಾ, ಹೆಗಲ ಮೇಲೊಂದು ಜರಿಯ ಶಾಲು, ವೀಳ್ಯದ ಪೆಟ್ಟಿಗೆಯ ಸಾಂಗತ್ಯ, ಗೋಧಿ ಬಣ್ಣ ಸಾಧಾರಣ ಮೈಕಟ್ಟು- ಇವಿಷ್ಟು ಕೃಷ್ಣಭಟ್ಟರ ಬಾಹ್ಯಚಹರೆಯ ವೈಶಿಷ್ಟ್ಯ. ಹಿತ-ಮಿತ ಭಾಷಿಯಾಗಿದ್ದ ಕೃಷ್ಣಭಟ್ಟರು ಬದುಕಿನ ಕೊನೆಯವರೆಗೂ ಜೀವನೋತ್ಸಾಹದಿಂದಲೇ ಇದ್ದು, 2013ರ ಸೆಪ್ಟೆಂಬರ್ 2ರಂದು ವಿಧಿವಶರಾದರು. ಕೃಷ್ಣಭಟ್ಟರ ಜೀವನ ಸಾಧನೆ ನೋಡಿದಾಗ 'ಇಂದಿನಿತು ಈ ಮಹಾನ್ ಚೇತನ ಬದುಕಿರಬೇಕಿತ್ತು' ಎಂದೆನಿಸುತ್ತದೆ.

(ಲೇಖಕರು ಸಾಫ್ಟ್‌ವೇರ್ ಉದ್ಯೋಗಿ)

ಪ್ರಶಸ್ತಿಗಳ ಮಹಾಪೂರ

ಕೃಷ್ಣಭಟ್ಟರಿಗೆ ಒಲಿದುಬಂದ ಪ್ರಶಸ್ತಿ-ಬಿರುದುಗಳು ಅನೇಕ. ಔದ್ಯೋಗಿಕ ಜೀವನದ ಸಾರ್ಥಕತೆಯನ್ನು ಬಿಂಬಿಸುವ ಕೇರಳ ಸರಕಾರದ 'ಶ್ರೇಷ್ಠ ಅಧ್ಯಾಪಕ ಪ್ರಶಸ್ತಿ', ಕನ್ನಡದ ಕುರಿತಾದ ಹೋರಾಟ ಮತ್ತು ಸೇವೆಗಾಗಿ ನೀಡಲಾದ 'ಕರ್ನಾಟಕ ಏಕೀಕರಣ ಪ್ರಶಸ್ತಿ', 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ', ಯಕ್ಷಗಾನ ಕ್ಷೇತ್ರದಲ್ಲಿನ ಸೇವೆ-ಸಾಧನೆಗಾಗಿ ಸಂದ ಪ್ರತಿಷ್ಠಿತ 'ಪಾರ್ತಿಸುಬ್ಬ ಪ್ರಶಸ್ತಿ', 'ಪೊಳಲಿ ಶಾಸ್ತ್ರಿ ಪ್ರಶಸ್ತಿ', 'ದೇರಾಜೆ ಪ್ರಶಸ್ತಿ', 'ನಾರಾಯಣ ಕಿಲ್ಲೆ ಪ್ರಶಸ್ತಿ' ಹೀಗೆ ಹತ್ತಾರು ಪುರಸ್ಕಾರಗಳು ಕೃಷ್ಣಭಟ್ಟರ ಮುಡಿಗೇರಿವೆ. ಮಾತ್ರವಲ್ಲದೆ, ಶೃಂಗೇರಿ ಶಾರದಾ ಪೀಠ, ಉಡುಪಿಯ ಪೇಜಾವರ ಮಠ, ನೀರ್ಚಾಲಿನ ಸಂಸ್ಕೃತ ಕಾಲೇಜು, ಎಡನೀರು ಸಂಸ್ಥಾನ, ಪೆರ್ಲ ಸತ್ಯನಾರಾಯಣ ವಿದ್ಯಾಸಂಸ್ಥೆ ಸೇರಿದಂತೆ ಕರಾವಳಿ ಭಾಗದ ನೂರಾರು ದೇಗುಲಗಳು, ಸಂಘ-ಸಂಸ್ಥೆಗಳು, ಭಜನಾ ಮಂದಿರಗಳಿಂದ ಶ್ರೀಯುತರಿಗೆ ಮಾನ-ಸಮ್ಮಾನಗಳು ಸಂದಿವೆ.

ಸ್ಮರಣೆಗೊಂದು ಕಾರ್ಯಕ್ರಮ

ಪೆರ್ಲ ಕೃಷ್ಣಭಟ್ಟ ಸಾಂಸ್ಕೃತಿಕ ಪ್ರತಿಷ್ಠಾನವು ಕೃಷ್ಣಭಟ್ಟರ ಜನ್ಮಶತಮಾನೋತ್ಸವ ಪ್ರಯುಕ್ತ 'ಪೆರ್ಲ ನೂರರ ನೆನಪು' ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಯಕ್ಷಗಾನ ತಾಳಮದ್ದಳೆ, ಸಭಾ ಕಾರ್ಯಕ್ರಮ, ಸಂಸ್ಮರಣೆ ಮತ್ತು ಪೆರ್ಲ ಪ್ರಶಸ್ತಿ ಪ್ರದಾನ ಇವೆಲ್ಲವೂ ಡಿಸೆಂಬರ್ 21ರಂದು ಪೆರ್ಲದಲ್ಲಿ ನಡೆಯಲಿವೆ. ಸಮಾಜಕ್ಕೆ ಅಪಾರ ಕೊಡುಗೆ ನೀಡಿದ ಕೃಷ್ಣಭಟ್ಟರನ್ನು ಸ್ಮರಿಸುವ, ಒಂದಷ್ಟು ಸವಿನೆನಪುಗಳನ್ನು ಮೆಲುಕು ಹಾಕುವ ಈ ಅಪೂರ್ವ ಸಾಹಿತ್ಯಕ-ಸಾಂಸ್ಕೃತಿಕ-ಯಕ್ಷಗಾನ ಕಾರ್ಯಕ್ರಮದಲ್ಲಿ ಪ್ರೀತಿ ಮತ್ತು ಅಭಿಮಾನದಿಂದ ಭಾಗವಹಿಸೋಣ, ಬನ್ನಿ.

ಭಟ್ಟರ್ ಸ್ಕಾಚ್

- **ಘಂಟಿ ರಾಮಾಚಾರ್ಯ, ಮೈಸೂರು**
ಭಟ್ರೇ, ಮನೆ ಪಕ್ಕ ಕಡುಲೋಭಿಯೊಬ್ಬ ವಕ್ಕರಿಸಿದ್ದಾನೆ. ಒಂದು ವೇಳೆ ನೆರೆಹೊರೆ ಮನೆಗೆ ಬೆಂಕಿ ಬಿದ್ದರೆ ಅವನಿಂದ ಏನು ನಿರೀಕ್ಷಿಸಬಹುದು?
– **ಫೈರ್ ಬ್ರಿಗೇಡ್‌ಗೆ ಒಂದೇ ಒಂದು ಮಿಸ್ಡ್ ಕಾಲ್!**

- **ಹರಿ ಓಂ ಶಾಸ್ತ್ರೀ, ಶಂಕರಪುರ**
ಭಟ್ರೇ, ಕ್ರಿಕೆಟಿನಲ್ಲಿ ಗೆದ್ದಾಗ ಕುಣಿದು ಕುಪ್ಪಳಿಸುವ ನಮ್ಮವರು, ಎಳೆಹುಡುಗ ಚೆಸ್ ವಿಶ್ವಪ್ರಶಸ್ತಿ ಗೆದ್ದರೆ ಏನೂ ಪ್ರತಿಕ್ರಿಯೆ ಕೊಡೊಲ್ಲ ಯಾಕೆ ?
– **ಅದು ನಿಂತು ಓಡುವ ಆಟವಲ್ಲ, ಕೂತು ಆಡುವ ಆಟ ಎಂಬ ಧೋರಣೆ ಇರಬಹುದು!**

- **ತಗಡೂರು ಸುಬ್ಬಣ್ಣ, ನಂಜನಗೂಡು**
ಭಟ್ರೇ, ಜೈಲಿಗೆ ಹೋಗುವಾಗ ಅವರಿಬ್ಬರದು ಒಂದೇ ದಾರಿ. ಅದೇ ಅಲ್ಲಿಂದ ಹೊರಗೆ ಬಂದಾಗ?
– **ಕವಲು ದಾರಿ!**

- **ಆಕಾಶ ರಾವ್, (ಇಮೇಲ್ ಮೂಲಕ)**
ಭಟ್ರೇ, ಈ ದೇಶದಲ್ಲಿ ಪದೇ ಪದೆ ಕುಸಿತ ಕಾಣುವ ಎರಡು ಸಂಗತಿಗಳು ಯಾವುವು?
– **ಒಂದನೆಯದು, ರುಪಾಯಿ ಮತ್ತು ಎರಡನೆಯದು, ಬಂಗಾಳ ವಾಯುಭಾರ!**

- **ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)**
ಭಟ್ರೇ, ಎಸ್.ಎಂ.ಕೃಷ್ಣ ಸಂಪುಟದಲ್ಲಿದ್ದ 'ದಂಡ ಪಿಂಡ'ಗಳ ವೈಶಿಷ್ಟ್ಯವೇನು?
– **ಆ ಪೈಕಿ ಕೆಲವು ಈಗಲೂ ಇವೆ!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಬ್ರಹ್ಮಾಂಡ ಗುರೂಜಿಯ ಸುಳಿವೇ ಇಲ್ವಲ್ಲ?
– **ಅವರು ಸುಳಿದರೆ ಸುಂಟರಗಾಳಿ!**

- **ರೂಪಶ್ರೀ ಕಳ್ಳಿಮಠ, ಬೆಳಗಾವಿ**
ಭಟ್ರೇ, ನಲವತ್ತಕ್ಕೇ ತಲೆಗೂದಲು ಉದುರುತ್ತಿದೆಯಲ್ಲ?
– **ಅರವತ್ತಾದರೂ ತಲೆಗೂದಲು ಉದುರದ ಆರ್.ಜಿ.ಹಳ್ಳಿ ನಾಗರಾಜನಿಗೆ ನಿನ್ನ ಪ್ರಶ್ನೆಯನ್ನು ಫಾರ್ವರ್ಡ್ ಮಾಡಲಾಗಿದೆ!**

- **ಎಸ್.ರಮೇಶ್ ಬರ್ಕ್‌ಲಿ, ಕಿರಗಂದೂರು ಮಂಡ್ಯ**
ಭಟ್ರೇ ನಿಜ ಹೇಳಿ, ನನ್ನ ಪ್ರಶ್ನೆಗೆ ಉತ್ತರ ನೀಡುವಾಗ ಎಂದಾದರೂ ಗೊಂದಲಕ್ಕೊಳಗಾಗಿದ್ದೀರಾ?
– **ಹೂಂ.. ಆಗಿದ್ದೇನೆ. ನಿನ್ನದು ಮನುಷ್ಯರ ಹೆಸರೋ, ಸಿಗರೇಟಿನ ಹೆಸರೋ ಎಂಬುದು ಗೊತ್ತಾಗದೇ ಚಡಪಡಿಸಿದ್ದೇನೆ!**

- **ಸುರೇಶ ಕೆ.ಶೆಟ್ಟಿ, ಉಡುಪಿ**
ಭಟ್ರೇ, 'ಭಟ್ಟರ್ ಸ್ಕಾಚ್' ಓದಿದರೆ ಪೋಲಿ ಆಗ್ತಾರೆ ಅಂತಾರಲ್ಲ?
– **ಸದ್ಯ ಪೋಲಿಗಳೇ 'ಭಟ್ಟರ್ ಸ್ಕಾಚ್' ಓದುತ್ತಾರೆ ಅಂತ ಹೇಳಲಿಲ್ಲವಲ್ಲ?!**

- **ಮಹಾಂತೇಶ ಹಿರೇಮಠ, ಗದಗ**
ಭಟ್ರೇ, ತವರಿಗೆ ಹೋದ ಪತ್ನಿಗೆ 'ಬೇಗ ಬಾ' ಎಂದು ಹೇಳಲಾ?
– **ನಿನಗೆ ಹೆಚ್ಚು ಕಾಲ ಸಂತಸವನ್ನು ವಿಸ್ತರಿಸುವ ಮನಸ್ಸಿಲ್ಲದಿದ್ದರೆ ಹಾಗೆ ಹೇಳಬಹುದು!**

ರಕ್ಷಣೆಯ ಕಾನೂನೇ ಶೋಷಣೆಯ ಅಸ್ತ್ರ

ಲೋಕಮತ

ಲೋಕೇಶ್ ಕಾಯರ್ಗ
kaayarga@gmail.com

ಅವರು ಮೈಸೂರಿನ ಚಿರಪರಿಚಿತ ಉದ್ಯಮಿ. ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸುಸಂಸ್ಕೃತ ಕುಟುಂಬ. ಪ್ರತಿಷ್ಠಿತ ಕಾರು ಕಂಪನಿಯೊಂದರಲ್ಲಿ ಮ್ಯಾನೇಜರ್ ಆಗಿದ್ದ ಒಬ್ಬನೇ ಮಗನ ವಿವಾಹ ನೆರವೇರಿದಾಗ ಮೈಸೂರಿನ ಬಹುಪಾಲು ಗಣ್ಯರು ಭಾಗವಹಿಸಿದ್ದರು. ಕುಟುಂಬ ಸದಸ್ಯರೆಲ್ಲರೂ ಸೇರಿ ಅವರನ್ನು ಬರಮಾಡಿಕೊಂಡು ಸಂಭ್ರಮಿಸಿದ್ದರು. ಆದರೆ ಈ ಸಂಭ್ರಮ, ಸಂತಸ ಹೆಚ್ಚು ದಿನ ಉಳಿಯಲಿಲ್ಲ. ಒಂದು ವರ್ಷದೊಳಗೆ ಯುವ ದಂಪತಿ ನಡುವೆ ಮನಸ್ತಾಪ ಆರಂಭವಾಗಿತ್ತು. ಕುಟುಂಬದಲ್ಲಿ ಪಾಲು ಪಡೆದು ಪ್ರತ್ಯೇಕ ಬ್ಯುಸಿನೆಸ್ ಆರಂಭಿಸೋಣ ಎಂದು ಪತ್ನಿ ಒತ್ತಡ ಹೇರಲಾರಂಭಿಸಿದ್ದಳು. ''ಅಪ್ಪ- ಅಮ್ಮನಿಗೆ ನಾನೊಬ್ಬನೇ ಮಗ. ಪಾಲು ಪಡೆಯುವ ಅವಶ್ಯಕತೆ ಏನು'' ಎಂದು ಆತ ಪತ್ನಿಯ ಪ್ರಸ್ತಾಪಕ್ಕೆ ಸೊಪ್ಪು ಹಾಕಲಿಲ್ಲ. ಒತ್ತಡ ಇನ್ನಷ್ಟು ಹೆಚ್ಚಿದಾಗ ಮಹಾರಾಷ್ಟ್ರದ ನಗರವೊಂದರಲ್ಲಿ ಕೆಲಸ ಮಾಡುತ್ತಿದ್ದ ಆತ ಕೆಲಸ ತೊರೆದು ಮೈಸೂರಿಗೆ ಮರಳಿದ್ದ.

ಆದರೆ ಪತ್ನಿ ಹೊಸ ವರಸೆ ಆರಂಭಿಸಿದ್ದಳು. ತಂದೆಯ ಬಳಿ ಪಾಲು ಕೇಳದಿದ್ದರೆ ಕೌಟುಂಬಿಕ ದೌರ್ಜನ್ಯ ತಡೆ ಕಾಯಿದೆಯಡಿ ಎಲ್ಲರ ಮೇಲೆ ಕೇಸು ದಾಖಲಿಸುವುದಾಗಿ ಪದೇ ಪದೇ ಬೆದರಿಕೆ ಹಾಕಲಾರಂಭಿಸಿದಳು. ಅಪ್ಪನಿಗೆ ನಾಲ್ವರು ತಮ್ಮಂದಿರು, ಐವರು ತಂಗಿಯಂದಿರು. ಅವರ ಕುಟುಂಬವೂ ಸೇರಿದರೆ ಅಪ್ಪ, ಅಮ್ಮ, ಚಿಕ್ಕಪ್ಪ, ಚಿಕ್ಕಮ್ಮಂದಿರು, ಅತ್ತೆ, ಮಾವಂದಿರು, ಅವರ ಮಕ್ಕಳು, ಸೊಸೆಯಂದಿರು ಸೇರಿ 20ಕ್ಕೂ ಹೆಚ್ಚು ಸದಸ್ಯರ ತುಂಬು ಕುಟುಂಬ. ಈತ ಯೋಚಿಸಲಾರಂಭಿಸಿದ. ಪತ್ನಿ ಕೇಸು ಹಾಕಿದರೆ ಎದುರಿಸಬಹುದು. ಆದರೆ ಒಂದು ದಿನದ ಮಟ್ಟಿಗಾದರೂ ಕುಟುಂಬ ಸದಸ್ಯರೆಲ್ಲರೂ ಜೈಲಿಗೆ ಹೋಗಬೇಕಾಗುತ್ತದಲ್ಲ ಎಂದು ಪರಿತಪಿಸಿದ. ಕೊನೆಗೊಂದು ನಿರ್ಧಾರಕ್ಕೆ ಬಂದ, ''ನಾನು ಬದುಕಿದರೆ ತಾನೇ ಇವಳು ಕೇಸು ಹಾಕುವುದು. ನಾನೇ ಸತ್ತರೇ..?'' ಎಂದು ಯೋಚಿಸಿದ. ಮರುಕ್ಷಣವೇ ನೇಣಿಗೆ ಕೊರಳೊಡ್ಡಿ ಕೈಯಾರೆ ಸಾವು ತಂದುಕೊಂಡ.

ಆದರೆ ಆತ ಎಣಿಸಿದಂತೆ ಪ್ರಕರಣ ಇಲ್ಲಿಗೇ ಕೊನೆಗೊಳ್ಳಲಿಲ್ಲ. ಯಾವುದು ಆಗಬಾರದೆಂದು ಸಾವಿಗೆ ಶರಣಾಗಿದ್ದನೋ, ಅದು ನಡೆದೇ ಹೋಯಿತು. ಪೋಸ್ಟ್‌ಮಾರ್ಟಂ ವೇಳೆ ಖುದ್ದು ಹಾಜರಾಗಿ ತಮಗೆ ಬೇಕಾದ ರೀತಿಯಲ್ಲಿ ಪೊಲೀಸರ ಬಳಿ ಹೇಳಿಕೆ ಕೊಟ್ಟ ಪತ್ನಿ ಕಡೆಯವರು ಸ್ಮಶಾನದತ್ತ ತಲೆ ಹಾಕಲಿಲ್ಲ. ಅಂತ್ಯಕ್ರಿಯೆಗೂ ಬರಲಿಲ್ಲ. ತಂದೆ- ತಾಯಿ ಪುತ್ರ ಶೋಕದಲ್ಲಿರುವಾಗಲೇ ಆಸ್ತಿಯಲ್ಲಿ ಪಾಲು ಕೇಳಿ ಸೊಸೆಯ ರಿಜಿಸ್ಟರ್ಡ್ ಪೋಸ್ಟ್ ಬಂತು. ಇದು ಇಷ್ಟಕ್ಕೇ ನಿಲ್ಲಲಿಲ್ಲ. ಅತ್ತೆ- ಮಾವ ವರದಕ್ಷಿಣೆಗೆ ಪೀಡಿಸಿದ ಕಾರಣದಿಂದಲೇ ಗಂಡನ ಸಾವಿಗೆ ಶರಣಾದ ಎಂದು ಎಂದು ಸೊಸೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಳು. ಅಂತ್ಯಕ್ರಿಯೆ ಮುಗಿಸಿದ ಬೆನ್ನಿಗೇ ಉದ್ಯಮಿ ಜೈಲು ಸೇರುವಂತಾಯಿತು. ಸೊಸೆಯ ಕಿರುಕುಳವನ್ನು ಕೋರ್ಟ್ ಮುಂದಿಟ್ಟು ಜಾಮೀನು ಪಡೆದು ಹೊರಬರುವಷ್ಟರಲ್ಲಿ 4 ದಿನಗಳು ಕಳೆದಿದ್ದವು. ಪತ್ನಿಗೆ ಬಂಧನಕ್ಕೆ ಮೊದಲೇ ನಿರೀಕ್ಷಣಾ ಜಾಮೀನು ಲಭಿಸಿದ್ದರಿಂದ ಜೈಲು ಸೇರುವುದು ತಪ್ಪಿತು. ಇದಾಗಿ ಎರಡು ವರ್ಷಗಳ ಬಳಿಕ ಕುಟುಂಬದ ಉಳಿದ ಸದಸ್ಯರನ್ನೂ ಪ್ರತಿವಾದಿಗಳನ್ನಾಗಿಸಿ ಮತ್ತೊಂದು ವರದಕ್ಷಿಣೆ ಕಿರುಕುಳದ ಕೇಸು ಬಿತ್ತು. ಅಂದು ಜೈಲಿಗೆ ಹೋದ ಕುಟುಂಬ, ಮಗನನ್ನು ನೆನಪಿಸಿಕೊಂಡು ಇಂದಿಗೂ ಮರುಗುತ್ತಿದೆ. ಎರಡು ವರದಕ್ಷಿಣೆ ಪ್ರಕರಣಗಳಲ್ಲಿ ಒಂದು ಕೇಸು ಸುಳ್ಳು ಎಂದು ಸಾಬೀತಾಗಿ ಇತ್ಯರ್ಥಗೊಂಡಿದೆ. ಇನ್ನೊಂದು ಕೇಸಿನ ವಿಚಾರಣೆ ಈಗಲೂ ಮುಂದುವರಿದಿದೆ. ಈ ನಡುವೆ ಆಸ್ತಿಯಲ್ಲಿ ಪಾಲು ಪಡೆದ ಸೊಸೆ ತನ್ನ ಹಳೆಯ ಪ್ರಿಯತಮನನ್ನು ಮದುವೆಯಾಗಿ 'ಸುಖೀ' ಜೀವನ ನಡೆಸುತ್ತಿದ್ದಾಳೆ. ಒಬ್ಬನೇ ಮಗನನ್ನು ಕಳೆದುಕೊಂಡ ತಂದೆ-ತಾಯಿ ಈ ದು:ಖದಿಂದ ಇನ್ನೂ ಹೊರ ಬಂದಿಲ್ಲ.

ನೂರೆಂಟು ಕಥೆಗಳು

ಇದು ಒಂದು ಉದಾಹರಣೆ ಮಾತ್ರ. ಕರುಳು ಹಿಂಡುವ ಇಂತಹ ನೂರಾರು ಕಥೆಗಳಿವೆ. ಸಂಪ್ರದಾಯ, ಸಂಸ್ಕೃತಿಯನ್ನು ಇನ್ನು ಉಳಿಸಿಕೊಂಡಿರುವ ಮೈಸೂರಿನಂತಹ ನಗರದಲ್ಲಿ ಒಂದೂವರೆ ದಶಕದ ಹಿಂದೆಯೇ ವರದಕ್ಷಿಣೆ ಕಾನೂನಿನ 498 (ಎ) ವಿರುದ್ಧ ಹೋರಾಟ ಆರಂಭವಾಗಿತ್ತು. ನವೆಂಬರ್ 19ರ ಅಂತಾರಾಷ್ಟ್ರೀಯ ಪುರುಷರ ದಿನದಂದು, ನೊಂದವರು, ಸಂತ್ರಸ್ತರು ಸೇರಿ ''ನಮ್ಮನ್ನು ಕಾಪಾಡಿ, ಕಾನೂನಿನ ಭಯೋತ್ಪಾದನೆಯನ್ನು ನಿಲ್ಲಿಸಿ. ಸುಳ್ಳು ಕೇಸು ದಾಖಲಿಸಿ ಕುಟುಂಬ ಸದಸ್ಯರನ್ನು ಜೈಲಿಗೆ ತಳ್ಳುವ ಪತ್ನಿಯರಿಂದ ರಕ್ಷಣೆ ಕೊಡಿ, ಗಂಡಂದಿರ ಆತ್ಮಹತ್ಯೆಯನ್ನು ತಡೆಗಟ್ಟಿ'' ಎಂದು ಘೋಷಣೆ ಕೂಗಿ, ಮೆರವಣಿಗೆ ನಡೆಸುವ ಪರಿಪಾಠ ಆರಂಭವಾಗಿತ್ತು. ಬೆಂಗಳೂರು ಸೇರಿದಂತೆ ದೇಶದ ಹಲವು ನಗರಗಳಲ್ಲಿ ನವೆಂಬರ್ 19ರಂದು ಭಾರತೀಯ ದಂಡಸಂಹಿತೆಯ 498 (ಎ) ಮತ್ತು 406 ರ ವಿರುದ್ಧ ಪ್ರತಿಭಟನೆ, ಘೋಷಣೆಗಳು ಕೇಳಿ ಬರುತ್ತವೆ. ಇವರಲ್ಲಿ ಹೆಚ್ಚಿನವರು 25ರಿಂದ 45 ವರ್ಷಗಳ ವಯೋಮಾನದವರು. ಬಹುತೇಕರು ಕೈ ತುಂಬಾ ಸಂಬಳ ಪಡೆಯುವ ವೃತ್ತಿಪರ ಉದ್ಯೋಗದಲ್ಲಿರುವವರು. ಈ ಕಾನೂನಿನ ದುರ್ಬಳಕೆ ತಪ್ಪಿಸಿ ಎನ್ನುವುದು ಇವರೆಲ್ಲರ ಒಕ್ಕೊರಲ ಬೇಡಿಕೆ.

ನೂರು ಅಪರಾಧಿಗಳು ತಪ್ಪಿಸಿಕೊಂಡರೂ, ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದೆಂದು ನಮ್ಮ ಕಾನೂನಿನ ಮೂಲ ಆಶಯ. ಆದರೆ 2005ರಲ್ಲಿ ಕೌಟುಂಬಿಕ ದೌರ್ಜನ್ಯ ತಡೆ ಕಾಯಿದೆ ತಿದ್ದುಪಡಿಯಾಗಿ ಬಂದ ಬಳಿಕ, ಜೈಲು ಸೇರಿದವರಲ್ಲಿ ಅಪರಾಧಿಗಳು ಮಾತ್ರವಲ್ಲ ನಿರಪರಾಧಿಗಳು ಸೇರಿದ್ದರು. ನಮ್ಮ ಜೈಲುಗಳಲ್ಲಿರುವ ವಿಚಾರಣಾಧೀನ ಕೈದಿಗಳ ಪೈಕಿ ಬಹುಪಾಲು ಮಂದಿ ಇದೇ ಕಾನೂನಿನಡಿ ಕಾರಾಗೃಹ ಸೇರುತ್ತಿದ್ದಾರೆ. ಅಂದರೆ ಇದರ ಉಪಯೋಗ ಮತ್ತು ದುರುಪಯೋಗ ಯಾವ ಪ್ರಮಾಣದಲ್ಲಿ ಆಗುತ್ತಿದೆ ಎಂದು ಯಾರೂ ಊಹಿಸಬಹುದು.

ಕಾಯಿದೆಯ ಲೋಪಕ್ಕೆ ಮತ್ತೊಂದು ಬಲಿ

ಬೆಂಗಳೂರಿನ ಸಾಫ್ಟ್‌ವೇರ್ ಇಂಜಿನಿಯರ್ ಅತುಲ್ ಸುಭಾಷ್ ಆತ್ಮಹತ್ಯೆ ಈ ಕಾನೂನಿನ ದುರುಪಯೋಗವನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿದೆ. 24 ಪುಟಗಳ ಆತ್ಮಹತ್ಯೆ ಪತ್ರದಲ್ಲಿ ಅತುಲ್ ಬರೆದಿರುವ ವಿವರಗಳು ಈ ಕಾನೂನು ಮಾತ್ರವಲ್ಲ ದೇಶದ ಭ್ರಷ್ಟ ವ್ಯವಸ್ಥೆಯ ಮೇಲೂ ಬೆಳಕು ಚೆಲ್ಲಿದೆ. ಜನರ ಪಾಲಿಗೆ ನ್ಯಾಯದ ಕೊನೆಯ ಆಶಾಕಿರಣ ಎಂದರೆ ನ್ಯಾಯಾಂಗ. ಆದರೆ ಈ ಕಾನೂನನ್ನು ಬಳಸಿ ನ್ಯಾಯಾಂಗದ ಅಧಿಕಾರಿಗಳೂ ಹೇಗೆ ಶೋಷಣೆ, ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾರೆ ಎಂದು ಅತುಲ್ ತನ್ನ ಮರಣ ಪತ್ರದಲ್ಲಿ ವಿವರಿಸಿದ್ದಾನೆ. ಮೈಸೂರಿನ ಉದ್ಯಮಿಯ ಪ್ರಕರಣದಂತೆ ಇಲ್ಲೂ ಪತ್ನಿ ಅತ್ತೆ- ಮಾವ ಮತ್ತು ಗಂಡನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಅದರ ಇತ್ಯರ್ಥಕ್ಕೆ ಮೂರು ಕೋಟಿ ರೂಪಾಯಿ ಬೇಡಿಕೆ ಮುಂದಿಟ್ಟಿದ್ದಳು. ವರದಕ್ಷಿಣೆ ಪ್ರಕರಣವಲ್ಲದೆ ಕೊಲೆ ಯತ್ನ, ಲೈಂಗಿಕ ದುರ್ನಡತೆ, ಹಣಕ್ಕಾಗಿ ಕಿರುಕುಳ, ಗೃಹಹಿಂಸೆ ಸೇರಿ 9 ಪ್ರಕರಣಗಳಲ್ಲಿ ಪತಿಯನ್ನು ಸಿಲುಕಿಸಿದ್ದಳು. ಅತುಲ್ ದುರದೃಷ್ಟಕ್ಕೆ ಮಧ್ಯಸ್ಥಿಕೆ ನ್ಯಾಯಾಲಯ ಕೂಡಾ ಸುಪ್ರೀಂ ಕೋರ್ಟ್ ನಿಯಮಾವಳಿಯನ್ವಯ ಕಾರ್ಯ ನಿರ್ವಹಿಸಿರಲಿಲ್ಲ. ಆತ ಮರಣಪತ್ರದಲ್ಲಿ ಉಲ್ಲೇಖಿಸಿರುವಂತೆ ನ್ಯಾಯಾಧೀಶರೇ ಜಾಮೀನಿಗಾಗಿ ಲಂಚ ಕೇಳಿದ್ದರು.

''ಮಗ ಕನಿಷ್ಠ 40 ಬಾರಿ ಬೆಂಗಳೂರಿನಿಂದ ಉತ್ತರಪ್ರದೇಶದ ಜುನಾಪುರಕ್ಕೆ ಹೋಗಿದ್ದ. ಆಕೆ ಒಂದರ ಮೇಲೊಂದರಂತೆ ಪ್ರಕರಣ ದಾಖಲಿಸುತ್ತಿದ್ದಳು. ಹತಾಶನಾಗಿದ್ದ ಆತ ನಮಗೆ ಬೇಸರವಾಗಬಾರದೆಂದು ಯಾವುದನ್ನೂ ತೋರ್ಪಡಿಸುತ್ತಿರಲಿಲ್ಲ. ಆದರೆ ಸಾವಿಗೆ ಮೊದಲು ತಮ್ಮನಿಗೆ ಇ-ಮೇಲ್ ಸಂದೇಶ ಕಳುಹಿಸಿದ್ದ. ಪತ್ನಿ ಮತ್ತು ಆಕೆಯ ಕುಟುಂಬದ ಬಗ್ಗೆ ಆತ ಮಾಡಿದ ಆರೋಪ ಶೇಕಡ 100ರಷ್ಟು ನಿಜ. ಆತ ಎದುರಿಸಿದ ಸಂಕಷ್ಟಗಳನ್ನು ಬಣ್ಣಿಸುವುದು ಅಸಾಧ್ಯ'' ಎಂದು ಕುಟುಂಬಸ್ಥರು ಹೇಳುತ್ತಾರೆ. ಇದು ಅತುಲ್ ಮಾತ್ರವಲ್ಲ, ಈ ಪ್ರಕರಣಗಳಲ್ಲಿ ಸಿಲುಕಿದ ಬಹುತೇಕರ ಅಭಿಪ್ರಾಯವೂ ಹೌದು.

ಸುಪ್ರೀಂಕೋರ್ಟ್ ಕಳವಳ

ಕೇವಲ ಸಂತ್ರಸ್ತರು ಮಾತ್ರವಲ್ಲ, ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳು, ವರದಕ್ಷಿಣೆ ಮತ್ತು ಕೌಟುಂಬಿಕ ದೌರ್ಜನ್ಯ ತಡೆ ಕಾಯಿದೆಯ ದುರ್ಬಳಕೆಯ ಬಗ್ಗೆ ಹಲವು ಸಲ ಪ್ರಸ್ತಾಪಿಸಿವೆ. ಈ ಕಾಯಿದೆಯನ್ನು ಉದ್ದೇಶಿಸಿಯೇ ಸುಪ್ರೀಂ ಕೋರ್ಟ್ ನ್ಯಾಯಪೀಠ 'ಕಾನೂನಿನ ಭಯೋತ್ಪಾದನೆ' ಎಂಬ ಪದ ಬಳಸಿದೆ. ''ಸಮಾಜದಿಂದ ವರದಕ್ಷಿಣೆ ಪದ್ಧತಿಯನ್ನು ತೊಡೆದುಹಾಕುವುದು ಕಾನೂನಿನ ಮುಖ್ಯ ಗುರಿ. ಇದನ್ನು ಸಂತ್ರಸ್ತರು ಗುರಾಣಿಯಾಗಿ ಬಳಕೆ ಮಾಡಬೇಕೇ ಹೊರತು ಅಸ್ತ್ರವಾಗಿ ಅಲ್ಲ, ಕೆಲವು ಮಹಿಳೆಯರು ಗಂಡನ ದೌರ್ಜನ್ಯದ ಹೆಸರಿನಲ್ಲಿ ಕಾನೂನಿನ ದುರ್ಬಳಕೆ ಮಾಡಿದರೆ ಕೊನೆಗೊಂದು ದಿನ ಅವರ ಸಂಕಷ್ಟ ತೋಳ ಬಂತು ತೋಳದ ಕತೆಯಾಗಬಹುದು'' ನ್ಯಾಯಾಲಯ ಎಚ್ಚರಿಕೆ ನೀಡಿದೆ.

ವರದಕ್ಷಿಣೆ ವಿರೋಧಿ ಕಾನೂನಿನಡಿ ಕೇಸು ದಾಖಲಿಸುವ ಹೆಚ್ಚಿನ ಮಹಿಳೆಯರು, ಗಂಡನ ವಿರುದ್ಧ ಮಾತ್ರ ಕೇಸು ದಾಖಲಿಸುತ್ತಿಲ್ಲ, ಅತ್ತೆ, ಮಾವ, ನಾದಿನಿಯಿಂದ ಹಿಡಿದು ಕುಟುಂಬದ ಹಿರಿಯರು, ಕಿರಿಯರೆನ್ನದೆ ಎಲ್ಲರ ಮೇಲೆ ಕೇಸು ದಾಖಲಿಸುತ್ತಿದ್ದಾರೆ. ಜಾಮೀನುರಹಿತ ಪ್ರಕರಣವಾದ ಕಾರಣ ಇವರೆಲ್ಲರೂ ಒಂದೆರಡು ದಿನಗಳಾದರೂ ಜೈಲು ಸೇರುವುದು ಅನಿವಾರ್ಯವಾಗುತ್ತದೆ. ಸುಳ್ಳು ಪ್ರಕರಣಗಳಲ್ಲಿ ಸಿಲುಕಿ ಜೈಲು ಸೇರುವುದಕ್ಕಿಂತ ದೊಡ್ಡ ಅವಮಾನವಿಲ್ಲ. ಇಂತಹ ಕೆಲವು ಪ್ರಕರಣಗಳಲ್ಲಿ ಜೈಲು ಸೇರಿದ ಆರೋಪಿಯ ಅವಿವಾಹಿತ ಸಹೋದರಿಯರು ಆತ್ಮಹತ್ಯೆ ಮಾಡಿಕೊಂಡ ನಿದರ್ಶನಗಳಿವೆ. ದಿಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಶಿವನಾರಾಯಣ್ ಧಿಂಗ್ರಾ 10 ವರ್ಷಗಳ ಹಿಂದೆಯೇ ಈ ಕಾನೂನಿನ ತಿದ್ದುಪಡಿಯಾಗಬೇಕೆಂದು ಸೂಚಿಸಿದ್ದರು.

ಎಸ್‌ಐಎಫ್‌ಎಫ್ ಸಂಘಟನೆಯ ಪ್ರಕಾರ ಪ್ರತಿ ವರ್ಷ 30 ಸಾವಿರ ಪುರುಷರು ಪತ್ನಿಯರಿಂದ ಕಿರುಕುಳಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಬಹುತೇಕ ಪುರುಷರು ಆರ್ಥಿಕ ಕಾರಣಗಳಿಗಿಂತಲೂ ಸಾಮಾಜಿಕ ಕಾರಣಗಳಿಗಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂದು ಸಂಘಟನೆಯ ಅಭಿಮತ. ಈ ಮಾತನ್ನು ನಾವು ಪೂರ್ಣವಾಗಿ ನಂಬಲು ಸಾಧ್ಯವಿಲ್ಲವಾದರೂ ಆಧುನಿಕ ಸಮಾಜದಲ್ಲಿ ಮಹಿಳೆಯರಂತೆ ಪುರುಷರೂ ಶೋಷಣೆಗೆ ಗುರಿಯಾಗುತ್ತಿದ್ದಾರೆ ಎನ್ನುವುದು ಸತ್ಯ.

ಪರಿಹಾರ ಧನದ ಆಸೆ

ಆರ್ಥಿಕ ಸ್ವಾವಲಂಬನೆ ಹೊಂದಿದ ಕುಟುಂಬದಲ್ಲಿ ಪತಿ-ಪತ್ನಿಯರ ಸಣ್ಣಪುಟ್ಟ ಮನಸ್ತಾಪಗಳೂ ಪೊಲೀಸರಿಗೆ ದೂರು ನೀಡುವ ಮಟ್ಟಕ್ಕೆ ತಲುಪುತ್ತಿವೆ. ಕೆಲವು ವಿದ್ಯಾವಂತ ಮಹಿಳೆಯರು ವಿಚ್ಛೇದನ ಪಡೆಯುವ ಕಾರಣಕ್ಕಾಗಿಯೇ ಈ ಕಾಯಿದೆಯಡಿ ದೂರು ದಾಖಲಿಸುತ್ತಿದ್ದಾರೆ. ಶ್ರೀಮಂತ ಪತಿಯಿಂದ ಭಾರಿ ಪ್ರಮಾಣದ ಪರಿಹಾರ ಪಡೆಯುವ ಆಸೆಯಿಂದ ದೂರು ದಾಖಲಿಸುವವರಿಗೂ ಕೊರತೆ ಇಲ್ಲ ಎನ್ನುತ್ತಾರೆ ಎಸ್ ಐಎಫ್ ಎಫ್ ಸಂಘಟನೆಯ ಸದಸ್ಯ, ಬೆಂಗಳೂರಿನ ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿ ಸಂದೀಪ್.

'ಈ ಕಾನೂನು ಜಾರಿಗೆ ಬಂದಿರುವುದು ಮಹಿಳೆಯರ ರಕ್ಷಣೆಗಾಗಿ. ಆದರೆ ಮಹಿಳೆಯರೇ ಅತಿ ಹೆಚ್ಚಿನ ಪ್ರಮಾಣದಲ್ಲಿ ತೊಂದರೆಗೊಳಗಾಗುತ್ತಿದ್ದಾರೆ. ವರದಕ್ಷಿಣೆ ಮತ್ತು ಕಿರುಕುಳ ನೀಡಿದ ಆರೋಪದಲ್ಲಿ ಕುಟುಂಬದ ಎಲ್ಲ ಸದಸ್ಯರನ್ನೂ ಬಂಧಿಸಲಾಗುತ್ತಿದೆ. ಆಗ ವಯಸ್ಸಾದ ತಾಯಿ, ಅಕ್ಕ-ತಂಗಿಯರು ಕೂಡ ಬಂಧನಕ್ಕೊಳಗಾದ ನಿದರ್ಶನಗಳಿವೆ' ಎನ್ನುತ್ತಾರೆ ಸಂಗ್ಯಾಬಾಳ್ಯಾ ಸಂಘಟನೆಯ ನವೀನ್. ಈ ಮಾತನ್ನು ಅನುಮೋದಿಸುವ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ವರದಕ್ಷಿಣೆ ಪ್ರಕರಣದಲ್ಲಿ ಒಂದೇ ಕುಟುಂಬದ ಹತ್ತಕ್ಕೂ ಹೆಚ್ಚು ಸದಸ್ಯರು ವಿಚಾರಣಾಧೀನ ಕೈದಿಗಳಾಗಿ ಕಾರಾಗೃಹ ಸೇರಿರುವುದನ್ನು ಉಲ್ಲೇಖಿಸುತ್ತಾರೆ.

ಶತಮಾನದಿಂದಲೂ ಮಹಿಳೆಯರು ನಿರಂತರ ಶೋಷಣೆ ಮತ್ತು ದೌರ್ಜನ್ಯಕ್ಕೊಳಗಾಗುತ್ತ ಬಂದಿರುವುದು ಸತ್ಯ. ಈ ಹಿನ್ನೆಲೆಯಲ್ಲಿ ಭಾರತ ಮಾತ್ರವಲ್ಲ ಅಮೆರಿಕದಂತಹ ಮುಂದುವರಿದ ರಾಷ್ಟ್ರಗಳಲ್ಲೂ ಮಹಿಳೆಯರ ರಕ್ಷಣೆಗಾಗಿ ಕಠಿಣ ಕಾನೂನುಗಳಿವೆ. ಆದರೆ ಸಿಐಎಫ್ ಎಫ್ ಸದಸ್ಯರೊಬ್ಬರು ಹೇಳುವಂತೆ ಈ ಕಾನೂನು ರಚನೆಯಾಗಿರುವುದು ''ಸೀತೆಯರಿಗಾಗಿ ಹೊರತು ಶೂರ್ಪನಖಿಯರಿಗೆ ಅಲ್ಲ, ಅಪರಾಧಕ್ಕೆ ಲಿಂಗಭೇದವಿಲ್ಲವೆಂದು ತಿಳಿದು ನ್ಯಾಯ ದೊರಕಿಸುವುದಕ್ಕಾಗಿ ಕಾನೂನು ಬಳಕೆಯಾದರೆ ಆಕ್ಷೇಪಗಳಿಗೆ ಅವಕಾಶವಿರಲಾರದು.

ನವೆಂಬರ್ 19 ಮಹಿಳಾ ಶಕ್ತಿಯ ಪ್ರತೀಕ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಜನ್ಮದಿನವೂ ಹೌದು. ಇದೇ ದಿನ ಪುರುಷರು ತಮ್ಮ ಹಕ್ಕಿಗಾಗಿ ಹೋರಾಟ ನಡೆಸುತ್ತಿರುವುದು ಕಾಲಚಕ್ರದ ಮಹಿಮೆಯೇ ಇರಬೇಕು.

ಪ್ರತಿಸ್ಪಂದನ

ದಾವಣಗೆರೆ ಮುಕುಂದ

ಇದು ಅತಿರೇಕ ಎನಿಸುತ್ತೆ..

ಸುರೇಂದ್ರ ಪೈ, ಭಟ್ಕಳ ಇವರು ಬರೆದ 'ವಾರದಲ್ಲಿ 70 ಗಂಟೆ ಕೆಲಸ ಯಾರಿಗಾಗಿ, ಯಾವುದಕ್ಕಾಗಿ, ಅದರ ಲಾಭ ಯಾರಿಗೆ' ಎಂಬ ಲೇಖನಕ್ಕೆ (ವಿಶ್ವವಾಣಿ ಡಿ.14) ಈ ಪ್ರತಿಕ್ರಿಯೆ.

ಮೊದಲಿಗೆ ಒಂದು ಉದಾಹರಣೆ: ನನ್ನ ಮನೆಯ ಎಡಭಾಗದಲ್ಲಿ ಮತ್ತು ಹಿಂಭಾಗದಲ್ಲಿ ಮನೆಗಳನ್ನು ಕಟ್ಟುತ್ತಿದ್ದಾರೆ. ಪಕ್ಕದಲ್ಲಿ ಕಟ್ಟುತ್ತಿರುವ ಮನೆಯ ಕೆಲಸಗಾರರು ಬೆಳಗ್ಗೆ 9 ಗಂಟೆಗೆ ಕೆಲಸ ಶುರುಮಾಡಿ, ಮಧ್ಯಾಹ್ನ 1 ಗಂಟೆಗೆ ಊಟಕ್ಕೆ ಹೋಗುತ್ತಾರೆ. ನಂತರ 2 ಗಂಟೆಗೆ ಮತ್ತೆ ಕೆಲಸ ಶುರುಮಾಡಿ ಸಂಜೆ 6 ಗಂಟೆವರೆಗೆ ಅದರಲ್ಲೇ ವ್ಯಸ್ತರಾಗುತ್ತಾರೆ. ಭಾನುವಾರ ಕೆಲಸ ಮಾಡುವುದಿಲ್ಲ. ಅಂದರೆ ವಾರಕ್ಕೆ ★6 ಗಿ 8 = 48★ ಗಂಟೆ ಕೆಲಸ ಮಾಡುತ್ತಾರೆ. ನಮ್ಮ ಮನೆಯ ಹಿಂಬದಿಯಲ್ಲಿ ಕಟ್ಟುತ್ತಿರುವ ಕಟ್ಟಡದಲ್ಲಿ ಕೆಲಸಗಾರರು ಬೆಳಗ್ಗೆ 6 ಗಂಟೆಗೆ ಕೆಲಸ ಶುರುಮಾಡಿ ರಾತ್ರಿ 8ರ ತನಕ ಅದರಲ್ಲೇ ವ್ಯಸ್ತರಾಗಿರುತ್ತಾರೆ. ಮಧ್ಯೆ ಅರ್ಧಗಂಟೆ ಊಟಕ್ಕೆ ಹೋಗುತ್ತಾರೆ. ಭಾನುವಾರ ಬೆಳಗ್ಗೆ 6 ಗಂಟೆಯಿಂದ ಮಧ್ಯಾಹ್ನ 2 ಗಂಟೆ ತನಕ ಕೆಲಸ ಮಾಡುತ್ತಾರೆ. ಅಂದರೆ, ವಾರಕ್ಕೆ ★13.5 ಗಿ 6 = 81+8 = 89★ ಗಂಟೆ ಕೆಲಸ ಮಾಡುತ್ತಾರೆ. ಅದು ಕೆಲವು ದಿನ ಬೆಳಗ್ಗೆ 5 ಗಂಟೆಗೆ ಶುರುವಾಗಿ, ರಾತ್ರಿ 10-11 ಗಂಟೆವರೆಗೂ (ನಾವು ಗಲಾಟೆ ಮಾಡಿ 'ನಿಲ್ಲಿಸಿ' ಅನ್ನುವವರೆಗೂ) ನಡೆಯುತ್ತಿರುತ್ತದೆ. ಈಗ ಹೇಳಿ- ಯಾರು ಯಾರಿಗೋಸ್ಕರ ಕೆಲಸ ಮಾಡುತ್ತಿದ್ದಾರೆ ಅಂತ. ನಾನು ವಿಚಾರಿಸಲಾಗಿ ತಿಳಿದ ವಿಷಯವೆಂದರೆ, ಪಕ್ಕದ ಮನೆಯಲ್ಲಿ ಕೆಲಸ ಮಾಡುತ್ತಿರುವವರು ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನವರು; ಅವರು ಸಂಸಾರ ಸಮೇತರಾಗಿ ಬೆಂಗಳೂರಿನಲ್ಲೇ ನೆಲೆಸಿರುವವರು. ನಮ್ಮ ಹಿಂಭಾಗದ ಮನೆಯ ಕಟ್ಟಡ ಕಾಮಗಾರಿಯಲ್ಲಿ ದುಡಿಯುತ್ತಿರುವವರು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಒಡಿಶಾದವರು. ಅವರಲ್ಲಿ ಬಹುತೇಕರು ತಂತಮ್ಮ ಕುಟುಂಬಿಕರನ್ನು ತಮ್ಮ ಊರಿನಲ್ಲೇ ಬಿಟ್ಟು ಕೆಲಸಕ್ಕೋಸ್ಕರ ನಮ್ಮಲ್ಲಿಗೆ ಬಂದಿರುವವರು.

ಈಗ ಎರಡನೇ ಉದಾಹರಣೆ: ನಾನು ಒಂದು ದೊಡ್ಡ ಹಾಗೂ ಪ್ರಸಿದ್ಧ ಬ್ಯಾಂಕ್‌ನಲ್ಲಿ ಸುಮಾರು 40 ವರ್ಷ ಕೆಲಸ ಮಾಡಿದ್ದೇನೆ. ನನ್ನ ಅನುಭವದಲ್ಲಿ ಹೇಳುವುದಾದರೆ, 'ಅಧಿಕಾರಿ' ವರ್ಗದಲ್ಲಿರುವವರು ಆಫೀಸಿನಲ್ಲಿ ಬೆಳಗ್ಗೆ 9ರಿಂದ ರಾತ್ರಿ 9 ಗಂಟೆಯವರೆಗೆ ಕೆಲಸ ಮಾಡಬೇಕಿತ್ತು (ಕೆಲವರನ್ನು ಹೊರತುಪಡಿಸಿ). ಮಧ್ಯಾಹ್ನ 15-20 ನಿಮಿಷ ಅವಧಿಯನ್ನು ಊಟಕ್ಕೆ ವಿನಿಯೋಗಿಸಿದರೂ, 6 ದಿನದ ವಾರದಲ್ಲಿ 70 ಗಂಟೆ ಕೆಲಸ ಮಾಡಿದ ಹಾಗಾಯಿತು. ಎಷ್ಟೋ ಸಂದರ್ಭದಲ್ಲಿ ಶನಿವಾರದಂದು ಅರ್ಧದಿನಕ್ಕೆ ಬದಲಾಗಿ ಪೂರ್ತಿದಿನ ಹಾಗೂ ರಜೆಯ ದಿನವಾದ ಭಾನುವಾರ ಇಡೀ ದಿನ ಕೆಲಸ ಮಾಡಬೇಕಾಗುತ್ತಿತ್ತು.

ಹೀಗಾಗಿ, ನನ್ನ ಅಭಿಪ್ರಾಯದಲ್ಲಿ, ವಾರಕ್ಕೆ 70-75 ಗಂಟೆಯಷ್ಟು ಕೆಲಸ ಮಾಡುವುದರಿಂದ ಆರೋಗ್ಯ ಹದಗೆಡುತ್ತದೆ, ಸಂಸಾರವು ತೊಂದರೆಗೆ ಒಳಗಾಗುತ್ತದೆ ಎನ್ನುವುದು ಸ್ವಲ್ಪ ಅತಿರೇಕ ಎನಿಸುತ್ತದೆ. 70-80 ಗಂಟೆ ಕೆಲಸ ಮಾಡಿಯೂ ಯಾವುದೇ ತೊಂದರೆಗೆ ಒಳಗಾಗದವರನ್ನು ನಾನು ಕಂಡಿದ್ದೇನೆ. ಇನ್ನೊಂದು ವಿಷಯ- ಯಾವುದೇ ಉದ್ಯೋಗದಲ್ಲಾಗಲಿ ಎಲ್ಲರೂ ಶೇ.100ರಷ್ಟು ಕೆಲಸ ಮಾಡಲು ಸಾಧ್ಯವಿಲ್ಲ. ಕೆಲವರು ಶೇ.60ರಷ್ಟು, ಮತ್ತೆ ಕೆಲವರು ಶೇ.70ರಷ್ಟು ಮಾತ್ರ ಕೆಲಸ ಮಾಡಲು ಸಾಧ್ಯವಿರುತ್ತದೆ. ಅಂಥವರ ಕೆಲಸವನ್ನು ಮಿಕ್ಕವರು ಮಾಡಬೇಕಾಗುತ್ತದೆ. ಆಗ ಅವರ ಕೆಲಸದ ವೇಳೆ ಜಾಸ್ತಿ ಆಗಿಯೇ ಆಗುತ್ತದೆ. 'ಕೆಲ ದೇಶಗಳಲ್ಲಿ ವಾರಕ್ಕೆ 40, 50 ಅಥವಾ 60 ಗಂಟೆ ಕೆಲಸ ಮಾಡುತ್ತಾರೆ' ಎಂದು ಲೇಖಕರು ತಮ್ಮ ಬರಹದಲ್ಲಿ ತಿಳಿಸಿದ್ದಾರೆ; ಆದರೆ ಅವೆಲ್ಲ ಬಹಳ ಮುಂದುವರಿದ ದೇಶಗಳು. ಅವು ಹಾಗೆ 'ಮುಂದುವರಿದ ದೇಶ'ಗಳಾಗುವುದಕ್ಕೆ ಮುಂಚೆ ಅಲ್ಲಿಯ ಜನರು ಎಷ್ಟು ಗಂಟೆ ಕೆಲಸ ಮಾಡುತ್ತಿದ್ದರು ಎಂಬುದು ಬಹಳ ಮುಖ್ಯವಾಗುತ್ತದೆ.

ಹೀಗಾಗಿ ನನ್ನ ಅಭಿಪ್ರಾಯದಲ್ಲಿ, ನಮ್ಮದು 'ಮುಂದುವರಿದ ದೇಶ' ಆಗುವವರೆಗೂ, ಉದ್ಯೋಗಿಗಳೆಲ್ಲರೂ ದೇಶದ ಮತ್ತು ತಮ್ಮ ಸಂಸ್ಥೆಯ ಒಳಿತಿಗಾಗಿ ಗರಿಷ್ಠ ಕಾರ್ಯಾವಧಿಯನ್ನು ಮುಡುಪಾಗಿ ಇಡುವುದು ಒಳ್ಳೆಯದು.

(ಲೇಖಕರು ಬ್ಯಾಂಕ್‌ನ ನಿವೃತ್ತ ಅಧಿಕಾರಿ)

ಕನ್ನಡಮ್ಮನ ಪದತಲಕ್ಕೆ ಕೃತಿಸುಮಗಳ ಸಮರ್ಪಣೆ

ಸಕ್ಕರೆನಾಡು ಮಂಡ್ಯದಲ್ಲಿ ಡಿ. 20ರಿಂದ 22ರವರೆಗೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ. 'ಅಕ್ಷರ ವ್ಯಾಮೋಹಿ'ಗಳ ಈ ಜಾತ್ರೆಯಲ್ಲಿ ಸಹಭಾಗಿಯಾಗುತ್ತಿರುವ 'ವಿಶ್ವವಾಣಿ ಪುಸ್ತಕ' ಪ್ರಕಾಶನ ಸಂಸ್ಥೆ ತನ್ನ ಮಳಿಗೆಯನ್ನು ಅಲ್ಲಿ ತೆರೆದಿಟ್ಟು, ಭೂರಿ ಭೋಜನದಂತಿರುವ ಹಲವು ಪುಸ್ತಕಗಳನ್ನು ಅಕ್ಷರಪ್ರೇಮಿಗಳಿಗೆ ಮಾರಲಿದೆ. ಈ ಹಿನ್ನೆಲೆಯಲ್ಲಿ, ಪ್ರಕಾಶನದ ಕೆಲ ಪುಸ್ತಕಗಳ ಕುರಿತಾದ ಅಭಿಪ್ರಾಯಗಳ ಸಾರಸಂಗ್ರಹ ರೂಪವನ್ನು ಇಲ್ಲಿ ನೀಡಲಾಗಿದೆ. ಇದು ಬರೀ 'ಟೈಟಲ್ ಕಾರ್ಡ್' ಅಷ್ಟೇ, ಪಿಕ್ಚರ್ ಅಭೀ ಬಾಕಿ ಹೈ ಮೇರೆ ದೋಸ್ತ್..!

ಕುಡಿಯೋಣು ಬಾರಾ

ಕನ್ನಡ ಪತ್ರಿಕೆಗಳಲ್ಲಿ ಎಲ್ಲ ವಿಷಯಗಳ ಬಗ್ಗೆಯೂ ಲೇಖನಗಳಿರುತ್ತವೆ, ಆದರೆ ಗುಂಡಿನ (ಮದ್ಯ) ಬಗ್ಗೆ ಇರುವುದಿಲ್ಲ ಎನ್ನುತ್ತಿದ್ದರು'' ಪತ್ರಕರ್ತ ವೈಎನ್‌ಕೆ. ''ನೀವೇ ಅದನ್ನು ಆರಂಭಿಸಬಹುದಲ್ಲ?'' ಎಂದು ಕೇಳಿದಾಗ, ''ಅನೇಕರು ದಿನಾ ಕುಡಿಯುತ್ತಾರೆ, ಆದರೆ ಕುಡಿತದ ಬಗ್ಗೆ ಅರಿಯಲು ಬಯಸುವುದಿಲ್ಲ. ಮದ್ಯಲೋಕಕ್ಕೂ ಸಾಂಸ್ಕೃತಿಕ ಆಯಾಮಗಳಿವೆ ಅಂದ್ರೆ ಒಪ್ಪುವುದಿಲ್ಲ. ಹೀಗಾಗಿ ಅವರಿಗೆ ತಮ್ಮಿಷ್ಟದ ಕುಡಿತದ ಬಗ್ಗೆ ಏನೂ ಗೊತ್ತಿರುವುದಿಲ್ಲ. ಇಂಥವನ್ನು ಇಂಗ್ಲಿಷ್ ಪತ್ರಿಕೆಗಳು ಬರೆಯುತ್ತವೆ. ಕುಡಿಯುವವರೇ ಇದನ್ನು ಬರೆಯಬೇಕು ಎಂದೇನಿಲ್ಲ, ಕುಡಿಯದವರೂ ಬರೆಯಬಹುದು. ಆದರೆ ಅವರಿಗೆ ಮದ್ಯಲೋಕದ ಬಗ್ಗೆ ಆಸಕ್ತಿಯಿರಬೇಕು'' ಎಂದು ತಮ್ಮ ಕನಸಿನ 'ಗುಂಡಿನ ಅಂಕಣ'ದ ಬಗ್ಗೆ ಹೇಳಿದ್ದರು. ಆದರೆ ಅದು ಈಡೇರಲಿಲ್ಲ. 'ವಿಶ್ವವಾಣಿ' ಆರಂಭಿಸಿದಾಗ, ವೈಎನ್‌ಕೆ ಹೇಳಿದ್ದನ್ನು ಜಾರಿಗೊಳಿಸಿ, 'ಕುಡಿಯೋಣು ಬಾರಾ' ಅಂಕಣವನ್ನು ಭಾನುವಾರದ ಪುರವಣಿಯಲ್ಲಿ ಆರಂಭಿಸಿದೆ. ''ಭಟ್ಟರು ಇಂಥ ಅಂಕಣ ಬರೆಯುತ್ತಾರಾ?'' ಎಂದು ಓದುಗರು ಉದ್ಗರಿಸಬಹುದೆಂದು, ಇದನ್ನು ಬರೆವವರ ಬಗ್ಗೆ ಕುತೂಹಲವಿರಲಿ ಎಂದು 'ಗುಂಡಾಭಟ್ಟ' ಎಂಬ ಹೆಸರಿನಲ್ಲಿ ಬರೆಯುತ್ತಿದ್ದೆ. ಅದು ನಿರೀಕ್ಷಿಸಿದಂತೆಯೇ ಜನಪ್ರಿಯವಾಯಿತು. ''ಬೇಂದ್ರೆ 'ಕುಣಿಯೋಣು ಬಾರಾ' ಅಂದ್ರು. ನೀವು 'ಕುಡಿಯೋಣು ಬಾರಾ' ಎಂದಿದ್ದೀರಿ. ಕುಡಿಯುವವರಿಗೂ ಒಂದು ಅಂಕಣ ಕೊಟ್ಟು ನ್ಯಾಯ ಒದಗಿಸಿದ್ದೀರಿ, ಇದು ವೈಎನ್‌ಕೆಗೆ ನೀವು ಕೊಟ್ಟ ಬೆಸ್ಟ್ ಗಿಫ್ಟ್'' ಎಂದು ಸಾಹಿತಿ ಗಿರೀಶ್ ಕಾರ್ನಾಡರು ಹೇಳಿದಾಗ ನನಗೆ ತುಸು ಆಶ್ಚರ್ಯ ಮತ್ತು ಸಮಾಧಾನ ಆಗಿದ್ದವು. ''ಇಂಗ್ಲಿಷಿನಲ್ಲಿ ರಸೆಲ್, ಟ್ವೈನ್, ವುಡ್ ಹೌಸ್ ಸೇರಿದಂತೆ ಅನೇಕರು ಗುಂಡಿನ ಸ್ವಾರಸ್ಯಲೋಕದ ಕುರಿತು ಬರೆದಿದ್ದಾರೆ. ಅಮೆರಿಕ, ಬ್ರಿಟನ್ ಪತ್ರಿಕೆಗಳಲ್ಲಿ ಅನೇಕರು ವಾರವಾರ ಅಂಕಣ ಬರೆಯುವುದಿದೆ. ಆದರೆ ಕುಡಿತಕ್ಕೇ ಮೀಸಲಾದ ಅಂಕಣವನ್ನು ಯಾವ ಕನ್ನಡ ಪತ್ರಿಕೆಯೂ ಪ್ರಕಟಿಸುವುದಿಲ್ಲ. ಇಂಥ ವಿಷಯದಲ್ಲಿ ಮಡಿವಂತಿಕೆ ಬಿಡಬೇಕು'' ಎಂದಿದ್ದರು ಕಾರ್ನಾಡ್.

ಈ ಪುಸ್ತಕದಲ್ಲಿರುವುದು ಕುಡಿತವನ್ನು ಪ್ರಚೋದಿಸುವ ಅಥವಾ ವಿರೋಧಿಸುವ ಬರಹಗಳಲ್ಲ. ಕಾರಣ, ನಾನು ಕುಡಿತದ ಪರವೂ ಅಲ್ಲ, ವಿರೋಧಿಯೂ ಅಲ್ಲ. ಕುಡಿತವನ್ನೇ ಚಟವಾಗಿ ಮಾಡಿಕೊಳ್ಳುವುದು ತಪ್ಪು ಎಂದು ಭಾವಿಸಿರುವವ ನಾನು. ಗುಂಡಿನ ಲೋಕದ ಸುತ್ತಲಿರುವ ಸ್ವಾರಸ್ಯಕರ ಕಥೆಗಳು ನನಗಿಷ್ಟ. ಪಾರ್ಟಿ, ಪೆಗ್, ಕಿಕ್ ಆಚೆಗೂ ಒಂದು ಲೋಕವಿದೆ, ಅದಕ್ಕೊಂದು ವಿಶಿಷ್ಟ ಆಯಾಮವಿದೆ ಎಂಬುದಷ್ಟೇ ಇಲ್ಲಿನ ಕಾಳಜಿ. ''ಕುಡಿದರೆ ಕೆಟ್ಟವನು, ಕುಡಿಯದಿದ್ದರೆ ಒಳ್ಳೆಯವನು ಎಂಬ ಎರಡೂ ಶುದ್ಧ ಬುರುಡೆ; ನಿಜವಾಗಿ ಸುಖಿಸಲು ಓಪನ್ ಮಾಡಿ ಬಾಟಲಿ ಬಿರಡೆ''! ಎಂದಿದ್ದರು ಯೋಗಿ ದುರ್ಲಭಜೀ. ಒಂದಷ್ಟು ಮಜಾ, ಮತ್ತಿನ, ಗಮ್ಮತ್ತಿನ ಕ್ಷಣಗಳಿಗೆ ಈ ಅಕ್ಷರಗಳನ್ನು 'ಸಿಪ್' ಮಾಡಬಹುದು.

ಶಿಶಿರಕಾಲ 2



ಅಮೆರಿಕದಲ್ಲಿದ್ದುಕೊಂಡು ಕನ್ನಡ ಪತ್ರಿಕೆಗೆ ಬರೆಯುವುದೆಂದರೆ, ಸಮುದ್ರತಟದಲ್ಲಿ ಕುಳಿತು ಬಾವಿಯನ್ನು ಕಣ್ಮುಂದೆ ಕಲ್ಪಿಸಿ ಬರೆದಂತೆ. ವಿಷಯಗಳ ಆಯ್ಕೆಯಿಂದ ಹಿಡಿದು, ಯಾವ ವಿಷಯವನ್ನು ಎಷ್ಟು ಕೊಡಬೇಕು, ಓದುಗ ಬಯಸುವುದೇನು, ನನಗೆ ಗೊತ್ತಿದೆಯೆಂದು ಹೇಳುತ್ತಾ ಹೋದರೆ ಅವು ಓದುಗನಿಗೆ ಹಿಡಿಸುವುದಾ...? ಹೀಗೆ ಹತ್ತಾರು ಸವಾಲುಗಳು ಲೇಖಕನನ್ನು ಕಾಡುವುದುಂಟು. ಮುಖ್ಯವಾಗಿ, ಅಮೆರಿಕದಲ್ಲಿದ್ದು ಬರೆವ ಅಂಕಣಕಾರನಿಗೆ ತನ್ನ ಓದುಗರನ್ನು ಕಂಡುಕೊಳ್ಳುವ, ಅರ್ಥಮಾಡಿಕೊಳ್ಳುವ ವಿಶೇಷ ಮೂಗಾಳಿ ಬೇಕು. ಆ ಆಘ್ರಾಣಿಸುವ ಗುಣವನ್ನು ಬೆಳೆಸಿಕೊಳ್ಳದೇ ಏನೇ ಬರೆದರೂ ಅದು ಓದುಗನನ್ನು ತಟ್ಟದು. ಈ ವಿಷಯದಲ್ಲಿ ಶಿಶಿರ ಹೆಗಡೆಯವರ ಸಾಮರ್ಥ್ಯವನ್ನು ಮೆಚ್ಚಲೇಬೇಕು. ಅಮೆರಿಕದಲ್ಲಿದ್ದರೂ, ಈ ಮಣ್ಣಿನ ಯೋಚನೆ, ಚಿಂತನಾಕ್ರಮ, ಶಿಸ್ತನ್ನು ಅವರು ರೂಢಿಸಿಕೊಂಡಿರುವುದರಿಂದ, ಅಲ್ಲಿ ಕಂಡ ಹೊಸ ವಿಷಯಗಳನ್ನು ಕನ್ನಡ ಮತ್ತು ಕರ್ನಾಟಕದ ಸಂದರ್ಭದಲ್ಲಿ ಪ್ರಸ್ತುತವಾಗುವಂತೆ ನಿವೇದಿಸುವುದು ಅವರಿಗೆ ಸಾಧ್ಯವಾಗಿದೆ. ಸ್ಥಳೀಯ ಸಮಸ್ಯೆಯೊಂದನ್ನು ಜಾಗತಿಕ ಮಟ್ಟಕ್ಕೇರಿಸಿ ಅಥವಾ ಇಳಿಸಿ ನೋಡುವುದೂ ಅವರಿಗೆ ಸುಲಭವಾಗಿದೆ. ಹೀಗಾಗಿ ಶಿಶಿರರು ಭಾರತದ ಹಗಲಿನ ಬಗ್ಗೆ ಅಮೆರಿಕದ ರಾತ್ರಿಯಲ್ಲಿ ಬರೆದರೂ, ದಿನದ ಒಟ್ಟು ಸೊಬಗು ಅನುಭವಕ್ಕೆ ಸಿಗುತ್ತದೆ. ಇದು ಖಂಡಾಂತರದಲ್ಲಿ ನೆಲೆಸುವ ಲೇಖಕ ತನ್ನನ್ನು ಕಂಡುಕೊಳ್ಳುತ್ತಾ ಓದುಗನನ್ನು ಶೋಧಿಸುವ, ಓದುಗನಿಗೆ ಶೋಭಿಸುವ ಪರಿಯೂ ಹೌದು.

ಹೊಸಮುಖ



ಪತ್ರಕರ್ತ ರಾಜು ಅಡಕಳ್ಳಿ ಅವರು ಉತ್ತರ ಕನ್ನಡ ಜಿಲ್ಲೆಯ 'ಲೋಕಧ್ವನಿ' ಪತ್ರಿಕೆಯಲ್ಲಿ ಬರೆಯುತ್ತಿರುವ 'ವ್ಯಕ್ತಿ-ಶಕ್ತಿ' ಅಂಕಣ ಸಾಕಷ್ಟು ಜನಪ್ರಿಯ. ಇದು ಅಸಲಿಗೆ ಆ ಜಿಲ್ಲೆಯ ಸಾಧಕರ ಪರಿಚಯ-ಕಥನ. ಈ ಅಂಕಣಕ್ಕಾಗಿ ಅಡಕಳ್ಳಿಯವರು ಆಯ್ದುಕೊಂಡ ಸಾಧಕರಪಟ್ಟಿ ವೈವಿಧ್ಯದ ದೃಷ್ಟಿಯಿಂದ ಬೆರಗು ಹುಟ್ಟಿಸುವಂಥದ್ದು. ಸಮಾಜದ ವಿವಿಧ ರಂಗಗಳ ಸಾಧಕರನ್ನು ಹೆಕ್ಕಿ, ಅವರೊಂದಿಗೆ ಮಾತಾಡಿ, ಅವರ ಸಾಧನೆಯ ಮಹತ್ವವನ್ನು ಅರ್ಥೈಸಿಕೊಂಡು, ಸ್ಥಳೀಯ ಪರಿಸರದ ಭಾಷೆ ಮತ್ತು ನುಡಿಗಟ್ಟುಗಳೊಂದಿಗೆ ಅವರನ್ನು ಪರಿಚಯಿಸಿರುವುದು ಇಲ್ಲಿನ ವಿಶೇಷ. ಹೀಗಾಗಿ ಇದು ಒಬ್ಬ ಸಾಧಕನೊಂದಿಗೆ ನಡೆಸಿದ ಆಪ್ತ ಅನುಸಂಧಾನವೂ ಹೌದು. ಓದುಗರಿಗೆ ಇಲ್ಲಿನ ವ್ಯಕ್ತಿಯ ಪರಿಚಯ ಆರಂಭದಲ್ಲಿ ಇಲ್ಲದಿದ್ದರೂ ಮುಂದುವರಿದಂತೆ 'ನಮ್ಮವರು' ಅನಿಸುತ್ತಾ ಹೋಗುತ್ತಾರೆ, ಅವರೊಂದಿಗೆ ಒಂದು ಅವ್ಯಕ್ತ ಒಡನಾಟದ ಅನುಭವವಾಗುತ್ತದೆ. ಒಬ್ಬ ವ್ಯಕ್ತಿಯನ್ನು ಪರಿಚಯಿಸುವಾಗ, ನಿರ್ವಹಿಸಬೇಕಾದ ಜವಾಬ್ದಾರಿಯನ್ನು ತೆಗೆದುಕೊಳ್ಳುವುದರ ಜತೆಗೆ ಆತನ ವ್ಯಕ್ತಿತ್ವಕ್ಕೊಂದು ಘನತೆ ತಂದುಕೊಡುವ ಕೆಲಸವನ್ನೂ ಅಡಕಳ್ಳಿಯವರು ಈ ಕೃತಿಯಲ್ಲಿ ಮಾಡಿರುವುದು ವಿಶೇಷ. ಒಂದೇ ಕೃತಿಯಲ್ಲಿ ಅನೇಕರ ಸಾಧನೆಯ ಶಿಖರವೇರಿದ ಅನುಭವ ಓದುಗನಿಗೆ ದಕ್ಕುತ್ತದೆ.

- ವಿಶ್ವೇಶ್ವರ ಭಟ್ , ಪ್ರಧಾನ ಸಂಪಾದಕ, ವಿಶ್ವವಾಣಿ

ದೂರದೇಶವಾಸಿ

'ವಿಶ್ವವಾಣಿ'ಯಲ್ಲಿ 'ವಿದೇಶವಾಸಿ' ಹೆಸರಿನ ಅಂಕಣ ಬರೆಯುತ್ತಿರುವ ಕಿರಣ್ ಉಪಾಧ್ಯಾಯ ಅವರು, ಅದಕ್ಕಾಗಿ ಸಂಗ್ರಹಿಸುವ ಮಾಹಿತಿ, ಅದನ್ನು ನಿರೂಪಿಸುವ ಕ್ರಮ, ಎಲ್ಲವನ್ನೂ ಮತ್ತೊಂದು ದಿಕ್ಕಿನಿಂದ ನೋಡುವ ಸ್ಪಷ್ಟತೆಗಳ ಮೂಲಕ ಓದುಗರ ಪ್ರೀತಿ ಗಳಿಸಿಕೊಂಡಿದ್ದಾರೆ. ಸಾಹಿತ್ಯ, ಕಲೆ, ಸಂಗೀತ, ಲೋಕಾಭಿರಾಮ, ವಿದ್ವತ್ತಿಗೆ ಸಂಬಂಧಿಸಿದ ಅಂಕಣಗಳ ಸೊಗಸೆಂದರೆ ಅವನ್ನು ಪುರುಸೊತ್ತಾದಾಗ ಓದಬಹುದು. ಹೀಗೆ ಓದುಗನಿಗೆ ಅಪಾರ ಸ್ವಾತಂತ್ರ್ಯ-ಸಂತೋಷ ಒದಗಿಸುವ ಅಂಕಣಗಳ ಸಾಲಿನಲ್ಲಿ 'ವಿದೇಶವಾಸಿ'ಯೂ ಇದೆ. ಇಲ್ಲಿನ ಬರಹಗಳ ಮತ್ತೊಂದು ಗುಚ್ಛವೇ 'ದೂರದೇಶವಾಸಿ'. ಕಿರಣ್ ಆಯ್ದುಕೊಳ್ಳುವ 'ವಸ್ತು-ವೈವಿಧ್ಯ'ವೇ ಅವರ ಅಂಕಣದ ಶಕ್ತಿ. ಮುಂಬಯಿಯ ಡಬ್ಬಾವಾಲಾ, ಪೀಲೆಯ ವಿಚಿತ್ರ ಮನಸ್ಥಿತಿ, ಯಕ್ಷಗಾನದ ಮಜಾ ಜಗತ್ತು- ಹೀಗೆ ಅವರಿಗೆ ಹೊಳೆಯುವ ವಿಷಯಗಳು ಅಸಂಖ್ಯ. ಅವರ ಬರವಣಿಗೆಯ ಶೈಲಿ, ಅಭಿರುಚಿ ಮತ್ತು ಗ್ರಹಿಕೆಗಳ ಕುರಿತು ಅವರ ಹಿಂದಿನ ಪುಸ್ತಕಗಳೇ ಹೇಳುತ್ತವೆ. ಕಿರಣ್ ಓದುಗರನ್ನು ಮೆಚ್ಚಿಸಲಿಕ್ಕೆ ಸುಳ್ಳು ಹೇಳುವುದಿಲ್ಲ. ತಾವು ಇಡಿಯಾಗಿ ಅರ್ಥಮಾಡಿಕೊಳ್ಳದ ಸಂಗತಿಗಳ ಕುರಿತು ಬರೆಯುವುದಿಲ್ಲ. ಅಧ್ಯಯನಶೀಲತೆ, ಶ್ರದ್ಧೆ ಮತ್ತು ವಿಸ್ತಾರಗಳು ಅಂಕಣ ಬರಹಗಳಿಗೆ ಅಗತ್ಯವೆಂಬುದು ಅವರಿಗೆ ಗೊತ್ತಿದೆ. ಹೀಗಾಗಿಯೇ ಅವರ ಅಂಕಣಗಳು ನಮ್ಮ ಅರಿವನ್ನು ವಿಸ್ತರಿಸುತ್ತವೆ. ಕಿರಣ್‌ರ ಅಂಕಣಗಳಲ್ಲಿ ಕೆಲವು ಕಾವ್ಯಮಯವಾಗಿರುವುದನ್ನೂ ಕಂಡಿದ್ದೇನೆ. ಯಕ್ಷಗಾನದ ಮಾತು ಬಂದಾಗ ಅವರು ಕವಿಯಾಗುತ್ತಾರೆ. ಮಿಕ್ಕಂತೆ ಅರ್ಥಶಾಸ್ತ್ರಜ್ಞ, ಸಮಾಜಶಾಸ್ತ್ರಜ್ಞ, ರಾಜಕೀಯ ತಜ್ಞನಂತೆ ಯೋಚಿಸುತ್ತಾರೆ. ಈ ಬರಹಗಳು ನನಗೆ ನೀಡಿದ ಸಂತೋಷ ನಿಮಗೂ ದಕ್ಕುತ್ತದೆ ಎಂಬ ನಂಬಿಕೆ ನನ್ನದು.

- ಜೋಗಿ, ಖ್ಯಾತ ಲೇಖಕರು ಮತ್ತು ಪತ್ರಕರ್ತರು

ಒಂದೊಳ್ಳೆ ಮಾತು 3

ರೂಪಾ ಗುರುರಾಜ್ ಅವರು ವಿಶ್ವವಾಣಿಯ 'ಒಂದೊಳ್ಳೆ ಮಾತು' ಅಂಕಣದಲ್ಲಿ ಒಂದು ಕಥೆಯನ್ನೋ, ಘಟನೆಯನ್ನೋ ಕೇಂದ್ರವಾಗಿಟ್ಟುಕೊಂಡು ವಿಷಯವನ್ನು ನಿರೂಪಿಸುವ ಶೈಲಿ ಅಪರೂಪದ್ದು. ಅವರ ಮಾತಿನಂತೆ ಬರಹಗಳೂ ಮೋಹಕ, ಪ್ರಭಾವಪೂರ್ಣ. ಈ ಕೃತಿಯಲ್ಲಿ ಪೌರಾಣಿಕ, ಐತಿಹಾಸಿಕ, ವರ್ತಮಾನದ ವಿಷಯಗಳ ವಿಭಿನ್ನ ಚಿತ್ರಣವಿದೆ. ಅವರ ಜೀವನಾನುಭವದ ನೆಲೆಯಲ್ಲಿ ಮೂಡಿಬಂದ ಇಲ್ಲಿನ ಅಂಕಣಗಳು ಓದುಗರಲ್ಲಿ ಜೀವನೋತ್ಸಾಹ ಉಂಟುಮಾಡುವಂಥದ್ದಾಗಿವೆ. 'ಸ್ವಂತಿಕೆ ಇಲ್ಲದೆ ನಕಲು ಮಾಡುವುದು ಯಶಸ್ಸಿಗೆ ಕಾರಣವಾಗಲಾರದು' ಎಂಬ ಲೇಖನದಲ್ಲಿರುವ ಅರ್ಜುನನ ಅಹಂಭಾವ ಭಗ್ನಗೊಳಿಸಿದ ಹನುಮಂತನ ಕಥನ, ಪ್ರಾರ್ಥನೆಯಿಂದ ಆಗುವ ಲಾಭ, ಸಹಬಾಳ್ವೆಯಲ್ಲಿ ಸಿಗುವ ಸುಖ ಹೀಗೆ ವಿಭಿನ್ನ ವಿಷಯಗಳನ್ನು ಓದುಗರಿಗೆ ಮುಟ್ಟಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅಂಕಣ ಬರಹಕ್ಕೆ ದೀರ್ಘ ಅಧ್ಯಯನ, ಸಮಯ ಪ್ರಜ್ಞೆ, ಶಿಸ್ತು ಅತ್ಯಗತ್ಯ. ಇವು ರೂಪಾರಲ್ಲಿ ಕೆನೆಗಟ್ಟಿವೆ. ವೈಯಕ್ತಿಕ ಬದುಕು, ಸಾರ್ವಜನಿಕ ಕ್ಷೇತ್ರದ ಜವಾಬ್ದಾರಿಗಳ ನಡುವೆಯೂ ದೀರ್ಘಕಾಲದಿಂದ ಅಂಕಣ ಬರೆಯುತ್ತ ಜ್ಞಾನರತ್ನಗಳನ್ನು ಕೊಡುಗೆಯಾಗಿ ನೀಡುತ್ತಿರುವ ರೂಪಾ ಅವರಲ್ಲಿ ವಾಗ್ದೇವಿ ವಿಶಿಷ್ಟ ಚೈತನ್ಯವನ್ನು ತುಂಬಿದ್ದಾಳೆ. ಒಳ್ಳೆಯ ಹೃದಯವಿದ್ದರೆ ಮಾತ್ರ ಒಳ್ಳೆಯ ಮಾತು ಹೊರಹೊಮ್ಮಲಿಕ್ಕೆ ಸಾಧ್ಯ. ಅದಕ್ಕೆ ಈ ಕೃತಿಯೇ ಸಾಕ್ಷಿ.

- ಡಾ. ಸಿ.ಸೋಮಶೇಖರ,
ಅಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 193

ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಉದ್ಘಾಟನೆ ವೇಳೆ ಸಚಿವ ತಂಗಡಗಿ ಹೇಳಿಕೆ | ಉಳಿದ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆಯಡಿ ನೆರವು

ಪ್ರತಿವರ್ಷ ಎರಡೂವರೆ ಲಕ್ಷ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ

ಬೆಳಗಾವಿ (ಸುವರ್ಣಸೌಧ): ಪ್ರತಿವರ್ಷ ಎರಡೂವರೆ ಲಕ್ಷ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರು ಹೇಳಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಬೆಳಗಾವಿಯ ಸುವರ್ಣಸೌಧದ ಆಡಿಟೋರಿಯಂನಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 150 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರಾರಂಭಕ್ಕೆ ಸಚಿವರು ಆನ್ ಲೈನ್ ಮೂಲಕ ಚಾಲನೆ ನೀಡಿ ಮಾತನಾಡಿದರು.

ಪ್ರತಿ ವರ್ಷ ಮೂರು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಸ್ಟೆಲ್ ಗೆ ಅರ್ಜಿ ಸಲ್ಲಿಸುತ್ತಾರೆ. 2.46,000 ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗುತ್ತಿದ್ದು, ಉಳಿದ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆಯಡಿ ನೆರವು ನೀಡಲಾಗುತ್ತಿದೆ ಎಂದು ತಿಳಿಸಿದರು.

ಹಾಸ್ಟೆಲ್‌ಗಳಲ್ಲಿ ಸುಸಜ್ಜಿತ ವ್ಯವಸ್ಥೆ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಸ್ಟೆಲ್ ನಲ್ಲಿರುವ ವಿದ್ಯಾರ್ಥಿಗಳು ರೈತ, ಬಡ ಹಾಗೂ ಕಾರ್ಮಿಕ ಕುಟುಂಬದಿಂದ ಬಂದವರಾಗಿದ್ದು, ಹಾಸ್ಟೆಲ್ ನ ಸೌಲಭ್ಯವನ್ನು ಪಡೆದು ಉನ್ನತ ಹುದ್ದೆಗೇರಬೇಕು. ನಾವು ಓದುವ ಕಾಲಘಟ್ಟದಲ್ಲಿ ನಾಲ್ಕೈದು ಕಿ.ಮೀ ನಡೆದು ಪ್ರೌಢ ಶಾಲೆ ವ್ಯಾಸಂಗ ಮುಗಿಸಿದೆವು. ಆದರೆ ಇಂದು ಸರ್ಕಾರ ಹಾಸ್ಟೆಲ್ ವಸತಿ ಮಾತ್ರವಲ್ಲ, ಮೂಲಸೌಲಭ್ಯ, ಪುಸ್ತಕ, ಗ್ರಂಥಾಲಯದ ವ್ಯವಸ್ಥೆಯನ್ನು ಮಾಡಿದೆ. ಹಾಸ್ಟೆಲ್ ನಲ್ಲಿ ಉತ್ತಮ ಗುಣಮಟ್ಟದ ಆಹಾರ, ಹಾಸ್ಟೆಲ್ ನವೀಕರಣ, ಪುಸ್ತಕ ವಿತರಣೆ, ಗ್ರಂಥಾಲಯದ ವ್ಯವಸ್ಥೆ ಎಲ್ಲವನ್ನು ಕಲ್ಪಿಸಲಾಗುತ್ತಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಬೆಳಗಾವಿಯಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರಾರಂಭದ ಹಿನ್ನೆಲೆಯಲ್ಲಿ ಸಚಿವ ಶಿವರಾಜ ತಂಗಡಗಿ ಹಿಂದುಳಿದ ವರ್ಗಗಳ ಹರಿಕಾರ ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಮುಖ್ಯಮಂತ್ರಿ ಬಗ್ಗೆ ಮೆಚ್ಚುಗೆ: ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರನ್ನು ನಾವು ನೆನಪು ಮಾಡಿಕೊಳ್ಳಬೇಕು. ಹಿಂದುಳಿದ ವರ್ಗದವರ ಬಗ್ಗೆ ಅವರು ಅಪಾರ ಕಾಳಜಿ ಹೊಂದಿದ್ದರು. ಇಂದು ನಮ್ಮ ಮುಖ್ಯಮಂತ್ರಿಗಳು ಬಡ, ದೀನದಲಿತರ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದವರಾಗಿದ್ದಾರೆ. ಈ ರಾಜ್ಯದಲ್ಲಿ ಸಾಮಾಜಿಕ ನ್ಯಾಯದಡಿ ಹೆಜ್ಜೆ ಇಟ್ಟಿರುವ ಮುಖ್ಯಮಂತ್ರಿ ಯಾರಾದರೂ ಇದ್ದಾರೆ ಅದು ಸಿದ್ದರಾಮಯ್ಯ ಅವರು ಮಾತ್ರ ಎಂದು ಸಚಿವರ ತಂಗಡಗಿ ಮೆಚ್ಚುಗೆ ವ್ಯಕ್ತಪಡಿಸಿದರು.

ವಾರ್ಡನ್ ಗಳಿಗೆ ಸೂಚನೆ: ಕಷ್ಟ ಅನುಭವಿಸಿದವರಿಗೆ ಹಾಸ್ಟೆಲ್ ಜೀವನ ಎಂಬುದು ಗೊತ್ತು. ಪ್ರತಿಯೊಬ್ಬರು ಶಿಕ್ಷಣವಂತರಾಗಬೇಕು ಎಂಬುದು ಸರ್ಕಾರದ ಉದ್ದೇಶ. ಶ್ರದ್ಧೆಯಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪಡೆದು ಸಂಸ್ಕಾರವಂತರಾಗಬೇಕು ಎಂದರು.

ವಿದ್ಯಾರ್ಥಿಗಳಿಗೆ ವಾರ್ಡನ್ ಹಾಗೂ ಶಿಕ್ಷಕರು ಸೂಕ್ತ ಮಾರ್ಗದರ್ಶನ ಮಾಡಿದರೆ, ಆ ಮಕ್ಕಳು ಜೀವನ ಪರ್ಯಂತ ನಿಮ್ಮನ್ನು ನೆನೆಸುತ್ತಾರೆ. ಇನ್ನು ವಿದ್ಯಾರ್ಥಿಗಳು ಎಷ್ಟು ಎತ್ತರಕ್ಕೆ ಬೆಳೆದ್ರು, ಶಿಕ್ಷಕರಾದವರು ಹಾಗೆಯೇ ಇರುತ್ತಾರೆ. ಹೀಗಾಗಿ ಶಿಕ್ಷಣ ನೀಡಿದ ಶಿಕ್ಷಕ್ಷರನ್ನು ಮರೆಯಬಾರದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಇಲಾಖಾ ಕಾರ್ಯದರ್ಶಿ ಸಂಜಯ್ ಶೆಟ್ಟಣ್ಣನವರ್, ಆಯುಕ್ತ ಶ್ರೀನಿವಾಸ್, ಜಂಟಿ ನಿರ್ದೇಶಕ ಜಿ.ಜಗದೀಶ್ , ಡಾ.ಸಿ.ಕೆ.ಜಗದೀಶ್ ಕುಮಾರ್, ಪ್ರದೀಪ್ ಹಾಗೂ ಇನ್ನಿತರರಿದ್ದರು.

ಓದು ಮುಂದುವರಿಸಲು ಹಾಸ್ಟೆಲ್ ನೆರವು

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಸ್ಟೆಲ್ ವಿದ್ಯಾರ್ಥಿನಿ ಸ್ವಾತಿ ಮಾತನಾಡಿ, ನಮ್ಮಂತಹ ಲಕ್ಷಾಂತರ ಬಡ ಕುಟುಂಬದ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಸ್ಟೆಲ್ ನೆರವಾಗಿದೆ. ಕೃಷಿ ಕುಟುಂಬದಿಂದ ಬಂದ ನಮಗೆ ಶಿಕ್ಷಣ ಕಷ್ಟವಾಗಿತ್ತು. ವಿದ್ಯಾಭ್ಯಾಸ ಬೇಡ ಎಂದು ಪೋಷಕರು ಹೇಳಿದರು. ಕಾಲೇಜಿಗೆ ಓಡಾಡುವುದೇ ಕಷ್ಟವಾಗಿತ್ತು. ಖಾಸಗಿ ಪಿ.ಜಿ.ಯಲ್ಲಿ ಉಳಿದು ಅದಕ್ಕೆ ಹಣ ಪಾವತಿಸುವುದು ಕಷ್ಟ ಎಂದರು. ಆದರೆ ನನಗೆ ಇಲಾಖೆಯ ಹಾಸ್ಟೆಲ್ ನಿಂದ ವ್ಯಾಸಂಗಕ್ಕೆ ಅನುಕೂಲವಾಗಿದೆ ಎಂದು ಸಚಿವರು ಹಾಗೂ ಸರಕಾರಕ್ಕೆ ಧನ್ಯವಾದ ತಿಳಿಸಿದರು.

ಧರ್ಮಸ್ಥಳ: ಪುನಶ್ಚೇತನಗೊಳಿಸಿದ 800ನೇ ಕೆರೆಯಹಸ್ತಾಂತರ

ಇನ್ನೂ 200 ಕೆರೆಗಳಿಗೆ ಕಾಯಕಲ್ಪ

ಉಜಿರೆ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ''ನಮ್ಮೂರು ನಮ್ಮ ಕೆರೆ'' ಕಾರ್ಯಕ್ರಮದಡಿ ಈಗಾಗಲೆ ರಾಜ್ಯದಲ್ಲಿ 800 ಕೆರೆಗಳನ್ನು ಪುನಶ್ಚೇತನಗೊಳಿಸಿದ್ದು 2025ರ ಏಪ್ರಿಲ್ ಅಂತ್ಯದೊಳಗೆ ಇನ್ನೂ 200 ಕೆರೆಗಳಿಗೆ ಕಾಯಕಲ್ಪ ನೀಡಲು ಉದ್ದೇಶಿಸಲಾಗಿದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಪ್ರಕಟಿಸಿದರು.

ಅವರು ಮಂಗಳವಾರ ಧರ್ಮಸ್ಥಳದಲ್ಲಿ ಪುನಶ್ಚೇತನಗೊಂಡ 800ನೇ ಕೆರೆ-ಚೌಡನಹಳ್ಳಿ ಕೆರೆಯನ್ನು ಮಾಜಿ ಶಾಸಕ ಲಿಂಗೇಶ್ ಅವರಿಗೆ ಹಸ್ತಾಂತರಿಸಿ ಮಾತನಾಡಿದರು.

ಕೆರೆಯನ್ನು ರಕ್ಷಣೆ ಮಾಡಿದರೆ ಪವಿತ್ರ ಗಂಗೆಯನ್ನು ರಕ್ಷಣೆ ಮಾಡಿದಷ್ಟೇ ಪುಣ್ಯ ಸಿಗುತ್ತದೆ. ಜಲಸಂರಕ್ಷಣೆ ಮತ್ತು ಸ್ವಚ್ಛ ಪರಿಸರ ರಕ್ಷಣಾ ಕಾರ್ಯದಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸಬೇಕು. ಕೆರೆಗಳಿಗೆ ಕಸ, ಕಲ್ಮಶ, ತ್ಯಾಜ್ಯ ಹಾಕಬಾರದು ಎಂದು ಜನರಿಗೆ ಕರೆ ನೀಡಿದರು.

ಕೆರೆಗಳಿಗೆ ಕಾಯಕಲ್ಪ ನೀಡುವುದು ತಮಗೆ ಅತ್ಯಂತ ಪ್ರಿಯವಾದ ಕಾಯಕವಾಗಿದ್ದು, ಕೆರೆಯ ಸುತ್ತಲೂ ಹಣ್ಣುಹಂಪಲಿನ ಗಿಡಗಳನ್ನು ಬೆಳೆಸಬೇಕು ಎಂದು ಅವರು ಸಲಹೆ ನೀಡಿದ ವೀರೇಂದ್ರ ಹೆಗ್ಗಡೆ, ಎಲ್ಲ ಕೆಲಸವನ್ನು ಸರಕಾರ, ಗ್ರಾಮಪಂಚಾಯಿತಿ ಮಾಡಬೇಕೆಂದು ನಿರೀಕ್ಷಿಸದೆ, ನಮ್ಮ ಊರು, ನಮ್ಮ ಕೆರೆ ಮತ್ತು ಪರಿಸರ ರಕ್ಷಿಸಿಕೊಳ್ಳುವುದು ಎಲ್ಲರ ಕರ್ತವ್ಯ ಹಾಗೂ ಹೊಣೆಗಾರಿಕೆ ಆಗಿದೆ ಎಂದರು.

ಧರ್ಮಸ್ಥಳದಲ್ಲಿ ಮಂಗಳವಾರ ನಡೆದ ನಮ್ಮೂರು ನಮ್ಮ ಕೆರೆ ಸಮಾರಂಭದಲ್ಲಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು 800ನೇ ಚೌಡನಹಳ್ಳಿ ಕೆರೆಯನ್ನು ಮಾಜಿ ಶಾಸಕ ಲಿಂಗೇಕರ ಅವರಿಗೆ ಹಸ್ತಾಂತರಿಸಿದರು.

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352-277816, ಫ್ಯಾಕ್ಸ್:08352-277817
ಇ-ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2024-25/6534 ದಿನಾಂಕ:16.12.2024
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2024-25 ನೇ ಸಾಲಿನ ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: 6534 **ದಿನಾಂಕ: 16.12.2024** ರಂತೆ ರೂ. 20.00 ಲಕ್ಷಗಳಿಗೆ ಸರ್ವಿಸಸ್‌ನಲ್ಲಿ 2ನೇ ಕರೆ ಇ-ಟೆಂಡರ್‌ನ್ನು ಆಹ್ವಾನಿಸಿದ್ದು, ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov. in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/525/ಕೆಎಸ್‌ಎಂಸಿಎ/2024-25

ಮಂಗಳೂರು ಮಹಾನಗರಪಾಲಿಕೆ
DMA/2024-25/WORK INDENT NO.33763 ದಿನಾಂಕ: 16-12-2024
ಟೆಂಡರ್ ಪ್ರಕಟಣೆ E-PROCUREMENT OF KARNATAKA
ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999-2000ರ ಪ್ರಕರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು **ಸಾಮಾನ್ಯ** ನಿಧಿಯಲ್ಲಿ ನಿರ್ವಹಿಸುವ ಬಗ್ಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:** 03-01-2025. ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **kppp.karnataka.gov.in** ಹೆಚ್ಚಿನ ವಿವರವನ್ನು ಪಡೆಯಬಹುದು.

ಕ್ರ. ಸಂ.	ಕೆಲಸದ ಹೆಸರು	ಅಂದಾಜು ಮೊತ್ತ ರೂಪಾಯಿ
1	ಮ.ನ.ಪಾ. ವ್ಯಾಪ್ತಿಯ ವಿ.ನಂ.24 ದೇರೆಬೈಲ್ ದಕ್ಷಿಣ ವಾರ್ಡಿನ ದಡ್ಡಲ್‌ಕಾಡ್ - ಕೊಟ್ಟಾರಕ್ರಾಸ್ ರಸ್ತೆಯ ದಡ್ಡಲ್‌ಕಾಡ್ 4ನೇ ಅಡ್ಡ ರಸ್ತೆ ಬಳಿಯಿಂದ ಅಯ್ಯಪ್ಪ ಮಂದಿರವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿ. **(Indent No.33763)**	**80,00,000.00**

ಸಹಿ/- ಕಾರ್ಯಪಾಲಕ ಅಭಿಯಂತರರು ಮಹಾನಗರಪಾಲಿಕೆ ಮಂಗಳೂರು.
DIPR/MNG/KSMCA/1010/24-25 dt. 17.12.2024

ಪುರಸಭೆ ಕಾರ್ಯಾಲಯ ಸವಣೂರ
ಶಿಗ್ಗಾಂವ ರಸ್ತೆ ಸವಣೂರ-581118 ಜಿ॥ ಹಾವೇರಿ
ದೂರವಾಣಿ 08378 241623 Website:http://savanurtown.mrc.gov.in
ಕ್ರ.ಸಂ/ಪುಸಸ/ತಾವಿ/ಟೆಪ್ರ/ವಹಿ/2024-25 ದಿನಾಂಕ:-16-12-2024
ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ ಪ್ರಕಟಣೆ
ಸವಣೂರ ಪುರಸಭೆಯ ಸ್ವಚ್ಛ ಭಾರತ ಮಿಷನ್-1.0ರ ಅನುದಾನದಲ್ಲಿ 01 ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000 ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರ ಟೆಂಡರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಕರ್ನಾಟಕ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ್ಸ್ KW-1ರಂತೆ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಟೆಂಡರನಲ್ಲಿ ಬಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಕಾಮಗಾರಿಗಳ ವಿವರ, ಇ.ಎಂ.ಡಿ, ಟೆಂಡರ್ ಫಾರ್ಮ ಫೀ ಮತ್ತು ಗುತ್ತಿಗೆದಾರರ ದರ್ಜೆಗಳ ಬಗ್ಗೆ ಹಾಗೂ ಇತರೆ ಯಾವುದೇ ಹೆಚ್ಚಿನ ಮಾಹಿತಿ ಬೇಕಾದಲ್ಲಿ https://kppp.karnataka.gov.in/ನ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ತಿಳಿದುಕೊಳ್ಳಬಹುದು ಹಾಗೂ ಕಛೇರಿ ವೇಳೆಯಲ್ಲಿ ಪುರಸಭೆಯ ತಾಂತ್ರಿಕ ವಿಭಾಗದಲ್ಲಿ ಕೇಳಿ ತಿಳಿದುಕೊಳ್ಳಬಹುದು ಟೆಂಡರಗಳ ವಿವರಗಳು ಈ ಕೆಳಗಿನಂತಿವೆ.
ಕಾಮಗಾರಿಯ ವಿವರ :- INDENT33724 – 2.50ಲಕ್ಷಗಳು.
1) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಆನಲೈನ್‌ನಲ್ಲಿ ಅರ್ಜಿ ಸಲ್ಲಿಸಿ ದರವಾರು ಸಲ್ಲಿಸಲು ಕೊನೆಯ ದಿನಾಂಕ:31-12-2024 ಸಂಜೆ 5.30ಘಂಟೆವರೆಗೆ.
2) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02-01-2025 ಮುಂಜಾನೆ 11.00 ಘಂಟೆ ನಂತರ ಆನಲೈನ್ ಮೂಲಕ.
ಸಹಿ/- ಮುಖ್ಯಾಧಿಕಾರಿ ಪುರಸಭೆ ಸವಣೂರ
ಸಹಿ/- ಅಧ್ಯಕ್ಷರು ಪುರಸಭೆ ಸವಣೂರ

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರಿಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/26096910 ಫ್ಯಾಕ್ಸ್: 080-25536105
Email: purchase@kmf.coop
ಟೆಂಡರ್‌ನ ಸಂಖ್ಯೆ: KMF/PUR/Tender-697/2024-25/CALL-2 ದಿನಾಂಕ: 17.12.2024
ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)
ಕರ್ನಾಟಕ ಸಹಕಾರಿ ಹಾಲು ಮಹಾಮಂಡಳ ಬೆಂಗಳೂರು, ಈ ಕೆಳಗೆ ತಿಳಿಸಿರುವ ಸಾರಿಗೆ ಸೇವೆ ಪಡೆಯಲು ಅರ್ಹ ಟೆಂಡರ್‌ದಾರರಿಂದ 02 ವರ್ಷದ ಅವಧಿಗೆ ಟೆಂಡರನ್ನು ಆಹ್ವಾನಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

ಕ್ರ.ಸಂ.	ವಿವರ	ಇ.ಎಂ.ಡಿ. (ರೂ.)
1	Transportation service for transporting raw materials at KMF cattle feed plants,	ಹೆಚ್ಚಿನ ವಿವರಗಳನ್ನು ಟೆಂಡರ್ ದಾಖಲಾತಿಗಳಲ್ಲಿ ನೋಡಬಹುದು

ಕೆಪಿಪಿ-ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 24.12.2024 ರಂದು 03.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ ಸಹಿ/- ನಿರ್ದೇಶಕರು (ಖರೀದಿ)

ಮುಡಾ ವಿಧೇಯಕ ಮಂಡನೆ

← ಮೊದಲಪುಟದಿಂದ

2011ನೇ ಸಾಲಿನ ಜನಗಣತಿಯಂತೆ ಮೈಸೂರು ನಗರದ ಜನಸಂಖ್ಯೆಯು 8,93,062 ಇದ್ದು, ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ಜನಸಂಖ್ಯೆ 16,96,577 ಇರುತ್ತದೆ. ಪ್ರಸ್ತುತದಲ್ಲಿ ಮೈಸೂರು ನಗರ 10 ಲಕ್ಷ ಜನಸಂಖ್ಯೆ ಹೊಂದುವ ಸಾಧ್ಯತೆ ಇದ್ದು, ಮೆಟ್ರೋಪಾಲಿಟನ್ ನಗರದ ಎಲ್ಲ ಲಕ್ಷಣಗಳನ್ನು ಹೊಂದಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ, ಆಯವ್ಯಯ ಮತ್ತು ಇತರೆ ಕಾರ್ಯಚಟುವಟಿಕೆಗಳು ವಿಸ್ತರಿಸಿವೆ. ಅತಿ ವೇಗ ಮತ್ತು ಬೃಹತ್ ಪ್ರಮಾಣದ ಬೆಳವಣಿಗೆಗಳಿಂದಾಗಿ ಪ್ರಾಧಿಕಾರ ಸಂಕೀರ್ಣ ಸವಾಲುಗಳನ್ನು ಎದುರಿಸುತ್ತಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾದರಿಯಲ್ಲಿ ಪ್ರತ್ಯೇಕ ಅಧಿನಿಯಮ ರಚಿಸಲು ಸರಕಾರ ತೀರ್ಮಾನಿಸಿದೆ.

ಪ್ರಾಧಿಕಾರದಲ್ಲಿನ ಹುದ್ದೆಗಳು, ಅಧಿಕಾರಾವಧಿ

ಪ್ರಾಧಿಕಾರ ಒಬ್ಬ ಅಧ್ಯಕ್ಷರು, ಒಬ್ಬರು ಹಣಕಾಸು ಸದಸ್ಯ, ಒಬ್ಬರು ಎಂಜಿನಿಯರ್, ಒಬ್ಬ ಟೌನ್ ಪ್ಲಾನರ್, ವಾಸ್ತುಶಿಲ್ಪ ಅನುಭವ ಇರುವ ವ್ಯಕ್ತಿ, ಆಯುಕ್ತರು, ನಗರಾಭಿವೃದ್ಧಿ ಇಲಾಖೆಯ ಅಧಿಕಾರಿ, ಇಬ್ಬರು ಶಾಸರು, ಕಾರ್ಯದರ್ಶಿ, ಎಸ್‌ಸಿ, ಎಸ್‌ಟಿ ಸಮುದಾಯದ ತಲಾ ಒಬ್ಬರು, ಮಹಿಳೆಯೊಬ್ಬರು ಸೇರಿ ನಾಲ್ವರು ಪ್ರಾಧಿಕಾರದ ಸದಸ್ಯರಾಗಿಲಿದ್ದಾರೆ. ಅಧ್ಯಕ್ಷರು ಹಾಗೂ ಸದಸ್ಯರ ಅವಧಿ ಮೂರು ವರ್ಷ ಇರಲಿದೆ.

ಡಿ.26ರಂದು ಎಐಸಿಸಿ ಕಾರ್ಯಕಾರಿ ಸಭೆ ಆಯೋಜನೆ: ಕೆ.ಸಿ.ವೇಣುಗೋಪಾಲ್

ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ

← ಮೊದಲಪುಟದಿಂದ

ಆದರೆ ಸದ್ಯ ದೇಶದಲ್ಲಿ ತದ್ವಿರುದ್ಧ ವಾತಾವರಣ ಇದೆ. ಕೇಂದ್ರ ಸರಕಾರ ಉದ್ಯಮಿಗಳ ಪರವಾಗಿ ಕೆಲಸ ಮಾಡುತ್ತಿದೆ. ಧರ್ಮಗಳ ಮಧ್ಯೆ ವಿಷಬೀಜ ಬಿತ್ತುವ ಮೂಲಕ ದೇಶದಲ್ಲಿ ಸಮಾನತೆಯನ್ನೇ ಅಳಿಸಿ ಹಾಕಲಾಗುತ್ತಿದೆ. ಈ ಎಲ್ಲ ಕಾರಣಗಳಿಂದ ಕಾಂಗ್ರೆಸ್ ಪಕ್ಷ ಗಾಂಧಿ ಭಾರತ ಪರಿಕಲ್ಪನೆ ಅಡಿಯಲ್ಲಿ ಕಾರ್ಯಕ್ರಮ ಆಯೋಜನೆ ಮಾಡಿದೆ ಎಂದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಮಾತನಾಡಿ., ಬೆಳ ಗಾವಿ ಕಾಂಗ್ರೆಸ್ ಅಧಿವೇಶನದ ಶತಮಾ ನೋತ್ಸವ ಕಾರ್ಯಕ್ರಮದಿಂದ ದೇಶದಲ್ಲಿ ಬದಲಾವಣೆ ಪರ್ವ ಆಗಲಿದೆ. ಮಹಾತ್ಮ ಗಾಂಧೀಜಿ ಈಸ್ಟ್ ಇಂಡಿಯಾ ಕಂಪನಿ ವಿರುದ್ಧ ಚಳುವಳಿ ಆರಂಭಿಸಿದ್ದರು. ಈಗ ಶತಮಾನೋತ್ಸವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಉದ್ಯಮಿ ಅದಾನಿ ವಿರುದ್ಧ ಹೋರಾಟ ಮುಂದುವರಿಸುತ್ತಿದ್ದೇವೆ. ಅಂದಿನ ಬ್ರಿಟಿಷ್ ಸರಕಾರ ಹಾಗೂ ಇಂದಿನ ಮೋದಿ ಸರಕಾರದ ಯಾವುದೇ ವ್ಯತ್ಯಾಸವಿಲ್ಲ. ಈ ಹಿನ್ನೆಲೆಯಲ್ಲಿ ಜನಸಮಾವೇಶ ಆಯೋಜನೆ ಮಾಡುತ್ತೇವೆ ಎಂದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಸತೀಶ್ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳಕರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ದೇಶಾದ್ಯಂತ ಎಲ್ಲ ಸಂಸದ, ಶಾಸಕರಿಗೆ ಆಹ್ವಾನ

ಡಿಸೆಂಬರ್ 26 ಹಾಗೂ 27 ರಂದು ಬೆಳಗಾವಿಯಲ್ಲಿ ಗಾಂಧಿಜಿ ಅಧ್ಯಕ್ಷತೆ ವಹಿಸಿದ್ದ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಹಿನ್ನೆಲೆಯಲ್ಲಿ ಎಲ್ಲ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡುತ್ತಿರುವೆ. ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸೇರಿದಂತೆ ದೇಶಾದ್ಯಂತ ಇರುವ ಎಲ್ಲ ಸಂಸದ ಹಾಗೂ ಶಾಸಕರಿಗೆ ಆಹ್ವಾನ ನೀಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಗರಸಭಾ ಕಾರ್ಯಾಲಯ ಹೊಸಪೇಟೆ.
ಕ್ರಸಂ/ನಸಹೊ/ಎಮ್.ಆರ್.ಎಫ್/ಟೆಂಡರ್/2024-25 ದಿನಾಂಕ: 13.12.2024
ಟೆಂಡರ್ ಪ್ರಕಟಣೆ(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ)
15th Finance and MPC ಅನುದಾನದಡಿಯಲ್ಲಿ ಈ ಕೆಳಗಿನಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸರಬರಾಜುದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **www.eproc.karnataka.govt.in** ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದು. ಪ್ರೀ ಬಿಡ್ ಮೀಟಿಂಗ್ **ದಿನಾಂಕ: 24.12.2024** ಸಂಜೆ 5.00 ಕ್ಕೆ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 26.12.2024** ಸಂಜೆ 5:00 ಗಂಟೆ ವರೆಗೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27.12.2024** ಸಂಜೆ 5.10 ಗಂಟೆಗೆ, ಟೆಂಡರ್‌ಗಳನ್ನು ತೆರೆಯುವ ಸ್ಥಳ ನಗರಸಭೆ. ಆರ್ಥಿಕ ಬಿಡ್ ತೆರೆಯುವ **ದಿನಾಂಕ: 30.12.2024** ಸಂಜೆ 5.10 ಕ್ಕೆ **DMA/2024-25/OW/WORK_INDENT25590/CALL-3** ಟೆಂಡರ್‌ಗೆ ಇಟ್ಟ ಮೊತ್ತ ಅಂದಾಜು ಮೊತ್ತ ರೂ.499.99 ಲಕ್ಷ, ಠೇವಣಿ(90 ದಿನಗಳ ವ್ಯಾಲಿಡಿಟಿ) ರೂ. 7,50,000.00 ಟೆಂಡರ್ ಪ್ರೋಸೆಸ್ಸಿಂಗ್ ಫೀ, ಇ-ಪ್ರೋಕ್ಯೂರ್‌ಮೆಂಟ್ ನಿಗಧಿ ಪಡಿಸಿದಂತೆ, ಹೆಚ್ಚಿನ ಮಾಹಿತಿಗಾಗಿ ಕೆಲಸದಂದು ಕಛೇರಿ ವೇಳೆಯಲ್ಲಿ ಕಾರ್ಯಾಲಯದ ಹೊಸಪೇಟೆ ಕಛೇರಿ ಕೆಲಸದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/-ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ), ನಗರಸಭೆ ಹೊಸಪೇಟೆ
ಸಹಿ/-ಪೌರಾಯುಕ್ತರು, ನಗರಸಭೆ ಹೊಸಪೇಟೆ
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/419

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.-2/ಟೆಂಡರ/2024-25/4421 ದಿನಾಂಕ:17/12/2024
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024-25 ನೇ ಸಾಲಿನ ಲೆಕ್ಕ ಶೀರ್ಷಿಕೆ 4059-ಲೋ.ಇ. ಕಟ್ಟಡಗಳು ಅಡಿ 2 ಕಾಮಗಾರಿಗಳು, 5054-ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಅಡಿ 1 ಕಾಮಗಾರಿ ಹಾಗೂ 5054-ರಾಜ್ಯ ಹೆದ್ದಾರಿ ಸುಧಾರಣೆ ಅಡಿ 1 ಕಾಮಗಾರಿ, ಹೀಗೆ ಒಟ್ಟು 4 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 240.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 784.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆವ್ಹಾನಿಸಲಾಗಿದೆ.
ಕ್ರ.ಸಂ. 1 & 2 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:30-12-2024 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:31-12-2024 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 02-01-2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):04-01-2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕ್ರ.ಸಂ. 3 & 4 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:04-01-2025 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:06-01-2025 (ಸಾಯಂಕಾಲ 5.30 ಗಂಟೆಯ ವರೆಗೆ). 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:08-01-2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):10-01-2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1320/KSMCA/2024-25

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ: ಮನಪಾ/ಲೋವಿ/ಕಾಅ/ಡಿಎಮ್ಎ/ಟಿಎನ್‌ಡಿ/ಇಪ್ರೋ-/2024-25
ದಿನಾಂಕ:13.12.2024
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ **1) ಸನ್ 2024-25 ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಲ್ಲಿ 02 ಕಾಮಗಾರಿಗಳು, 2) ಸನ್ 2023-24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯಡಿ ಶೇ. 24.10, ಶೇ. 7.25 ಹಾಗೂ ಶೇ. 5ರ ಯೋಜನೆಯಲ್ಲಿ 01 ಕಾಮಗಾರಿ, 3) ಸನ್ 2024-25 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯಡಿ ಶೇ. 24.10, ಶೇ. 7.25 ಹಾಗೂ ಶೇ. 5ರ ಯೋಜನೆಯಲ್ಲಿ 01 ಕಾಮಗಾರಿ, 4) ಸನ್ 2020-21 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯಡಿ ಶೇ. 7.25 ಯೋಜನೆಯಲ್ಲಿ 01 ಕಾಮಗಾರಿ, 5) ಸನ್ 2020-21 ನೇ ಸಾಲಿನ ಎಸ್.ಎಫ್.ಸಿ ನಿಧಿಯಡಿ ಶೇ. 7.25 ಯೋಜನೆಯಲ್ಲಿ 01 ಕಾಮಗಾರಿ ಮತ್ತು 6) ಸನ್ 2024-25 ನೇ ಸಾಲಿನ ಮಹಾನಗರ ಪಾಲಿಕೆಯ ಸಾಮಾನ್ಯ ಅನುದಾನದಲ್ಲಿ 03 ಕಾಮಗಾರಿಗಳು** ಕೆ.ಪಿ.ಡಬ್ಲ್ಯೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆವ್ಹಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ (https://kppp.karnataka. gov.in) ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.
ಸೂಚನೆ: ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ https://kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು.
1. ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 27.12.2024.
ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/513/ಕೆಎಸ್‌ಎಂಸಿಎ/2024-25

ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಾರ್ಯಾಲಯ
ಮೈಸೂರು ಜಿಲ್ಲೆ – 570008
ಕಛೇರಿ : 0821-2330109, ಇಮೇಲ್: itstaff_ulb_srirampur@yahoo.com
ಸಂ: ಶ್ರೀ.ಪ.ಪಂ.ಕಾ/ಜೆ.ಇ/ಟೆಂ.ಪ್ರ.10/2024-25 ದಿನಾಂಕ: 16.12.2024
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಶ್ರೀರಾಂಪುರ ಪಟ್ಟಣ ಪಂಚಾಯಿತಿಯ ವ್ಯಾಪ್ತಿಯ ನೈರ್ಮಲ್ಯ ಶಾಖೆಯಲ್ಲಿನ ನೌಕರರುಗಳಿಗೆ ಬೆಳಗಿನ ಉಪಹಾರ ಹಾಗೂ ಘನತ್ಯಾಜ್ಯ ನಿರ್ವಹಣೆಗಾಗಿ ವಾಹನ ಚಾಲಕರು ಮತ್ತು ಲೋಡರ್ಸ್ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ನೋಂದಾಯಿತ ಅರ್ಹ ಮಾನವ ಸಂಪನ್ಮೂಲ ಸಂಸ್ಥೆ/ಸರಬರಾಜುದಾರರಿಂದ 1999 ಹಾಗೂ 2000ರ ಕೆಟಿಪಿಪಿ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ **https://kppp.karnataka.gov.in** ನಿಂದ ಟೆಂಡರ್ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರನ್ನು ಸಲ್ಲಿಸಬಹುದಾಗಿದೆ. ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ:**01-01-2025 ಸಂಜೆ 5.00 ಗಂಟೆಗೆ.** ತಾಂತ್ರಿಕ ಟೆಂಡರ್ ತೆರೆಯುವ **ದಿನಾಂಕ: 03-01-2025 ಪೂರ್ವಾಹ್ನ 11.30 ಗಂಟೆಗೆ.** ಸ್ವೀಕೃತವಾದ ದರ ಟೆಂಡರ್ ತೆರೆಯುವ ದಿನಾಂಕ: **06-01-2025 ಪೂರ್ವಾಹ್ನ 11.30 ಗಂಟೆಗೆ.**

ಕ್ರಸಂ.	ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಲಾವಧಿ
1	DMA/2024-25/SE4245	52.22	1,04,500.00	12 ತಿಂಗಳು
2	DMA/2024-25/SE4244	42.33	84,700.00	12 ತಿಂಗಳು
3	DMA/2024-25/SE4246	9.709	24,300.00	12 ತಿಂಗಳು

ಸೂಚನೆ: ಹೆಚ್ಚಿನ ವಿವರ ಹಾಗೂ ಮಾಹಿತಿಗಳನ್ನು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.
ಸಹಿ/- (ಕೆ. ಎಂ. ಮಹೇಶ್ ಕುಮಾರ್., ಕೆ.ಎ.ಎಸ್.) ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯಿತಿ, ಶ್ರೀರಾಂಪುರ
ಸಹಿ/- (ಹೆಚ್. ಎಮ್. ಸುರೇಶ) ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ, ಶ್ರೀರಾಂಪುರ
DIPR/MYS/KAVITA/967/2024-25

"ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ-583101"
ಸಂಖ್ಯೆ: ಜಿನಕೊಬ/ಮುಅನ/ಹಂತ-4/ಕಟ್ಟಡ & ಪಾರ್ಕ್/01/2024-25 ದಿನಾಂಕ : 12.12.2024
ಟೆಂಡರ್ ಪ್ರಕಟಣೆ
ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಸಿರುಗುಪ್ಪ ನಗರಸಭೆ, ಸಂಡೂರು ಮತ್ತು ಕುರುಗೋಡು ಪುರಸಭೆಯಲ್ಲಿ ಕಾಮಗಾರಿಗಳನ್ನು ಪ್ಯಾಕೇಜ್ ಮಾಡಿ ಅನುಷ್ಠಾಗೊಳಿಸಲು ಕಾಮಗಾರಿಗಳಿಗೆ ಪ್ಯಾಕೇಜ್ ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜುಗಳನ್ವಯ ಈ ಕೆಳಕಾಣಿಸಿದಂತೆ **Public Procurement Portal** ಮೂಲಕ ಟೆಂಡರ್ ಅಹ್ವಾನಿಸಲಾಗಿರುತ್ತದೆ.
ಪ್ಯಾಕೇಜ್ ಕಾಮಗಾರಿ ವಿವರ: 01.Development of parks in ward N.s 13, 16, 17 & 24 in Siruguppa CityDMA/2024-25/OW/WORK_INDENT27686/CALL-3. **ಅಂದಾಜು ಮೊತ್ತ** (ರೂ.ಲಕ್ಷಗಳಲ್ಲಿ): 81.16 **ಟೆಂಡರ್‌ಗಿಟ್ಟ ಮೊತ್ತ** (ರೂ.ಲಕ್ಷಗಳಲ್ಲಿ): 68.67 **EMD (Rs):** 1,38,500/-
02.Development of Maratha samaja Burial ground and Lakshmipura survey no 70 Burial Ground in sandur TMC LimitsDMA/2023-24/OW/WORK_INDENT16023/CALL-3 **ಅಂದಾಜು ಮೊತ್ತ** (ರೂ.ಲಕ್ಷಗಳಲ್ಲಿ): 61.63 **ಟೆಂಡರ್‌ಗಿಟ್ಟ ಮೊತ್ತ** (ರೂ.ಲಕ್ಷಗಳಲ್ಲಿ): 52.18 **EMD (Rs):** 1,04,500/-
03.Providing and installation of Highmast light at ward No. 05 & 06, Construcation community toilet in ward No. 06 And Construction of Modern library (H.M Kumaraswamt Layout) for the Handicapped at Kurugodu Town DMA/2024-25/BD/WORK_INDENT16560/CALL-3 **ಅಂದಾಜು ಮೊತ್ತ** (ರೂ.ಲಕ್ಷಗಳಲ್ಲಿ): 38.36 **ಟೆಂಡರ್‌ಗಿಟ್ಟ ಮೊತ್ತ** (ರೂ.ಲಕ್ಷಗಳಲ್ಲಿ): 32.49 **EMD (Rs):** 65,000/-
Last date & time for tender queries / clarifications **26.12.2024 at 17.30 Hrs.** Pre Bid Meeting **18.12.2024 at 11.00 hrs.** Last date and time for receipt of tender technical bids **30.12.2024 at 16.30 hrs.** Date & time for opening of (Technical bids) **31.12.2024 at 17:00 Hrs.** Date & time for opening of (Financial bids) **06.01.2025 at 11:00 Hrs.** Auto extension of tender schedule **02 days**
ಸದರಿ ಕಾಮಗಾರಿಗಳಿಗೆ ಟೆಂಡರ್‌ನ್ನು ದಿನಾಂಕ: 30.12.2024 ರಂದು 16.30 ಗಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ, ಸದರಿ ಟೆಂಡರನ್ನು ದಿನಾಂಕ: 02.01.2025 ರಂದು 11:00 ಗಂಟೆಗೆ ತೆರೆಯಲಾಗುವುದು, ಸದರಿ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಕೆ.ಪಿ.ಪಿ.ಪಿ ಯಲ್ಲಿ ಟೆಂಡರ್ ದಾಖಲಾತಿಗಳಿಗಾಗಿ ಮತ್ತು ಷರತ್ತುಗಳಿಗಾಗಿ: https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು & ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ, ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತಕರು / ಸಹಾಯಕ ಕಾರ್ಯಪಾಲಕ ಅಭಿಯಂತಕರು ಜಿಲ್ಲಾ ನಗರಾಭಿವೃದ್ಧಿ ಕೋಶ, (ದೂ ಸಂ : 7760848586, 7892198334) ಇವರನ್ನು ಸಂಪರ್ಕಿಸಿ ಪಡೆಯಬಹುದು.
ಡಿಐಪಿಆರ್/ಬಳ್ಳಾರಿ/686/ಕೆಎಸ್‌ಎಂಸಿಎ/2024-25
ಸಹಿ/-ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ

ಅಪಘಾತ 3 ಸಾವು



ಸಿಂಧನೂರು: ಪಟ್ಟಣದ ಡಾಲರ್ಸ್ ಕಾಲೋನಿಯ ಹೊರವಲಯದಲ್ಲಿ ರಸ್ತೆಬದಿ ಚಹ ಕುಡಿಯುತ್ತಾ ನಿಂತಿದ್ದಾಗ ಭತ್ತದ ಹೊಟ್ಟು ತುಂಬಿದ್ದ ಲಾರಿ ಉರುಳಿ ಬಿದ್ದು ನೀರಾವರಿ ಇಲಾಖೆಯ ಮೂವರು ಸಿಬ್ಬಂದಿ ಸ್ಥಳದಲ್ಲೇ ಮೃತಪಟ್ಟ ದುರ್ಘಟನೆ ಸೋಮವಾರ ತಡರಾತ್ರಿ ನಡೆದಿದೆ.

ಹೊಟ್ಟು ತುಂಬಿಕೊಂಡು ರಾಯಚೂರಿನಿಂದ ಸಿಂಧನೂರು ಕಡೆಗೆ ಹೊರಟಿದ್ದ ಲಾರಿ, ತಡರಾತ್ರಿ 12 ಗಂಟೆ ಸುಮಾರಿಗೆ ರಸ್ತೆ ಬದಿ ಟೀ ಕುಡಿಯಲು ನಿಂತಿದ್ದ ಮೂವರ ಮೇಲೆ ಉರುಳಿ ಬಿದ್ದು ಬಲಿತೆಗೆದುಕೊಂಡಿದೆ.

ಮೃತಪಟ್ಟವರನ್ನು ನೀರಾವರಿ ಇಲಾಖೆ ಜವಳಗೇರಾ ಉಪವಿಭಾಗದ ಇಬ್ಬರು ಕಿರಿಯ ಎಂಜಿನಿಯರ್ ಗಳಾದ ರಾಂಪೂರ ಗ್ರಾಮದ ಶಿವರಾಜಕುಮಾರ್ (28) ಮತ್ತು ಲಿಂಗಸುಗೂರಿನ ಸರ್ಜಾಪುರ ಗ್ರಾಮದ ಮಲ್ಲಿಕಾರ್ಜುನ್ (35), ಕಂಪ್ಯೂಟರ್ ಆಪರೇಟರ್ ಸಿಂಧನೂರಿನ ಮೆಹಬೂಬ್ ಸಾಬ್ (30)ಎಂದು ಗುರುತಿಸಲಾಗಿದೆ.ತುಂಗ ಭದ್ರಾ ಎಡದಂಡೆ ನಾಲೆಗೆ ನೀರು ಬಿಡಲಾಗಿತ್ತು. ಈ ವೇಳೆ ನೀರಾವರಿ ಇಲಾಖೆ ಸಿಬ್ಬಂದಿ ನೀರಿನ ಗೇಜ್ ಪರಿಶೀಲಿಸಿ ವಾಪಸ್ ಬರುತ್ತಿದ್ದ ವೇಳೆ ದುರ್ಘಟನೆ ನಡೆದಿದೆ. ಸಿಂಧನೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಾಚಾರ ಸಣ್ಣದಲ್ಲ

ನಿರ್ಗತಿಕ ಕುಟುಂಬಕ್ಕೆ ವಾತ್ಸಲ್ಯ ಕಿಟ್ ವಿತರಣೆ

ಮಸ್ಕಿ: ಆಧುನಿಕ ಸಮಾಜದಲ್ಲಿ ನಿರ್ಗತಿಕ, ರೋಗಿ, ವೃದ್ಧರನ್ನು ಕಡೆಗಣಿಸುವುದು ಸಾಮಾನ್ಯವಾಗಿದೆ. ಇಳಿ ವಯಸ್ಸಿನಲ್ಲಿ ಅವರಿಗೆ ಅಭಯ ನೀಡಿ ಪ್ರೀತಿ-ವಿಶ್ವಾಸದಿಂದ ಆರೈಕೆ ಮಾಡಿ ಶಾಂತಿ, ನೆಮ್ಮದಿಯ ಜೀವನ ನಡೆಸಲು ಪ್ರೇರಣೆ ನೀಡುವುದೇ ವಾತ್ಸಲ್ಯ ಯೋಜನೆಯ ಉದ್ದೇಶವಾಗಿದೆ ಎಂದು ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಶಾಲಿನಿ ಅವರು ಹೇಳಿದರು. ತಾಲೂಕಿನ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿ.ಸಿ ಟ್ರಸ್ಟ್ ವ್ಯಾಪ್ತಿಯಲ್ಲಿ ನಿರ್ಗತಿಕ ಕುಟುಂಬಗಳಿಗೆ ಮನೆ ಬಳಕೆ ಸಾಮಾನು, ಬಟ್ಟೆ, ಸಿರಿ ಸಾಮಾಗ್ರಿ, ಅಡುಗೆ ಸಾಮಾನು ವಿತರಣೆ ಮಾಡಿ ಮಾತನಾಡಿದ ಅವರು, ಧರ್ಮಸ್ಥಳ ಯೋಜನೆಯ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಹಾಗೂ ಡಾ.ವಿ.ಹೇಮಾವತಿ ಅವರ ಆಶಯ ದಂತೆ ನಿರ್ಗತಿಕ ಕುಟುಂಬಗಳಿಗೆ ವಾತ್ಸಲ್ಯ ಕಿಟ್ ವಿತರಣೆ ಮಾಡಲಾಗುತ್ತಿದೆ ಎಂದರು. ಈ ಸಂದರ್ಭ ದಲ್ಲಿ ತಾಲೂಕಿನ ಜ್ಞಾನ ವಿಕಾಸ ಕೇಂದ್ರದ ಸಮನ್ವಯಾಧಿಕಾರಿ ಹೇಮಲತಾ, ತಾಲೂಕು ನೋಡೆಲ್ ಅಧಿಕಾರಿ ನಿರಂಜನ ಮೂರ್ತಿ, ವಲಯದ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಕಾರ್ಮಿಕ ಭವನ: ಅನುದಾನಕ್ಕೆ ಮನವಿ

ಮುದಗಲ್: ಲಿಂಗಸುಗೂರ ಪಟ್ಟಣದಲ್ಲಿ ಕಾರ್ಮಿಕರ ಭವನ ನಿರ್ಮಾಣ ಮಾಡಲು ಅನುದಾನ ಮಂಜೂರು ಮಾಡಬೇಕು ಎಂದು ಕಾರ್ಮಿಕ ಇಲಾಖೆ ಸಚಿವ ಸಂತೋಷ ಲಾಡ್ ರವರಿಗೆ ರಾಯಚೂರು ಕೊಪ್ಪಳ ವಿಧಾನ ಪರಿಷತ್ ಸದಸ್ಯ ಶರಣಾಗೌಡ ಪಾಟೀಲ್ ಬಯ್ಯಾಪೂರು ಮನವಿ ಮಾಡಿದ್ದಾರೆ. ಬೆಳಗಾವಿ ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಸಚಿವರನ್ನ ಭೇಟಿಯಾಗಿ, ಕಾರ್ಮಿಕರು ಸಂಘಟನೆ ಸಭೆ ಮತ್ತು ಸಮಾರಂಭ ಮಾಡಲು ಕಾರ್ಮಿಕರ ಸಮುದಾಯದ ಭವನ ಅತಿ ಅವಶ್ಯಕತೆ ಇರುವ ಹಿನ್ನಲೆಯಲ್ಲಿ ಲಿಂಗಸುಗೂರು ಪಟ್ಟಣದಲ್ಲಿ ಭವನ ನಿರ್ಮಾಣ ಮಾಡಲು 3 ಕೋಟಿ ರುಗಳು ಅನುದಾನ ಮಂಜೂರು ಮಾಡಬೇಕು ಮನವಿಯಲ್ಲಿ ಕೋರಿದ್ದಾರೆ.

ಉಪಕರಣ ಬಳಸಿ ಬೋಧನೆ ಮಾಡಿ

ಮುದಗಲ್: ಪ್ರಯೋಗಾಲಯದ ಉಪಕರಣಗಳು ಅತ್ಯಮೂಲ್ಯ ಹಾಗೂ ಅತ್ಯಪಯುಕ್ತವಾಗಿದ್ದು ಶಾಲೆಗಳ ಶಿಕ್ಷಕರು ಹಾಗೂ ಮುಖ್ಯ ಗುರುಗಳು ಸಮರ್ಪಕವಾಗಿ ಮಕ್ಕಳಿಗೆ ಬಳಸಿ ಬೋಧನಾ ಚಟುವಟಿಕೆ ಮಾಡುವಂತೆ ಲಿಂಗಸುಗೂರ ಕ್ಷೇತ್ರ ಶಿಕ್ಷಣಾಧಿಕಾರಿ ಹುಂಬಣ್ಣ ರಾಠೋಡ ಕರೆ ತಿಳಿಸಿದರು. ಬೆಂಗಳೂರಿನ ಕೃತಗ್ಯತಾ ಟ್ರಸ್ಟ್ ಬೆಂಗಳೂರು ಇವರು ಗ್ರಾಮೀಣ ಭಾಗದ ಶಾಲೆಗಳಿಗೆ ಕೊಡ ಮಾಡಿರುವ ವಿಜ್ಞಾನ ವಿಷಯದ ಪ್ರಯೋಗಾಲಯದ ಪರಿಕರಗಳನ್ನು ಲಿಂಗಸುಗೂರ ತಾಲ್ಲೂಕಿನ ಮೂರು ಶಾಲೆಗಳಿಗೆ ಕೊಡಿಸಿದ ಪಟ್ಟಣ ಸಮೀಪದ ಜನತಾಪೂರು ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಮೌನೇಶ ರವರಿಗೆ ಸನ್ಮಾನ ಮಾಡಿ ಅಭಿನಂದಿಸಿ, ನಂತರ ಮಾತನಾಡಿದರು. ಅವರು ಕೃತಗ್ಯತಾ ಟ್ರಸ್ಟ್ ಬೆಂಗಳೂರು ಇವರ ಕೊಡುಗೆಗಳು ನಮ್ಮ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಸಹಕಾರಿ ಆಗಿವೆ ಎಂದು ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯ ಅಧಿಕಾರಿ ಹನಮಂತಪ್ಪ ಕುಳಗೇರಿ ಶಿಕ್ಷಣ ಸಂಯೋಜಕರಾದ ಮಹಾಂತೇಶ ನಾಗರಾಜ ಹಾಗೂ ಶಿಕ್ಷಕ ನಾಗರಾಜ್ ಮಾಂಡ್ರೆ ಉಪಸ್ಥಿತರಿದ್ದರು.

ವಿದ್ಯುತ್ ಸ್ಪರ್ಶ: ಯುವಕ ಸಾವು

ರಾಯಚೂರು: 50 ಮೆಗಾವ್ಯಾಟ ಸೋಲಾರ್ ಪವರ್ ಪ್ಲಾಂಟ್ ನಲ್ಲಿ ವಿದ್ಯುತ್ ಕೇಬಲ್ ಸ್ಪರ್ಶಿಸಿ ಯುವಕ ಮೃತಪಟ್ಟ ಘಟನೆ ಇತ್ತೀಚಿಗೆ ಮಾಚನೂರು ಗ್ರಾಮದಲ್ಲಿ ಜರುಗಿದೆ. ಜಿಲ್ಲೆಯ ಮಾನ್ವಿ ತಾಲೂಕಿನ ಮಾಚನೂರು ಗ್ರಾಮದಲ್ಲಿ ಭಾನುವಾರ ರಾತ್ರಿ ಈ ಒಂದು ಘಟನೆ ಜರುಗಿದೆ. ಮೃತ ಯುವಕ ತಾಲೂಕಿನ ಅತ್ತನೂರು ಗ್ರಾಮದ ಅಜ್ಮೀರ್(19) ಎಂದು ತಿಳಿದುಬಂದಿದೆ. ಮಾಚನೂರು ಗ್ರಾಮದ ಹೊರವಲಯದಲ್ಲಿನ 50 ಮೆಗಾ ವ್ಯಾಟ್ ಸೋಲಾರ್ ಪವರ್‌ಪ್ಲಾಂಟ್‌ನಲ್ಲಿ ವಾರದ ಹಿಂದೆ ಕೆಲಸಕ್ಕೆ ಸೇರಿದ್ದ ಅಜ್ಮೀರ್, ಎಂದಿನಂತೆ ಕೆಲಸಕ್ಕೆ ಹೋಗಿದ್ದ ವೇಳೆ ಘಟನೆ ಜರುಗಿದೆ. ಪವರ್ ಪ್ಲಾಂಟ್ ನಲ್ಲಿ ಕೆಲಸಕ್ಕೆ ಹೋಗಿದ್ದ ಯುವಕನಿಗೆ ಯಾವುದೇ ಸೇಫ್ಟಿ ಉಪಕರಣಗಳು ನೀಡಿರಲಿಲ್ಲ. ಹಾಗಾಗಿ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ಘಟನೆ ಜರುಗಿದೆ ಎಂದು ಸ್ಥಳಿಯರು ಆರೋಪಿಸುತ್ತಿದ್ದಾರೆ. ಘಟನೆ ಸಂಬಂಧ ಸಿರವಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ ಸಿ.ಟಿ.ರವಿ } ಪರಿಷತ್‌ನ ಬಿಜೆಪಿ ಸದಸ್ಯ

ಊರು ಕೊಳ್ಳೆಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದಂತಾಗಿದೆ. ಯೋಗ್ಯವಲ್ಲದ ಔಷಧಿ ಬಂದರೂ, ಸರಕಾರ ಕ್ರಮ ಕೈಗೊಂಡಿಲ್ಲ. ರಾಯಚೂರು, ಬೆಳಗಾವಿ, ಬಳ್ಳಾರಿಯಲ್ಲಿ ಸರಣಿ ಸಾವುಗಳು ಸಂಭವಿಸಿವೆ. ಬಳ್ಳಾರಿ ದುರಂತಕ್ಕೆ ಕಾರಣವಾದ ಪಶ್ಚಿಮ ಬಂಗಾಳದ ಕಂಪನಿ ಸೇರಿದಂತೆ ಇತರ ಡ್ರಗ್ಸ್ ಕಂಪನಿಗಳ ಮೇಲೆಯೂ ತನಿಖೆ ಮಾಡಿಸಿ.

ಚುನಾವಣೆ ಫಲಿತಾಂಶ ಘೋಷಣೆ ವಿರುದ್ಧ ಕೊಪ್ಪಳ ಸಹಕಾರಿ ಸಂಘಗಳ ಉಪ ನಿಬಂಧಕರಿಂದ ಆದೇಶ

ಗಂಗಾವತಿ ಟಿಎಪಿಸಿಎಂಎಸ್ ಚುನಾವಣೆಗೆ ತಡೆ

ಶರಣಬಸವ ಹುಲಿಹೈದರ, ಕೊಪ್ಪಳ

ಜಿಲ್ಲೆಯ ಗಂಗಾವತಿ ತಾಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ(ಟಿಎಪಿಸಿಎಂಎಸ್) ಚುನಾವಣೆ ಫಲಿತಾಂಶಕ್ಕೆ ತಡೆ ನೀಡಿ ಕೊಪ್ಪಳ ಸಹಕಾರಿ ಸಂಘಗಳ ಉಪ ನಿಬಂಧಕರಿಂದ ಆದೇಶಿಸಿದ್ದು, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗೆ ಕೊಕ್ಕೆ ಬಿದ್ದಿದೆ.

ಒಟ್ಟು 14 ನಿರ್ದೇಶಕರ ಬಲ ಹೊಂದಿರುವ ಗಂಗಾವತಿ ಟಿಎಪಿಸಿಎಂಎಸ್ ಗೆ ಕಳೆದ ಜುಲೈ 21 ರಂದು ಚುನಾವಣೆ ಘೋಷಣೆ ಆಗಿತ್ತು. ವಿಎಸ್‌ಎಸ್ ಎನ್ ಎನ್ ಸದಸ್ಯ ಸಂಘದಿಂದ 6 ನಿರ್ದೇಶಕರು ಮತ್ತು ಶೇರುದಾರ ಸದಸ್ಯರಿಂದ 8 ನಿರ್ದೇಶಕರು ಆಯ್ಕೆಗೆ ಚುನಾವಣೆ ನಿಗದಿ ಆಗಿತ್ತು. ಈ ಪೈಕಿ ಶೇರುದಾರ ಸದಸ್ಯರಿಂದ ಆಯ್ಕೆ ಆಗಬೇಕಿದ್ದ ಎಲ್ಲ 8 ನಿರ್ದೇಶಕರು ಅವಿರೋಧವಾಗಿ ಆಯ್ಕೆ ಆಗಿದ್ದಾರೆ. ಆದರೆ, ವಿಎಸ್‌ಎಸ್‌ಎನ್ ಗಳಿಗೆ ಮತದಾನದ ಹಕ್ಕು ನೀಡುವ ವಿಚಾರವಾಗಿ ಕೆಲ ಸಂಘದ ಸದಸ್ಯರು ಧಾರವಾಡ ಹೈ ಕೋರ್ಟ್ ಮೊರೆ ಹೋಗಿದ್ದರು. ಅದರ ಮುಂದುವರೆದ ಭಾಗವಾಗಿ ಈಗ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಗೆ ಕೊಕ್ಕೆ ಬಿದ್ದಿದೆ.



ಗಂಗಾವತಿ ಟಿಎಪಿಸಿಎಂಎಸ್ ಚುನಾವಣೆ ಫಲಿತಾಂಶಕ್ಕೆ ತಡೆ ನೀಡಿ ಕೊಪ್ಪಳ ಸಹಕಾರಿ ಸಂಘಗಳ ಉಪ ನಿಬಂಧಕರಿಂದ ಆದೇಶ ನೀಡಿರುವ ಪ್ರತಿ.

> ಧಾರವಾಡ ಹೈಕೋರ್ಟ್ ಆದೇಶದಲ್ಲಿ ಉಲ್ಲೇಖಿಸಿರುವ ಕೆಲ ಅಂಶಗಳ ಆಧಾರದ ಮೇಲೆ ತಾತ್ಕಾಲಿಕವಾಗಿ ತಡೆಯಾಜ್ಞೆ ನೀಡಲಾಗಿದೆ. ಮುಂದೆ ಸಮಗ್ರವಾಗಿ ವಿಚಾರಣೆ ಮಾಡಲಾಗುವುದು.
> -ದಸ್ತಗಿರ ಅಲಿ, ಉಪ ನಿಬಂಧಕರು, ಸಹಕಾರಿ ಸಂಘಗಳ ಇಲಾಖೆ

ಹುಲಿಹೈದರ, ಗುಂಡೂರು ಮತ್ತು ಸಿಂಗನಾಳ ಗ್ರಾಮಗಳ ವಿಎಸ್‌ಎಸ್‌ಎನ್ ಟೆಲಿಗೇಟ್ ಗಳ ಅರ್ಜಿ ಪುರಸ್ಕರಿಸಿರುವ ಕೊಪ್ಪಳ ಸಹಕಾರಿ ಸಂಘಗಳ ಉಪ ನಿಬಂಧಕರು ಮುಂದಿನ ಪ್ರಕ್ರಿಯೆಗೆ ತಾತ್ಕಾಲಿಕ ತಡೆ ನೀಡಿ ಆದೇಶ ಮಾಡಿದ್ದಾರೆ.

ಆದೇಶದಲ್ಲಿ ಏನಿದೆ?: ಕಳೆದ ಡಿಸೆಂಬರ್ 12 ರಂದು ಆದೇಶ ಮಾಡಿರುವ ಕೊಪ್ಪಳ ಸಹಕಾರಿ ಸಂಘಗಳ ಉಪ ನಿಬಂಧಕರು, ಹುಲಿಹೈದರ, ಗುಂಡೂರು ಮತ್ತು ಸಿಂಗನಾಳ ಗ್ರಾಮಗಳ ವಿಎಸ್ ಎಸ್‌ಎನ್ ಟೆಲಿಗೇಟ್ ಗಳ ಅರ್ಜಿ ಪುರಸ್ಕರಿಸಿ, ಆಡಳಿತ ಮಂಡಳಿಗೆ ಎ ವರ್ಗದ ಮತದಾರರ ಕ್ಷೇತ್ರದಿಂದ ದಿನಾಂಕ: 21-07-2024 ರಂದು ಮತದಾನ ನಡೆಸಿ, ದಿನಾಂಕ: 10-12-2024 ರಂದು ಫಲಿತಾಂಶ ಘೋಷಣೆ ಮಾಡಲಾಗಿದೆ. ಆದರೆ, ಮುಂದಿನ ಪ್ರಕ್ರಿಯೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಈ ನ್ಯಾಯಾಲಯದ ಆದೇಶದವರೆಗೂ ತಡೆಯಾಜ್ಞೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಏನಿದು ಪ್ರಕರಣ?: ಗಂಗಾವತಿ ಟಿಎಪಿಸಿಎಂಎಸ್ ವ್ಯಾಪ್ತಿಯಲ್ಲಿ ಸುಮಾರು 25ಕ್ಕೂ ಹೆಚ್ಚು ವಿಎಸ್‌ಎಸ್ ಎನ್ ಇವೆ. ಈ ಪೈಕಿ ಕೇವಲ 11 ವಿಎಸ್ ಎಸ್ ಎನ್ ಗಳಿಗೆ ಮಾತ್ರ ಮತದಾನ ಮತ್ತು ನಿರ್ದೇಶಕ ಸ್ಥಾನಕ್ಕೆ ಸ್ಪರ್ಧೆ ಮಾಡುವ ಅವಕಾಶ ನೀಡಲಾಗಿತ್ತು. ಬಾಕಿ ಎಲ್ಲ ಸಂಘಗಳನ್ನು ಮತದಾನಕ್ಕೆ ಅನರ್ಹ ಮಾಡಲಾಗಿತ್ತು. ಚುನಾವಣೆ ಅಧಿಕಾರಿಗಳ ಈ ಕ್ರಮದ ವಿರುದ್ಧ ಒಟ್ಟು 13 ಸಂಘಗಳು ಧಾರವಾಡ ಹೈಕೋರ್ಟ್ ಮೊರೆ ಹೋಗಿದ್ದರು. ಅರ್ಜಿ ಪುರಸ್ಕರಿಸಿದ್ದ ನ್ಯಾಯಾಲಯ ಎಲ್ಲ 13 ಸಂಘಗಳಿಗೂ ಮತದಾನದ ಅವಕಾಶ ನೀಡಿತ್ತು. ಜೊತಗೆ ನ್ಯಾಯಾಲಯ ಪರವಾನಗಿ ಪಡೆದ ನಂತರವೇ ಮತ ಏಣಿಕೆ ಮಾಡಬೇಕು ಎಂದು ನಿರ್ದೇಶನ ನೀಡಲಾಗಿತ್ತು. ಇದೀಗ ಫಲಿತಾಂಶ ಘೋಷಣೆ ನಂತರ ಮತ್ತೇ ಸಹಕಾರಿ ಉಪ ನಿಬಂಧಕರು ತಡೆಯಾಜ್ಞೆ ನೀಡಿರುವುದು ಸಾಕಷ್ಟು ಚರ್ಚೆ ಹುಟ್ಟು ಹಾಕಿದೆ.

ಮಟ್ಕಾ: ಪೊಲೀಸರ ವಿರುದ್ಧ ಕ್ರಮಕ್ಕೆ ಒತ್ತಾಯ

ಲಿಂಗಸೂಗೂರು: ಬಡ ವ್ಯಾಪಾರಸ್ಥರ ಮೇಲೆ ಪೊಲೀಸರ ದರ್ಪ, ಮಟ್ಕಾ ದಂಧೆ ಮಾಡುವ ಬುಕ್ಕಿಗಳು ಕೊಡುವ ಹಣಕ್ಕಾಗಿ ಕರ್ತವ್ಯ ಬಿಟ್ಟು ಕೆಲಸ ಮಾಡುವ ಹಟ್ಟಿ ಪೊಲೀಸರು ಬಡ ವ್ಯಾಪಾರಸ್ಥರ ಅಂಗಡಿಗಳನ್ನು ಸುಳ್ಳು ಆರೋಪ ಮಾಡಿ ಬಂದ್ ಮಾಡಿಸಿ, ಬಡ ವ್ಯಾಪಾರಸ್ಥರಿಗೆ ತೊಂದರೆ ಕೊಡುತ್ತಿರುವ ಸಿಪಿಐ ಹೊಸಕೇರಪ್ಪ ಹಾಗೂ ಪೊಲೀಸರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಸಮಾಜ ಸೇವಕ ಇಸ್ಮಾಯಿಲ್ ಪಾಷಾ ಉಸ್ತಾದ್ ಒತ್ತಾಯಿಸಿದ್ದಾರೆ.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತಾಡಿದ ಅವರು, ಹಟ್ಟಿ ಪಟ್ಟಣದ ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ಸಿಬ್ಬಂದಿಗಳು ಮಟ್ಕಾ ದಂಧೆ ನಡೆಸುವವರ ಕಾವಾಲುಗಾರರಾಗಿದ್ದಾರೆ. ಹಣ ಕೊಟ್ಟರೆ ಮಾಡಬಾರದ ಕೆಲಸಗಳನ್ನು ಮಾಡುತ್ತಾರೆ. ಮಟ್ಕಾ ಬುಕ್ಕಿಗಳು ಕೊಡುವ ಹಣದಿಂದ ಬಡ ವ್ಯಾಪಾರಸ್ಥರ ಹೊಟ್ಟೆ ಮೇಲೆ ಹೊಡಿಯುತ್ತಿದ್ದಾರೆ. ಸರಕಾರ ಕೊಡುವ 80 ಸಾವಿರ ನಮಗೆ ಸಾಲುವುದಿಲ್ಲ, ನಮಗೆ ಯಾವುದೇ ಬೇರೆ ಸಂಪನ್ಮೂಲಗಳು ಹಟ್ಟಿಯಲ್ಲಿ ಇಲ್ಲ ಅದಕ್ಕೆ ನಾವು ಮಟ್ಕಾ ದಂಧೆಗೆ ಬೆಂಬಲಿಸುತ್ತೇವೆ ಎಂದು ಗಂಟಾಘೋಷವಾಗಿ ಹೇಳುತ್ತಾರೆ. ಈ ಬಗ್ಗೆ ಎಸ್ ಪಿ ಅವರಿಗೆ ತಿಳಿಸಿದರು, ಮಟ್ಕಾ ದಂಧೆಕೋರರ ಬಗ್ಗೆ ಮಾತನಾಡದೆ ಬಡ ವ್ಯಾಪಾರಿಗಳ ಮೇಲೆ ಗೂಬೆ ಕೂಡಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಯಲ್ಲಿ ಸಮಾಜ ಸೇವಕ ಇಸ್ಮಾಯಿಲ್ ಪಾಷಾ ಉಸ್ತಾದ್ ಮಾತಾಡಿದರು.

ಪೊಲೀಸ್ ಇಲಾಖೆಗೆ ಚಾಲೆಂಜ್ ಹಾಕಿದ ಅವರು, ಬಡ ವ್ಯಾಪಾರಸ್ಥರ ಮೇಲೆ ದರ್ಪ ಬಿಟ್ಟು, ಮಟ್ಕಾ ದಂಧೆ ಮಾಡುವವರ ಬಗ್ಗೆ ಎಲ್ಲ ಮಾಹಿತಿಯು ಇಲಾಖೆಗೆ ಇದೆ ಅವರ ಮೇಲೆ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಲ್ಲಿ ಒಂದು ವೇಳೆ ಕ್ರಮ ಕೈಗೊಂಡಿದ್ದೆ ಆದರೆ ಎಸ್ ಪಿ ಆಫೀಸ್ ನಲ್ಲಿ ಜವಾನನ್ನಾಗಿ ಸಾಯೋ ವರೆಗೂ ದುಡಿಯುತ್ತೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ಲಾಲ್ ಪೀರ್, ಚನ್ನಬಸವ ನಾಯಕ, ಶಿವಪ್ಪ ಉಪಸ್ಥಿತರಿದ್ದರು.

ಸರ್ಕಲ್ ನಾಮಕರಣಕ್ಕೆ ಮನವಿ

ಲಿಂಗಸ್ಗೂರು ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮುಖಂಡರಯ ಪುರಸಭೆ ವ್ಯವಸ್ಥಾಪಕ ಸುರೇಶ ಹೊನ್ನಳ್ಳಿ ಅವರಿಗೆ ಮನವಿ ಸಲ್ಲಿಸಿದರು.

ಮುದಗಲ್: ಪಟ್ಟಣದ ನಿರುಪಾದೇಶ್ವರ ಪೆಟ್ರೋಲ್ ಬಂಕ್ ಹತ್ತಿರವರುವ ವೃತ್ತಕ್ಕೆ ಬಸವೇಶ್ವರ ವೃತ್ತ ಎಂದು ನಾಮಕರಣ ಮಾಡುವಂತೆ ಒತ್ತಾಯಿಸಿ, ಲಿಂಗಸ್ಗೂರು ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮುಖಂಡರಯ ಪುರಸಭೆ ವ್ಯವಸ್ಥಾಪಕ ಸುರೇಶ ಹೊನ್ನಳ್ಳಿ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯ ಸರಕಾರ ಬಸವೇಶ್ವರ ಅವರನ್ನು ರಾಜ್ಯದ ಸಾಂಸ್ಕೃತೀಕ ನಾಯಕ ಎಂದು ಘೋಷಣೆ ಮಾಡಿದೆ. ಈ ಹಿನ್ನಲೆಯಲ್ಲಿ ಪುರಸಭೆ ಆಡಳಿತ ಮಂಡಳಿಯವರು ಸಾಮಾನ್ಯ ಸಭೆಯಲ್ಲಿ ಗೊತ್ತುವಳಿ ಮಂಡಿಸಿ, ಬಸವೇಶ್ವರ ಸರ್ಕಲ್ ಎಂದು ನಾಮಕರಣ ಮಾಡಬೇಕೆಂಬುದು ಸಮಾಜದ ಒತ್ತಾಸೆಯಾಗಿದೆ ಎಂಬ ಮನವಿ ಸಲ್ಲಿಸಿದತರು.

ಈ ಸಂದರ್ಭದಲ್ಲಿ ಸುರೇಂದ್ರಗೌಡ ಪಾಟೀಲ್, ಗುರುಬಸಪ್ಪ ಸಜ್ಜನ, ಲಿಂಗಪ್ಪ ಅಂಗಡಿ, ಅನೀಲ್ ಕುಮಾರ, ವಿರುಪಾಕ್ಷಪ್ಪ ಸಜ್ಜನ, ಮಹೇಶ ವಸ್ತದ, ರಾಜಕುಮಾರ, ಮಲ್ಲಪ್ಪ ಮಾಟೂರು, ಶರಣಪ್ಪ ದೇಸಾಯಿ, ತಮ್ಮಣ್ಣ ಗುತ್ತೇದಾರ, ಉದಯಕುಮಾರ ಕಮ್ಮಾರ, ಜವಾಹರಲಾಲ್ ಶೇಠ್, ಪುರಸಭೆ ಉಪಾಧ್ಯಕ್ಷ ಅಜ್ಮೀರ್ ಬೆಳ್ಳಿಕಟ್ ಸೇರಿದಂತೆ ಇತರರು ಇದ್ದರು.

ವಕ್ಫ್ ಬೋರ್ಡ್ ವಿರುದ್ಧ ಹೋರಾಟ

ವಾರಸುದಾರರು ನಮ್ಮ ಆಸ್ತಿ ನಮ್ಮ ಹಕ್ಕು ಎಂದು ವಕ್ಫ್ ಸಂತ್ರಸ್ಥರು ಬೃಹತ್ ಪ್ರತಿಭಟನೆ ಮಾಡಿದರು.

ಸಿಂಧನೂರು: ನಾವು ಅತಿಕ್ರಮಣದಾರರಲ್ಲ, ವಾರಸುದಾರರು ನಮ್ಮ ಆಸ್ತಿ ನಮ್ಮ ಹಕ್ಕು ಎಂದು ವಕ್ಫ್ ಸಂತ್ರಸ್ಥರು ಬೃಹತ್ ಪ್ರತಿಭಟನೆ ಮೂಲಕ ಆಕ್ರೋಶ ಹೊರ ಹಾಕಿದರು. ನಗರದ ಎಪಿಎಂಸಿ ಗಣೇಶ ದೇವಸ್ಥಾನದಿಂದ ಪ್ರಾರಂಭಗೊಂಡ ಪ್ರತಿಭಟನೆ ಮೆರವಣಿಗೆ ಮೂಲಕ ತಹಸೀಲ್ದಾರ ಕಚೇರಿಗೆ ಆಗಮಿಸಿ ತಹಸೀಲ್ದಾರರ ಮೂಲಕ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ವೆಂಕಟಗಿರಿ ಕ್ಯಾಂಪ್ ಸಿದ್ದರಾಮೇಶ ಶರಣರು, ಮಾಜಿ ಸಂಸದ ಕೆ. ವಿರೂಪಾಕ್ಷಪ್ಪ, ಕೆ.ಕರಿಯಪ್ಪ, ಬಸವರಾಜ ನಾಡಗೌಡ, ತಾಲೂಕು ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎನ್.ರಾಮನಗೌಡ, ವಿರೇಶ ಯಡಿಯೂರ ಮಠ, ಸರ್ವೋತ್ತಮ ರೆಡ್ಡಿ ಇಂಜಿನಿಯರ್ ಸೇರಿದಂತೆ ಹಲವರು ಮಾತನಾಡಿದರು.

ಈ ಸಂದರ್ಭದಲ್ಲಿ ರವಿ ಹಿರೇಮಠ, ಸಹನಾ ಹಿರೇಮಠ, ಮಲ್ಲಿಕಾರ್ಜುನ ಜೀನೂರು, ನಿರುಪಾದಿ ಜೋಳದರಾಶಿ, ದೊಡ್ಡ ಬಸನಗೌಡ, ತಿಮ್ಮಾರಡ್ಡಿ ಹುಡಾ, ಮುತ್ತು ಬರ್ಸಿ, ರವಿ ಉಪ್ಪಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸ್ಮಾರ್ಟ್, ಮೆಟ್ರೋ ಬಜಾರ್‌ನಿಂದ ವ್ಯಾಪಾರಸ್ಥರಿಗೆ ಸಂಕಷ್ಟ

ಶ್ರೀಕಾಂತ. ಜಿ.ಆರ್, ಲಿಂಗಸುಗೂರು

ದೊಡ್ಡ ಕಂಪನಿಗಳ ಒಡೆತನದ ಮಾರ್ಟ್‌ಗಳು ನೀಡುವ ರಿಯಾಯಿತಿಗೆ ಮತ್ತು ಅವರು ನೀಡುತಿರುವ ಆಫರ್‌ಗಳಿಂದ ಸ್ಥಳಿಯ ಚಿಕ್ಕ ಪುಟ್ಟ ವ್ಯಾಪಾರಸ್ಥರಿಗೆ ಸಂಕಷ್ಟ ಉಂಟಾಗಿದ್ದು, ಸಣ್ಣಪುಟ್ಟ ಕಿರಾಣಿ ಅಂಗಡಿ ಮಾಲೀಕರು ಬೀದಿಗೆ ಬೀಳುವಂತ ಪರಸ್ಥಿತಿ ಉಂಟಾಗಿದೆ.

ಲಿಂಗಸುಗೂರು ಪಟ್ಟಣ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು, ತಾಲೂಕಿನಲ್ಲಿ ನಾರಾಯಣಪುರ ಬಲದಂಡೆ ಮತ್ತು ಕೊಳವೆ ಬಾವಿ ನೀರಾವರಿಯಿಂದ ಉತ್ತಮ ಫಸಲು ಕೂಡ ಬರುತ್ತಿದೆ. ಹೀಗಾಗಿ ಆರ್ಥಿಕ ಪರಸ್ಥಿತಿ ಉತ್ತಮಗೊಳ್ಳುತ್ತಿದ್ದು, ದೊಡ್ಡ ದೊಡ್ಡ ಮಾರ್ಕೆಟ್ ಕಂಪನಿಗಳು ಲಿಂಗಸುಗೂರಿನತ್ತ ಮುಖ ಮಾಡುತ್ತಿವೆ. ಇದು ಒಂದು ರೀತಿ ವರವಾದರೆ, ಸಣ್ಣ ವ್ಯಾಪಾರಿಗಳ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿಕೊಳ್ಳವಂತಾಗಿದೆ. ಊರು ದೆವ್ವ ಬಂದು ಮನೆ ದೆವ್ವನ ಹೊಡಿಸಿತು ಎಂಬ ಗಾದೆ ಮಾತು ಇಲ್ಲಿ ಅನ್ವರ್ಥವಾಗಲಿದೆ. ಅನೇಕ ರೀಯಾಯಿತಿ ದರ ಮತ್ತು ಅವರು ನೀಡುತ್ತಿರುವ ಆಫರ್ ಗಳಿಂದ ಜನ ಮುಗಿಬೀಳುತ್ತಿದ್ದಾರೆ. ಪಟ್ಟಣದಲ್ಲಿ ಈಗಾಗಲೆ ಹಲವು ಮಾರ್ಟ್‌ಗಳು ಆರಂಭವಾಗಿವೆ. ಇದರಿಂದ ಸ್ಥಳಿಯ ಚಿಕ್ಕ ಚಿಕ್ಕ ಕಿರಾಣಿ ಅಂಗಡಿ ಅಲ್ಲದೆ ಬಟ್ಟೆ ಅಂಗಡಿ ವ್ಯಾಪಾರ ಮೇಲೆ ಪರಿಣಾಮ ಬೀರಿದ್ದು, ವ್ಯಾಪಾರಿಗಳು ಆರ್ಥಿಕ ಸಂಕಷ್ಟಕ್ಕೆ ಈಡಾಗುತ್ತಿದ್ದಾರೆ.

ವ್ಯಾಪಾರದ ಮೂಲ ತತ್ವ ತಿಳಿದಿರುವ ಕಂಪನಿಗಳು ದೇಶಾದ್ಯಂತ ತಮ್ಮ ವ್ಯಾಪಾರವನ್ನು ವಿಸ್ತರಿಸುತ್ತಿವೆ. ಗ್ರಾಹಕರಿಗೆ ಏನು ಕೊಟ್ಟರೆ ತಮ್ಮ ಅಂಗಡಿಗಳಿಗೆ ಬರುತ್ತಾರೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಗ್ರಾಹಕರನ್ನು ಹೋಲ್ಯೆಸಿ ಸೆಳೆಯುವಲ್ಲಿ ಯಶಸ್ವಿಯಾಗಿವೆ. ಹತ್ತಾರು ವರ್ಷಗಳಿಂದ ಪಟ್ಟಣದಲ್ಲಿ ಜನರಿಗೆ ಒದಗಿಸುವ ನಿಟ್ಟಿನಲ್ಲಿ ವ್ಯಾಪಾರ ಮಾಡುತ್ತಿರುವ ವ್ಯಾಪಾರಸ್ಥರಿಗೆ ಮಾತ್ರ ಇದು ಅವರ ಸೌಲಭ್ಯಗಳನ್ನು ಬಹುದೊಡ್ಡ ಹೊಡೆತ ಕೊಟ್ಟಿದೆ. ಸ್ಥಳಿಯ ವ್ಯಾಪಾರಸ್ಥರು ತಮ್ಮ ವ್ಯಾಪಾರಗಳನ್ನು ಯಾವ ರೀತಿಯಾಗಿ ದ್ವಿಗುಣಗೊಳಿಸಬೇಕು ಎಂಬ ಚಿಂತೆಯಲ್ಲಿದ್ದಾರೆ.

ವಿಜಯನಗರ ಮರೆಯದ ಸಾಮ್ರಾಜ್ಯ

'ವಿಜಯ ನಗರ ಸಾಮ್ರಾಜ್ಯದಲ್ಲಿ ಪುರ ಕಲ್ಪನೆ' ವಿಷಯದ ಕುರಿತು ವಿಶೇಷ ಉಪನ್ಯಾಸ ನಡೆಯಿತು.

ಗಂಗಾವತಿ: ನಗರದ ಕೊಲ್ಲಿ ನಾಗೇಶ್ವರರಾವ್ ಗಂಗಯ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಹಾಗೂ ಪುರಾತತ್ವ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ 'ವಿಜಯ ನಗರ ಸಾಮ್ರಾಜ್ಯದಲ್ಲಿ ಪುರ ಕಲ್ಪನೆ' ವಿಷಯದ ಕುರಿತು ವಿಶೇಷ ಉಪನ್ಯಾಸ ನಡೆಯಿತು.

ಇತಿಹಾಸ ಸಂಶೋಧಕ ಡಾ.ಎಚ್.ಎಂ. ಚಂದ್ರಶೇಖರ ಶಾಸ್ತ್ರಿ ಉಪನ್ಯಾಸ ನೀಡಿ, ವಿಜಯನಗರ ಸಾಮ್ರಾಜ್ಯ ಮರೆಯಲಾಗದ, ಮರೆಯಲಾರದ ಮಹಾ ಸಾಮ್ರಾಜ್ಯ ಎಂದರೆ ಅದು ವಿಜಯನಗರ ಸಾಮ್ರಾಜ್ಯ. ವಿಜಯನಗರದ ಅರಸರು ನೀಡಿದ ಕೊಡುಗೆ ಅಪಾರ. ಕೆರೆ,ಬಾವಿ,ಅಣೆಕಟ್ಟು, ಕಾಲುವೆಗಳ ನಿರ್ಮಾಣ ದ ಮೂಲಕ ರೈತರಿಗೆ, ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಟ್ಟಿದ್ದರು. ಪುರ ನಿರ್ಮಾಣದ ಅಪರೂಪದ ಪರಿಕಲ್ಪನೆಯನ್ನು ಸಾಕಾರಗೊಳಿಸಿದ್ದರು. ಅತ್ಯಾಧುನಿಕ ನಗರಗಳ ನಿರ್ಮಾಣ ಅರಸರ ದೂರದೃಷ್ಟಿಗೆ ಹಿಡಿದ ಕನ್ನಡಿ.ಕಲೆ,ವಾಸ್ತು, ಸಂಸ್ಕೃತಿ,, ಸಾಹಿತ್ಯಕ್ಕೆ ಅರಸರಕೊಡುಗೆ ವಿಶಿಷ್ಟವಾದುದು. ವಿಜಯನಗರದ ಅರಸರ ಕೊಡುಗೆಗಳನ್ನು ಇಂದಿನ ಪೀಳಿಗೆಗೆ ತಲುಪಿಸುವ ಕಾರ್ಯ ಆಗಬೇಕು'' ಎಂದು ಹೇಳಿದರು. ಪ್ರಾಚಾರ್ಯರಾದ ಡಾ.ಮುಮ್ತಾಜ್ ಬೇಗಂ ಅಧ್ಯಕ್ಷತೆ ವಹಿಸಿದ್ದರು. ಪ್ರಾಸ್ತಾವಿಕವಾಗಿ ಐಕ್ಯೂಎಸಿ ವಿಭಾಗದ ಸಂಚಾಲಕ ಡಾ.ಎಸ್.ಜಿ.ಗುರಿಕಾರ ಮಾತನಾಡಿದರು. ಸಭೆಯಲ್ಲಿ ಮಂಜುನಾಥ, ಅಕ್ಕಿ ಮಾರುತಿ, ಜಗದೇವಿ ಕಲಶೆಟ್ಟಿ, ಅಣ್ಣೋಜಿರೆಡ್ಡಿ ಇದ್ದರು. ಡಾ.ಪಿ.ಬಿ.ಮಂಜಣ್ಣ, ಗದ್ದೆಪ್ಪ ನಿರ್ವಹಿಸಿದರು.

ವಿಶ್ವ ರೈತರ ಹಬ್ಬ ಡಿ.23ರಂದು

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಯಲ್ಲಿ ಶಿವಾರ್ಜುನ್ ನಾಯಕ್ ಮಾತನಾಡಿದರು.

ರಾಯಚೂರು: ರೈತರ ವಿವಿಧ ಬೇಡಿಕೆ ಬಗ್ಗೆ ಚರ್ಚಿಸಲು ಡಿ.23 ರಂದು ಮೈಸುರಲ್ಲಿ ವಿಶ್ವ ರೈತರ ಹಬ್ಬ ಹಾಗೂ ರೈತ ಸಮಾವೇಶ ಹಮ್ಮಿಕೊಳ್ಳಾಗಿದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘ ಜಿಲಾ ಘಟಕದ ಅಧ್ಯಕ್ಷ ಶಿವಾರ್ಜುನ್ ನಾಯಕ್ ಹೇಳಿದರು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಡಿ.23 ರಂದು ಬೆಳಗ್ಗೆ 11 ಕ್ಕೆ ಮೈಸೂರಿನ ಮುಕ್ತ ವಿಶ್ವವಿದ್ಯಾಲಯ ಶತಮಾನೋತ್ಸವ ಭವನದಲ್ಲಿ ಕಾರ್ಯಕ್ರಮ ನಡೆಯಲಿದ್ದು, ರೈತರ ವಿವಿಧ ಬೇಡಿಕೆ ಬಗ್ಗೆ ವಿಸ್ತೃತ ಚರ್ಚೆ ಮಾಡಲಿದ್ದೇವೆಂದರು.

ರೈತರ ಸಂಪೂರ್ಣ ಸಾಲ ಮನ್ನ, ಕನಿಷ್ಟ ಬೆಂಬಲ ಬೆಲೆ ನಿಗದಿ, ಕೃಷಿ ಸಾಲ ನೀತಿ, ರಸ ಗೊಬ್ಬರ ಕೀಟ ನಾಶಕ, ಮೊಸರು, ಮಜ್ಜಿಗೆ ಮೇಲಿನ ಜಿಎಸ್ಟಿ ರದ್ದು ಮಾಡುವುದು, ಖಾಸಗಿ ಫೈನಾನ್ಸ್ ನೀಡುವ ಕಿರುಕುಳ ನಿಲ್ಲಬೇಕು, ನಕಲಿ, ಬೀಜ, ಗೊಬ್ಬರ ಮಾರಾಟಗಾರರ ಮೇಲೆ ಕಠಿಣ ಕಾನೂನು ಕ್ರಮ, ಎನ್ ಡಿ ಆರ್ ಎಫ್ ಮಾನದಂಡ ಬದಲಾವಣೆ, ತೆಲಂಗಾಣ ಮಾದರಿಯಲ್ಲಿ 60 ವರ್ಷ ಮೇಲ್ಪಟ್ಟ ರೈತರಿಗೆ 10 ಸಾವಿರ ಪಿಂಚಣಿ, ಆನ್ ಲೈನ ಗೇಮ್ ರದ್ದು, ಸಮರ್ಪಕ ವಿದ್ಯುತ್, ರೈತನ ಮದುವೆಯಾಗುವ ಹೆಣ್ಣುಮಗಳಿಗೆ ಶೇ.20 ರಷ್ಟು ಸರಕಾರಿ ಹುದ್ದೆ ಮೀಸಲು ಸೇರಿದಂತೆ ಅನೇಕ ಹಕ್ಕೊತ್ತಾಯ ಬಗ್ಗೆ ಸಮಾವೇಶದಲ್ಲಿ ಚರ್ಚಿಸಿ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸತ್ಯಾರೆಡ್ಡಿ, ಸಂಗಮೇಶ, ಭೀಮರಾಯ ಹೊಸಮನಿ, ಹನುಮೇಶ ನಾಯಕ, ಬಸವರಾಜ ಇನ್ನಿತರರು ಉಪಸ್ಥಿತರಿದ್ದರು.

ಪಕ್ಷದ ಕಾರ್ಯಾಧ್ಯಕ್ಷ ಲಿಂಗೇಗೌಡಗೆ ಶ್ರದ್ಧಾಂಜಲಿ

ಲಿಂಗಸೂಗೂರು: ಇತ್ತೀಚಿಗೆ ಅಪಘಾತದಲ್ಲಿ ನಿಧಾನರಾದ ಕೆ ಆರ್ ಎಸ್ ಪಕ್ಷದ ರಾಜ್ಯ ಕಾರ್ಯಧ್ಯಕ್ಷರಾದ ದಿ. ಲಿಂಗೇಗೌಡ. ಎಸ್.ಹೆಚ್.ಅವರಿಗೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಲಿಂಗಸುಗೂರು ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ರಾಷ್ಟ್ರಪತಿ, ಹಾಗೂ ಪ್ರಧಾನಮಂತ್ರಿ ಯವರಿಗೆ ಮಹಿಳೆಯರಿಗೇ ಆಗುತ್ತಿರುವ ಶೋಷಣೆ, ಅತ್ಯಾಚಾರ ವಿರುದ್ಧ ಅತ್ಯಾಚಾರಿಗಳಿಗೆ ಆದಷ್ಟು ಬೇಗನೆ ಶಿಕ್ಷೆ ಆಗುವ ಹಾಗೆ ಕಾನೂನು ಜಾರಿ ಮಾಡಬೇಕು ಎಂದು ಮನವಿ ಪತ್ರವನ್ನು ನೀಡಲು ಮಂಗಳೂರಿನಿಂದ-ದೆಹಲಿಗೆ ಪಾದಯಾತ್ರೆ ಮಾಡುತ್ತಿದ್ದರು. ಪಾದಯಾತ್ರೆಯ 55 ದಿನದಂದು ಗುಜರಾತಿನ ಸೂರತ್ ಸಮೀಪದಲ್ಲಿ ಪಾದ ಯಾತ್ರಿಗಳ ಮೇಲೆ ಒಂದು ಲಾರಿ ಅಪಘಾತದಲ್ಲಿ ಇಬ್ಬರ ದುರ್ಮರಣ ಹಾಗೂ 4 ಜನರು ಗಂಭೀರವಾಗಿ ಗಾಯ ಗೊಂಡಿದ್ದಾರೆ. ಈ ಅಪಘಾತದಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಕಾರ್ಯಾಧ್ಯಕ್ಷರಾದ ದಿವಂಗತ ಶ್ರೀ ಲಿಂಗೇಗೌಡ.ಎಸ್.ಹೆಚ್, ಹಾಗೂ ದಿವಂಗತ ಶ್ರೀ ಮೂಸ ಷರೀಫ್ ಇವರಿಬ್ಬರು ವಿಧಿವಶರಾಗಿದ್ದಾರೆ. ಈ ಸಂದ ರ್ಭದಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ರಾಯಚೂರು ಜಿಲ್ಲಾ ಪ್ರದಾನ ಕಾರ್ಯದರ್ಶಿ ವಿಜಯಕುಮಾರ್ ಪೋಳ, ರಾಜ್ಯ ಯುವ ಸಂಘಟನಾ ಕಾರ್ಯದರ್ಶಿ ದ್ಯಾವಣ್ಣ ನಾಯಕ್, ಜಿಲ್ಲಾ ಕಾರ್ಯದರ್ಶಿ ಗಂಗಾ ಕೆ, ಜಿಲ್ಲಾ ಕಾರ್ಯದರ್ಶಿ ವಿಶ್ವನಾಥ್ ನಾಯ್ಡು, ಸಿಂಧನೂರು ತಾಲೂಕು ಕಾರ್ಯದರ್ಶಿ ಕೃಷ್ಣ, ಅಮರೇಶ್, ಲಿಂಗಸುಗೂರು ಸೈನಿಕರು ಗಂಗಪ್ಪ, ಇದ್ದರು.

ಮಕ್ಕಳಿಗೆ ಪ್ರತ್ಯೇಕ ಆಯವ್ಯಯ ಅಗತ್ಯ

ಕೊಪ್ಪಳ: ಮಕ್ಕಳು ತಮ್ಮ ಮೂಲ ಸೌಲಭ್ಯಗಳ ಸಮಸ್ಯೆಗೆ ಸ್ಥಳೀಯವಾಗಿ ಪರಿಹಾರ ಕಂಡುಕೊಳ್ಳಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ಜಿ ರಾಮತ್ನಾಳ ಹೇಳಿದರು. ತಾಲೂಕಿನ ಕಲ್ಲತಾವರಗೇರಾ ಗ್ರಾಪಂ ವ್ಯಾಪ್ತಿಯ ದನಕನದೊಡ್ಡಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಮಕ್ಕಳ ಹಕ್ಕುಗಳ ಗ್ರಾಮಸಭೆ ಉದ್ಘಾಟಿಸಿ ಮಾತನಾಡಿದರು. ಪ್ರಜಾಪ್ರಭುತ್ವ ವ್ಯವಸ್ಥೆ ಸದೃಢಗೊಳಿಸಿ, ಮಕ್ಕಳ ಭಾಗವಹಿಸುವ ಹಕ್ಕು ಪ್ರೇರೆಪಿಸಲು ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಕ್ಕಳ ಸ್ನೇಹಿ ಗ್ರಾಮ ಪಂಚಾಯತ್ ಅಭಿಯಾನಕ್ಕೆ ಮುಂದಾಗಿದೆ. ಈ ಹಿನ್ನೆಲೆ ಒಂದು ದಿನ ಮಕ್ಕಳ ವಿಶೇಷ ಗ್ರಾಮ ಸಭೆ ಎಂಬ ವಿನೂತನ ಕಾರ್ಯಕ್ರಮ ಅನುಷ್ಠಾನಗೊಳಿಸಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಸುಮಾರು 10 ವರ್ಷ ನಿರಂತರವಾಗಿ ಮಕ್ಕಳ ಗ್ರಾಮಸಭೆ ಆಯೋಜಿಸಿಕೊಂಡು ಬರಲಾಗುತ್ತಿದೆ. ಈ ಗ್ರಾಮಸಭೆಯಲ್ಲಿ ಮಕ್ಕಳು ಸಲ್ಲಿಸುವ ಸಮಸ್ಯೆ ಪರಿಹರಿಸಲು ಆಯೋಗ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ. ಅಲ್ಲದೇ ಮಕ್ಕಳು ಸಲ್ಲಿಸುವ ಸಮಸ್ಯೆಗಳ ಪರಿಹಾರಕ್ಕೆ ಗ್ರಾಪಂ ಮಟ್ಟದಲ್ಲಿ ಮಕ್ಕಳ ಆಯವ್ಯಯ ಮಂಡಿಸಬೇಕು. ಗ್ರಾಪಂ ಅಧ್ಯಕ್ಷ ಗಂಗಪ್ಪ ನಾಯಕ, ಗ್ರಾಮೀಣ ಉದ್ಯಗ ಖಾತ್ರಿ ಯೋಜನೆ ಸಹಾಯಕ ನಿರ್ದೇಶಕ ವೆಂಕೋಬ, ಪ್ರತಿಭಾ ಕಾಶಿಮಠ, ಶಿವಶರಣಪ್ಪ ಸೇರಿ, ಕಲ್ಲತಾವರಗೇರಾ ಗ್ರಾಪಂ ವ್ಯಾಪ್ತಿಯ ಮುಖ್ಯಶಿಕ್ಷಕರು,ಮ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಇದ್ದರು.

ರೈತರಿಗೆ ಸರಿಯಾದ ಸಾಲ ಸೌಲಭ್ಯ ನೀಡಿ

ರಾಯಚೂರು: ಕರ್ನಾಟಕದ ರೈತರಿಗೆ ನಬಾರ್ಡನ ಅಲ್ಪಕಾಲಿಕ ಸಾಲದ ಮಂಜೂರಾತಿಯನ್ನು ಕಡಿತಗೊಳಿಸಿರುವುದರ ಬಗ್ಗೆ ಲೋಕಸಭೆಯಲ್ಲಿ ಪ್ರಶ್ನೆ ಕೇಳಿ, ಸರಕಾರದ ನಿರ್ಧಾರದಿಂದ 35 ಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಸಾಲವನ್ನು ಪಡೆಯಲು ತೊಂದರೆಯಾಗಿದೆ. ಕರ್ನಾಟಕದ ಸಹಕಾರಿ ಬ್ಯಾಂಕುಗಳಿಗೆ ವಾರ್ಷಿಕ 25,000 ಕೋಟಿ ರುಪಾಯಿ ಬಡ್ಡಿ ರಹಿತ ಸಾಲಗಳನ್ನು ರೈತರಿಗೆ ನೀಡುತ್ತಿದೆ. ಈ ಯೋಜನೆಗಾಗಿ ನಬಾರ್ಡ್ ಪ್ರತಿ ವರ್ಷವು ಅನುದಾನವನ್ನು ರಾಜ್ಯಕ್ಕೆ ಮಂಜೂರು ಮಾಡುತ್ತದೆ. ಆದರೆ, 2024-25 ನೇ ಸಾಲಿನಲ್ಲಿ ಈ ಮಂಜೂರಾತಿಯ ಮಿತಿಯನ್ನು ಕಳೆದ ವರ್ಷ 5,600 ಕೋಟಿಯಿಂದ 2,340 ಕೋಟಿ ರುಪಾಯಿ ಅಂದರೆ ಶೇ. 58 ರಷ್ಟು ಕಡಿತಗೊಳಿಸಿದೆ ಎಂದು ರಾಯಚೂರು ಸಂಸದ ಕುಮಾರ ನಾಯಕ ಸಂಸತ್ತಿನ ಗಮನಕ್ಕೆ ತಂದರು.

ಲೋಕಸಭೆಯಲ್ಲಿ ಮಾತನಾಡಿದ ಅವರು, ಅನುದಾನ ಕಡಿತವು ಸಹಕಾರಿ ಬ್ಯಾಂಕ್ ಗಳ ಸಾಲ ವಿತರಣಾ ಗುರಿಗಳನ್ನು ತಲುಪಲು ಅಡಚಣೆ ಉಂಟುಮಾಡಿದ್ದು, ರೈತರು ಹೆಚ್ಚಿನ ಬಡ್ಡಿದರದ ಖಾಸಗಿ ಸಾಲಗಳಿಗೆ ಅವಲಂಬಿಸುವಂತೆ ಮಾಡಿದೆ. ಸಹಕಾರಿ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಆರ್ ಬಿ ಐ ವಾರ್ಷಿಕವಾಗಿ ವಿತರಣಾ ಮಿತಿಗಳನ್ನು ಮಾಡುತ್ತದೆ ಎಂದು ವಿವರಿಸಿದರು. ಸರಕಾರದ ವಿವರಣೆಯಲ್ಲಿ ಎದ್ದುಕಾಣುವ ಅಸಮಾನತೆಗಳ ಬಗ್ಗೆ ಪ್ರಶ್ನಿಸಿದ ಅವರು ಪಿಎಸ್ ಎಲ್ ನ ಅಡಿಯಲ್ಲಿ ನೀಡುವ ಸಾಲವು ಹೆಚ್ಚಾಗಿ ಕಮರ್ಷಿಯಲ್ ಬ್ಯಾಂಕ್ ಗಳು ನೀಡುತ್ತವೆ. ಕಮರ್ಷಿಯಲ್ ಬ್ಯಾಂಕ್ ಗಳು ರೈತರಿಗೆ ನೀಡುವ ಸಾಲಕ್ಕೆ ಶೇ 4 ರಿಂದ 7 ರಷ್ಟು ಬಡ್ಡಿ ಇರುತ್ತದೆ.

ಬಾಣಂತಿ ಸಾವು: ಆಸ್ಪತ್ರೆಗೆ ಡಿಸಿ ಭೇಟಿ

ರಾಯಚೂರು: ತಾಲೂಕಿನ ರಬ್ಬಣಕಲ್ ಗ್ರಾಮದಲ್ಲಿ ಬಾಣಂತಿ ಈಶ್ವರಿ (32) ರಕ್ತಸ್ರಾವದಿಂದ ಶುಕ್ರವಾರ ಮೃತಪಟ್ಟಿದ್ದಾರೆ. ಎಂದು ಮಾಧ್ಯಮಗಳಲ್ಲಿ ವರದಿ ಪ್ರಸಾರಗೊಂಡ ಹಿನ್ನೆಲೆಯಲ್ಲಿ ಇಂದು ಜಿಲ್ಲಾಧಿಕಾರಿ ಗಳಾದ ನಿತೀಶ್ ಕೆ., ಅವರು ಇಂದು ಮಟಮಾರಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಬಾಣಂತಿ ಈಶ್ವರಿ ಸಾವು ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಗಳು ವೈದ್ಯರನ್ನು ವಿಚಾರಿಸಿದಾಗ ಬೆಳಿಗ್ಗೆ ಗಂಟೆಗೆ ಮಟಮಾರಿ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಾಗಿದ್ದು, 3.50ಕ್ಕೆ ಸಹಜ ಹೆರಿಗೆ ಆಗಿರುತ್ತದೆ. ಅಲ್ಲದೆ ತಾಯಿ ಮತ್ತು ಮಗು ಆರೋಗ್ಯ ವಾಗಿರುತ್ತದೆ. ಡಿ. 10ರ ಸಂಜೆ 5ಗಂಟೆಗೆ ಆಸ್ಪತ್ರೆಯಿಂದ ಅವರು ಡಿಸ್ಚಾರ್ಜ್ ಆಗಿರುತ್ತಾರೆ. ಮನೆಯಲ್ಲಿ ಇರುತ್ತಾರೆ. ಡಿಸೆಂಬರ್ 13ರಂದು ಇದ್ದಕ್ಕಿದ್ದಂತೆ ಅವರಿಗೆ ಉಸಿರಾಟ ತೊಂದರೆ ಹಿನ್ನೆಲೆಯಲ್ಲಿ ಮಟಮಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಾಖಲಾಗಿದ್ದು, ಅವರಿಗೆ ವೈದ್ಯರು ಚಿಕಿತ್ಸೆ ಸಹ ನೀಡಿರುತ್ತಾರೆ. ಅಲ್ಲಿಂದ ಅಂಬ್ಯುಲೆನ್ಸ್ ಮೂಲಕ ರಿಮ್ಸ್ ಆಸ್ಪತ್ರೆಗೆ ದಾಖಲಾಗುತ್ತಾರೆ. ಅಲ್ಲಿಯೂ ಸಹ ಎಲ್ಲಾ ರೀತಿಯ ಚಿಕಿತ್ಸೆ ನೀಡಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮೃತರಾಗಿರುತ್ತಾರೆಂದು ಜಿಲ್ಲಾಧಿಕಾರಿಗಳಿಗೆ ವೈದ್ಯರು ಮಾಹಿತಿ ನೀಡಿದರು.

ಮಕ್ಕಳ ಭವಿಷ್ಯಕ್ಕೆ ಪಾಲಕರ ಶ್ರಮ ಅಗತ್ಯ

ಲಿಂಗಸುಗೂರು: ಲಿಟ್ಲಲ್ ಫ್ಲವರ್ ಶಾಲೆಯು ತನ್ನ ಛಾಪು ಮೂಡಿಸಲು ಈ ಶಾಲೆಯ ವಿದ್ಯಾರ್ಥಿಗಳ ಪಾಲಕರೆ ಕಾರಣ, ಅವರೇ ಈ ಶಾಲೆಯ ಬೆನ್ನೆಲುಬು ಎಂದು ಲೂರ್ದು ಮಾತೆ ಚರ್ಚ ಗುರುಗಳಾದ ಫಾ. ಜೋಸ್ ಪ್ರಕಾಶ ಹೇಳಿದರು. ಪಟ್ಟಣದ ಲಿಟಲ್ ಫ್ಲವರ್ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಶಾಲೆಯ ಮಕ್ಕಳು ವರ್ಷದಲ್ಲಿ ಮಾಡಿದ ಸಾಧನೆಯನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಪ್ರಯುಕ್ತ ಪ್ರಶಸ್ತಿ ನೀಡಿ ಗೌರವಿಸುವುದರಿಂದ ಮಕ್ಕಳಲ್ಲಿ ಸಾಧನೆ ಮಾಡುವ ಉತ್ಸಹ ಹೆಚ್ಚಾಗುತ್ತದೆ. ಮಕ್ಕಳು ಕಠಿಣ ಪರಿಶ್ರಮ ಪಟ್ಟು ಓದಿ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದರ ಜತೆಗೆ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ದೇಶದ ಉತ್ತಮ ಪ್ರಜೆಯಾಗಲು ಸಾಧ್ಯ. ಕಾರಣ ಹೆತ್ತವರು ಮಕ್ಕಳಿಗೆ ಹಣ, ವಸ್ತುಗಳನ್ನು ನೀಡುವುದರ ಬದಲು ಅವರಿಗಾಗಿ ಸಮಯವನ್ನು ಮೀಸಲಿಡಿ, ಅವರೊಂದಿಗೆ ಸಮಯವನ್ನು ಕಳೆದಾಗ ಮಕ್ಕಳಲ್ಲಿ ಮತ್ತು ನಿಮ್ಮಲ್ಲಿ ಬಾಂಧವ್ಯ ಹೆಚ್ಚಾಗುತ್ತದೆ. ಇಲ್ಲವಾದರೆ ವೃದ್ಧಾಶ್ರಮ ಸೇರುವುದು ಖಚಿತ ಮಕ್ಕಳ ಉಜ್ವಲ ಭವಿಷ್ಯಕ್ಕೆ ಪಾಲಕರ ಶ್ರಮ ಅಗತ್ಯ ಎಂದರು. ಈ ಸಂದರ್ಭದಲ್ಲಿ ಶಾಲೆಯ ಜಂಟಿ ಕಾರ್ಯದರ್ಶಿ ಸಿಸ್ಟರ್ ಮರಿಯಾ ಅರುಣಾ, ಅರುಣುಕುಮಾರ್ ವಕೀಲರು, ರಕ್ಷಾರೆಡ್ಡಿ, ಯಮನೂರಪ್ಪ, ಶಾಲೆಯ ಮುಖ್ಯೋಪಾಧ್ಯಾಯರಾದ ಸಿಸ್ಟರ್ ರೆನ್ನಿ ಡಿಸೋಜಾ, ಶಿಕ್ಷಕರು, ಹಾಗೂ ವಿದ್ಯಾರ್ಥಿಗಳು ಪಾಲಕರು ಇದ್ದರು.

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಬುಧವಾರ
18 | 12 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಹಿರಿಯರ ಸನ್ನಡತೆ ಮಕ್ಕಳಿಗೆ

ಮಾನವ ಪದದ ಅರ್ಥ ಬಹಳ ಶ್ರೇಷ್ಠವಾದುದು. 'ಮಾ' ಎಂದರೆ ಸೌಜನ್ಯಯುತವಾಗಿ ಮಾತನಾಡುವುದು, 'ನ' ಎಂದರೆ ತುಸು ನಗುತ ಬಂದೇವ ತುಸು ನಗುತ ಬಾಳೋಣ ಎಂಬಂತೆ ನಗುವುದು, 'ವ' ಎಂದರೆ ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬಂತೆ ಹಿರಿಯರು ಕಿರಿಯರೆಲ್ಲರನ್ನು ಗೌರವದಿಂದ ನಡೆದುಕೊಂಡು ವಂದಿಸುವುದು ಎಂದು ತಿಳಿಯಬಹುದು. ಜೀವಜಂತುಗಳಲ್ಲಿಯೇ ಶ್ರೇಷ್ಠ ಹಾಗೂ

ಬುದ್ಧಿವಂತನೆಂದು ಗುರುತಿಸಲ್ಪಟ್ಟ ಮಾನವನು, ಕೆಲವು ಬಾರಿ ತನ್ನ ಅಸಹ್ಯ ವ್ಯಕ್ತಿತ್ವದ ಮೂಲಕ ಮನುಷ್ಯತ್ವ ಬದಲಾಗಿ ರಾಕ್ಷಸ ಪ್ರವೃತ್ತಿಯನ್ನು ಮೈಗೂಡಿಸಿಕೊಂಡು ಅಪರಾಧ ಕೃತ್ಯವನ್ನೆಸಗುತ್ತಿದ್ದಾನೆ. ಇದು ಸಲ್ಲದು. ''ಸಾಕ್ಷರೋ ವಿಪರಿತೇಶ್ಚ ರಾಕ್ಷಸೋ ಭವೆಯಂ'' ಎನ್ನುವಂತೆ ಸಾಕ್ಷರಾ ಅನ್ನುವ ಪದವನ್ನು ವಿಲೋಮ ಮಾಡಿ ಓದಿ ನೋಡಿ, ಏನಾಯಿತು? ಅದು ರಾಕ್ಷಸಾ ಎಂದಾಗುತ್ತದಲ್ಲವೆ. ಬಹಳಷ್ಟು ವಿದ್ಯಾವಂತರೆ ಇಂದು ರಾಕ್ಷಸೀಯ ಪ್ರವೃತ್ತಿಯನ್ನು ಮೈಗೂಡಿಸಿಕೊಂಡು ಹೀನ ಕೃತ್ಯಗಳನ್ನು ಮಾಡುತ್ತ ಅಮಾಯಕ ಜೀವಿಗಳ ದೃಷ್ಟಿಯಲ್ಲಿ ಕಟುಕರಾಗಿ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿದ್ದಾರೆ. ಇದೆಲ್ಲವನ್ನು ಗಮನಿಸಿದಾಗ ದಯೆ, ಪ್ರೀತಿ, ಕರುಣೆ, ಶಾಂತಿ, ಸಹನೆ, ವಿನಯ, ಪ್ರಾಮಾಣಿಕತೆ, ಮಾನವೀಯತೆಯಂತಹ ಮೌಲ್ಯಗಳು ಕುಸಿದು ಹೋಗಿವೆ ಎಂಬ ಭಾವ ಮೂಡುತ್ತದೆ. ಈ ಭಾವ ಮರೆಯಾಗಬೇಕಾದರೆ ಇನ್ನಾದರೂ ಭವಿಷ್ಯದ ಮಕ್ಕಳಿಗೆ ಪುಸ್ತಕದ ಜ್ಞಾನದೊಂದಿಗೆ ವಾಸ್ತವ ಜ್ಞಾನವನ್ನು ಕಟ್ಟಿಕೊಳ್ಳುವ ಶಿಕ್ಷಣ ನೀಡಬೇಕಾಗಿದೆ. ಕೇವಲ ಅಂಕಗಳೇ ಜೀವನದ ಭವಿಷ್ಯವನ್ನು ರೂಪಿಸುತ್ತವೆ ಎಂಬ ಭ್ರಮೆಯ ಪರದೆಯನ್ನು ಕಳಚಿ, ಸಂಸ್ಕಾರಯುತ ಶಿಕ್ಷಣ ನೀಡಲು ಮುಂದಾಗಬೇಕು. ಮಕ್ಕಳನ್ನು ರೋಬೋಟ್ ಯಂತ್ರದಂತೆ ಮಾಡದೆ ಅವರನ್ನು ದೈಹಿಕವಾಗಿ, ಬೌದ್ಧಿಕವಾಗಿ ಮಾನಸಿಕ ವಾಗಿ, ಭಾವನಾತ್ಮಕವಾಗಿ, ಹಾಗೂ ಸಾಮಾಜಿಕವಾಗಿ ಬಲಾಢ್ಯರನ್ನಾಗಿ ಮಾಡಲು ಬೇಕಾದ ಪೂರಕ ಶಿಕ್ಷಣವು ಕುಟುಂಬ, ಶಾಲೆ ಮತ್ತು ಪರಿಸರದಿಂದ ದೊರೆಯಬೇಕು. ಜತೆಗೆ ಮನೆಯಲ್ಲಿನ ಹಿರಿಯರು, ಸಮಾಜದ ಗಣ್ಯರು ಉತ್ತಮ ಗುಣನಡತೆಗಳನ್ನು ತಾವು ರೂಢಿಸಿಕೊಂಡು, ಮಕ್ಕಳಿಗೆ ಅನುಕರಿಸಲು ಪ್ರೇರೇಪಿಸಬೇಕು. ಸಂಸ್ಕಾರವನ್ನು ಮಕ್ಕಳಿಗೆ ಹೇಳುವ ಮೊದಲು ಸಂಸ್ಕಾರಯುತ ಬದುಕು ನಮ್ಮದಾಗಬೇಕಲ್ಲವೇ ?

• ರವಿ ಕಂಗಳ ಕೊಂಕಣಕೊಪ್ಪ

ನನ್ನ ಅಮ್ಮನ ಸೀರೆ ಪ್ರೀತಿ

• ವಿದ್ಯಾ ಎಸ್

ದೀಪಾವಳಿಯಂತಹ ಕೆಲವು ಹಬ್ಬಗಳನ್ನು ಮೂರುದಿನ, ಐದು ದಿನ ಆಚರಿಸುವುದುಂಟು. ಈ ವಾರ, 21 ರಂದು ವಿಶ್ವ ಸೀರೆ ದಿನ ಬಂದಿದೆ; ಇನ್ನೇಕೆ ತಡ, ಈ ಸೀರೆ ದಿನವನ್ನು ಮೂರು ದಿನ ಆಚರಿಸೋಣ ಬನ್ನಿ!

ಅದೊಂದು ಕಾಲವಿತ್ತು, ನನ್ನ ಅಮ್ಮನ ಬಳಿ ಬರೀ ಬೆರಳೆಣಿಕೆಯಷ್ಟು ಸೀರೆಗಳಿದ್ದವು. ಇದ್ದದ್ದರಲ್ಲೇ ಸ್ವಲ್ಪ ಒಳ್ಳೆಯ ಸೀರೆಗಳನ್ನು ಸಮಾರಂಭಗಳಿಗೆ ಹೋಗುವಾಗ ಉಡಲು ಎತ್ತಿ ಇಡುತ್ತಿದ್ದಳು. ಆ ಸೀರೆಗಳು ಕೂಡ ಸ್ವಲ್ಪ ಸ್ಥಿತಿವಂತರಾದ ಸಂಬಂಧಿಕರ ಹೆಂಗಸರು ಕೊಟ್ಟ ತಮ್ಮ ಉಪಯೋಗಿಸಿದ ಸೀರೆಗಳೇ ಆಗಿದ್ದವು. ಮನೆ ಕೆಲಸ, ಹೊಲಗದ್ದೆಗಳ ಕೆಲಸವೆಲ್ಲ ಮುಗಿಸಿ ಸುಸ್ತಾಗುತ್ತಿದ್ದ ಅಮ್ಮ ಹೊರಗಡೆ ಪೂಜೆ ಅಥವಾ ಸಮಾರಂಭಗಳಿಗೆ ಹೋಗಲು ಆಸಕ್ತಿಯಿದ್ದರೂ ಹೋಗುತ್ತಿದ್ದದ್ದೇ ಅಪರೂಪ. ಹೋದರೂ ಕೂಡ ಉಡುತ್ತಿದ್ದದ್ದು ಮತ್ತೆ ಮತ್ತೆ ಉಟ್ಟ ಅದೇ ಸೀರೆಗಳು.

ಒಡವೆಗಳ ಬಗ್ಗೆ ಅಮ್ಮ ಯಾವತ್ತೂ ಆಸೆಪಟ್ಟಿದ್ದು ಕಡಿಮೆ;

ವಿಶ್ವ ಸೀರೆ ದಿನ ಡಿಸೆಂಬರ್ 21

ಆದರೆ ಸೀರೆ ಎಂದರೆ ಇಷ್ಟ. ಅವಳ ಓರಗೆಯ ಹೆಂಗಸರು ಒಳ್ಳೆಯ ಸೀರೆ ಉಟ್ಟರೆ ಅವಳ ಮನಸು ತನಗಿಲ್ಲದ ಭಾಗ್ಯವನ್ನು ನೆನೆದು ಮರುಗುತಿತ್ತು. ಅದರ ಜೊತೆಗೇ, ಚೆನ್ನಾಗಿ ಓದುತ್ತಿದ್ದ ತನ್ನ ಮಕ್ಕಳು ಒಳ್ಳೆಯ ಕೆಲಸ ಸಿಕ್ಕಿದ ಮೇಲೆ ನನಗೆ ಇಂತಹ ನೂರು ಸೀರೆಗಳನ್ನು ತಂದುಕೊಟ್ಟಾರು ಎಂಬ ಭರವಸೆಯನ್ನೂ ತಾಳುತ್ತಿದ್ದಳು. ಬರಬರುತ್ತಾ, ಅಮ್ಮನ ಆಸೆ ನಿಜವಾಯಿತು.

ಈಗ ಅಮ್ಮನ ಬಳಿ ಬೀರು ತುಂಬಾ ಸೀರೆಗಳಿವೆ. ಈಗಲೂ ಕೂಡ ಅವಳು ಸಮಾರಂಭಗಳಿಗೆ ಹೋಗುವುದು ಬಲು ಅಪರೂಪ. ಅದಕ್ಕೆ ಅವಳದೇ ಆದ ಹಲವಾರು ಕಾರಣಗಳನ್ನು ಕೊಡುತ್ತಾಳೆ. ಇದರಿಂದಾಗಿ ಅವಳ ಬಹುತೇಕ ಸೀರೆಗಳು ಬೀರುವಿನಿಂದ ಹೊರಗೆ ಬರಲು ಶಕ್ತವಾಗಿಲ್ಲ. ಯಾವಾಗಲೂ ಮನೆಯವರ ಬಗ್ಗೆ ಯೋಚನೆ ಮಾಡುವ ಅವಳು, ಎಲ್ಲಿ ತಾನು ಹೊರಗಡೆ ಹೋದ ಸಮಯದಲ್ಲಿ ಮನೆಯಲ್ಲಿ ತನ್ನ ಅವಶ್ಯಕತೆ ಬರುವುದೋ ಎಂದು ಹೊರಗಡೆ ಹೋಗುವ ಯೋಜನೆಯನ್ನು ಬಿಟ್ಟುಬಿಡುತ್ತಾಳೆ.

ಸೀರೆಗಳ ಸಂಗ್ರಹ ಇಲ್ಲದೇ ಇದ್ದಾಗ ಆಸೆ ಇತ್ತು; ಈಗ ಅಮ್ಮನ ಬಳಿ ಸಾಕಷ್ಟು ಸೀರೆಗಳಿವೆ, ವಿವಿದ ಬಣ್ಣ, ವಿನ್ಯಾಸಗಳ ಸೀರೆಗಳಿವೆ; ಆದರೆ, ಈಗ ಅಮ್ಮನಿಗೆ ಸೀರೆಗಳ ಬಗ್ಗೆ ಯಾವುದೇ ವ್ಯಾಮೋಹವಿಲ್ಲ. ತನ್ನ ಬಳಿ ಇರುವ ಹಲವಾರು ಹಳೆಯ ಸೀರೆಗಳನ್ನು ಊರಿನ ಬಡ ಹೆಂಗಸರಿಗೆ ಕೊಟ್ಟಿದ್ದಾಳೆ. ಮನೆಯಲ್ಲಿ ಉಡುವ ಸೀರೆಗಳೂ ಅಷ್ಟೇ, ಮಗಳ ಅಥವಾ ಸೊಸೆಯ ಉಟ್ಟು ಬೇಡವಾದ ಸೀರೆಗಳನ್ನು ಅವು ಹರಿಯುವವರೆಗೂ ಉಡುತ್ತಾಳೆ. ಅವಳಿಗೆ ಅದರ ಬಗ್ಗೆ ಯಾವ ಸಂಕೋಚವೂ ಇಲ್ಲ. ಮಕ್ಕಳು ಒಳ್ಳೆಯ ಕೆಲಸದಲ್ಲಿ

ಇದ್ದಾರೆ ಎಂದ ಮಾತ್ರಕ್ಕೆ ನಾನು ಹೊಸ ಹೊಸ ಸೀರೆಗಳನ್ನೇ ಉಡಬೇಕೇ? ಅಥವಾ ಅತ್ತೆ ಅಂದ ತಕ್ಷಣ ಸೊಸೆ ಕೊಟ್ಟ ಸೀರೆ ಉಡಲೇಬಾರದು ಎಂಬ ನಿಯಮವೇನಾದರೂ ಇದೆಯಾ? ಶುಚಿಯಾಗಿ, ಅಚ್ಚುಕಟ್ಟಾಗಿ ಇದ್ರೆ ಸಾಕು ಅಂತ ನೇರವಾಗಿ ಹೇಳುತ್ತಾಳೆ. ಅದಕ್ಕೆ ಅವಳು ರಿಟಾಯರ್ಡ್ ಸೀರೆಗಳು ಅಂತ ನಾಮಕರಣ ಮಾಡಿದ್ದಾಳೆ. ಹಾಗಂತ ಅವಳಿಗೆ ಆರಾಮದಾಯಕವಲ್ಲದ ಸೀರೆಗಳನ್ನು ನೇರವಾಗಿ ತಿರಸ್ಕರಿಸುತ್ತಾಳೆ. ಆಕೆ ಬೀರುನಲ್ಲಿ ಇರುವ ಅನೇಕ ಹೊಸ ಹೊಸ ಭಾರೀ ಸೀರೆಗಳ ಮಡಿಕೆಯನ್ನು ಬಿಡಿಸಿದ್ದೇ ಇಲ್ಲ. ಅವಳ ಮೊಮ್ಮಕ್ಕಳ ಮುಂಜಿ ಅಥವಾ ಇನ್ನೇನೋ ಸಮಾರಂಭಕ್ಕೆ ನಾವೇನಾದರೂ ಸೀರೆ ಖರೀದಿಗೆ ಹೋದರೆ, ನನಗೊಂದು ವಾಯಲ್ ಸೀರೆ ಅಥವಾ ಸರಳವಾದ ಸಾಕು ಅಂತ ತಾಕೀತು ಮಾಡುತ್ತಾಳೆ. ಅದಲ್ಲದೇ 'ವಸ್ತ್ರಗಳಿಗೆ ಜಾಸ್ತಿ ಹಣ ಸುರಿದು ಹಣ ಪೋಲು ಮಾಡಬೇಡಿ. ನಿಮ್ಮಲ್ಲಿ ದುಡ್ಡು ಇದ್ದರೆ ಒಡವೆಗಳನ್ನು ಖರೀದಿ ಮಾಡಿ. ಅದು ಆಪತ್ಕಾಲಕ್ಕೆ ಸಹಾಯಕ್ಕೆ ಬರುತ್ತದೆ. ನಿಮಗೆ ಈಗ ಅದರ ಅರಿವು ಆಗುವುದಿಲ್ಲ, ಆಮೇಲೆ ಗೊತ್ತಾಗುತ್ತದೆ ಅಮ್ಮ ಹೇಳಿದ್ದು ಎಷ್ಟು ನಿಜ ಅಂತ' ಎಂದು ಉಪದೇಶ ಮಾಡುತ್ತಾಳೆ. ನಾನೇನಾದರೂ ಪ್ರಶ್ನೆ ಮಾಡಿದರೆ 'ಈಗ ಭಾರೀ ಸೀರೆಗಳನ್ನು ಉಟ್ಟರೆ ಅದನ್ನು ಒಗೆದು ಅಚ್ಚುಕಟ್ಟಾಗಿ ಇಡೋಕೆ ನನಗೆ ಕಷ್ಟ ಮಗಳೇ. ಅದಕ್ಕೇ ತಾನೇ ಹಿರಿಯರು ಹೇಳಿರೋದು ಹಲ್ಲಿದ್ದಾಗ ಕಡಲೆ ಇಲ್ಲ, ಕಡಲೆ ಇದ್ದಾಗ ಹಲ್ಲಿಲ್ಲ' ಎಂದು ನಕ್ಕು ಬಿಡುತ್ತಾರೆ ನನ್ನಮ್ಮ.

ಅಂದ ಹಾಗೆ, ವಿಶ್ವ ಸೀರೆ ದಿನ ಇನ್ನೇ ಬರುತ್ತಿದೆ; ಡಿಸೆಂಬರ್ 21 ವಿಶ್ವ ಸೀರೆ ದಿನ ಅಂತೆ! ನಿಮ್ಮ ಬಳಿ ಇರುವ ಒಳ್ಳೆಯ ಸೀರೆಗಳನ್ನು ಹೊರಗೆ ತೆಗೆಯಿರಿ, ಅವುಗಳ ಮೇಲೆ ಕೈ ಆಡಿಸಿ; ಅಗತ್ಯ ಎನಿಸಿದರೆ ಬಿಸಿಲಿಗೆ ಹಾಕಿ, ಅವುಗಳ ಅಂದ ಚಂದ ನೋಡಿ! ಕೆಲವು ಸೀರೆಗಳನ್ನು ಮನೆಯಲ್ಲೇ ಉಟ್ಟು ನೋಡಿ! ವಿಶ್ವಸೀರೆ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿ!

ಸಿಡ್ನಿಯಲ್ಲಿ ಯಕ್ಷಗಾನಂ ವಿಶ್ವಗಾನಂ

• ಅಮಿತಾ ಭಟ್, ಸಿಡ್ನಿ

ನಮ್ಮ ರಾಜ್ಯದ ಹೆಮ್ಮೆಯ ಕಲೆಗಳಲ್ಲಿ ಯಕ್ಷಗಾನ ಮತ್ತು ತಾಳಮದ್ದಲೆಗಳು ಸೇರಿವೆ. ದೂರ ದೇಶದಲ್ಲಿರುವ ನಮ್ಮವರು, ಅಲ್ಲಿ ತಾಳಮದ್ದಲೆಯ ಕಾರ್ಯಕ್ರಮವನ್ನು ನಡೆಸುವ ಮೂಲಕ, ಕಲಾಭಿಮಾನವನ್ನು ಮೆರೆದಿದ್ದಾರೆ.

ಆಸ್ಟ್ರೇಲಿಯಾದ ಸಿಡ್ನಿಯ ಶ್ರೀ ವೆಂಕಟಕೃಷ್ಣ ವೃಂದಾವನದಲ್ಲಿ ಉಡುಪಿಯ ಪರ್ಯಾಯ ಪುತ್ತಿಗೆ ಮಠಾಧೀಶರಾದ ಶ್ರೀ ಸುಗುಣೇಂದ್ರತೀರ್ಥ ಸ್ವಾಮೀಜಿ ಯವರ ಶುಭಾಶೀರ್ವಾದಗಳೊಂದಿಗೆ, ಡಿಸೆಂಬರ್ 15ರಂದು 'ಭ್ರಾಮರೀ ಮಹಿಳಾ ಯಕ್ಷಗಾನ ಮಂಡಳಿ ಸಿಡ್ನಿ' ತಂಡದ ಮಹಿಳೆಯರಿಂದ 'ಮಹಿಷ ಮರ್ದಿ'ನಿ ಎಂಬ ಯಕ್ಷಗಾನ ತಾಳಮದ್ದಳೆ ನಡೆಯಿತು. ಕರಾವಳಿ ಕರ್ನಾಟಕದ ನವರಸಗಳಿಂದ ಕೂಡಿದ ಈ ಕಲೆಯನ್ನು ಉತ್ತಮವಾಗಿ ಸ್ವೀಕರಿಸಿದ ಸಿಡ್ನಿಯ ಕಲಾಭಿಮಾನಿಗಳು, ಆಸ್ಟ್ರೇಲಿಯಾದಲ್ಲಿ ಈ ಕಲೆಯನ್ನು ಪರಿಚಯಿಸಿ, ಉಳಿಸಿ ಬೆಳೆಸುವ ಪ್ರಯತ್ನವನ್ನು ಶ್ಲಾಘಿಸಿದರು.

ಸಿಡ್ನಿಯಲ್ಲಿ ವಿವಿಧ ವೃತ್ತಿಗಳಲ್ಲಿರುವ ಕನ್ನಡಿತಿಯರು ತಾಳಮದ್ದಳೆಯಲ್ಲಿ ಅರ್ಥಧಾರಿಗಳಾಗಿ ಭಾಗವಹಿಸಿದರು. ಮಾಲಿನಿಯ ಪಾತ್ರದಲ್ಲಿ ಉಮಾ ರಾಜ್, ಮಹಿಷನಾಗಿ ಮಂಜುಶ್ರೀ ಸುಬ್ರಮಣ್ಯ, ವಿದ್ಯುನ್ಮಾಲಿಯಾಗಿ ಸುಧಾ ವಾದಿರಾಜ್ ರಾವ್, ದಿತಿ ದೇವಿಯಾಗಿ ನಂದಿನಿ ಗಣೇಶ್, ಬ್ರಹ್ಮನಾಗಿ ಶ್ರುತಿ ಜೋಯಿಸ್, ಈಶ್ವರನಾಗಿ ಶೈಲಾ ಸತೀಶ್, ದೇವೇಂದ್ರನಾಗಿ ಸ್ಮೃತಿ ಐತಾಳ್, ಮಹಾವಿಷ್ಣುವಾಗಿ ಅಮಿತಾ ಭಟ್, ಸುಪಾರ್ಶ್ವಕ ಮುನಿಯಾಗಿ ಶೋಭಾಂಜಲಿ ಪೃಥ್ವಿ, ಯಕ್ಷನಾಗಿ ಶಾಲಿನಿ ವಿಷ್ಣು, ಮತ್ತು ಶ್ರೀದೇವಿಯ ಪಾತ್ರದಲ್ಲಿ ಡಾ.ಪದ್ಮಶ್ರೀ ರಾವ್ ಭಾಗವಹಿಸಿದರು.

ಗಣಪತಿ, ದುರ್ಗಾ ದೇವಿಯ ಅರ್ಚನೆಯೊಂದಿಗೆ ಹಾಗೂ ಹಿರಿಯರಾದ ಸತ್ಯಭಾಮ ಭಟ್ (ದಿ.ಮಾಳಂಗೈ ವೆಂಕಟರಮಣ ಭಟ್ಟರ ಪತ್ನಿ) ಅವರ ದೇವಿಸ್ತುತಿಯೊಂದಿಗೆ ಕಾರ್ಯಕ್ರಮದ ಆರಂಭ. ಯಕ್ಷಗಾನದ ಹಿಮ್ಮೇಳದ ಪ್ರತೀಕವಾಗಿ ತಾಳ, ಚೆಂಡೆ ಹಾಗೂ ದೇವಿ ಮಹಾತ್ಮೆ ಯಕ್ಷಗಾನ ಪ್ರಸಂಗದ ಪುಸ್ತಕವನ್ನು ಜೊತೆಗೆ ಇಟ್ಟು ಪೂಜಿಸಲಾಯಿತು. ಕಲಾವಿದರ ಪರಿಚಯ ಮಾಡಿಕೊಟ್ಟ ಬಳಿಕ ಕಥಾಭಾಗವನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಸಂಕ್ಷಿಪ್ತವಾಗಿ ವಿವರಿಸಿ ತಾಳಮದ್ದಳೆ (ಕಥಾಖ್ಯಾನ) ಆರಂಭಗೊಂಡಿತು. ಮುಂದಿನ ಒಂದೂವರೆ ಗಂಟೆಗಳ ಕಾಲ ಮಹಿಳಾಮಣಿ ಅರ್ಥಧಾರಿಗಳು ತಮ್ಮ ಮಾತುಗಾರಿಕೆಯ ಮೂಲಕ ಎಲ್ಲರನ್ನೂ ಯಕ್ಷಲೋಕಕ್ಕೆ ಕೊಂಡೊಯ್ದರು. ತೆಂಕುತಿಟ್ಟಿನ ಭಾಗವತ ಗಾನಸುರಭಿ ರವಿಚಂದ್ರ ಕನ್ನಡಿಕಟ್ಟೆಯವರ ಧ್ವನಿಮುದ್ರಿತ ಭಾಗವತಿಕೆಯು ತಾಳಮದ್ದಳೆಯ ಮೆರುಗನ್ನು ಹೆಚ್ಚಿಸಿತು. ಕಥೆಗೆ ಪೂರಕವಾಗಿ, ಪಾತ್ರಕ್ಕೆ ಅನುಗುಣವಾಗಿ, ವಿಷಯಭರಿತ, ವೀರೋಚಿತ ಮಾತುಗಳಿಂದ ಸುಸೂತ್ರವಾಗಿ ನಡೆದ ತಾಳಮದ್ದಳೆಯು ಆದಿಪರಾಶಕ್ತಿಗೆ ಜಯಜಯವೆನ್ನುತ್ತ ಅಂತ್ಯಗೊಂಡಾಗ ಎಲ್ಲರಲ್ಲೂ ಶ್ರೀದೇವಿಯನ್ನು ಅರ್ಚಿಸಿದ ಭಾವ ಮೂಡಿ ಬಂತು. ಈ ಆಖ್ಯಾನವನ್ನು ಶ್ರೀದೇವಿಯ ಪದತಲಕ್ಕೆ ಅರ್ಪಿಸಿದ ಧನ್ಯತಾಭಾವ ಅರ್ಥಧಾರಿಗಳ ಮುಖದಲ್ಲಿ ಗೋಚರಿಸಿತು. ಯಕ್ಷರಸಿಕರು ತಾಳಮದ್ದಳೆಯನ್ನು ವೀಕ್ಷಿಸಿದ ನಂತರ ಅರ್ಥಧಾರಿಗಳನ್ನು ವೈಯುಕ್ತಿಕವಾಗಿ ಶ್ಲಾಘಿಸಿದರು. ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದಲ್ಲಿ ತಾಳಮದ್ದಳೆ ನಡೆಸಲು ಉತ್ತೇಜಿಸಿದರು. ಆಸ್ಟ್ರೇಲಿಯಾದಲ್ಲಿ ನಮ್ಮ ರಾಜ್ಯದ ಕರಾವಳಿಯ ಕಲೆಗೆ ದೊರೆತ ಉತ್ತಮ ಪ್ರೋತ್ಸಾಹ, ಕಲಾಭಿಮಾನಿಗಳು ಸುದೀರ್ಘ ಸಮಯ ತಾಳಮದ್ದಳೆಯನ್ನು ವೀಕ್ಷಣೆ ಮಾಡಿದ ರೀತಿ ತಾಳಮದ್ದಳೆಯ ಸಂಯೋಜಕರು ಹಾಗೂ ಅರ್ಥಧಾರಿ ಮಹಿಳೆಯರಿಗೆ ಸಂತಸ ನೀಡಿತು.

ತಾಳಮದ್ದಳೆಯ ಅಭ್ಯಾಸದ ಸಮಯದಲ್ಲಿ ಅರ್ಥಗಾರಿಕೆಯ ಮಾತುಗಳನ್ನು ಕೇಳಿಸಿಕೊಂಡ ಮಕ್ಕಳು ತಮ್ಮ ಬಿಡುವಿನ ಸಮಯದಲ್ಲಿ ಅದೇ ಮಾತುಗಳನ್ನು ಪುನರುಚ್ಚರಿಸಲು ಆರಂಭಿಸಿದ್ದೊಂದು ವಿಶೇಷ. ನಮ್ಮ ಕಲೆಯನ್ನು, ತನ್ಮೂಲಕ ಸನಾತನ ಧರ್ಮವನ್ನು, ಮುಂದಿನ ಪೀಳಿಗೆಗೆ ಪರಿಚಯಿಸಿದ ಸಾರ್ಥಕತೆಯೂ ಎಲ್ಲರಲ್ಲೂ ಮೂಡಿತು. ಮಕ್ಕಳು ಇಂತಹ ಕಲೆಯ ಕುರಿತು ಆಸಕ್ತಿ, ಅಭಿಮಾನ ಬೆಳೆಸಿಕೊಂಡಾಗ, ಕಲೆಯು ಮುಂದಿನ ತಲೆಮಾರಿಗೂ ವರ್ಗಾವಣೆಯಾಗುವಲ್ಲಿ ಸಹಕಾರಿ.

ನಮ್ಮ ದೇಶದಿಂದ ಬಹುದೂರ ವಾಸವಿದ್ದರೂ, ನಮ್ಮ ಸಂಸ್ಕೃತಿಯ ಉತ್ತಮ ಅಂಶಗಳನ್ನು ನೆನಪಿಸಿಕೊಂಡು ಆಚರಿಸುವ ಇಂತಹ ಕಾರ್ಯಕ್ರಮಗಳು, ಒಂದು ಸಮುದಾಯದ ಅಸ್ಮಿತೆಯನ್ನು ಕಾಪಾಡಿಕೊಳ್ಳುವಲ್ಲಿ ಮಹತ್ವದ ಹೆಜ್ಜೆಗಳು ಎನಿಸಿವೆ.

ಪುಸ್ತಕ ಲೋಕ

ವಿಶ್ವೇಶ್ವರ ಭಟ್ ಅವರ ಹೊಸ ಪುಸ್ತಕ 'ಪದಮಣಿ ದರ್ಪಣ' ವು ಇದೇ ತಿಂಗಳ

28ರಂದು ಅಧಿಕೃತ ಸಮಾರಂಭ ದಲ್ಲಿ ಬೆಳಕು ಕಾಣ ಲಿದೆ. ಕರ್ನಾಟಕದ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯಾದ ಸಪ್ನ ಬುಕ್ ಹೌಸ್ ಇದನ್ನು ಪ್ರಕಟಣೆಗೆ ಸಿದ್ಧಪಡಿಸಿ ದ್ದು, ನಾಡಿನ ಓದುಗರಿಗೆ ಹೊಸ ಬರಹಗಳನ್ನು ಪ್ರಸ್ತುತಪಡಿಸುತ್ತಿದೆ. ಈ ಪುಸ್ತಕದ ಬೆಲೆಯು ರು.195/- ಆಗಿದ್ದು, ಪ್ರಕಟಣ ಪೂರ್ವ ರಿಯಾಯತಿ ಬೆಲೆಯಾಗಿ ರು.146/-ಕ್ಕೆ ಲಭ್ಯವಿದೆ! ಅಂದರೆ, ಶೇ.25ರಷ್ಟು ರಿಯಾಯತಿಯನ್ನು ಸಪ್ನ ಬುಕ್ ಹೌಸ್ ನೀಡುತ್ತಿದೆ. ಸುಂದರ ಮುದ್ರಣ, ಅಷ್ಟೇ ಉತ್ತಮ ಬರೆಹಗಳನ್ನು ಹೊಂದಿರುವ ಈ ಪುಸ್ತಕವನ್ನು ಸಪ್ನ ಆನ್‌ಲೈನ್ ಮೂಲಕ ಖರೀದಿಸಬಹುದು.

ಗುರಿ ದಾಖಲಿಸಲೊಂದು ವೇದಿಕೆ

• ಮಂಜುನಾಥ ಡಿ. ಎಸ್.

ಬಾಲ್ಯದಲ್ಲಿ ಕಲಿಕೆಯ ವೇಗ ಅಧಿಕವಾಗಿರುತ್ತದೆ. ಮಕ್ಕಳು ಬಹು ಬೇಗ ಗ್ರಹಿಸಲು ಶಕ್ತರಾಗಿರುತ್ತಾರೆ ಕೂಡ. ಅಲ್ಲದೆ, ಮೌಲ್ಯ-ಕೌಶಲ್ಯಗಳನ್ನು ಎಳವೆಯಲ್ಲಿಯೇ ರೂಢಿಸಿಕೊಳ್ಳಲು ಉಪಕ್ರಮಿಸಿದ ಮಕ್ಕಳು ಉನ್ನತಿಯ ಹಾದಿಯಲ್ಲಿ ಸಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇದನ್ನು ಮನಗಂಡಿರುವ ಅಮೆರಿಕದ ಗ್ರಂಥಾಲಯಗಳು ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ನಿರಂತರ ಕಾರ್ಯೋನ್ಮುಖವಾಗಿರುವುದನ್ನು ನಾನು ಗಮನಿಸಿದ್ದೇನೆ.

ಗುರಿಯನ್ನು ಗುರುತಿಸಿಕೊಂಡು, ಅದನ್ನು ದಾಖಲಿಸಿ, ಅದರ ಸಾಧನೆಗೆ ಶ್ರಮಿಸುವುದು ಜೀವನದ ಯಶಸ್ಸಿನ ಸೂತ್ರಗಳಲ್ಲಿ ಒಂದಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಮಕ್ಕಳಿಗೆ ಈ ಅಂಶವನ್ನು ಮನವರಿಕೆ ಮಾಡಿಸಲು ನಡೆದ ಒಂದು ಪ್ರಯತ್ನ ನೋಡಿದೆ : ಅರ್ವೈನ್ ನಗರದ (ಯು.ಎಸ್.) ಹೆರಿಟೇಜ್ ಪಾರ್ಕ್ ಗ್ರಂಥಾಲಯ ಇದಕ್ಕಾಗಿ ಪುಟ್ಟ ಪ್ರಯೋಗವೊಂದಕ್ಕೆ ಮುಂದಾಗಿದ್ದುದು ಗೋಚರಿಸಿತು. ಗ್ರಂಥಾಲಯದ ಆವರಣದಲ್ಲಿ ಸಣ್ಣ ಫಲಕವೊಂದನ್ನು ಸ್ಥಾಪಿಸಿತ್ತು. ಜೊತೆಗೆ

ಪರ್ಣಾಕಾರದ ವರ್ಣಮಯ ಕಾಗದಗಳು ಹಾಗು ಲೇಖನಿಗಳನ್ನು ಇರಿಸಿತ್ತು. ಮಕ್ಕಳು, ತಾವು ಈ ಶರತ್ಕಾಲದಲ್ಲಿ ಏನು ಓದುತ್ತೇವೆ / ಮಾಡುತ್ತೇವೆ ಎಂಬುದನ್ನು ನಿರ್ಧರಿಸಿ, ಅದನ್ನು ಬರೆದು ಆ ಫಲಕದ ಮೇಲೆ ಅಂಟಿಸುವಂತೆ ಸೂಚಿಸಿತ್ತು.

ಆ ಫಲಕದ ಮೇಲೆ ಅರವತ್ತಕ್ಕೂ ಹೆಚ್ಚು ಮಕ್ಕಳು ತಾವೇನು ಓದುತ್ತೇವೆ / ಮಾಡುತ್ತೇವೆ ಎಂಬುದನ್ನು ದಾಖಲಿಸಿದ್ದು ಈ ಪ್ರಯೋಗದ ಯಶಸ್ಸಿನ ಪುರಾವೆಯಂತೆ ಕಂಡಿತು. ಮೈ ಲಿಟಲ್ ಪೋನಿ, ರೂಂ ಟು ಡ್ರೀಮ್, ಚಾರ್ಲಿ ಬ್ರೌನ್, ದ ಇಯರ್ಸ್ ಆಫ್ ಲಿಂಡನ್ ಜಾನ್ಸನ್ - ಪಾಥ್ ಟು ಪವರ್, ಶೆರ್ಲಾಕ್ ಹೋಮ್ಸ್, ಐಲೆಂಡ್ ಆಫ್ ದಿ ಬ್ಲೂ, ಡೈರಿ ಆಫ್ ಅ ವಿಂಪಿ ಕಿಡ್, ದ ಡಿಸೇಬಲ್ಡ್ ಟೈರೆಂಟ್ಸ್ ಪೆಟ್ ಫಿಶ್, ಸೇರಿದಂತೆ ಹತ್ತು ಹಲವು ಶೀರ್ಷಿಕೆಗಳು ವಿಭಿನ್ನ ವಯೋಮಾನದ ಮಕ್ಕಳ ಅನನ್ಯ ಅಭಿರುಚಿಗಳ ದ್ಯೋತಕವಾಗಿ ಕಂಡವು. ಇಂಗ್ಲಿಷ್ ಅಲ್ಲದೆ ಅನ್ಯ ಭಾಷೆಯ ಬರಹವೂ ಅಲ್ಲಿ ಕಂಡುಬಂದಿತು. ಯು-ಟ್ಯೂಬ್ ನೋಡುವುದಾಗಿ ಕೆಲವು ಮಕ್ಕಳು ಬರೆದಿದ್ದರು. ಗ್ರಂಥಾಲಯಕ್ಕೆ ಭೇಟಿಯಿತ್ತಾಗಲೆಲ್ಲಾ ಅಲ್ಲಿದ್ದ ಮಕ್ಕಳ ಚಟುವಟಿಕೆಗಳನ್ನು ಗಮನಿಸಿದ್ದ ಅನುಭವದ ಹಿನ್ನೆಲೆಯಲ್ಲಿ, ಇವುಗಳನ್ನು ಮಕ್ಕಳು ಬದ್ಧತೆಯಿಂದ ಬರೆದಿದ್ದಾರೆ ಎಂದು ಅಂತರಾಳ ನುಡಿಯಿತು.

ತಾವು ಏನು ಓದಬೇಕು / ನೋಡಬೇಕು ಎಂಬುದರ ನಿರ್ದಿಷ್ಟ ಗುರಿ ಹೊಂದಿರುವ ಈ ಮಕ್ಕಳ ಭವಿಷ್ಯ ಉಜ್ವಲವಾಗುವುದರಲ್ಲಿ ಸಂದೇಹವಿಲ್ಲ ಎನಿಸಿತು. ಮಕ್ಕಳಲ್ಲಿ ವಿವಿಧ ಹವ್ಯಾಸಗಳನ್ನು, ಅಭಿರುಚಿಯನ್ನು ಬೆಳೆಸಲು ಸಹ ಇಂತಹ ಪ್ರಯತ್ನ ಉತ್ತಮ ಮತ್ತು ಅನುಕರಣೀಯ.

ಪದಬಂಧ



ಎಡದಿಂದ ಬಲಕ್ಕೆ

1. ನಾಡಿನ ರಾಜ (3)
4. ಬರೆಯುವ ಹಾಳೆ (3)
6. ಚಪ್ಪಾಳೆ ತಟ್ಟುವುದನ್ನು ಹೀಗೆಯೂ ಹೇಳಬಹುದು (6)
7. ಪುರದಲ್ಲಿ ದೊರೆತ ಶತ್ರು (2)
9. ಹಗಲು ಮತ್ತು ರಾತ್ರಿ (3)
11. ಎರಡಕ್ಷರದ ಮನ್ಮಥ (2)
12. ತುಂಬಾ 'ಬುದ್ಧಿವಂತ' ಹಕ್ಕಿಯಿದು (3)
13. ವಿರಳವಾಗಿ ಬಂದಿರುವ ಹೋಮ (3)
14. ಮೇಲಕ್ಕೆ ಹತ್ತು ಎಂದರ್ಥ (2)
15. ಕೆಸರಿನಲ್ಲರಳಿದ ಹೂವು (3)
17. ಮತ್ತೊಂದು ಹಾರ (2)
21. ರುಚಿಕರವಾದ ಭೋಜನ (5)
22. ನಡೆದು ಹೋಗು (3)
23. ದಿನದ ಮಧ್ಯೆ ಸಿಲುಕಿದ ಮಂತ್ರಿ (3)

ಮೇಲಿನಿಂದಕೆಳಕ್ಕೆ

1. ಒಂದೆಡೆ ನಿಲ್ಲದೆ ತಿರುಗಾಡುವವನು (4)
2. ಸಂಪೂರ್ಣವಾದ, ಸಮಗ್ರವಾದ (3)
3. ತಂದೆಯ ತಂದೆ (4)
4. ಕೊಲೆ ಮಾಡುವಿಕೆ (3)
5. ಒಬ್ಬ ಪೊಲೀಸು ಅಧಿಕಾರಿ ದರದ ಮಧ್ಯೆ ನಿಂತಿದ್ದಾನೆ (4)
8. ಮೋಟಾರು ವಾಹನದೊಂದಿಗೆ ಬಂದಿದೆ ಅಪವಾದ (3)
9. ಅಣ್ಣ ಮಾಡಿದ ಅಪಹಾಸ್ಯ (3)
10. ಅಸ್ತವ್ಯಸ್ತವಾದ ಮನೆ (3)
11. ಹಿಮಾಲಯದಲ್ಲಿರುವ ಒಂದು ಪವಿತ್ರ ಸರೋವರ (3)
14. ಒಂದೇ ವಿಷಯದಲ್ಲಿ ಗಮನವನ್ನು ಕೇಂದ್ರೀಕರಿಸುವುದು (4)
16. ಅಮಲೇರಿದ ಆನೆ (4)
18. ಬಾಳೆಹಣ್ಣು, ಬೆಲ್ಲ ಸೇರಿಸಿ ಮಾಡಿದ ಸಿಹಿ ಖಾದ್ಯ (4)
19. ಹಿಂತಿರುಗು ಎನ್ನುವ ಉಸುಕು (3)
20. ಕಾಮಾಲೆ ಕಣ್ಣಿಗೆ ಕಾಣುವ ಬಣ್ಣ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 5. ಬಿಲವಾರ 6. ಮಾನಪತ್ರ 7. ಕತ್ತರಿ 8. ಮುತ್ತುಗ 10. ನಾಯಕ 11. ವುನೋ 12. ವಾಸಿ 13. ಅವಳಿ 15. ಕತಜಾ 17. ವಿಷಾದ 19. ಅಮಾನುಷ 20. ನುಡಿಗಟ್ಟು

ಮೇಲಿನಿಂದ ಕೆಳಕ್ಕೆ: 1. ಕಲಬತ್ತು 2. ಚರಕ 3. ಸೋಮಾರಿ 4. ಅಪಜಯ 9. ಗವುಳಿ 10. ನಾಸಿಕ 14. ವರ್ಧಮಾನ 16. ತರಗತಿ 17. ವಿಷಣ್ಣ 18. ದನುಜ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ಯುವ ಕಾವ್ಯ

ಸಮಾಜದಲ್ಲಿ ಬಾಲ್ಯ ವಿವಾಹ
ಇನ್ನೂ ಇವೆ ಚಾಲ್ತಿ
ತಡೆಯಬೇಕಿದೆ ನಾವೆಲ್ಲರೂ
ಈ ಹೀನ ಪದ್ಧತಿ

ಪ್ರತಿ ಊರಲ್ಲೂ ಆಗಬೇಕಿದೆ
ಇದರ ಕುರಿತು ಜಾಗೃತಿ

ಅಪ್ರಾಪ್ತರ ವಿವಾಹಗಳಿಂದ
ಮಕ್ಕಳ ಬದುಕು ದುಸ್ಥಿತಿ

ಆಡುವ ಮಕ್ಕಳಿಗೆ ಕಾಡುವ
ಮಕ್ಕಳಾಗುತಿವೆ ಜಾಸ್ತಿ
ಕಾಡಿದೆ ಚಿಕ್ಕ ವಯಸ್ಸಿನಲ್ಲೇ
ಕಾಯಿಲೆಗಳ ಭೀತಿ

ಆಟ ಪಾಠ ಶಿಕ್ಷಣ ಭವಿಷ್ಯದ
ಕನಸು ಅವನತಿ
ಇದನ್ನರಿತ ಸರ್ಕಾರ ಮಾಡಿದೆ
ಬಾಲ್ಯ ವಿವಾಹ ರದ್ದತಿ

ಪಾಲಕರು ಮಕ್ಕಳ ಬದುಕಿಗೆ
ತೋರಬೇಕು, ಆಸಕ್ತಿ
ಆಗ ಮಾತ್ರ ಅರಳಲು ಸಾಧ್ಯ
ಮಕ್ಕಳ ಬಾಲ್ಯದ ಸಿಹಿ ಬುತ್ತಿ

• ಮೌಲಾಲಿ ಕೆ. ಆಲಗೂರ (ಬೋರಗಿ)

ಹಂಗಿನರಮನೆಗಿಂತ ವಿಂಗಡದ ಗುಡಿಲೇಸು

ಸಂತ ಕವಿಯೊಬ್ಬರು ತತ್ವ ಪದಗಳನ್ನು ಹಾಡಿಕೊಂಡು ಪುಟ್ಟ ಗುಡಿಸಲೊಂದರಲ್ಲಿ ಭಿಕ್ಷಾಟನೆ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಅವರು ಹೇಳುತ್ತಿದ್ದ ತತ್ವ ಪದಗಳು ತುಂಬಾ ಅರ್ಥವತ್ತಾಗಿದ್ದು ಸತ್ಯದಿಂದ ಕೂಡಿರುತ್ತಿತ್ತು. ಊರಿನ ಜನರೆಲ್ಲ ಅವರ ತತ್ವ ಪದಗಳನ್ನು ಕೇಳಲು ಯಾವಾಗಲೂ ಕಾತುರರಾಗಿರುತ್ತಿದ್ದರು.

ಈ ಸಂತರ ವಿಚಾರ ಆ ಊರಿನ ರಾಜನ ಕಿವಿಗೂ ಬಿದ್ದು ಅವರ ತತ್ವ ಪದಗಳನ್ನು ಕೇಳಲು ಕಾತುರನಾಗಿ ಸಂತರಿದ್ದಲ್ಲಿಗೆ ಬಂದನು. ಅವರು ಹೇಳುತ್ತಿದ್ದ ತತ್ವ ಪದಗಳು ರಾಜನ ಮನಸ್ಸಿಗೆ ಬಹಳವಾಗಿ ಹಿಡಿಸಿ ನಿಮ್ಮಂಥ ಜ್ಞಾನಿಗಳು ನನ್ನ ಆಸ್ಥಾನದಲ್ಲಿರುವುದೇ ನನಗೊಂದು ಹೆಮ್ಮೆಯವಿಷಯ. ನೀವು ಕೃಪೆಮಾಡಿ ನನ್ನ ಆಸ್ಥಾನಕ್ಕೆ ಬರಬೇಕೆಂದು ಒತ್ತಾಯ ಮಾಡಿದನು. ರಾಜನ ಒತ್ತಾಯಕ್ಕೆ ಕಟ್ಟುಬಿದ್ದು ಸಂತರು ಅವನೊಂದಿಗೆ ಅರಮನೆಗೆ ಹೋಗಲು ಒಪ್ಪಿಕೊಂಡರು. ರಾಜ ಸಂತರನ್ನು ಸಕಲರಾಜ ಮರ್ಯಾದೆಯಿಂದ ಅರಮನೆಗೆ ಸ್ವಾಗತಿಸಿದ.

ರಾಜನ ಆಸ್ಥಾನದಲ್ಲಿ ಸಂತರ ತತ್ವ ಪದಗಳನ್ನು ದಿನ ದಿನವು ಎಲ್ಲರೂ ಕೇಳಿ ಸಂತೋಷ ಪಟ್ಟರು. ಅಷ್ಟೇ ಅಲ್ಲದೇ ಹೊರ ರಾಜ್ಯದ ರಾಜನ ಅನೇಕ ಸ್ನೇಹಿತರು ಕೂಡಾ ಸಂತರ ತತ್ವ ಪದಗಳನ್ನು ಕೇಳಲೆಂದೇ ಇವನ ಆಸ್ಥಾನಕ್ಕೆ ಬರಲು ಶುರುಮಾಡಿದರು. ಈ ಕವಿ ಸಂತರಿಂದ, ರಾಜ ಬಹಳ ಪ್ರಸಿದ್ಧನಾದನು. ರಾಜನಿಗೆ ಈಗ ಸ್ವಲ್ಪ ಅಹಂಕಾರ ಶುರುವಾಯಿತು. ಯಾರಾದರೂ ಸಂತರ ತತ್ವ ಪದಗಳನ್ನು ಕೇಳಲು ಬಂದಾಗ, ರಾಜ ಆ ತತ್ವಪದ ಬೇಡ ಇದು ಹೇಳಿ, ಅದು ಹೇಳಿ ಎಂದು ಸಂತರಿಗೆ ಒತ್ತಾಯದಿಂದ ಆಜ್ಞೆ ಮಾಡಲು ಶುರುಮಾಡಿದ. ಒಂದೆರಡು ಸಲ ಸಂತರಿಗೆ ಮುಜುಗರವಾದರೂ ರಾಜ ತಮಗೆ ಆಶ್ರಯ ಕೊಟ್ಟಿರುವುದನ್ನು ನೆನೆದು ಸುಮ್ಮನಾದರು. ಆದರೆ ರಾಜನ ಅಹಂಕಾರ ಮಿತಿಮೀರಿತು ಸಂತರ ಮೇಲೆ ದಬ್ಬಾಳಿಕೆ ದಿನದಿಂದ ದಿನಕ್ಕೆ ಜಾಸ್ತಿಯಾಗತೊಡಗಿತು. ಇದು ಕವಿ ಸಂತರಿಗೆ ಕಿರಿ ಕಿರಿಯಾಗಿ ತುಂಬಾ ಚಿಂತಿಸುವಂತೆ ಮಾಡಿತು. ಅವರು ತಮಗೆ ತಾವೇ ಹಳಿದುಕೊಂಡು 'ಇದು ನನ್ನದೇ ತಪ್ಪು ನಾನೆಂಥಾ ಮೂರ್ಖ ರಾಜ ಕರೆದನೆಂದು ನಾನೂ ರಾಜಾಶ್ರಯವನ್ನು ಬಯಸಿ ಬಂದೆ. ಬಹುಶಃ ನನಗೂ ಎಲ್ಲೋ ಅರಮನೆಯ ರುಚಿ ನೋಡಬೇಕೆಂಬ ಆಸೆ ಬಂದಿರಬೇಕು, ಅದಕ್ಕೆ ಈಗ ನನಗೆ ತಕ್ಕ ಶಾಸ್ತಿಯೇ ಆಯಿತು. ನನ್ನ ಪುಟ್ಟ ಗುಡಿಸಲಿನಲ್ಲಿ ಎಷ್ಟು ಆನಂದವಾಗಿ ಸ್ವಚ್ಛಂದವಾಗಿ ನನ್ನ ಪಾಡಿಗೆ ನಾನು ಇದ್ದೆ. ಇಲ್ಲಿ ಅಕ್ಕಿ ಒಂದನ್ನು ಚಿನ್ನದ ಪಂಜರದಲ್ಲಿ ಇರಿಸಿದಂತೆ ನನ್ನ ಸ್ಥಿತಿಯಾಗಿದೆ. ಅದೆಷ್ಟೇ ಉಪಚಾರ ಮಾಡಿ ನನ್ನನ್ನು ನೋಡಿಕೊಂಡರೂ ಈ ಬಂಧನ ಉಸಿರು ಕಟ್ಟುತ್ತಿದೆ'. ಇನ್ನೊಂದು ಕ್ಷಣವೂ ಈ ರಾಜನ ಅಥವಾ ಇನ್ಯಾರ ಹಂಗಿನಲ್ಲೂ ಇರಕೂಡದೆಂದು ತೀರ್ಮಾನಿಸಿ ಯಾರಿಗೂ ಹೇಳದಂತೆ, ಅರಮನೆಯನ್ನು ತ್ಯಜಿಸಿ ಅಲ್ಲಿಂದ ಬಹುದೂರ ಹೊರಟುಹೋದರು.

ಬದುಕಿನಲ್ಲಿ ವೈಭೋಗಗಳ ಆಸೆಗೆ ನಾವು ಅನೇಕ ಬಾರಿ ಕೆಲವರ ಹಂಗಿನಲ್ಲಿ ಬೀಳುತ್ತೇವೆ. ನೆನಪಿರಲಿ ಯಾರೂ ಕೂಡ ನಮಗೆ ಅನಗತ್ಯವಾಗಿ ಸಹಾಯ ಮಾಡುವುದಿಲ್ಲ. ಅವರಿಗೆ ನಮ್ಮಿಂದ ಏನೂ ಅನುಕೂಲವಾಗುತ್ತಿರುತ್ತದೆ. ಆದ್ದರಿಂದಲೇ ಅವರು ನಮ್ಮನ್ನು ಅತಿಯಾಗಿ ಹೊಗಳಿ, ಉಡುಗೊರೆಗಳನ್ನು ನೀಡುತ್ತಾ ನಮಗೆ ವಿಶೇಷ ಮರ್ಯಾದೆ ನೀಡುತ್ತಾರೆ. ನಾವು ಅವರ ಈ ನಡವಳಿಕೆಯನ್ನು ಕಂಡು ಅವರು ನಮ್ಮ ಗುಣವನ್ನು ಪ್ರೋತ್ಸಾಹಿಸುತ್ತಿದ್ದಾರೆ ಎಂದು ಉಬ್ಬಿ ಹೋಗಿ ಅವರಿಗೆ ಅತಿ ಹತ್ತಿರದವರಾಗಿ ಬಿಡುತ್ತೇವೆ. ಆದರೆ ನಿಧಾನವಾಗಿ ಉಡುಗೊರೆಗಳನ್ನು ನೀಡುತ್ತಾ ನಮ್ಮನ್ನು ಅವರ ಹಿಡಿತದಲ್ಲಿ ಇರಿಸಿಕೊಳ್ಳುತ್ತಾರೆ. ಅವರಿಂದ ಅನಗತ್ಯವಾಗಿ ಬಹಳ ಸಹಾಯಗಳನ್ನು ಪಡೆದ ನಾವು ಒಂದು ರೀತಿ ಅವರ ಹಂಗಿನಲ್ಲಿ ಇರುತ್ತೇವೆ. ನಂತರ ಅವರು ಕೇಳಿದ ಚಿಕ್ಕ ಪುಟ್ಟ ವಿಷಯಕ್ಕೂ ಕೂಡ ಮನಸಿರಲಿ ಇಲ್ಲದಿರಲಿ ಒಪ್ಪಿಕೊಳ್ಳಬೇಕಾಗುತ್ತದೆ. ದಯವಿಟ್ಟು ಅನಗತ್ಯವಾಗಿ ಸಹಾಯ, ಉಡುಗೊರೆಗಳನ್ನು ಪಡೆಯಬೇಡಿ. ಒಂದಲ್ಲ ಒಂದು ದಿನ ಅದಕ್ಕೆ ತಕ್ಕ ಬೆಲೆ ತೆರಬೇಕಾಗುತ್ತದೆ. ಸ್ವತಂತ್ರ ಮನೋಭಾವ, ಆತ್ಮವಿಶ್ವಾಸದ ಬದುಕು ಇದು ನಾವೇ ನಮ್ಮ ಬದುಕಿಗೆ ಕೊಟ್ಟುಕೊಳ್ಳುವ ದೊಡ್ಡ ಉಡುಗೊರೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಅಹಂಕಾರ ಹೋದಾಗ ಗುರಿ ತಲುಪಲ್ಪಡುತ್ತದೆ

ನಿತ್ಯಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ಕೆಲವರು ಈ ಆತ್ಮವನ್ನು ಒಂದು ಅದ್ಭುತದಂತೆ ಕಾಣುತ್ತಾರೆ. ಮತ್ತೆ ಕೆಲವರು ಇದರ ಬಗ್ಗೆ ಅದ್ಭುತವಾಗಿ ಮಾತ ನಾಡುತ್ತಾರೆ. ಆದರೂ ಯಾರಿಗೂ ಇದು ಏನೆಂದು ಗೊತ್ತಿಲ್ಲ ವೆಂದು ಕೃಷ್ಣ ಹೇಳುತ್ತಾನೆ (2.29).

ಈ ವೀಕ್ಷಿಸಲ್ಪಟ್ಟಿದ್ದನ್ನು (ಆತ್ಮ) ತಿಳಿದುಕೊಳ್ಳಲು ತನ್ನ ಇಂದ್ರಿಯಗಳನ್ನು ಉಪಯೋಗಿಸುವ ವೀಕ್ಷಕನ ಬಗ್ಗೆ ಯಾರೂ ಪ್ರಸ್ತಾಪಿಸುವದಿಲ್ಲ. ಈ ಇಬ್ಬರು ಎಲ್ಲಿಯವರೆಗೆ ಪ್ರತ್ಯೇಕ ವಾಗಿರುತ್ತಾರೋ ಅಲ್ಲಿಯವರೆಗೆ ವೀಕ್ಷಕನು ಆತ್ಮವನ್ನು ಗ್ರಹಿಸಲು ಸಾಧ್ಯವಿಲ್ಲವೆಂದು ಕೃಷ್ಣ ಹೇಳುತ್ತಾನೆ.

ಒಮ್ಮೆ ಒಂದು ಉಪ್ಪಿನ ಗೊಂಬೆ ಸಾಗರವನ್ನು ಹುಡುಕಲು ತನ್ನ ಪ್ರಯಾಣ ಪ್ರಾರಂಭಿಸಿತು. ಮೇಲಿನ ಉಗ್ರ ಅಲೆಗಳ ಮೂಲಕ ಸಾಗರದ ಆಳಕ್ಕೆ ಇಳಿಯಿತು ಹಾಗೂ ನಿಧಾನವಾಗಿ ಕರಗಲು ಪ್ರಾರಂಭವಾಯಿತು. ಅದು ಅತಿ ಆಳಕ್ಕೆ ಹೋಗುವುದರೊಳಗೆ ಸಂಪೂರ್ಣವಾಗಿ ಕರಗಿ ಸಾಗರದ ಭಾಗವೇ ಆಯ್ತು. ಅದು ಸಾಗರವೇ ಆಯ್ತೆಂದು ಹೇಳಬಹುದು. ಆಗ ಅದು ಪ್ರತ್ಯೇಕ ವಸ್ತುವಾಗಿ ಉಳಿದಿಲ್ಲ. ವೀಕ್ಷಕ (ಉಪ್ಪಿನ ಗೊಂಬೆ) ವೀಕ್ಷಿಸಲ್ಪಟ್ಟದ್ದೇ (ಸಾಗರ) ಆಗಿದೆ. ಆಗ ನಿಜವಾಗಿ ಪ್ರತ್ಯೇಕತೆ ಹೋಗಿ ಏಕತೆ ಉಂಟಾಯಿತು.

ಈ ಉಪ್ಪಿನ ಗೊಂಬೆಯು ನಮ್ಮ ಅಹಂಕಾರ (ನಾನೇ ಕರ್ತೃ) ಇದ್ದ ಹಾಗೆ. ಅದು ಸದಾ ನಮ್ಮ ಸಂಪತ್ತು, ವಿಚಾರ ಮತ್ತು ಕಾರ್ಯಗಳಿಂದ ಕೂಡಿದ ನಮ್ಮ ವಾಸ್ತವಿಕತೆಯನ್ನು ದೂರವಿಡುವ ಹಾಗೂ ಪ್ರತ್ಯೇಕ ಇಡುವ ಪ್ರಯತ್ನ ಮಾಡುತ್ತದೆ. ಮೂಲಭೂತವಾಗಿ ಯಾರೂ ಯಾರೂ ಆಗದಿರಲು ಅಥವಾ ಸಾಮಾನ್ಯನಾಗಿರಲು ಬಯಸುವುದಿಲ್ಲ. ಆದರೆ ಈ ಪ್ರಯಾಣವು ಏಕತೆ ಹಾಗೂ ಐಕ್ಯತೆಯ ಪಯಣವಾಗಿದೆ. ಅಹಂಕಾರವಿಲ್ಲದಾಗ ಮಾತ್ರ ಉಪ್ಪಿನ ಗೊಂಬೆಯ ಹಾಗೆ ಇದು ನಡೆಯುತ್ತದೆ. ಅಂದರೆ ನಮ್ಮಲ್ಲಿರುವದನೆಲ್ಲ ವಸ್ತುಗಳು ಹಾಗೂ ವಿಚಾರಗಳನ್ನು ಸೇರಿಸಿ ಅಪಾಯಕ್ಕೊಡ್ಡುವುದಾಗಿದೆ. ನಾವು ಇರದೆ ಇದ್ದಾಗ ಗುರಿ ಮುಟ್ಟುವ ಪಯಣ ಇದಾಗಿದೆ. ಇಲ್ಲಿ ನಾನು, ನನಗೆ , ನನ್ನದು ಎಲ್ಲವೂ ವಿಲೇವಾರಿ ಮಾಡುವ ಸಾಧನಗಳಾಗಿ ಉಳಿಯುತ್ತವೆ ಸುಸ್ವರೂಪಗಳಲ್ಲಿ.

ನೋವು ನಲಿವುಗಳ ದ್ವಂದ್ವದ ಉತ್ತುಂಗದಲ್ಲಿ ನಮಗೆ ನಿರ ಹಂಕಾರದ ಮಿಣುಕು ನೋಟ ಸಿಗುತ್ತದೆ. ಈ ಅರಿವಿನ ಸಮಯದಲ್ಲಿ ನಾವು ಏನು ಇದ್ದೇವೆ ಎಂಬ ಚಿತ್ರಣ ನಮಗೆ ದೊರಕುತ್ತದೆ ಮತ್ತು ನಮಗೇನು ಗೊತ್ತಿದೆ ನಾವೇನು ಮಾಡುತ್ತೇವೆ ನಮ್ಮ ಹತ್ತಿರ ಏನು ಇದೆ ಎಂಬುದು ಮುಖ್ಯವಾಗುವುದಿಲ್ಲ.

ಸಮಾಚಾರ ಸಣ್ಣದಲ್ಲ

ಶೇ.101.66 ಅಂಕ: ನೇಮಕ ಪರೀಕ್ಷೆ ವಿವಾದ

ಇಂದೋರ್: ಮಧ್ಯಪ್ರದೇಶ ಸರಕಾರ ಅರಣ್ಯ ಮತ್ತು ಕಾರಾಗೃಹ ಇಲಾಖೆಗಳ ಜಂಟಿ ನೇಮಕ ಪ್ರಕ್ರಿಯೆಗೆ ನಡೆಸಿದ 100 ಅಂಕಗಳ ಪರೀಕ್ಷೆಯಲ್ಲಿ ಅಭ್ಯರ್ಥಿಯೊಬ್ಬರಿಗೆ 101.66 ಅಂಕಗಳನ್ನು ನೀಡಿರುವುದು ವಿವಾದಕ್ಕೆ ಕಾರಣವಾಗಿದೆ. ಪರೀಕ್ಷಾ ವಿಧಾನದಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ನೂರಾರು ಉದ್ಯೋಗಾಕಾಂಕ್ಷಿಗಳು ಇಂದೋರ್ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿ, ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು. ಹೊಸ ನಿಯಮಗಳ ಪ್ರಕಾರ ನೇಮಕ ಪರೀಕ್ಷೆಯಲ್ಲಿ ಸಾಮಾನ್ಯೀಕರಣ ಪ್ರಕ್ರಿಯೆ ಅಳವಡಿಸಿಕೊಳ್ಳಲಾಗಿದೆ. ಹಾಗಾಗಿಯೇ ಅಗ್ರ ಸ್ಥಾನದಲ್ಲಿರುವ ಅಭ್ಯರ್ಥಿಗಳು ಪೂರ್ಣ ಅಂಕ(100)ಕ್ಕೂ ಅಧಿಕ ಅಂಕ ಪಡೆಯಲು ಸಾಧ್ಯವಿದೆ ಎಂದು ಪರೀಕ್ಷಾ ಮಂಡಳಿ ವಾದಿಸಿದೆ.

ಎಸ್‌ಬಿಐನಲ್ಲಿ 13000 ಹುದ್ದೆ ನೇಮಕ ಪ್ರಕ್ರಿಯೆ

ಮುಂಬೈ: ಭಾರತೀಯ ಸ್ಟೇಟ್ ಬ್ಯಾಂಕ್(ಎಸ್‌ಬಿಐ) 13,735 ಜೂನಿಯರ್ ಅಸೋಸಿಯೇಟ್ (ಕಸ್ಟಮರ್ ಸಪೋರ್ಟ್ ಮತ್ತು ಸೇಲ್ಸ್) ಹುದ್ದೆಗಳಿಗೆ ನೇಮಕ ಪ್ರಕ್ರಿಯೆ ಆರಂಭಿಸಿದ್ದು, ಪದವೀಧರರಿಂದ ಅರ್ಜಿ ಆಹ್ವಾನಿಸಿದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು 2025ರ ಜ.7 ಕಡೆದಿನ. ಕರ್ನಾಟಕದಲ್ಲಿ 50 ಹುದ್ದೆಗಳಿವೆ. ಅಭ್ಯರ್ಥಿ ವಯೋಮಿತಿ ಕನಿಷ್ಠ 20 ವರ್ಷ–ಗರಿಷ್ಠ 28 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ, ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ವಿಶೇಷಚೇತನರಿಗೆ 10 ವರ್ಷ ವಯೋಮಿತಿಯಲ್ಲಿ ಸಡಿಲಿಕೆ ಇದೆ. ಸಾಮಾನ್ಯ ಅಭ್ಯರ್ಥಿ, ಒಬಿಸಿ, ಆರ್ಥಿಕ ಹಿಂದುಳಿದ ಅಭ್ಯರ್ಥಿಗಳಷ್ಟೇ ಅರ್ಜಿ ಶುಲ್ಕ 750 ರು. ಪಾವತಿಸಬೇಕಿದೆ. ಪ್ರಾಥಮಿಕ ಹಂತ, ಮುಖ್ಯ ಹಂತಗಳಲ್ಲಿ ಲಿಖಿತ ಪರೀಕ್ಷೆ, ಭಾಷಾ ಪ್ರಾವೀಣ್ಯ ಪರೀಕ್ಷೆ ನಡೆಯಲಿದೆ. ವೇತನ ಶ್ರೇಣಿ 24,050 ರು.– 64,480 ರು. ಇದೆ. ಪ್ರಾಥಮಿಕ ಹಂತದ ಪರೀಕ್ಷೆ 2025ರ ಫೆಬ್ರವರಿಗೆ, ಮುಖ್ಯ ಪರೀಕ್ಷೆ ಮಾರ್ಚ್–ಏಪ್ರಿಲ್‌ನಲ್ಲಿ ನಡೆಯಲಿದೆ.

ಪ್ರಿಯಾಂಕಾ ಪ್ಯಾಲೆಸ್ತೀನ್ ಕೈಚೀಲಕ್ಕೆ ಪಾಕ್ ಪ್ರಶಂಸೆ

ಇಸ್ಲಾಮಾಬಾದ್: ಪ್ಯಾಲೆಸ್ತೀನ್ ಹೆಸರಿದ್ದ ಕೈಚೀಲವನ್ನು ಸಂಸತ್ತಿನಲ್ಲಿ ಪ್ರದರ್ಶಿಸಿದ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ವಾದ್ರಾಗೆ ಪಾಕಿಸ್ತಾನದಿಂದ ಪ್ರಶಂಸೆ ವ್ಯಕ್ತವಾಗಿದೆ. ಇಮ್ರಾನ್‌ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್–ಎ–ಇನ್ಸಾಫ್(ಪಿಟಿಐ) ಪಕ್ಷದ ನಾಯಕ, ಮಾಜಿ ಸಚಿವ ಫವಾದ್ ಚೌಧರಿ, ಪ್ರಿಯಾಂಕಾ ನಡೆಯನ್ನು ಮಂಗಳವಾರ ಶ್ಲಾಘಿಸಿದ್ದಾರೆ. 'ಪಾಕ್ ರಾಜಕಾರಣಿಗಳು ಯಾರೂ ಇಷ್ಟು ಧೈರ್ಯ ಪ್ರದರ್ಶಿಸಲಿಲ್ಲ' ಎಂದು ಟೀಕಿಸಿದ್ದಾರೆ. ಜವಾಹರಲಾಲ್ ನೆಹರು ಮೊಮ್ಮಗಳಿಂದ ಮಾತ್ರ ಇಂಥ ನಡೆ ಸಾಧ್ಯ. ಪ್ರಿಯಾಂಕಾ ಹಂದಿಗಳ ನಡುವೆ ಅತಿ ಎತ್ತರದಲ್ಲಿ ನಿಂತಿದ್ದಾರೆ. ಇದು ಪಾಕ್ ರಾಜಕಾರಣಿಗಳಿಗೆ ನಾಚಿಕೆಗೇಡಿನ ಸಂಗತಿ ಎಂದು ಚೌಧರಿ 'ಎಕ್ಸ್'ನಲ್ಲಿ ಸಂದೇಶ ಬರೆದಿದ್ದಾರೆ.

ಪುಣೆಯಲ್ಲಿ 24ಕ್ಕೆ ಟಿಪ್ಪು ಮೆರವಣಿಗೆಗೆ ಅನುಮತಿ

ಮುಂಬೈ: ಇದೇ ತಿಂಗಳ 24ರಂದು ಪುಣೆಯಲ್ಲಿ ಟಿಪ್ಪು ಜನ್ಮ ವಾರ್ಷಿಕೋತ್ಸವ ಆಚರಣೆಗೆ ಮತ್ತು ಅದರ ಪ್ರಯುಕ್ತ ಮೆರವಣಿಗೆ ಕೊಂಡೊಯ್ಯುವುದಕ್ಕೆ ಸಂಘಟನೆಗಳವರು ಮನವಿ ಮಾಡಿದ್ದು, ಅದಕ್ಕೆ ಈಗಾಗಲೇ ಅನುಮತಿ ನೀಡಲಾಗಿದೆ ಎಂದು ಮುಂಬೈ ಪೊಲೀಸರು ಬಾಂಬೆ ಹೈಕೋರ್ಟ್‌ಗೆ ಮಂಗಳವಾರ ಮಾಹಿತಿ ನೀಡಿದ್ದಾರೆ. ನ್ಯಾ.ರೇವತಿ ಮೊಹಿತೆ ದೆರೆ ಮತ್ತು ನ್ಯಾ.ಪೃಥ್ವಿರಾಜ್ ಚೌಹಾಣ್ ಅವರನ್ನೊಳಗೊಂಡ ವಿಭಾಗೀಯ ಪೀಠದಲ್ಲಿ ಫೈಯಾರ್ಝ್ ಶೇಖ್ ಎಂಬವರು ಸಲ್ಲಿಸಿದ್ದ ರಿಟ್ ಪಿಟಿಷನ್ ವಿಚಾರಣೆ ಮಂಗಳವಾರ ನಡೆಯಿತು.

ಮರಾಠ ಮೀಸಲಿಗಾಗಿ ಜ.25 ಜಾರಂಗೆ ನಿರಶನ

ಜಾಲ್ನಾ: ಇತರೆ ಹಿಂದುಳಿದ ವರ್ಗಗಳ(ಒಬಿಸಿ) ಕೋಟಾದಡಿ ಮರಾಠಾ ಸಮುದಾಯದವರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲು ಸೌಲಭ್ಯವನ್ನು ಒದಗಿಸಬೇಕು ಎಂದು ಒತ್ತಾಯಿಸಿ 2025ರ ಜ.25ರಂದು ಅನಿರ್ದಿಷ್ಟಾವಧಿ ಉಪವಾಸ ಆರಂಭಿಸುವುದಾಗಿ ಮರಾಠಾ ಮೀಸಲು ಹೋರಾಟಗಾರ ಮನೋಜ್ ಜಾರಂಗೆ ಮಂಗಳವಾರ ಪ್ರಕಟಿಸಿದ್ದಾರೆ. ಮಹಾರಾಷ್ಟ್ರದ ಜಾಲ್ನಾದ ಅಂತರವಾಳಿ ಸಾರ್ತಿ ಗ್ರಾಮದಲ್ಲಿ ಮಾಧ್ಯಮದವರ ಜತೆ ಮಾತನಾಡಿದ ಜಾರಂಗೆ, ಮರಾಠಾ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನಾ ಸ್ಥಳದಲ್ಲಿ ಜಮಾಯಿಸುವಂತೆ ಮನವಿ ಮಾಡಿದರು. ಜ.25ರಂದು ಯಾರೂ ಮನೆಯಲ್ಲಿ ಇರಬೇಡಿ. ಎಲ್ಲರೂ ಅಂತವಾಳಿ ಸಾರ್ತಿಗೆ ಬನ್ನಿ, ನಮ್ಮ ಶಕ್ತಿ ತೋರಿಸೋಣ ಎಂದು ಕರೆ ನೀಡಿದರು.

{ ಛಗನ್ ಭುಜಬಲ್ } ಎನ್‌ಸಿಪಿ ಶಾಸಕ

ವರ್ಷಾರಂಭದಲ್ಲಿ ರಾಜ್ಯಸಭೆ ಸದಸ್ಯತ್ವ ಬಯಸಿದ್ದೆ. ಆದರೆ, ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಹೇಳಿದರು. ಗೆದ್ದ ನಂತರ ಈಗ ರಾಜ್ಯಸಭೆ ಸ್ಥಾನ ಆಫರ್ ನೀಡಿದ್ದಾರೆ. ಮರಾಠರಿಗೆ ಮೀಸಲು ಒತ್ತಾಯಿಸುತ್ತಿರುವ ಮನೋಜ್ ಜಾರಂಜೆ ಬೆಂಬಲಿಸಿದ್ದಕ್ಕೆ ನನಗೆ ಸಚಿವ ಸ್ಥಾನ ನಿರಾಕರಿಸಿದ್ದಾರೆ. ಹಾಗಾಗಿ ಅಜಿತ್ ಪವಾರ್ ಜತೆ ಮಾತನಾಡುತ್ತಿಲ್ಲ.

ಜುಲೈ–ಸೆಪ್ಟೆಂಬರ್ ತ್ರೈಮಾಸಿಕ ಪ್ರಗತಿ ದರ ಶೇ.5.4ಕ್ಕೆ ಇಳಿಕೆ | ಸಂಸತ್‌ಗೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ | 3–4ನೇ ತ್ರೈಮಾಸಿಕಗಳಲ್ಲಿ ಮರಳಿ ವೇಗ ಪಡೆಯುವ ವಿಶ್ವಾಸ

ಆರ್ಥಿಕ ಪ್ರಗತಿ ತುಸು ಕುಂಠಿತ

ದೆಹಲಿ: ಆರ್ಥಿಕವಾಗಿ ಸತತ ಪ್ರಗತಿ ಸಾಧಿಸುತ್ತಾ, ಉಳಿದೆಲ್ಲಾ ದೇಶಗಳಿಂಗಿಂತಲೂ ಮುಂಚೂಣಿಯಲ್ಲಿದ್ದ, ಜಾಗತಿಕವಾಗಿ ಹಿರಿಮೆ ಸಾಧಿಸುತ್ತಿದ್ದ ಭಾರತದ ಆರ್ಥಿಕ ನಿರಂತರ ಪ್ರಗತಿಗೆ ಈಗ ಬ್ರೇಕ್ ಬಿದ್ದಂತಾಗಿದೆ. ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ದೇಶದ ಆರ್ಥಿಕ ಅಭಿವೃದ್ಧಿ ನಿರೀಕ್ಷೆಗಿಂತಲೂ ಕಡಿಮೆ ಆಗಿದೆ. ಇದು ಎನ್‌ಡಿಎ ಸರಕಾರದಲ್ಲಿ ಕಳವಳಕ್ಕೆ ಕಾರಣವಾಗಿದೆ.

2024–25ನೇ ಹಣಕಾಸು ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ದೇಶದ ಆರ್ಥಿಕ ಬೆಳವಣಿಗೆ ದರ ಶೇ.5.4 ರಷ್ಟಿದೆ. ಈ ಅಂಕಿ ಅಂಶವು ನಿರೀಕ್ಷೆಗಿಂತ ಕಡಿಮೆಯಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಗೆ ಮಂಗಳವಾರ ತಿಳಿಸಿದರು.

ಹಾಗೆಂದು ಆತಂಕ ಪಡಬೇಕಾದ ಅಗತ್ಯವೇನೂ ಇಲ್ಲ. ಮುಂಬರುವ ತ್ರೈಮಾಸಿಕಗಳಲ್ಲಿ ದೇಶದ ಆರ್ಥಿಕ ಪ್ರಗತಿ ಸುಧಾರಿಸಲಿದೆ. ಮರಳಿ ಉತ್ತಮ ಮಟ್ಟದ ಸಾಧನೆಯ ಹಾದಿಗೆ ಮರಳಲಿದೆ ಎಂದು ಸಚಿವೆ ವಿಶ್ವಾಸ ವ್ಯಕ್ತಪಡಿಸಿದರು.

ಲೋಕಸಭೆಯಲ್ಲಿ ಅನುದಾನಕ್ಕಾಗಿ ಪೂರಕ ಬೇಡಿಕೆಗಳ ಮೊದಲ ಹಂತದ ಚರ್ಚೆಗೆ ಮಂಗಳವಾರ ಪ್ರತಿಕ್ರಿಯಿಸುತ್ತಿದ್ದ ಅವರು, ಭಾರತ ಸ್ಥಿರವಾದ ಹಾಗೂ ನಿರಂತರವಾದ ಆರ್ಥಿಕ ಬೆಳವಣಿಗೆಯನ್ನು ಕಾಣುತ್ತಿದೆ. ಅದರ ಜಿಡಿಪಿ ಬೆಳವಣಿಗೆ ದರ ಕಳೆದ ಮೂರು ವರ್ಷಗಳಲ್ಲಿ ಶೇ.8.3ರ ಸರಾಸರಿ ಹೊಂದಿದೆ. ಹಾಗಾಗಿ ಕಳವಳ ಬೇಕಿಲ್ಲ. ಇದೇ ಪ್ರಮಾಣದ ಬೆಳವಣಿಗೆ ಹಾದಿಗೆ ಮರಳಲಿದೆ ಎಂದರು. 2ನೇ ತ್ರೈಮಾಸಿಕದಲ್ಲಿ ಪ್ರಗತಿಯ ವೇಗದ ಗತಿ ತುಸು ನಿಧಾನವಾಗಿರಬಹುದು. ಇದು ತಾತ್ಕಾಲಿಕ ಸ್ಥಿತಿಯಷ್ಟೆ. ಆದರೆ, ಭಾರತ ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿಯೇ ಉಳಿದುಕೊಂಡಿದೆ. ಮುಂಬರುವ ತ್ರೈಮಾಸಿಕಗಳಲ್ಲಿ ಆರ್ಥಿಕ ಪ್ರಗತಿ ಉತ್ತಮವಾಗಿರಲಿದೆ ಎಂದು ಸೀತಾರಾಮನ್ ವಿಶ್ವಾಸ ವ್ಯಕ್ತಪಡಿಸಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪ್ರಸ್ತುತ ನಡೆದಿರುವ ಚಳಿಗಾಲದ ಸಂಸತ್ ಅಧಿವೇಶನದಲ್ಲಿ ಮಂಗಳವಾರ ಲೋಕಸಭೆ ಕಲಾಪದಲ್ಲಿ ಚಳಿಯ ಕಾರಣ ಶಾಲು ಹೊದ್ದುಕೊಂಡು ಸದನಕ್ಕೆ ದೇಶದ ಆರ್ಥಿಕ ಪ್ರಗತಿಯ ಅಂಕಿ ಅಂಶಗಳ ವಿವರ ನೀಡಿದರು.

1ನೇ ತ್ರೈಮಾಸಿಕ ಪ್ರಗತಿ ಶೇ.6.7

ಭಾರತ 2ನೇ ತ್ರೈಮಾಸಿಕದಲ್ಲಿ ತುಸು ನಿಧಾನ ಗತಿಯಲ್ಲಿ ಸಾಗಿದ್ದರೂ, ದೇಶದ ಉತ್ಪಾದನಾ ವಲಯದಲ್ಲಿ ಮಂದಗತಿ ಚಲನೆಯೇನೂ ಕಂಡು ಬಂದಿಲ್ಲ. ಒಟ್ಟಾರೆ ಉತ್ಪಾದನಾ ವಲಯದ ಅರ್ಧದಷ್ಟು ಭಾಗ ಈಗಲೂ ಬಲವಾಗಿಯೇ ಉಳಿದುಕೊಂಡು ಮುನ್ನಡೆ ಕಾಯ್ದುಕೊಂಡಿದೆ. ಭಾರತದ ಆರ್ಥಿಕತೆ ಮೊದಲ ತ್ರೈಮಾಸಿಕದಲ್ಲಿ(ಏಪ್ರಿಲ್–ಜೂನ್ ಅವಧಿ) ಶೇ.6.7ರಷ್ಟಿತ್ತು ಎಂಬುದನ್ನು ಮರೆಯ ಬಾರದು. ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಆರ್ಥಿಕ ಪ್ರಗತಿ ಶೇ.5.4ಕ್ಕೆ ಇಳಿಕೆ ಕಂಡಿದ್ದರೂ 3 ಮತ್ತು 4ನೇ ತ್ರೈಮಾಸಿಕ ವೇಳೆಗೆ ವೇಗ ಪಡೆದುಕೊಳ್ಳಲಿದೆ. ಹೆಚ್ಚಿನ ಪ್ರಗತಿ ದಾಖಲಿಸಲಿದೆ. 2017–18ರಲ್ಲಿ ನಿರುದ್ಯೋಗ ದರ ಶೇ.6ರಷ್ಟಿತ್ತು. ಅದೀಗ ಶೇ.3.2ಕ್ಕೆ ಇಳಿಕೆಯಾಗಿದೆ. ಈ ಅಂಶ ಬಹಳ ಆಶಾದಾಯಕವಾಗಿದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಸದನಕ್ಕೆ ಅಂಕಿ ಅಂಶ ಸಮೇತ ವಿವರಿಸಿದರು.

ಹಣದುಬ್ಬರ

ಎನ್‌ಡಿಎ ಮೈತ್ರಿಕೂಟ ಸರಕಾರದ ಸತತ 10 ವರ್ಷಗಳ ಆಡಳಿತ ಕಾಲದಲ್ಲಿ ಹಣದುಬ್ಬರವನ್ನು ಉತ್ತಮವಾಗಿ ನಿಯಂತ್ರಿಸಲಾಗಿದೆ. ಆದರೆ, ಹಿಂದಿನ ಕಾಂಗ್ರೆಸ್ ನೇತೃತ್ವದ 'ಯುಪಿಎ' ಒಕ್ಕೂಟದ ಆಡಳಿತದ ಅವಧಿಯಲ್ಲಿ ಹಣದುಬ್ಬರ ಎರಡಂಕಿ ಮಟ್ಟಕ್ಕೆ ಏರಿಕೆ ಕಂಡಿತ್ತು ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ವಿಶ್ಲೇಷಿಸಿದ್ದಾರೆ.

ಕೆನಡಾಗೆ ಶೇ.25 ಆಮದು ಸುಂಕ: ಟ್ರಂಪ್

ಶೀಘ್ರ ಟ್ರುಡೊ ರಾಜೀನಾಮೆ

ಒಟ್ಟಾವಾ: ಖಲಿಸ್ತಾನ್ ಪರ ಬೆಂಬಲಿಗರಂತೆ ವರ್ತಿಸುತ್ತಾ, ಭಾರತದ ಜತೆಗಿನ ಉತ್ತಮ ಸಂಬಂಧ ಹಾಳು ಮಾಡಿಕೊಂಡಿರುವ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಸದ್ಯದಲ್ಲೇ ರಾಜೀನಾಮೆ ನೀಡುವ ಸಾಧ್ಯತೆ ಇದೆ.

ಟ್ರುಡೊ ಪ್ರತಿನಿಧಿಸುವ ಲಿಬರಲ್ ಪಕ್ಷದ ಸಂಸದರೇ ಈಗ ಪ್ರಧಾನಿ ವಿರುದ್ಧ ತಿರುಗಿ ಬಿದ್ದಿದ್ದು ರಾಜೀನಾಮೆಗೆ ಆಗ್ರಹಿಸುತ್ತಿದ್ದಾರೆ. ಉಪ ಪ್ರಧಾನಿಯೂ ಆಗಿದ್ದ ಹಣಕಾಸು ಸಚಿವೆ ಕ್ರಿಸ್ಟಿಯಾ ಫ್ರೀಲ್ಯಾಂಡ್ ರಾಜೀನಾಮೆ ನೀಡಿದ ಬೆನ್ನಲ್ಲೇ ಟ್ರುಡೊ ರಾಜೀನಾಮೆಗೂ ಒತ್ತಡ ಹೆಚ್ಚಿದೆ. ಟ್ರುಡೊ ಸದ್ಯದಲ್ಲೇ ರಾಜೀನಾಮೆ ನೀಡಲಿದ್ದಾರೆ, ಅದಕ್ಕೂ ಮುನ್ನ ಸಂಸತ್ ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಕೆನಡಾ ಮಾಧ್ಯಮ ವರದಿ ಮಾಡಿದೆ.

ಅಕ್ರಮ ವಲಸಿಗರು ಕೆನಡಾದಿಂದ ಅಮೆರಿಕಕ್ಕೆ ನುಸುಳುತ್ತಿದ್ದು, ಅವರ ವಿರುದ್ಧ ಕೆನಡಾ ಸರಕಾರ ಕ್ರಮ ಜರುಗಿಸುತ್ತಿಲ್ಲ. ಹಾಗಾಗಿ, ಅಧಿಕಾರಕ್ಕೆ ಬಂದ ಬಳಿಕ ಕೆನಡಾದಿಂದ ಬರುವ ವಸ್ತುಗಳಿಗೆ ಶೇ.25 ಆಮದು ತೆರಿಗೆ ವಿಧಿಸುವುದಾಗಿ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಅಮೆರಿಕ ಜತೆಗಿನ ಸಂಬಂಧ ಹಾಳಾಗುತ್ತಿರುವುದರಿಂದ ಕೆನಡಾದಲ್ಲಿನ ಟ್ರುಡೊ ಸರಕಾರ ಪತನದಂಚಿಗೆ ಬಂದಿದೆ.

ಕೆನಡಾದ ಒಟ್ಟು ರಫ್ತು ವಹಿವಾಟಿನಲ್ಲಿ ಅಮೆರಿಕಕ್ಕೇ ಶೇ.75ರಷ್ಟು ಹೋಗುತ್ತದೆ. ಹೀಗಿರುವಾಗ ಶೇ.25 ಹೆಚ್ಚುವರಿ ಆಮದು ತೆರಿಗೆ ವಿಧಿಸಿದರೆ ಕೆನಡಾ ರಫ್ತು ವಹಿವಾಟಿನ ಮೇಲೆ ದೊಡ್ಡ ಹೊಡೆತ ಬೀಳಲಿದೆ ಎಂಬ ಕಾರಣದಿಂದಲೇ ಹಣಕಾಸು ಸಚಿವೆ ಕ್ರಿಸ್ಟಿಯಾ ರಾಜೀನಾಮೆ ನೀಡಿದ್ದಾರೆ.

ಅಲ್ಲದೇ, ಇತ್ತೀಚೆಗೆ ನಡೆದ ಸಾಂಸ್ಥಿಕ ಚುನಾವಣೆಗಳಲ್ಲಿಯೂ ಲಿಬರಲ್ ಪಕ್ಷದ ಸಾಧನೆ ಕಳಪೆಯಾಗಿದೆ. ಅದಕ್ಕೂ ಟ್ರುಡೊ ನಾಯಕತ್ವವೇ ಕಾರಣ ಎಂದು ಪಕ್ಷದ ಸಂಸದರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇವೆಲ್ಲಾ ಕಾರಣಗಳಿಂದಾಗಿ ಟ್ರುಡೊ ಪಕ್ಷದ ವಿಶ್ವಾಸ ಕಳೆದುಕೊಂಡಿದ್ದಾರೆ. ಹಾಗಾಗಿ ರಾಜೀನಾಮೆ ಅನಿವಾರ್ಯ ಎಂದು ಕೆನಡಾ ಮಾಧ್ಯಮಗಳು ವರದಿ ಮಾಡಿವೆ.

ಖಲಿಸ್ತಾನಿಗಳಿಂದಲೂ ಒತ್ತಡ!

ಖಲಿಸ್ತಾನಿಗಳಿಗಾಗಿಯೇ ಭಾರತದ ಸಂಬಂಧ ಮುರಿದುಕೊಂಡ ಪ್ರಧಾನಿ ಜಸ್ಟಿನ್ ಟ್ರುಡೊ, ಇದೀಗ ಖಲಿಸ್ತಾನಿ ನಾಯಕರ ವಿರೋಧ ಕಟ್ಟಿಕೊಂಡಿದ್ದಾರೆ. ಕೆನಡಾದ ನ್ಯೂ ಡೆಮಾಕ್ರಟಿಕ್ ಪಾರ್ಟಿ ವರಿಷ್ಠ, ಖಲಿಸ್ತಾನಿ ನಾಯಕ ಜಗ್ಮೀತ್ ಸಿಂಗ್ ಪ್ರಧಾನಿ ಜಸ್ಟಿನ್ ಟ್ರುಡೊ ರಾಜೀನಾಮೆಗೆ ಒತ್ತಾಯಿಸಿದ್ದಾರೆ. ಟ್ರುಡೊ ರಾಜೀನಾಮೆ ನೀಡಲಿ ಎಂದು ಒತ್ತಾಯಿಸುತ್ತೇನೆ. ಕೆನಡಾ ಜನತೆಗೆ ಅವರಿಗಾಗಿ ಹೋರಾಡುವ ಪ್ರಧಾನಿಯ ಅಗತ್ಯವಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. 'ನಾನೂ ಸೇರಿದಂತೆ 23 ಸಂಸದರು ಟ್ರುಡೊ ರಾಜೀನಾಮೆಗೆ ಒತ್ತಾಯಿಸಿದ್ದೇವೆ' ಎಂದು ಲೇಬರ್ ಪಕ್ಷದ ನಾಯಕ ಚಾಡ್ ಕಾಲಿನ್ಸ್ ಕೂಡಾ ಹೇಳಿದ್ದಾರೆ.

ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ದಿಸಾನಾಯಕೆ ಮಂಗಳವಾರ ಬಿಹಾರದಲ್ಲಿನ ಪ್ರಸಿದ್ಧ ಯಾತ್ರಾ ಸ್ಥಳ ಬೋಧಗಯಾದಲ್ಲಿನ ಮಹಾಬೋಧಿ ಮಂದಿರಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು.

ಅಮೆರಿಕದಲ್ಲಿ ವಿದ್ಯಾರ್ಥಿನಿ ಶೂಟೌಟ್‌ಗೆ ಐದು ಸಾವು

ವಾಷಿಂಗ್ಟನ್: ಅಮೆರಿಕದ ವಿಸ್ಕಾನ್ಸಿನ್ ರಾಜಧಾನಿಯ ಮ್ಯಾಡಿಸನ್‌ನ ಅಬುಂಡೆಂಟ್ ಲೈಫ್ ಕ್ರಿಶ್ಚಿಯನ್ ಶಾಲೆಯಲ್ಲಿ 17 ವರ್ಷದ ಬಂದೂಕುಧಾರಿ ವಿದ್ಯಾರ್ಥಿನಿಯಿಂದ ಹಠಾತ್ ಗುಂಡಿನ ದಾಳಿ ನಡೆದಿದ್ದು, ವಿದ್ಯಾರ್ಥಿಗಳು, ಶಿಕ್ಷಕರು ಸೇರಿ ಐವರು ಸಾವಿಗೀಡಾಗಿದ್ದಾರೆ. ಹಲವರು ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ. ಡಿ.16ರ ಬೆಳಗ್ಗೆ 11ರ ವೇಳೆ ಗುಂಡಿನ ದಾಳಿ ನಡೆದಿದೆ. ಶಿಶುವಿಹಾರದಿಂದ ಪ್ರೌಢಶಾಲೆಯವರೆಗಿನ ತರಗತಿ ಇರುವ ಈ ಶಾಲೆಯಲ್ಲಿ ಸುಮಾರು 390 ವಿದ್ಯಾರ್ಥಿಗಳಿದ್ದಾರೆ. ಶಾಲೆಯ ಆವರಣದಲ್ಲಿ ಮನಬಂದಂತೆ ಗುಂಡು ಹಾರಿಸಿದ ವಿದ್ಯಾರ್ಥಿನಿ, ಬಳಿಕ ತನಗೂ ಗುಂಡಿಕ್ಕಿಕೊಂಡು ಸಾವಿಗೀಡಾಗಿದ್ದಾಳೆ. ಪ್ರಕರಣ ದಾಖಲಿಸಿ ತನಿಖೆ ಆರಂಭಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ವಿಸ್ಕಾನ್ಸಿನ್ ಸೆನೆಟರ್ ರಾನ್ ಜಾನ್ಸನ್ ಗುಂಡಿನ ದಾಳಿ ಬಗ್ಗೆ ಆಘಾತ ವ್ಯಕ್ತಪಡಿಸಿದ್ದಾರೆ. 2024ರಲ್ಲಿ ಅಮೆರಿಕದಲ್ಲಿ 490 ಕಡೆ ಗುಂಡಿನ ದಾಳಿ ನಡೆದಿದ್ದು, 500ಕ್ಕೂ ಹೆಚ್ಚು ಮಂದಿ ಬಲಿಯಾಗಿದ್ದಾರೆ, 2,125 ಮಂದಿ ಗಾಯಗೊಂಡಿದ್ದಾರೆ.

ಡಿಸೆಂಬರ್ 21–22ರಂದು ಕುವೈತ್‌ಗೆ ಭೇಟಿ ನಿರೀಕ್ಷೆ

ಕುವೈತ್‌ಗೆ ಮೋದಿ; 43 ವರ್ಷ ಬಳಿಕ ಭಾರತ ಪ್ರಧಾನಿ ಭೇಟಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಡಿ.21–22ರಂದು ಕುವೇತ್‌ಗೆ ಭೇಟಿ ನೀಡಲಿದ್ದಾರೆ. ಭಾರತದ ಪ್ರಧಾನಿಯೊಬ್ಬರು ಕುವೇತ್‌ಗೆ 43 ವರ್ಷಗಳ ನಂತರ ಭೇಟಿ ನೀಡುತ್ತಿದ್ದಾರೆ. ಹಾಗಾಗಿ ಮೋದಿ ಅವರ ಕುವೇತ್ ಭೇಟಿ ಕುತೂಹಲ ಕೆರಳಿಸಿದೆ. ಗಲ್ಫ್ ಸಹಕಾರ ಮಂಡಳಿಗೆ ಸೇರಿದ ದೇಶಗಳಲ್ಲಿ ಪ್ರಧಾನಿ ಮೋದಿ ಅವರು ಈವರೆಗೂ ಭೇಟಿ ನೀಡದ ಏಕೈಕ ದೇಶವೆಂದರೆ ಕುವೇತ್. ಮೋದಿ ಅವರು ಕುವೇತ್‌ಗೆ 2022ರಲ್ಲೇ ಭೇಟಿ ನೀಡಬೇಕಿತ್ತು. ಆದರೆ ಕೋವಿಡ್ ಕಾರಣದಿಂದಾಗಿ ಭೇಟಿ ಮುಂದೂಡಲಾಯಿತು.

ನ್ಯೂಯಾರ್ಕ್‌ನಲ್ಲಿ ಸೆಪ್ಟೆಂಬರ್‌ನಲ್ಲಿ ನಡೆದ ವಿಶ್ವಸಂಸ್ಥೆ ಮಹಾಸಭೆಯ 79ನೇ ಅಧಿವೇಶನ ಸಂದರ್ಭ ಮೋದಿ ಕುವೇತ್ ಕ್ರೌನ್ ಪ್ರಿನ್ಸ್ ಶೇಖ್ ಸಬಾಹ್ ಖಾಲಿದ್ ಅಲ್–ಹಮದ್ ಅಲ್–ಮುಬಾರಕ್ ಅಲ್–ಸಬಾಹ್ ಅವರನ್ನು ಭೇಟಿ ಮಾಡಿದ್ದರು. ಅಲ್ಲದೇ, ಇತ್ತೀಚೆಗಷ್ಟೇ ಕುವೇತ್ ವಿದೇಶಾಂಗ ಸಚಿವ ಭಾರತಕ್ಕೆ ಭೇಟಿ ನೀಡಿದ್ದು, ಪ್ರಧಾನಿ ಮೋದಿ ಅವರನ್ನು ತಮ್ಮ ದೇಶಕ್ಕೆ ಆಹ್ವಾನಿಸಿದ್ದರು. 1961ರಲ್ಲಿ ಭಾರತ– ಕುವೇತ್ ರಾಜತಾಂತ್ರಿಕ ಸಂಬಂಧ ಆರಂಭಗೊಂಡಿದ್ದು, ನಂತರದ ವರ್ಷಗಳಲ್ಲಿ ಉಭಯ ದೇಶಗಳ ನಡುವಿನ ಸಂಬಂಧ ಅತ್ಯುತ್ತಮವಾಗಿದೆ. ಕುವೇತ್‌ನಲ್ಲಿ

ಭಾರತೀಯರು, ಅದರಲ್ಲೂ ಕೇರಳ ಮತ್ತು ಕರ್ನಾಟಕದ ಕರಾವಳಿ ಭಾಗದ ಜನರು ಉದ್ಯೋಗ, ಉದ್ಯಮಕ್ಕಾಗಿ ಕುವೇತ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. 1981ರಲ್ಲಿ ಭಾರತದ ಪ್ರಧಾನಿ ಕುವೇತ್‌ಗೆ ಭೇಟಿ ನೀಡಿದ್ದರು. ಗಲ್ಫ್ ರಾಷ್ಟ್ರ ಕುವೈತ್ಗೆ ಪ್ರಧಾನಿ ಮೋದಿಯವರ ಈ ಭೇಟಿಯನ್ನು ಹಲವು ವಿಧಗಳಲ್ಲಿ ಪ್ರಮುಖವೆಂದು ಪರಿಗಣಿಸಲಾಗಿದೆ.

₹1,000 ಕೋಟಿ ರೈತ ಸಾಲ ಖಾತರಿ ಯೋಜನೆ ಆರಂಭ

ದೆಹಲಿ: ಸಣ್ಣ ರೈತರಿಗೆ ಸಂಕಷ್ಟದ ಸಂದರ್ಭ ಎದುರಾದಾಗ ಆರ್ಥಿಕ ನೆರವು ನೀಡಲು ಕೇಂದ್ರ ಸರಕಾರ 'ಖಾತರಿ ಸಾಲ ಯೋಜನೆ' ಜಾರಿಗೆ ತಂದಿದ್ದು, ಅದಕ್ಕಾಗಿ 1,000 ಕೋಟಿ ರು. ಮೀಸಲಿಟ್ಟಿದೆ ಎಂದು ಕೇಂದ್ರ ಆಹಾರ–ಗ್ರಾಹಕ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಹೇಳಿದ್ದಾರೆ.

ಯೋಜನೆಗೆ ಮಂಗಳವಾರ ಚಾಲನೆ ನೀಡಿದ ಅವರು, ಎಲೆಕ್ಟ್ರಾನಿಕ್ ವೇರ್ ಹೌಸ್ ರೆಸಿಪ್ಟ್ಸ್ ಮೂಲಕ ಕೃಷಿ ಉತ್ಪನ್ನಗಳ ಸಂರಕ್ಷಣೆಗಾಗಿ ಸಣ್ಣ ರೈತರಿಗೆ ಫಸಲು ಕೊಯ್ಲು ನಂತರ ಯಾವುದೇ ಗ್ಯಾರಂಟಿ ಕೇಳದೇ ಸಾಲ ನೀಡಲಾಗುತ್ತದೆ. ಈ ಯೋಜನೆಯಿಂದ ಕೃಷಿ ಸಾಲ ಸರಾಗವಾಗಿ ರೈತರಿಗೆ ಲಭಿಸಲಿದೆ. ಬ್ಯಾಂಕುಗಳು ರೈತರಿಗೆ ಸಾಲ ನೀಡಲು ಹಿಂದೇಟು ಹಾಕುವುದೂ ಇಲ್ಲವಾಗುತ್ತದೆ ಎಂದರು. ಭಾರತ ದೇಶ ಆಹಾರ ಭದ್ರತೆ ವಿಚಾರದಲ್ಲಿ ಇನ್ನಷ್ಟು ದೃಢವಾಗಬೇಕಿದೆ. ಆ ಮೂಲಕ ಮುಂಬರುವ ವರ್ಷಗಳಲ್ಲಿ ಬೇರೆ ದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಪೂರೈಸುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕಿದೆ ಎಂದು ಸಚಿವರು ಹೇಳಿದರು. ರಸಗೊಬ್ಬರಗಳ ಬೆಲೆ ಜಾಗತಿಕ ಮಾರುಕಟ್ಟೆಯಲ್ಲಿ ಏರಿಕೆಯಾಗುತ್ತಲೇ ಇದೆ. ಹಾಗಾಗಿ, ಭಾರತ ಸರಕಾರ ತನ್ನ ರೈತರಿಗೆ ವಿಶ್ವದಲ್ಲೇ ಅತ್ಯಂತ ಕಡಿಮೆ ದರದಲ್ಲಿ ಯೂರಿಯ ಗೊಬ್ಬರ ಒದಗಿಸುತ್ತಿದೆ. ಶೇ.2–3ರಷ್ಟು ದೊಡ್ಡ ಹಿಡುವಳಿ ರೈತರು ಮಾತ್ರವೇ ಸಿಜಿಎಸ್ ಸೌಲಭ್ಯವನ್ನು ಬಳಸುತ್ತಿದ್ದಾರೆ ಎಂದರು.

ಕೃಷಿ ಉತ್ಪನ್ನಗಳೇ ಸಾಲಕ್ಕೆ ಆಧಾರ

ಕೃಷಿ ಉತ್ಪನ್ನಗಳು ಮಾರಾಟಕ್ಕೆ ಸಜ್ಜಾದಾಗಲೇ ಬೆಲೆ ಕುಸಿತವಾದರೆ, ರೈತರು ಕಡಿಮೆ ಬೆಲೆಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡದೇ ವೇರ್‌ಹೌಸ್‌ಗಳಲ್ಲಿ ಸಂಗ್ರಹಿಸಿಡಬಹುದು. ಆ ಬಳಿಕ, ವೇರ್ ಹೌಸಿಂಗ್ ಡೆವಲಪ್ಮೆಂಟ್ ಮತ್ತು ರೆಗ್ಯುಲೇಟರಿ ಅಥಾರಿಟಿಯಲ್ಲಿ ನೋಂದಣಿಯಾಗಿರುವ ಬ್ಯಾಂಕ್ ಮತ್ತಿತರ ಹಣಕಾಸು ಸಂಸ್ಥೆಗಳಿಂದ ಎಲೆಕ್ಟ್ರಾನಿಕ್ ನೆಗೋಷಿಯಬಲ್ ವೇರ್‌ಹೌಸ್ ರಸೀದಿ ಪಡೆದು ಸಾಲ ಸೌಲಭ್ಯಕ್ಕೆ ಬಳಸಿಕೊಳ್ಳಬಹುದಾಗಿದೆ. ರೈತರಿಗೆ ಸಾಲ ನೀಡಲು ಬ್ಯಾಂಕ್‌ಗಳಿಗೆ ವೇರ್‌ಹೌಸ್‌ನಲ್ಲಿ ಇರಿಸಿದ ಕೃಷಿ ಉತ್ಪನ್ನಗಳೇ ಮೇಲಾಧಾರವಾಗಿ ಪರಿಗಣಿತವಾಗುತ್ತವೆ. ಆ ಬಳಿಕ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ಬೆಲೆ ಏರಿಕೆ ಆದಾಗ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ ಸಾಲ ತೀರುವಳಿ ಮಾಡಬಹುದಾಗಿದೆ.

ಚಿನ್ನ ಕಳ್ಳಸಾಗಣೆ; ಏರ್ ಇಂಡಿಯ ಸಿಬ್ಬಂದಿ ಸೆರೆ

ಚೆನ್ನೈ: ಚಿನ್ನ ಕಳ್ಳಸಾಗಣೆಗೆ ನೆರವು ನೀಡಿದ್ದ ಏರ್ ಇಂಡಿಯ ವಿಮಾನದ ಸಿಬ್ಬಂದಿಗಳಿಬ್ಬರು ಚೆನ್ನೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧನಕ್ಕೊಳಗಾಗಿದ್ದಾರೆ.

ದುಬೈನಿಂದ ಚೆನ್ನೈಗೆ ಭಾನುವಾರ ಬಂದಿಳಿದ ಏರ್ ಇಂಡಿಯ ವಿಮಾನದಲ್ಲಿ ಪ್ರಯಾಣಿಕರೊಬ್ಬರು 24 ಕ್ಯಾರಟ್ ಗುಣಮಟ್ಟದ 1.7 ಕೆಜಿ ಚಿನ್ನ ಕಳ್ಳಸಾಗಣೆ ಮಾಡಿದ್ದರು. ಚಿನ್ನ ಕಳ್ಳಸಾಗಣೆ ಮಾಡಿದ ಪ್ರಯಾಣಿಕ ಹಾಗೂ ಅವರಿಗೆ ನೆರವಾದ ಏರ್ ಇಂಡಿಯದ ಇಬ್ಬರು ಕ್ಯಾಬಿನ್ ಸಿಬ್ಬಂದಿಗಳನ್ನು ಬಂಧಿಸಲಾಗಿದೆ ಎಂದು ಚೆನ್ನೈ ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ. ಕ್ಯಾಬಿನ್ ಸಿಬ್ಬಂದಿಯನ್ನು ಪರಿಶೀಲಿಸಿದಾಗ ಒಳಉಡುಪುಗಳಲ್ಲಿ ಚಿನ್ನವನ್ನು ಬಚ್ಚಿಟ್ಟುಕೊಂಡಿದ್ದು ಪತ್ತೆಯಾಗಿದೆ. ಬಂಧಿತ ಮೂವರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕೊಕೇನ್ ಪತ್ತೆ: ಇನ್ನೊಂದು ಪ್ರಕರಣದಲ್ಲಿ 14.2 ಕೋಟಿ ರು. ಮೌಲ್ಯದ ಕೊಕೇನ್ ತುಂಬಿದ್ದ 90 ಕ್ಯಾಪ್ಸುಲ್‌ಗಳನ್ನು ನುಂಗಿ ಉದರದಲ್ಲಿಟ್ಟುಕೊಂಡು ಕಳ್ಳಸಾಗಣೆ ಮಾಡುತ್ತಿದ್ದ ಕೀನ್ಯಾ ಮಹಿಳೆಯನ್ನು ಚೆನ್ನೈ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ.

ಫೆಬ್ರವರಿಗೆ ಬಿಜೆಪಿಗೆ ಹೊಸ ಅಧ್ಯಕ್ಷರು?

ದೆಹಲಿ: ಬಿಜೆಪಿಗೆ ಹೊಸ ರಾಷ್ಟ್ರೀಯ ಅಧ್ಯಕ್ಷರನ್ನು ಮುಂಬರುವ ಫೆಬ್ರವರಿ ಮಾಸಾಂತ್ಯದಲ್ಲಿ ಆಯ್ಕೆ ಮಾಡುವ ಸಾಧ್ಯತೆಯಿದೆ.

ಈ ಬಗ್ಗೆ ಮಾಧ್ಯಮ ಮಿತ್ರರ ಜತೆ ಪಕ್ಷದ ಹಿರಿಯ ನಾಯಕರೊಬ್ಬರು ಮಂಗಳವಾರ ಮಾತನಾಡಿದ್ದು,

ಬಿಜೆಪಿಯ ಆಂತರಿಕ ಆಡಳಿತದ ನಿಯಮಗಳಲ್ಲಿ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಆರಂಭಕ್ಕೂ ಮುನ್ನ ಶೇ.50ರಷ್ಟು ರಾಜ್ಯ ಘಟಕಗಳಲ್ಲಿ ಚುನಾವಣೆ ಪೂರ್ಣಗೊಳಿಸಿರಬೇಕು ಎಂಬುದು ಅಂಶ ಪ್ರಮುಖವಾಗಿದೆ ಎಂದು ವಿವರಿಸಿದ್ದಾರೆ.

ಬಿಜೆಪಿಯ ರಾಜ್ಯ ಘಟಕಗಳಲ್ಲಿ ಶೇ.60 ರಷ್ಟರಲ್ಲಿ ಅಧ್ಯಕ್ಷರ ಅಧಿಕಾರಾವಧಿ ಪೂರ್ಣಗೊಂಡಿದೆ. ಈ ರಾಜ್ಯ ಘಟಕಗಳಿಗೆ ಹೊಸ ಅಧ್ಯಕ್ಷರನ್ನು ಜನವರಿಯಲ್ಲಿ ನೇಮಕ ಮಾಡುವ ಸಾಧ್ಯತೆಯಿದೆ. ಪಕ್ಷದ ಸಾಂಸ್ಥಿಕ ಘಟಕಗಳ ಚುನಾವಣೆ ಸದ್ಯ ನಡೆಯುತ್ತಿದ್ದು, ಜನವರಿ 3ನೇ ವಾರದ ವೇಳೆಗೆ ಶೇ.50ರಷ್ಟು ರಾಜ್ಯ ಘಟಕಗಳಲ್ಲಿ ಮತದಾನ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಹೇಳಿದ್ದಾರೆ.

ಆ ಬಳಿಕ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತದೆ. ಫೆಬ್ರವರಿ ಅಂತ್ಯದ ವೇಳೆಗೆ ಹೊಸ ಬಿಜೆಪಿ ಅಧ್ಯಕ್ಷರು ಅಧಿಕಾರ ವಹಿಸಿಕೊಳ್ಳುತ್ತಾರೆ ಎಂದು ನಾವು ನಿರೀಕ್ಷಿಸುತ್ತೇವೆ ಎಂದಿದ್ದಾರೆ.

ಕೇಂದ್ರ ಸಚಿವರಲ್ಲೊಬ್ಬರಿಗೆ ಅಧ್ಯಕ್ಷ ಪದವಿ ಒಲಿಯಬಹುದೇ? ಎಂಬ ಸುದ್ದಿಗಾರರ ಪ್ರಶ್ನೆಗೆ, ಸಚಿವ ಸಂಪುಟದಿಂದಲೋ ಅಥವಾ ಸಂಘಟನೆಯಿಂದಲೋ ಅರ್ಹರನ್ನು ಆಯ್ಕೆ ಮಾಡಬಹುದಾಗಿದೆ. ಆ ವಿಚಾರವಿನ್ನೂ ಚರ್ಚೆಯಾಗಿಲ್ಲ ಎಂದು ಹಿರಿಯ ನಾಯಕ ಉತ್ತರಿಸಿದರು.

ಪ್ರಸ್ತುತ ಕೇಂದ್ರ ಆರೋಗ್ಯ ಸಚಿವರಾಗಿರುವ ಜಗತ್ ಪ್ರಕಾಶ್(ಜೆಪಿ) ನಡ್ಡಾ 2020ರ ಫೆಬ್ರವರಿಯಲ್ಲೇ ಪಕ್ಷದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು.

- 2020ರ ಫೆಬ್ರವರಿಯಲ್ಲಿ ಅಧ್ಯಕ್ಷ ಸ್ಥಾನಕ್ಕೇರಿದ್ದ ಜೆಪಿ ನಡ್ಡಾ
- 5 ವರ್ಷಗಳ ಪೂರ್ಣಾವಧಿ ಪಕ್ಷ ಸಂಘಟನೆ ಮಾಡಿದ ತೃಪ್ತಿ
- ಪಕ್ಷದ ಶೇ.50 ರಾಜ್ಯ ಘಟಕ ಚುನಾವಣೆ ಜನವರಿಗೆ ಪೂರ್ಣ
- ಬಳಿಕವಷ್ಟೇ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಶುರು

ಚಿಡೊ ಚಂಡಮಾರುತಕ್ಕೆ ಫ್ರಾನ್ಸ್ ತತ್ತರ; 100ಸಾವು

ಪ್ಯಾರಿಸ್: ಫ್ರಾನ್ಸ್‌ನ ಮಹಾಸಾಗರದಂಚಿನ ಮಯೊಟ್ಟೆ ದ್ವೀಪ ಸಮೂಹದ ಮೇಲೆ 'ಚಿಡೋ' ಚಂಡಮಾರುತ ಅಪ್ಪಳಿಸಿದ್ದು, ಭಾರಿ ಹಾನಿ ಮಾಡಿದೆ. ವಿಮಾನ ನಿಲ್ದಾಣ ಸೇರಿದಂತೆ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಅಪಾರ ಹಾನಿಯಾಗಿದೆ. ವಿದ್ಯುತ್ ಸರಬರಾಜು ಸ್ಥಗಿತಗೊಂಡಿದೆ. 100ಕ್ಕೂ ಅಧಿಕ ಜನರು ಸಾವಿಗೀಡಾಗಿರುವುದನ್ನು ಗೃಹ ಸಚಿವಾಲಯ ದೃಢಪಡಿಸಿದೆ.

ಚಿಡೋ ಚಂಡಮಾರುತದ ಪರಿಣಾಮ ಮಯೊಟ್ಟೆ ದ್ವೀಪದ ಫ್ರೆಂಚ್ ಭಾಗದ ಮೇಲೆ ಗಂಟೆಗೆ 200 ಕಿ.ಮೀ. ವೇಗದ ಗಾಳಿ ಅಪ್ಪಳಿಸಿದೆ. 90 ವರ್ಷಗಳಲ್ಲಿಯೇ ಇದು ತೀವ್ರ ಸ್ವರೂಪದ್ದಾಗಿದೆ. ಪರಿಣಾಮ ನೂರಾರು ಮನೆಗಳು, ಕಟ್ಟಡಗಳು, ಮರ ಗಿಡಗಳು, ವಾಹನಗಳು ಹಾನಿಗೀಡಾಗಿವೆ. ನೂರಾರು ಜನರು ಸಾವನ್ನಪ್ಪಿದ್ದಾರೆ ಎಂದು ಫ್ರಾನ್ಸ್ ಟಿವಿ ವರದಿ ಮಾಡಿದೆ. ಪ್ರಾಕೃತಿಕ ವಿಕೋಪಕ್ಕೆ ದ್ವೀಪ ಭಾಗದ ಜನರು ಮನೆ–ವಾಹನ ಆಸ್ತಿ ಎಲ್ಲವನ್ನೂ ಕಳೆದುಕೊಂಡಿದ್ದಾರೆ. ನೂರಾರು ಜನರ ಜೀವ ಹೋಗಿದೆ ಎಂದು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರೋನ್ ಶೋಕ ವ್ಯಕ್ತಪಡಿಸಿದ್ದಾರೆ. ಆಗ್ನೇಯ ಹಿಂದೂ ಮಹಾಸಾಗರದಲ್ಲಿರುವ ಮಯೊಟ್ಟೆ ದ್ವೀಪ ಪ್ರದೇಶ ಫ್ರಾನ್ಸ್ ಮತ್ತು ಯುರೋಪಿಯನ್ ಒಕ್ಕೂಟಕ್ಕೆ ಸೇರಿದ ಪ್ರದೇಶ. ಇಲ್ಲಿ ಅಕ್ರಮ ವಲಸಿಗರ ಸಂಖ್ಯೆಯೇ ಅಧಿಕವಾಗಿದೆ. ಒಟ್ಟು ಜನಸಂಖ್ಯೆಯ ಶೇ.75 ಜನ ಬಡತನ ರೇಖೆಗಿಂತ ಕೆಳಗಿನವರು.

ಸ್ಕೂಟರ್ ಬಾಂಬ್ ಸ್ಫೋಟ: ರಷ್ಯಾ ಲೆ.ಜನರಲ್ ಸಾವು

ಮಾಸ್ಕೊ: ವಸತಿ ಸಂಕೀರ್ಣದ ವಾಹನ ನಿಲುಗಡೆ ಸ್ಥಳದಲ್ಲಿದ್ದ ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಇರಿಸಿದ್ದ ಬಾಂಬ್ ಮಂಗಳವಾರ ಬೆಳಗ್ಗೆ ಆಕಸ್ಮಿಕವಾಗಿ ಸ್ಫೋಟಗೊಂಡ ಪರಿಣಾಮ ರಷ್ಯಾ ಸೇನಾಪಡೆಯ



ಪರಮಾಣು, ಜೈವಿಕ ಮತ್ತು ರಾಸಾಯನಿಕ ಅಸ್ತ್ರಗಳ ರಕ್ಷಣಾ ಪಡೆ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಇಗೋರ್ ಕಿರಿಲೋವ್ ದುರ್ಮರಣಕ್ಕೀಡಾದರು. ಕಿರಿಲೋವ್ ವಾಸಿಸುತ್ತಿದ್ದ ವಸತಿ ಅಪಾರ್ಟ್‌ಮೆಂಟ್‌ನ ವಾಹನ ನಿಲುಗಡೆ ಸ್ಥಳದಲ್ಲಿ ಅವಘಡವಾಗಿದೆ. ಕಿರಿಲೋವ್ ಅವರ ಸಹಾಯಕ ಕೂಡ ಸ್ಫೋಟದಲ್ಲಿ ಸಾವನ್ನಪ್ಪಿದ್ದಾರೆ. ತನಿಖಾಧಿಕಾರಿಗಳು, ಫೋರೆನ್ಸಿಕ್ ತಜ್ಞರು ಘಟನಾ ಸ್ಥಳದಲ್ಲಿ ಸಾಕ್ಷ್ಯ ಸಂಗ್ರಹಿಸಿದ್ದಾರೆ ಎಂದು ರಷ್ಯಾದ ತನಿಖಾ ಸಂಸ್ಥೆ ಸುದ್ದಿಗಾರರಿಗೆ ಮಾಹಿತಿ ನೀಡಿದೆ. ಕೃತ್ಯದ ಸುತ್ತಲಿನ ಎಲ್ಲಾ ಘಟನಾವಳಿಗಳನ್ನು ತಿಳಿಯಲು ತನಿಖೆ ಮತ್ತು ಶೋಧ ಕಾರ್ಯಾಚರಣೆಗಳನ್ನು ನಡೆಸಲಾಗುತ್ತಿದೆ ಎಂದು ತನಿಖಾ ಸಂಸ್ಥೆ ವಕ್ತಾರ ತಿಳಿಸಿದ್ದಾರೆ. 2022ರ ಫೆಬ್ರವರಿಯಲ್ಲಿ ಆರಂಭವಾದ ರಷ್ಯಾ–ಉಕ್ರೇನ್ ಯುದ್ಧದಲ್ಲಿ ರಷ್ಯಾ ಸೇನಾಪಡೆ ಕಾರ್ಯಾಚರಣೆ ವೇಳೆ ನಿಷೇಧಿತ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ಬಳಸಿದ ಆರೋಪದಡಿ ಡಿ.16ರಂದು ಕಿರಿಲ್ಲೋವ್‌ಗೆ ಅವರ ಗೈರು ಹಾಜರಿಯಲ್ಲೇ ಉಕ್ರೇನ್ ನ್ಯಾಯಾಲಯ ಶಿಕ್ಷೆ ವಿಧಿಸಿತ್ತು.

'ನೀಟ್' ಆನ್‌ಲೈನ್ ಬಗ್ಗೆ ಶೀಘ್ರ ನಿರ್ಧಾರ

ದೆಹಲಿ: ವೈದ್ಯಕೀಯ ಶಿಕ್ಷಣಕ್ಕೆ ಸೇರಲಿಚ್ಛಿಸುವವರಿಗಾಗಿ ನಡೆಸಲಾಗುವ ಪ್ರವೇಶ ಪರೀಕ್ಷೆ 'ನೀಟ್–ಯುಜಿ'ಯನ್ನು ಆನ್‌ಲೈನ್ ಮೂಲಕ ನಡೆಸುವುದೋ ಅಥವಾ ಈಗ ಇರುವಂತೆಯೇ ತರಗತಿಗೇ ಹಾಜರಾಗಿ ಪರೀಕ್ಷೆ ಬರೆಯುವುದನ್ನು ಮುಂದುವರಿಸುವುದೊ ಎಂಬುದನ್ನು ಶೀಘ್ರವೇ ನಿರ್ಧರಿಸಲಾಗುವುದು ಎಂದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮಂಗಳವಾರ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಆನ್‌ಲೈನ್ ಪರೀಕ್ಷೆಗೆ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ(ಎನ್‌ಟಿಎ) ಕೂಡಾ ಸಿದ್ಧವಿದೆ. ಆದರೆ, ಯಾವ ಮಾದರಿ ಪರೀಕ್ಷೆ ಉತ್ತಮ ಎಂಬ ಬಗ್ಗೆ ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರ ಜತೆ 2 ಸುತ್ತು ಚರ್ಚೆ ಕೂಡಾ ನಡೆಸಲಾಗಿದೆ. ಪರಿಷ್ಕೃತ ಪರೀಕ್ಷಾ ಮಾದರಿ 2025ರಲ್ಲಿ ಜಾರಿಗೆ ಬರಲಿದೆ ಎಂದು ವಿವರ ನೀಡಿದರು. 'ನೀಟ್' ಆನ್‌ಲೈನ್‌ನಲ್ಲಿ ನಡೆಸುವ ವಿಚಾರ ಹೊಸದೇನಲ್ಲ. ಈ ಸಂಬಂಧ ಹಲವು ಬಾರಿ ಚರ್ಚೆಗಳಾಗಿವೆ. ಪ್ರಶ್ನೆಪತ್ರಿಕೆ ಸೋರಿಕೆ ತಡೆಯುವುದೇ ದೊಡ್ಡ ಸವಾಲಾಗಿ ಪರಿಣಮಿಸಿರುವುದರಿಂದ ಈಗ ಆನ್‌ಲೈನ್ ಪರೀಕ್ಷೆ ಚರ್ಚೆಗೆ ಹೆಚ್ಚಿನ ಒತ್ತು ಬಂದಿದೆ.

ರಾಜಸ್ಥಾನಕ್ಕೆ 50,000 ಕೋಟಿ ರು.ಯೋಜನೆ

ಜೈಪುರ: ರಾಜಸ್ಥಾನದಲ್ಲಿ 50 ಸಾವಿರ ಕೋಟಿ ರು.ಗೂ ಅಧಿಕ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ಪ್ರಧಾನಿ ನರೇಂದ್ರ ಮೋದಿ ನೆರವೇರಿಸಿದರು.

ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ನೇತೃತ್ವದ ಬಿಜೆಪಿ ಸರಕಾರ ರಾಜಸ್ಥಾನದಲ್ಲಿ ಒಂದು ವರ್ಷದ ಆಡಳಿತವನ್ನು ಯಶಸ್ವಿಯಾಗಿ ನಡೆಸಿದ ಹಿನ್ನೆಲೆ ಸಿಎಂಗೆ ಪ್ರಧಾನಿ ಮೋದಿ ಅಭಿನಂದನೆ ಸಲ್ಲಿಸಿದರು. ಕಳೆದೊಂದು ವರ್ಷದಲ್ಲಿ ಡಬಲ್ ಇಂಜಿನ್ ಸರಕಾರ ರಾಜ್ಯದ ಅಭಿವೃದ್ಧಿಗೆ ಹೊಸ ಚೈತನ್ಯ ನೀಡಿದೆ ಎಂದು ಶ್ಲಾಘಿಸಿದರು. ಪಾರ್ವತಿ, ಕಾಳಿಸಿಂಧ್, ಚಂಬಲ್ ಯೋಜನೆಯಿಂದ ರಾಜಸ್ಥಾನದ 21 ಜಿಲ್ಲೆಗಳಿಗೆ ನೀರಾವರಿ ಹಾಗೂ ಕುಡಿಯುವ ನೀರು ಒದಗಿಸಲಾಗುವುದು. ಅಲ್ಲದೇ, ರಾಜಸ್ಥಾನವನ್ನು ದೇಶದ ಅತ್ಯಂತ ಸಂಪರ್ಕಿತ ರಾಜ್ಯವಾಗಿ ಮಾಡುವ ಯೋಜನೆಗಳಿಗೂ ಚಾಲನೆ ನೀಡಲಾಗಿದೆ. ರಾಜಸ್ಥಾನದಲ್ಲಿ ಹೂಡಿಕೆ ಉತ್ತೇಜಿಸಲಾಗುತ್ತದೆ, ಪ್ರವಾಸೋದ್ಯಮಕ್ಕೆ ಇನ್ನಷ್ಟು ಉತ್ತೇಜನ ಸಿಗಲಿದೆ. ಇದರಿಂದ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸುತ್ತದೆ. ಇದರಿಂದ ರಾಜ್ಯದ ರೈತರು ಮತ್ತು ಯುವಕರು ಹೆಚ್ಚು ಪ್ರಯೋಜನ ಪಡೆಯುತ್ತಾರೆ ಎಂದು ಮೋದಿ ಹೇಳಿದರು.

ಸಮಾಚಾರ ಸಣ್ಣದಲ್ಲ

ರಿಂಕು ಸಿಂಗ್: ಯು.ಪಿ ತಂಡಕ್ಕೆ ನಾಯಕ

ಲಕ್ನೋ: ಭಾರತ ಕ್ರಿಕೆಟ್ ತಂಡದ ಸ್ಫೋಟಕ ಎಡಗೈ ಬ್ಯಾಟರ್ ರಿಂಕು ಸಿಂಗ್ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಉತ್ತರ ಪ್ರದೇಶ ತಂಡವನ್ನು ಮುನ್ನಡೆಸಲಿದ್ದಾರೆ. ಉತ್ತರ ಪ್ರದೇಶ ಕ್ರಿಕೆಟ್

ಸಂಸ್ಥೆಯು ಒಂದೊಂದು ಕ್ರಿಕೆಟ್ ಮಾದರಿಗೂ ಬೇರೆ ಬೇರೆ ನಾಯಕರನ್ನು ನೇಮಕ ಮಾಡಿರುವುದು ವಿಶೇಷ. ರಣಜಿ ತಂಡಕ್ಕೆ ಆರ್ಯನ್ ಜುಯಲ್, ಸಯ್ಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಗೆ ವೇಗಿ ಭುವನೇಶ್ವರ್ ಕುಮಾರ್, ಇದೀಗ ವಿಜಯ್ ಹಜಾರೆ ಟ್ರೋಫಿ ಟೂರ್ನಿಗೆ ರಿಂಕುಗೆ ನಾಯಕ ಪಟ್ಟ ಕಟ್ಟಲಾಗಿದೆ. ರಿಂಕು ಸಿಂಗ್ ಕಳೆದ ಬಾರಿಯ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ 9 ಪಂದ್ಯಗಳನ್ನಾಡಿ 69ರ ಸರಾಸರಿಯಲ್ಲಿ 277 ರನ್ ಸಿಡಿಸಿದ್ದರು.

ಟಿಮ್ ಸೌಥಿಗೆ ಗೆಲುವಿನ ವಿದಾಯ

ವೆಲ್ಲಿಂಗ್ಟನ್: ನ್ಯೂಜಿಲ್ಯಾಂಡ್ ತಂಡದ ಹಿರಿಯ ವೇಗದ ಬೌಲರ್ ಟಿಮ್ ಸೌಥಿ ಅವರು ಗೆಲುವಿನ ಪಂದ್ಯದೊಂದಿಗೆ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಇಂಗ್ಲೆಂಡ್ ವಿರುದ್ಧದ ತವರಿನ

ಮೂರನೇ ಟೆಸ್ಟ್ ಪಂದ್ಯದಲ್ಲಿ ನ್ಯೂಜಿಲ್ಯಾಂಡ್ ಬರೋಬ್ಬರಿ 423 ರನ್‌ಗಳ ಜಯ ಸಾಧಿಸಿತು, ಈ ಗೆಲುವಿನೊಂದಿಗೆ ಸೌಥಿ ತಮ್ಮ ಟೆಸ್ಟ್ ಕ್ರಿಕೆಟ್ ಬದುಕನ್ನು ಸ್ಮರಣೀಯಗೊಳಿಸಿದರು. 2008ರಲ್ಲಿ ಇಂಗ್ಲೆಂಡ್ ವಿರುದ್ಧ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಟಿಮ್ ಸೌಥಿ, 107 ಟೆಸ್ಟ್ ಪಂದ್ಯಗಳನ್ನಾಡಿದ್ದರು. ಒಟ್ಟು 391 ವಿಕೆಟ್‌ಗಳನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಪಡೆದಿರುವ ಅವರು 2,245 ರನ್‌ಗಳನ್ನೂ ಗಳಿಸಿದ್ದಾರೆ. 15 ಇನ್ನಿಂಗ್ಸ್‌ಗಳಲ್ಲಿ 5 ವಿಕೆಟ್‌ಗಳನ್ನು ಪಡೆದಿದ್ದ ಸೌಥಿ, ಟೆಸ್ಟ್ ಪಂದ್ಯವೊಂದರ ಎರಡೂ ಇನ್ನಿಂಗ್ಸ್ ಸೇರಿ 10 ವಿಕೆಟ್ ಪಡೆದಿದ್ದರು.

ನ್ಯೂಜಿಲ್ಯಾಂಡ್‌ಗೆ ಭರ್ಜರಿ ಜಯ

ಹ್ಯಾಮಿಲ್ಟನ್: ಇಲ್ಲಿನ ಸೆಡನ್ ಪಾರ್ಕ್ ಮೈದಾನದಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಮೂರನೇ ಮತ್ತು ಅಂತಿಮ ಟೆಸ್ಟ್ ಪಂದ್ಯದಲ್ಲಿ ಮಂಗಳವಾರ ನ್ಯೂಜಿಲ್ಯಾಂಡ್ ತಂಡವು 423 ರನ್‌ಗಳ ಭರ್ಜರಿ ಗೆಲುವು ದಾಖಲಿಸಿದೆ. ಇದೀಗ ಮೂರು ಪಂದ್ಯಗಳ ಟೆಸ್ಟ್ ಸರಣಿಯನ್ನು ಇಂಗ್ಲೆಂಡ್ ತಂಡವು 2-1 ಅಂತರದಲ್ಲಿ ಗೆದ್ದುಕೊಂಡಂತಾಗಿದೆ.

ಭಾರತ-ಆಸ್ಟ್ರೇಲಿಯಾ ಮೂರನೇ ಟೆಸ್ಟ್ | ಮಿಂಚಿದ ಕೆಳ ಕ್ರಮಾಂಕದ ಆಟಗಾರರು

ಫಾಲೋಆನ್ ತಪ್ಪಿಸಿಕೊಂಡ ಭಾರತ

ಬ್ರಿಸ್ಬೇನ್: ಇಲ್ಲಿನ ಗಾಬಾ ಮೈದಾನದಲ್ಲಿ ನಡೆಯುತ್ತಿರುವ ಭಾರತ-ಆಸ್ಟ್ರೇಲಿಯಾ ನಡುವಿನ ಮೂರನೇ ಕ್ರಿಕೆಟ್ ಟೆಸ್ಟ್‌ನ ನಾಲ್ಕನೇ ದಿನ ಕೆ.ಎಲ್ ರಾಹುಲ್(84) ಮತ್ತು ರವೀಂದ್ರ ಜಡೇಜಾ(77) ಬಾರಿಸಿದ ಅರ್ಧಶತಕ ಹಾಗೂ ಕೆಳ ಕ್ರಮಾಂಕದಲ್ಲಿ ಬಾಲಂಗೋಚಿಗಳು ನಡೆಸಿದ ದಿಟ್ಟ ಬ್ಯಾಟಿಂಗ್ ನೆರವಿನಿಂದ ಭಾರತ ತಂಡವು ಫಾಲೋಆನ್ ಭೀತಿಯಿಂದ ಪಾರಾಗಿದೆ. ಹಲವು ಬಾರಿ ಮಳೆಯಿಂದ ಸ್ಥಗಿತಗೊಂಡು ನಡೆದ ನಾಲ್ಕನೇ ದಿನದಾಟದ ಪಂದ್ಯದ ಅಂತ್ಯಕ್ಕೆ ಭಾರತ ತಂಡವು 9 ವಿಕೆಟ್‌ಗೆ 252 ರನ್ ಬಾರಿಸಿದ್ದು, ಇನ್ನೂ 193 ರನ್ ಹಿನ್ನಡೆಯಲ್ಲಿದೆ. ಬುಧವಾರ ಮೂರನೇ ಟೆಸ್ಟ್‌ನ ಅಂತಿಮ ದಿನವಾಗಿದೆ.

4 ವಿಕೆಟ್‌ಗೆ 51 ರನ್ ಗಳಿಸಿದ್ದಲ್ಲಿಂದ ಮಂಗಳವಾರ ನಾಲ್ಕನೇ ದಿನದಾಟ ಆರಂಭಿಸಿದ ಭಾರತಕ್ಕೆ ಕನ್ನಡಿಗ ಕೆ.ಎಲ್ ರಾಹುಲ್ ಆಸರೆಯಾದರೆ, ಆ ಬಳಿಕ ಆಲ್‌ರೌಂಡರ್ ರವೀಂದ್ರ ಜಡೇಜಾ ತಾಳ್ಮೆಯುತ ಬ್ಯಾಟಿಂಗ್ ಮೂಲಕ ತಂಡಕ್ಕೆ ನೆರವಾದರು. ಉಭಯ ಆಟಗಾರರು ಕೂಡ ಅರ್ಧಶತಕ ಬಾರಿಸಿದರು, ಈ ಜೋಡಿ 6ನೇ ವಿಕೆಟ್‌ಗೆ 67 ರನ್‌ಗಳ ಅತ್ಯಮೂಲ್ಯ ಜತೆಯಾಟ ನಡೆಸಿತು.

33 ರನ್ ಗಳಿಸಿದ್ದ ರಾಹುಲ್ ಮಂಗಳವಾರ 51 ರನ್ ಬಾರಿಸಿ ಒಟ್ಟು 84 ರನ್‌ಗಳಿಸಿದ್ದಾಗ ಸ್ಲಿಪ್‌ನಲ್ಲಿ ನಿಂತಿದ್ದ ಸ್ಟೀವನ್ ಸ್ಮಿತ್ ಹಿಡಿದ ಅದ್ಭುತ ಕ್ಯಾಚ್‌ಗೆ ಬಲಿಯಾದರು. ನಾಯಕ ರೋಹಿತ್ ಶರ್ಮಾ ಈ ಪಂದ್ಯದಲ್ಲಿಯೂ ಬ್ಯಾಟಿಂಗ್ ವೈಫಲ್ಯ ಕಂಡರು, 2 ಬೌಂಡರಿ ಬಾರಿಸಿದರೂ, 10 ರನ್ ಆದಾಗ ತನ್ನ ವಿಕೆಟ್ ಒಪ್ಪಿಸಿದರು.

ಕೆ. ಎಲ್. ರಾಹುಲ್ ವಿಕೆಟ್ ಪತನದ ಬಳಿಕ ರವೀಂದ್ರ ಜಡೇಜಾ ಮತ್ತು ನಿತೀಶ್ ರಾಣಾ 8ನೇ ವಿಕೆಟ್‌ಗೆ 53 ರನ್ ಒಟ್ಟುಗೂಡಿಸಿ ಭಾರತ ತಂಡಕ್ಕೆ ಸ್ವಲ್ಪ ಮಟ್ಟಿಗೆ ಆಸರೆಯಾದರು. ಆ ವೇಳೆ ಹಲವು ಬಾರಿ ಮಳೆಯಿಂದ ಪಂದ್ಯಕ್ಕೆ ಅಡಚಣೆಯಾಯಿತು. ಜಡೇಜಾ 123 ಎಸೆತ ಎದುರಿಸಿ 77 ರನ್ ಬಾರಿಸಿದರೆ, ನಿತೀಶ್ ರೆಡ್ಡಿ 16 ರನ್‌ಗೆ ವಿಕೆಟ್ ಕೈಚೆಲ್ಲಿದರು. ಜಡೇಜಾ ಮತ್ತು ನಿತೀಶ್ ವಿಕೆಟ್ ಬೀಳುತ್ತಿದ್ದಂತೆ ಭಾರತ ಫಾಲೋಆನ್ ಭೀತಿಯ ಸಂಕಷ್ಟಕ್ಕೆ ಸಿಲುಕಿತು. ಆದರೆ ವೇಗಿಗಳಾದ ಆಕಾಶ್‌ದೀಪ್ ಮತ್ತು ಜಸ್‌ಪ್ರೀತ್ ಬುಮ್ರಾ ಆಪತ್ಬಾಂಧವರಂತೆ ಅಜೇಯ 39 ರನ್‌ಗಳ ಜತೆಯಾಟ ಪ್ರದರ್ಶಿಸಿ ಭಾರತ ತಂಡವನ್ನು ಫಾಲೋಆನ್‌ನಿಂದ ಪಾರು ಮಾಡಿದರು.

ಆಕಾಶ್ ದೀಪ್ ಅಜೇಯ-27 (2 ಬೌಂಡರಿ ಮತ್ತು 1 ಸಿಕ್ಸರ್), ಜಸ್‌ಪ್ರೀತ್ ಬುಮ್ರಾ ಅಜೇಯ-10(1 ಸಿಕ್ಸರ್) ಬಾರಿಸಿ ಅಂತಿಮ ದಿನದಾಟಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಐದನೇ ದಿನ ಭಾರತ ತಂಡವು ಬ್ಯಾಟಿಂಗ್ ಮುಂದುವರಿಸಲಿದ್ದು, ಇನ್ನಿಂಗ್ಸ್ ಮುಕ್ತಾಯದ ಬಳಿಕ ಆಸ್ಟ್ರೇಲಿಯಾ ತಂಡವು ದ್ವಿತೀಯ ಇನಿಂಗ್ಸ್ ಆರಂಭಿಸಲಿದೆ, ಹೀಗಾಗಿ ಈ ಪಂದ್ಯವು ಡ್ರಾನಲ್ಲಿ ಅಂತ್ಯಗೊಳ್ಳುವ ಸಾಧ್ಯತೆ ಹೆಚ್ಚು.

ಆಸೀಸ್ ಪರ ನಾಯಕ ಪ್ಯಾಟ್ ಕಮಿನ್ಸ್ 80 ರನ್‌ಗೆ 4, ಮಿಚೆಲ್ ಸ್ಟಾರ್ಕ್ 83ಕ್ಕೆ 3 ವಿಕೆಟ್ ಪಡೆದು ಮಿಂಚಿದರು. ಹ್ಯಾಜಲ್‌ವುಡ್ ಹಾಗೂ ನಾಥನ್ ತಲಾ ಒಂದು ವಿಕೆಟ್ ಪಡೆದರು.

ತಪ್ಪಿದ ಫಾಲೋಆನ್: ಟೀಮ್ ಇಂಡಿಯಾಗೆ ಗೆದ್ದಷ್ಟೇ ಖುಷಿ..!

ಆಸ್ಟ್ರೇಲಿಯಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 445 ರನ್ ಗಳಿಸಿದ್ದರಿಂದ ಟೀಮ್ ಇಂಡಿಯಾ ಫಾಲೋಆನ್ ತಪ್ಪಿಸಿಕೊಳ್ಳಲು 246 ರನ್ ಕಲೆ ಹಾಕುವುದು ಅನಿವಾರ್ಯವಾಗಿತ್ತು. ಒಂದು ವೇಳೆ ಭಾರತ ತಂಡವನ್ನು 246 ರನ್‌ಗಳ ಒಳಗೆ ಆಸ್ಟ್ರೇಲಿಯಾ ತಂಡ ಆಲೌಟ್ ಮಾಡಿದರೆ ಫಾಲೋಆನ್ ಹೇರುವ ಅವಕಾಶ ಹೊಂದಿತ್ತು. ಆಗ ಭಾರತ ತಂಡವು ದ್ವಿತೀಯ ಇನಿಂಗ್ಸ್ ಆರಂಭಿಸಬೇಕಿತ್ತು. ದ್ವಿತೀಯ ಇನಿಂಗ್ಸ್‌ನಲ್ಲಿ ಟೀಮ್ ಇಂಡಿಯಾವನ್ನು ಆಲೌಟ್ ಮಾಡಿದರೆ ಆಸ್ಟ್ರೇಲಿಯಾ ತಂಡಕ್ಕೆ ಈ ಪಂದ್ಯವನ್ನು ಗೆಲ್ಲಲು ಉತ್ತಮ ಅವಕಾಶ ಲಭಿಸುತ್ತಿತ್ತು. ಆದರೆ ಕೊನೆಯ ವಿಕೆಟ್‌ಗೆ ಜೊತೆಯಾದ ಜಸ್‌ಪ್ರೀತ್ ಬುಮ್ರಾ ಹಾಗೂ ಆಕಾಶ್ ದೀಪ್ ಎಚ್ಚರಿಕೆಯ ಬ್ಯಾಟಿಂಗ್ ಪ್ರದರ್ಶಿಸಿದರು. ಅತ್ತ ಆಸ್ಟ್ರೇಲಿಯನ್ನರು ಕೊನೆಯ ವಿಕೆಟ್‌ಗಾಗಿ ಹರಸಾಹಸ ಪಟ್ಟರೆ, ಇತ್ತ ಟೀಮ್ ಇಂಡಿಯಾ ಫಾಲೋಆನ್ ತಪ್ಪಿಸಲು 33 ರನ್‌ಗಳ ಲೆಕ್ಕಾಚಾರಕ್ಕೆ ಇಳಿದಿತ್ತು.ಈ ಲೆಕ್ಕಾಚಾರದೊಂದಿಗೆ ಟೀಮ್ ಇಂಡಿಯಾ ಕೋಚ್ ಗೌತಮ್ ಗಂಭೀರ್, ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಸಹಾಯಕ ಕೋಚ್ ಅಭಿಷೇಕ್ ನಾಯರ್ ಡ್ರೆಸ್ಸಿಂಗ್ ರೂಮ್‌ನಲ್ಲಿ ಕೂತು ಗಂಭೀರವಾಗಿ ಪಂದ್ಯ ವೀಕ್ಷಿಸುತ್ತಿದ್ದರು. ಪ್ಯಾಟ್ ಕಮಿನ್ಸ್ ಎಸೆದ 75ನೇ ಓವರ್‌ನ 2ನೇ ಎಸೆತದಲ್ಲಿ ಆಕಾಶ್ ದೀಪ್ ಬೌಂಡರಿ ಬಾರಿಸುತ್ತಿದ್ದಂತೆ ಟೀಮ್ ಇಂಡಿಯಾದ ಮೊತ್ತವು 246ಕ್ಕೆ ತಲುಪಿದೆ. ಆ ಮೂಲಕ ಫಾಲೋಆನ್ ತಪ್ಪಿಸಿಕೊಳ್ಳುತ್ತಿದ್ದಂತೆ ಡ್ರೆಸ್ಸಿಂಗ್ ರೂಮ್‌ನಲ್ಲಿ ಭಾರತೀಯರ ಸಂಭ್ರಮ ಮುಗಿಲು ಮುಟ್ಟಿತು. ವಿರಾಟ್ ಕೊಹ್ಲಿ ಎದ್ದು ಗೌತಮ್ ಗಂಭೀರ್, ರೋಹಿತ್ ಶರ್ಮಾ ಹಾಗೂ ಅಭಿಷೇಕ್ ನಾಯರ್ ಅವರೊಂದಿಗೆ ಸಂಭ್ರಮಿಸಿ ವಿಡಿಯೋ ವೈರಲ್ ಆಗಿದೆ.

ಅಂಡರ್-19 ಮಹಿಳೆಯರ ಏಷ್ಯಾ ಕಪ್: ಪಂದ್ಯ ರದ್ದು

ಕೌಲಾಲಂಪುರ: ಅಂಡರ್-19 ಏಷ್ಯಾ ಕಪ್ ಮಹಿಳೆಯರ ಕ್ರಿಕೆಟ್ ಟೂರ್ನಮೆಂಟ್‌ನ ಭಾರತ-ನೇಪಾಳ ನಡುವಿನ ಮಂಗಳವಾರದ ಪಂದ್ಯದ ವೇಳೆ ಸುರಿದ ಮಳೆಯಿಂದಾಗಿ ಆಟ ರದ್ದಾಗಿದೆ.

ಮೊದಲು ಬ್ಯಾಟ್ ಮಾಡಿದ ನೇಪಾಳ ತಂಡದ ಪರ ಪೂಜಾ ಮಹತೊ 40 ಬಾಲ್‌ಗಳಲ್ಲಿ 25 ರನ್ ಹಾಗೂ ಅಲೀಶಾ ಯಾದವ್ 9 ಬಾಲ್‌ಗಳಲ್ಲಿ 20 ರನ್ ಗಳಿಸಿದರು. ಉಳಿದಂತೆ ಯಾವ ಬ್ಯಾಟರ್ ಕೂಡ ಎರಡಂಕೆಯ ಸ್ಕೋರ್ ತಲುಪುವಲ್ಲಿ ವಿಫಲರಾದ ಕಾರಣ ನೇಪಾಳ ತಂಡವು ನಿಗಧಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ ಕೇವಲ 94 ರನ್ ಗಳಿಸಿತು. ಭಾರತದ ಪರ ಪುರಾಣಿಕ ಸಿಸೋಡಿಯಾ ಕೇವಲ 12 ರನ್‌ಗಳನ್ನು ನೀಡಿ ನೇಪಾಳ ತಂಡದ 4 ವಿಕೆಟ್‌ಗಳನ್ನು ಪಡೆದರೆ, ಆನಂದಿತಾ ಕಿಶೋರ್, ಮಿಥಿಲಾ ವಿನೋದ್ ತಲಾ ಒಂದು ವಿಕೆಟ್ ಪಡೆದರು.

ಅತ್ಯಲ್ಪ ಮೊತ್ತವಾದ 95 ರನ್‌ಗಳ ಗುರಿ ಪಡೆದ ಭಾರತ ತಂಡದ ಆರಂಭಿಕ ಆಟಗಾರ್ತಿ ಜಿ. ತ್ರಿಶಾ 13 ಬಾಲ್‌ಗಳಲ್ಲಿ 17 ರನ್‌ಗಳನ್ನು ಹಾಗೂ ಜಿ. ಕಮಲಿನಿ 6 ಬಾಲ್‌ಗಳಲ್ಲಿ 8 ರನ್ ತೆಗೆದು 3.1 ಓವರ್‌ಗಳಲ್ಲಿ ಯಾವುದೇ ವಿಕೆಟ್ ನಷ್ಟ ಇಲ್ಲದೆ ಒಟ್ಟು 28 ರನ್‌ಗಳನ್ನು ಪೇರಿಸಿದಾಗ ಧಾರಾಕಾರ ಮಳೆ ಸುರಿಯಿತು. ಸತತವಾಗಿ ಮಳೆ ಸುರಿದ ಕಾರಣಕ್ಕೆ ಪಂದ್ಯವನ್ನು ಮುಂದುವರಿಸಲು ಸಾಧ್ಯವಾಗದೆ ರದ್ದುಪಡಿಸಬೇಕಾಗಿ ಬಂತು. ಇದೀಗ ನಿಕ್ಕಿ ಪ್ರಸಾದ್ ನಾಯಕತ್ವದ ಭಾರತ ತಂಡವು ಎ-ಗ್ರೂಪ್‌ನಲ್ಲಿ ನೆಟ್ ರನ್ ರೇಟ್ ಹೆಚ್ಚಿರುವ ಕಾರಣಕ್ಕಾಗಿ ಅಗ್ರಸ್ಥಾನಿಯಾಗಿಯೇ ಮುಂದುವರಿದಿದೆ.

ಭಾರತವು ತನ್ನ ಮುಂದಿನ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಹಾಗೂ ನೇಪಾಳವು ಶ್ರೀಲಂಕಾವನ್ನು ಎದುರಿಸಲಿದೆ.

ಡಬಲ್ ಹ್ಯಾಟ್ರಿಕ್ ವಿಕೆಟ್ ಫೆನ್ನಲ್ ಚಾರಿತ್ರಿಕ ಸಾಧನೆ

ಅಮೆರಿಕ ಸಬ್ ರೀಜನಲ್ ಕ್ವಾಲಿಫೈಯರ್ ಪಂದ್ಯ | ವಿಶ್ವದ 6ನೇ ಬೌಲರ್ ಎಂಬ ಹೆಗ್ಗಳಿಕೆ

ಬ್ಯೂನಸ್ ಐರಿಸ್: ಪುರುಷರ ಟಿ20 ವಿಶ್ವಕಪ್ ಅಮೆರಿಕ ಸಬ್ ರೀಜಿನಲ್ ಕ್ವಾಲಿಫೈಯರ್ ಪಂದ್ಯವೊಂದರಲ್ಲಿ ಹೊಸ ದಾಖಲೆಯೊಂದು ನಿರ್ಮಾಣವಾಗಿದೆ. ಸೈಮನ್ ಐಲ್ಯಾಂಡ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಅರ್ಜೆಂಟೀನಾದ ಆಟಗಾರ ಹೆರ್ನಾನ್ ಫೆನ್ನೆಲ್ ಡಬಲ್ ಹ್ಯಾಟ್ರಿಕ್ ಸಾಧನೆ ಮಾಡಿದ್ದಾರೆ.

ಫೆನೆಲ್ 4 ಎಸೆತಗಳಲ್ಲಿ 4 ವಿಕೆಟ್ ಪಡೆದು ಇತಿಹಾಸ ನಿರ್ಮಿಸಿದರು. ಅವರು ಓವರ್‌ನ ಮೂರನೇ ಎಸೆತದಲ್ಲಿ ಟ್ರಾಯ್ ಟೇಲರ್ ಅವರನ್ನು ಔಟ್ ಮಾಡಿದ ನಂತರ ಮುಂದಿನ ಮೂರು ಎಸೆತಗಳಲ್ಲಿ ಅಲೆಸ್ಟೈರ್ ಇಫ್ಲೆ, ರೊನಾಲ್ಡ್ ಎಬ್ಯಾಂಕ್ಸ್ ಮತ್ತು ಅಲೆಜಾಂಡ್ರೊ ಮಾರಿಸ್ ಅವರ ವಿಕೆಟ್‌ಗಳನ್ನು ಕಬಳಿಸುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ.

ಇದರೊಂದಿಗೆ ಈ ಪಂದ್ಯದಲ್ಲಿ ಫೆನ್ನೆಲ್ ಒಟ್ಟು 5 ವಿಕೆಟ್‌ಗಳನ್ನು ಪಡೆದು ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿಕೊಂಡರು. ಅವರು ತಮ್ಮ ಅಮೋಘ ಬೌಲಿಂಗ್ ಮೂಲಕ ಕೇವಲ 14 ರನ್ ನೀಡಿದರು. ಆ ರೀತಿ ಟಿ-20 ಕ್ರಿಕೆಟ್ ಇತಿಹಾಸದಲ್ಲಿ ಡಬಲ್ ಹ್ಯಾಟ್ರಿಕ್ ಗಳಿಸಿದ ವಿಶ್ವದ ಆರನೇ ಬೌಲರ್ ಎನಿಸಿಕೊಂಡರು. ಲಸಿತ್ ಮಾಲಿಂಗ, ರಶೀದ್ ಖಾನ್, ಕರ್ಟಿಸ್ ಕಾನ್ಫರ್, ಜೇಸನ್ ಹೋಲ್ಡರ್ ಮತ್ತು ವಾಸಿಮ್ ಯಾಕೋಬ್ ಒಳಗೊಂಡಿರುವ ಬೌಲರ್‌ಗಳ ಪಟ್ಟಿಗೆ ಫೆನ್ನೆಲ್ ಸೇರಿದ್ದಾರೆ.

ಈ ಡಬಲ್ ಹ್ಯಾಟ್ರಿಕ್ ಸಾಧನೆಯೊಂದಿಗೆ 36 ವರ್ಷದ ಅರ್ಜೆಂಟೀನಾದ ವೇಗಿ, ಟಿ20 ಕ್ರಿಕೆಟ್‌ನಲ್ಲಿ ಒಂದಕ್ಕಿಂತ ಹೆಚ್ಚು ಹ್ಯಾಟ್ರಿಕ್ ಗಳಿಸಿದ ಬೌಲರ್‌ಗಳ ಪಟ್ಟಿಯಲ್ಲಿ ಅವರು ಸ್ಥಾನ ಪಡೆದು, ಈ ಸಾಧನೆ ಮಾಡಿದ ವಿಶ್ವದ ಆರನೇ ಬೌಲರ್ ಎನಿಸಿಕೊಂಡರು. ಇದುವರೆಗೆ ವಾಸಿಂ ಅಬ್ಬಾಸ್, ಪ್ಯಾಟ್ ಕಮ್ಮಿನ್ಸ್, ಮಾರ್ಕ್ ಪಾವ್ಲೋವಿಚ್, ಟಿಮ್ ಸೌದಿ ಮತ್ತು ಲಸಿತ್ ಮಾಲಿಂಗ ಮಾತ್ರ ಡಬಲ್ ಹ್ಯಾಟ್ರಿಕ್ ಸಾಧನೆ ಮಾಡಿದ್ದಾರೆ. ಪೆನ್ನೆಲ್ 5 ವಿಕೆಟ್ ಪಡೆದರೂ ಈ ಪಂದ್ಯದಲ್ಲಿ ಅರ್ಜೆಂಟೀನಾ ಸೋಲನ್ನನುಭವಿಸಿತು. ಮೊದಲು ಬ್ಯಾಟ್ ಮಾಡಿದ್ದ ಕೇಮನ್ ಐಲ್ಯಾಂಡ್ಸ್ ತಂಡ 116 ರನ್ ಗಳಿಸಿತು. ಇದಕ್ಕುತ್ತರವಾಗಿ ಅರ್ಜೆಂಟೀನಾ 94 ರನ್‌ಗಳಿಗೆ ಸರ್ವಪತನ ಕಂಡಿತು, ಅಂತಿಮವಾಗಿ ಅರ್ಜೆಂಟೀನಾ ಈ ಪಂದ್ಯದಲ್ಲಿ 22 ರನ್‌ಗಳಿಂದ ಸೋತಿತು.

ಭಾರತದಲ್ಲಿ ಮುಂದಿನ ವರ್ಷ ವಿಶ್ವ ಬಾಕ್ಸಿಂಗ್ ಫೈನಲ್

ದೆಹಲಿ: ಮುಂದಿನ ವರ್ಷದ ನವೆಂಬರ್‌ನಲ್ಲಿ ಭಾರತವು ವಿಶ್ವ ಬಾಕ್ಸಿಂಗ್ ಫೈನಲ್ ಪಂದ್ಯಕ್ಕೆ ಆತಿಥ್ಯ ವಹಿಸಲಿದೆ ಎಂದು ಬಾಕ್ಸಿಂಗ್ ಫೆಡರೇಶನ್ ಆಫ್ ಇಂಡಿಯಾ ಪ್ರಕಟಿಸಿದೆ. ಫೆಡರೇಶನ್‌ಗೆ ಸೇರ್ಪಡೆಯಾದ ಬಳಿಕ ಭಾರತವು ಆಯೋಜಿಸುತ್ತಿರುವ ಮೊದಲ ಪಂದ್ಯ ಇದಾಗಿದೆ.

ಈ ಹಿಂದೆ 2023ರಲ್ಲಿ ಭಾರತವು ವಿಶ್ವ ಮಹಿಳಾ ಬಾಕ್ಸಿಂಗ್ ಅನ್ನು ಅಂತಾರಾಷ್ಟ್ರೀಯ ಬಾಕ್ಸಿಂಗ್ ಅಸೋಸಿಯೇಶನ್‌ನ ಸಹಯೋಗದಲ್ಲಿ ಹಮ್ಮಿಕೊಂಡಿತ್ತು. 'ಬಾಕ್ಸಿಂಗ್‌ನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಇಂತಹದ್ದೊಂದು ಪಂದ್ಯವನ್ನು ಆಯೋಜಿಸುತ್ತಿರುವ ಕುರಿತು ನಿಜಕ್ಕೂ ನಮಗೆ ಹೆಮ್ಮೆ ಇದೆ. ಒಲಿಂಪಿಕ್‌ನ ಭಾಗವಾಗಿರುವ ಬಾಕ್ಸಿಂಗ್ ನಿಜಕ್ಕೂ ಮಹತ್ವದ ಕ್ರೀಡೆಯಾಗಿದ್ದು, ಭಾರತ ಕೂಡಾ ಆ ನಿಟ್ಟಿನಲ್ಲಿ ತನ್ನದೇ ಆದ ಹೆಜ್ಜೆಗುರುತನ್ನು ಮೂಡಿಸಿದೆ' ಎಂದು ಬಾಕ್ಸಿಂಗ್ ಫೆಡರೇಶನ್ ಆಫ್ ಇಂಡಿಯಾದ ಅಧ್ಯಕ್ಷ ಅಜಯ್ ಸಿಂಗ್ ತಮ್ಮ ಸಂತಸವನ್ನು ವ್ಯಕ್ತಪಡಿಸಿದ್ದಾರೆ.

ವಿಟಾಕೀಸ್



ಸಿಹಿ ಸುದ್ದಿ ಕೊಟ್ಟ ಶ್ರೀಮುರಳಿ

ಬಘೀರ ಸಿನಿಮಾ ಮೂಲಕ ಪ್ರಸಿದ್ಧಿ ಪಡೆದ ನಟ ಶ್ರೀಮುರಳಿ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಈ ನಡುವೆಯೇ ಅವರ ಮುಂದಿನ ಸಿನಿಮಾ ಯಾವುದು ಎಂಬ ಕುತೂಹಲವಿತ್ತು, ಅದಕ್ಕೆ ಈಗ ಉತ್ತರವೂ ಸಿಕ್ಕಿದೆ. ಮುರಳಿ ತೆಲುಗಿನ ಖ್ಯಾತ ಚಿತ್ರ ನಿರ್ಮಾಣ ಸಂಸ್ಥೆ ಪೀಪಲ್ ಮೀಡಿಯಾ ಫ್ಯಾಕ್ಟರಿ ಜತೆಗೆ ಕೈ ಜೋಡಿಸಿದ್ದಾರೆ. ಈ ಸಂಸ್ಥೆ ನಿರ್ಮಾಣ ಮಾಡಲಿರುವ ಬಿಗ್ ಬಜೆಟ್ ಸಿನಿಮಾದಲ್ಲಿ ಮುರಳಿ ನಾಯಕನಾಗಿ ನಾಯಕನಾಗಿ ನಟಿಸಲಿದ್ದಾರೆ.

ಪೀಪಲ್ ಮೀಡಿಯಾ ಫ್ಯಾಕ್ಟರಿ ಈ ಸಿನಿಮಾ ನಿರ್ಮಾಣದ ಮೂಲಕ ಕನ್ನಡ ಚಿತ್ರೋದ್ಯಮ ಪ್ರವೇಶಿಸುತ್ತಿದೆ. ಈಗಾಗಲೇ ಕನ್ನಡದ ನಿರ್ಮಾಣ ಸಂಸ್ಥೆಗಳು ಪರಭಾಷೆ ಸಿನಿಮಾ ನಿರ್ಮಾಣದಲ್ಲಿ ತೊಡಗಿವೆ. ಈಗ ಬೇರೆ ಭಾಷೆಯ ನಿರ್ಮಾಣ ಸಂಸ್ಥೆಗಳು ಕನ್ನಡ ಸಿನಿಮಾಗಳನ್ನು ನಿರ್ಮಿಸಲು ಮುಂದೆ ಬಂದಿರುವುದು ಖುಷಿ ಕೊಟ್ಟಿದೆ. ಬಘೀರ ಸಿನಿಮಾದ ಯಶಸ್ಸಿನ ಬಳಿಕ ಶ್ರೀಮುರಳಿ ಈಗ ಇನ್ನೊಂದು ಮಹೋನ್ನತ ಸಿನಿಮಾದ ಭಾಗವಾಗುತ್ತಿದ್ದಾರೆ. ಸದ್ಯ ಈ ಚಿತ್ರದ ಪೋಸ್ಟರ್ ಬಿಡುಗಡೆಯಾಗಿದ್ದು, ಅಭಿಮಾನಿಗಳು ಮತ್ತು ಸಿನಿಮಾ ಪ್ರೇಮಿಗಳಲ್ಲೂ ಇದು ಕುತೂಹಲ ಮೂಡಿಸಿದೆ. ಈ ಪೋಸ್ಟರ್ ಗಮನಿಸಿದರೆ ಇದು ಐತಿಹಾಸಿಕ ಹಿನ್ನೆಲೆಯಲ್ಲಿ ಸಾಗುವ ಕಥೆ ಎಂದು ಭಾಸವಾಗುತ್ತದೆ. ಇದು ಪಕ್ಕಾ ಆ್ಯಕ್ಷನ್ ಸಿನಿಮಾ ಎನ್ನುವುದು ತಿಳಿಯುತ್ತದೆ. ಈ ಸಿನಿಮಾ ಮುರಳಿ ನಟನಾ ಜೀವನದಲ್ಲಿ ಹೊಸ ಮೈಲಿಗಲ್ಲಾಗಲಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಪೀಪಲ್ ಮೀಡಿಯಾ ಫ್ಯಾಕ್ಟರಿ ನಿರ್ಮಾಣದ ಚಿತ್ರವನ್ನು ಯಾರು ನಿರ್ದೇಶನ ಮಾಡಲಿದ್ದಾರೆ ಎಂಬುದು ಶೀಘ್ರದಲ್ಲಿಯೇ ರಿವಿಲ್ ಆಗಲಿದೆ.

ಯುಐಗೆ ಶಿವಣ್ಣ ಸಾಥ್, ಉಪ್ಪಿ ಮೆಚ್ಚಿದ ವಿಜಯ್

ಒಂಬತ್ತು ವರ್ಷಗಳ ಬಳಿಕ ಉಪೇಂದ್ರ ನಿರ್ದೇಶಿಸಿ, ನಟಿಸಿರುವ ಬಹು ನಿರೀಕ್ಷಿತ ಯುಐ ಚಿತ್ರ ಅಬ್ಬರಿಸಲು ಸಿದ್ಧವಾಗಿದೆ. ಬಿಡುಗಡೆಗು ಮುನ್ನ ಯುಐ ಚಿತ್ರದ ಪ್ರೀ ರಿಲೀಸ್ ಇವೆಂಟ್ ಅದ್ದೂರಿಯಾಗಿ ನೆರವೇರಿತು. ಹ್ಯಾಟ್ರಿಕ್ ಹೀರೊ ಶಿವರಾಜಕುಮಾರ್, ದುನಿಯಾ ವಿಜಯ್, ಡಾಲಿ ಧನಂಜಯ, ಪ್ರಿಯಾಂಕಾ ಉಪೇಂದ್ರ, ನಿರ್ಮಾಪಕರಾದ ಉದಯ್ ಕೆ ಮೆಹ್ತಾ, ರಮೇಶ್ ರೆಡ್ಡಿ, ಕಾರ್ತಿಕ್ ಗೌಡ, ಯೋಗಿ ಜಿ ರಾಜ್, ಜಗದೀಶ್ ಮುಂತಾದ ಗಣ್ಯರು ಚಿತ್ರತಂಡಕ್ಕೆ ಶುಭಕೋರಿದರು.

ನಾನು ಓಂ ಚಿತ್ರದ ಚಿತ್ರೀಕರಣ ಸಮಯದಲ್ಲಿ ಉಪೇಂದ್ರ ಅವರ ಕಾರ್ಯವೈಖರಿ ನೋಡಿ, ನೀವು ಭಾರತ ಚಿತ್ರರಂಗದ ಪ್ರಸಿದ್ಧ ನಿರ್ದೇಶಕರಲ್ಲೊಬ್ಬರಾಗಿ ಗುರುತಿಸಿಕೊಳ್ಳುತ್ತೀರಾ ಎಂದು ಹೇಳಿದ್ದೆ. ಆಗಿನಿಂದಲೂ ನನಗೆ ಉಪೇಂದ್ರ ಅವರನ್ನು ಕಂಡರೆ ವಿಶೇಷ ಪ್ರೀತಿ. ನಾನು ಕೂಡ ಯುಐ ಚಿತ್ರವನ್ನು ನೋಡಲು ಕಾಯುತ್ತಿದ್ದೇನೆ ಎಂದು ಶಿವರಾಜಕುಮಾರ್ ತಿಳಿಸಿದರು.

ನಾವು ಉಪೇಂದ್ರ ಅವರ ಅಭಿಮಾನಿ, ಅವರ ಚಿತ್ರಗಳನ್ನು ನೋಡಿ ಬೆಳೆದವರು ನಾವು. ಒಂಬತ್ತು ವರ್ಷಗಳ ನಂತರ ಉಪೇಂದ್ರ ಅವರು ನಿರ್ದೇಶಿಸಿರುವ ಈ ಚಿತ್ರವನ್ನು ನೋಡಲು ಕಾಯುತ್ತಿರುವುದಾಗಿ ದುನಿಯಾ ವಿಜಯ್ ಹೇಳಿದರು.

ಜಿ.ಮನೋಹರನ್ ಮತ್ತು ಕೆ.ಪಿ. ಶ್ರೀಕಾಂತ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ರೀಷ್ಮಾ ನಾಣಯ್ಯ, ರವಿಶಂಕರ್, ಕಾಕ್ರೋಜ್ ಸುಧಿ, ನಿಧಿ ಸುಬ್ಬಯ್ಯ, ನೀತು ಮುಂತಾದವರು ಚಿತ್ರದ ತಾರಾ ಬಳಗದಲ್ಲಿದ್ದಾರೆ.

> ಈ ಚಿತ್ರ ಆರಂಭವಾಗಲು ಕೆ.ಪಿ.ಶ್ರೀಕಾಂತ್ ಅವರು ಕಾರಣ. ಐವತ್ತು ವರ್ಷಗಳ ಇತಿಹಾಸವಿರುವ ಲಹರಿ ಸಂಸ್ಥೆ ಈ ಚಿತ್ರ ನಿರ್ಮಾಣಕ್ಕೆ ಕೈಜೋಡಿಸಿದೆ. ಇದು ನನ್ನೊಬ್ಬನ ಚಿತ್ರವಲ್ಲ. ನನ್ನ ತಂಡದ ಚಿತ್ರ. ಇದೇ ಡಿಸೆಂಬರ್ 20ರಂದು ನಮ್ಮ ಚಿತ್ರ ಬಿಡುಗಡೆಯಾಗುತ್ತಿದೆ. ಎಲ್ಲರಿಗೂ ಇಷ್ಟವಾಗುವ ಕನೆಕ್ಟ್ ಆಗುವ ಕಥೆ ಚಿತ್ರದಲ್ಲಿದೆ.
>
> - ಉಪೇಂದ್ರ, ನಟ

> **ಯುಐ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ವಿಶ್ವದಾದ್ಯಂತ ಕನ್ನಡ ಸೇರಿದಂತೆ ಅನೇಕ ಭಾಷೆಗಳಲ್ಲಿ ರಿಲೀಸ್ ಆಗುತ್ತಿದೆ. ಈಗಾಗಲೇ ಮುಂಗಡ ಬುಕ್ಕಿಂಗ್ ಆರಂಭವಾಗಿದ್ದು, ಟಿಕೆಟ್ ಸೋಲ್ಡ್ ಔಟ್ ಆಗಿವೆ. ಆರಂಭದಲ್ಲೇ ನಮ್ಮ ಚಿತ್ರಕ್ಕೆ ಸಿಗುತ್ತಿರುವ ಬೆಂಬಲ ಕಂಡು ಸಂತಸವಾಗಿದೆ.**
>
> - ಕೆ.ಪಿ. ಶ್ರೀಕಾಂತ್ ನಿರ್ಮಾಪಕ

ಮೇಕಿಂಗ್‌ನಲ್ಲಿ ಮ್ಯಾಕ್ಸ್ ಮೋಡಿ

ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಆರಂಭದಿಂದಲೂ ಸಖತ್ ಸದ್ದು ಮಾಡುತ್ತಿದೆ. ಮ್ಯಾಕ್ಸ್ ಮಾಸ್ ಚಿತ್ರ ಎಂಬುದು ಈಗಾಗಲೇ ಖಚಿತವಾಗಿದೆ. ಈಗ ಚಿತ್ರದ ಮೇಕಿಂಗ್ ವಿಡಿಯೊ ರಿಲೀಸ್ ಆಗಿದ್ದು ಇದನ್ನು ನೋಡಿ ಅಭಿಮಾನಿಗಳು ಬಹುಪರಾಕ್ ಎಂದಿದ್ದಾರೆ. ಈ ಮೇಕಿಂಗ್ ವಿಡಿಯೊವನ್ನು ಕಿಚ್ಚ ಸೋಷಿಯಲ್ ಮೀಡಿಯಾದಲ್ಲಿ ಶೇರ್ ಮಾಡಿದ್ದಾರೆ. ಇದರಲ್ಲಿ ಸಾಹಸ ನಿರ್ದೇಶಕ ಚೇತನ್ ಡಿಸೋಜಾ, ಸುದೀಪ್ ಅವರಿಗೆ ಸಾಹಸ ದೃಶ್ಯಗಳನ್ನು

ಹೇಳಿಕೊಡುತ್ತಿರುವ ವಿಡಿಯೊ ಗಮನಸೆಳೆಯುತ್ತಿದೆ. ಮ್ಯಾಕ್ಸ್ ಸಾಹಸ ಪ್ರಧಾನ ಕಥೆಯಾಗಿದ್ದು, ಚಿತ್ರದುದ್ದಕ್ಕೂ ಕಿಚ್ಚ ಮಾಸ್ ಅವತಾರದಲ್ಲಿ ಅಬ್ಬರಿಸಿದ್ದಾರೆ. ಹಾಗಾಗಿ ಸಿನಿಮಾ ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದಾರೆ.

ಮ್ಯಾಕ್ಸ್ ಒಂದು ದಿನದಲ್ಲಿ ನಡೆಯುವ ರೋಚಕ ಕಥೆಯನ್ನು ಒಳಗೊಂಡಿದೆ. ಕಿಚ್ಚ ಸುದೀಪ್ ಪೊಲೀಸ್ ಆಫೀಸರ್ ಆಗಿ ನಟಿದ್ದು, ವರಲಕ್ಷ್ಮಿ ಶರತ್ ಕುಮಾರ್, ಸಂಯುಕ್ತಾ ಹೊರನಾಡು, ಸುಕೃತಾ ವಾಗ್ಲೆ ಮುಂತಾದವರು ತಾರಾಗಣದಲ್ಲಿದ್ದಾರೆ. ವಿಜಯ್ ಕಾರ್ತಿಕೇಯ ನಿರ್ದೇಶನದಲ್ಲಿ ಚಿತ್ರ ಸಿದ್ಧವಾಗಿದೆ. ಕಲೈಪುಲಿ ಎಸ್ ಧನು ಹಾಗೂ ಕಿಚ್ಚ ಸುದೀಪ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಕ್ರಿಸ್ ಮಸ್ ಹಬ್ಬದಂದು ಮ್ಯಾಕ್ಸ್ ತೆರೆಗೆ ಬರಲಿದೆ.

ಅಪಾಯದ ಎಚ್ಚರಿಕೆ ನೀಡಿದ ಅಣ್ಣಯ್ಯ

ಕಿರುತೆರೆಯ ಅಣ್ಣಯ್ಯ ಧಾರಾವಾಹಿಯ ಮೂಲಕ ಪ್ರಸಿದ್ಧಿ ಪಡೆದಿರುವ ವಿಕಾಸ್ ಉತ್ತಯ್ಯ ಈಗ ಚಂದನವನಕ್ಕೂ ಎಂಟ್ರಿಕೊಟ್ಟಿದ್ದಾರೆ. ಅಪಾಯವಿದೆ ಎಚ್ಚರಿಕೆ ಚಿತ್ರದಲ್ಲಿ ವಿಕಾಸ್ ನಾಯಕನಾಗಿ ನಟಿಸಿದ್ದಾರೆ. ಈ ಸಿನಿಮಾದ ಬ್ಯಾಚಲರ್ ಬದುಕು... ಹಾಡು ಬಿಡುಗಡೆಯಾಗಿದೆ. ನಟರಾದ ತಿಲಕ್, ರಾಕೇಶ್ ಅಡಿಗ, ನವೀನ್ ಶಂಕರ್ ಹಾಗೂ ವಿಕ್ಕಿ ವರುಣ್ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ನಿರ್ದೇಶಕ ಅಭಿಜಿತ್ ತೀರ್ಥಹಳ್ಳಿ ಬರೆದಿರುವ ಈ ಹಾಡಿಗೆ ಸುನಾದ್ ಗೌತಮ್ ಸಂಗೀತ ಸಂಯೋಜಿಸಿದ್ದಾರೆ. ನಾಯಕಿಯಾಗಿ ರಾಧಾ ಭಗವತಿ ಕಾಣಿಸಿಕೊಂಡಿದ್ದು, ನಟ ಮಿಥುನ್ ತೀರ್ಥಹಳ್ಳಿ, ದೇವ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ನಮ್ಮ ಚಿತ್ರದ ಮೋಷನ್ ಪೋಸ್ಟರ್ ನೋಡಿದಾಗ ಇದೊಂದು ಹಾರಾರ್, ಸಸ್ಪೆನ್ಸ್ ಥ್ರಿಲ್ಲರ್ ಚಿತ್ರ ಅಂದುಕೊಂಡರು. ಈಗ ಈ ಹಾಡನ್ನು ನೋಡಿದರೆ ಇದೊಂದು ಪಕ್ಕಾ ಮನರಂಜನೆಯ ಚಿತ್ರ ಎಂದು ತಿಳಿಯುತ್ತದೆ. ಎಲ್ಲಾ ಜಾನರ್ ಗಳನ್ನು ಒಳಗೊಂಡ ಪರಿಶುದ್ಧ ಕೌಟುಂಬಿಕ ಚಿತ್ರವಿದು ಎಂದು ವಿಕಾಸ್ ಹೇಳಿದರು.

ನಿರ್ದೇಶಕ ಅಭಿಜಿತ್ ತೀರ್ಥಹಳ್ಳಿ ಒಳ್ಳೆಯ ಚಿತ್ರ ನಿರ್ದೇಶನ ಮಾಡಿದ್ದಾರೆ. ಗೆಲ್ಲುವ ಭರವಸೆ ಇದೆ ಎಂದು ನಿರ್ಮಾಪಕ ಮಂಜುನಾಥ್ ಸಂತಸದಿಂದ ನುಡಿದರು.

> **ಹತ್ತು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಕಾರ್ಯನಿರ್ವಹಿಸಿದ್ದೇನೆ. ಇದು ನನ್ನ ಮೊದಲ ನಿರ್ದೇಶನದ ಚಿತ್ರ. ಸಸ್ಪೆನ್ಸ್ ಥ್ರಿಲ್ಲರ್ ಚಿತ್ರವಾದರೂ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ಚಿತ್ರದಲ್ಲಿ ಬೆರೆತಿವೆ. ನಾನು ಕೂಡ ಊರಿನಿಂದ ಬೆಂಗಳೂರಿಗೆ ಬಂದು ಬ್ಯಾಚುಲರ್ ಜೀವನ ಕಳೆದವನು. ಆ ಅನುಭವಗಳೇ ಈ ಹಾಡು ಬರೆಯಲು ಸ್ಫೂರ್ತಿ.**
>
> - ಅಭಿಜಿತ್ ತೀರ್ಥಹಳ್ಳಿ ನಿರ್ದೇಶಕ